ಶಾಂತಿಃ
ಶಾಂತಿಯಿರಲಿ

ಸ್ವಸ್ತಿಃ
ಮಂಗಳವಿರಲಿ

ಶ್ರೀಃ
ಸಿರಿಸಂಪನ್ನವಾಗಲಿ

ಛಂದೋದರ್ಶನ ಆವಿರ್ಭಾವ

ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆ



ಲೇಖಕ-ಪ್ರಕಾಶಕ : **ವೇದಶ್ರವ ಶರ್ಮ** ಅಶೋಕಾವನ, ಗೋಕರ್ಣ

ಛಂದೋದರ್ಶನ ಆವಿರ್ಭಾವ

ಶಾಂತಿಃ ಸ್ವಸ್ತಿಃ ಶ್ರೀಃ

ಶಾಂತಿಯಿರಲಿ ಮಂಗಳವಿರಲಿ ಸಿರಿಸಂಪನ್ನವಾಗಲಿ

ಛಂದೋದರ್ಶನ ಆವಿರ್ಭಾವ

ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆ

ಲೇಖಕ-ಪ್ರಕಾಶಕ :

ವೇದಶ್ರವ ಶರ್ಮ

ಅಶೋಕಾವನ, ಗೋಕರ್ಣ

ಲೇಖಕರು :
ವೇದಶ್ರವ ಶರ್ಮ
ಸಸ್ಯ ಸಂಜೀವಿನಿ,
ಅಶೋಕವನ, ಗೋಕರ್ಣ
ಫೋನ್ : (08386) 257044

ಪ್ರಥಮ ಮುದ್ರಣ : 14-1-2016

ಪ್ರತಿಗಳು : 1000

ಬೆಲೆ : ರೂ. 480/-

ಎಲ್ಲಾ ಹಕ್ಕುಗಳು ಲೇಖಕರದೇ

ಚಿತ್ರಕೃಪೆ :
ದೇವಶ್ರವ ಶರ್ಮ, ಅಶೋಕಾವನ

ಮುಖಪುಟ ವಿನ್ಯಾಸ : ಮಹೇಶ ಹಿರೇಗಂಗೆ

ಮುದ್ರಕರು :
ಆಕೃತಿ ಆಫ್‌ಸೆಟ್ ಪ್ರಿಂಟರ್ಸ್
ಗೋಕರ್ಣ - 581 326
ಫೋನ್ : (08386) 256554

ಸಮರ್ಪಣೆ.....



ಆರ್ಷ ಬದುಕಿನ ಅಸುಚೇತನ ಶ್ರದ್ಧಾದೇವಿ

ಬೆಳಗುವೆನು ನಿನ್ನ ನೆನಪಿನ ಹಣತೆ
ಎದೆಗುಡಿಯ ಆವರಣ ಕತ್ತಲಾಗದಂತೆ
ನಿನ್ನ ಮಡಿಲಲಿ ಬೆಳೆದ ಋಣವನು ನೆನೆದು
ಭಕ್ತಿಯಿಂದಲಿ ಮೂಡಿಬಂದಿತು ಕವಿತೆಯೊಂದು

ಅವಿರಾಮ ಕಾಯಕದ ನಿನ್ನ ತತ್ಪರತೆ
ನಿಂತಿಹುದು ನನ್ನೊಳಗೆ ಮರೆಯಾಗದಂತೆ
ಅಂತರಂಗ ನೆನೆಯುತಿದೆ ನಿತ್ಯವೂ ನಿನ್ನ ಸ್ಮರಣೆ
ಅದಕಾಗೆ ಲಿಪಿರೂಪದ ಹೂವು ನಿನಗೆ ಅರ್ಪಣೆ

ಪ್ರೀತಿಯ ಆಲಂಬವಿತ್ತು ತಾಯಾಗಿ ಸಲುಹಿದ ಅಜ್ಜಿ
ಶ್ರದ್ಧಾದೇವಿಗೆ ಈ ಲಿಪಿಸುಮದ ಸಮರ್ಪಣೆ

ಮುನ್ನುಡಿ

ವೇದಶ್ರವ ಶರ್ಮಾ ಬರೆದ "ಛಂದೋದರ್ಶನ ಆವಿರ್ಭಾವ" ಗ್ರಂಥವನ್ನು ಓದಿದ್ದಾಯಿತು. ಗೋಕರ್ಣದ ಗಣೇಶನೆಂಬ ಬಾಲಕ ನೂತನ ಋಗ್ವೇದ ಮಂತ್ರಗಳ ದರ್ಶನ ಪಡೆದು ಬ್ರಹ್ಮರ್ಷಿ ದೈವರಾತರಾದ ಸಮಗ್ರ ವೃತ್ತಾಂತವು ಸುಂದರವಾಗಿ ಮೂಡಿಬಂದಿರುವದು ಸಂತೋಷವನ್ನುಂಟು ಮಾಡಿದೆ. ಇದಕ್ಕಾಗಿ ಲೇಖಕರು ಅಭಿನಂದನಾರ್ಹರು. ದೈವರಾತರನ್ನು ಕುರಿತು ಇದಕ್ಕೂ ಹಿಂದೆ ಪ್ರಕಟವಾದ ಗ್ರಂಥಗಳಲ್ಲಿಲ್ಲದ ಹೆಚ್ಚಿನ ಘಟನಾವಳಿಗಳನ್ನೂ, ಕೆಲವು ಅಪರೂಪದ ಹಾಗೂ ಅಲಭ್ಯವಾದ ಕೆಲವು ಛಾಯಾಚಿತ್ರಗಳನ್ನೂ ಸಂಗ್ರಹಿಸಿದ ಲೇಖಕರ ಪ್ರಯತ್ನ ಸುತ್ಯಾರ್ಹ.

ಋಗ್ವೇದಾದಿ ಪ್ರಾಚೀನ ವೇದಗಳು ವಿಸ್ತಾರವಾದ ಮಂತ್ರವಾಙ್ಮಯವಾಗಿದೆ. ಚತುರ್ವೇದಗಳು ಎಷ್ಟೇ ವಿಸ್ತಾರವಾಗಿದ್ದರೂ ವೇದವಾಙ್ಮಯ ಋಗ್ವೇದಾದಿ ಚತುರ್ವೇದಗಳಿಗೇ ಸಿಮೀತವಾಗಿಲ್ಲ ಎಂದು ವೇದವೇ ಸಾರಿ ಸಾರಿ ಹೇಳುತ್ತಿದೆ. "ಅನಂತಾ ವೈ ವೇದಾಃ" ಎಂದು ವೇದವೇ ಉದ್ಘೋಷಿಸಿದೆ. ವೇದಕಾಲದ ಋಷಿಪ್ರಣೀತವಾದ ಮಂತ್ರಗಳು ಪ್ರಸ್ತುತ ಋಗ್ವೇದಾದಿ ಚತುರ್ವೇದಗಳ ರೂಪದಲ್ಲಿ ಪ್ರಕಾಶಿತವಾದದ್ದು ಸರ್ವವಿದಿತವಾಗಿದೆ. ಅಂತಹ ಪ್ರಾಚೀನ ವೇದಗಳ ಕಾಲ ಮುಗಿದು ಕಡಿಮೆ ಎಂದರೂ ಐದು ಸಾವಿರ ವರ್ಷಗಳಾದರೂ ಉರುಳಿಹೋಗಿವೆ ಎಂಬುದು ವೇದವಿದ್ವಾಂಸರ ಹಾಗೂ ಇತಿಹಾಸಕಾರರ ಅಭಿಪ್ರಾಯವಾಗಿದೆ. ಇಷ್ಟು ದೀರ್ಘಕಾಲ ಕಳೆದ ಮೇಲೆ ಈ ಅರ್ವಾಚೀನ ಯುಗದಲ್ಲಿಯೂ ಪ್ರಾಚೀನ ಮಂತ್ರದೃಷ್ಟಾರರ ತಪಸ್ಸಿನ ಔನ್ನತ್ಯಕ್ಕೆ ಸಾಧಕನೊಬ್ಬ ಏರಿದರೆ ನೂತನ ಮಂತ್ರಗಳ ಕಾಣ್ಕೆಯನ್ನು ಸಾಧಕ ಪಡೆಯಬುಹುದು ಎನ್ನುವುದನ್ನು ದೈವರಾತರು ತೋರಿಸಿ ಕೊಟ್ಟಿದ್ದಾರೆ. ಇದುವೇ ದೈವರಾತರ ಗೌರಿಶಂಕರ ಶಿಖರದೆತ್ತರದ ಸಾಧನೆಯಾಗಿದೆ. ದೈವರಾತರ ಸಾಧನೆಯ ಮಾರ್ಗವೇನೂ ಹೂವಿನ ಹಾಸಿಗೆಯಾಗಿರಅಲ್ಲ. ಕಲ್ಲು, ಮುಳ್ಳುಗಳ ಹಾದಿಯನ್ನು ಕ್ರಮಿಸಿಯೇ ದೈವರಾತರು ಸಾಗರೋಲ್ಲಂಘನ ಮಾಡಿ ಸಿದ್ಧಿಯ ತೀರವನ್ನು ತಲುಪಿದಂತೆ ಮಂತ್ರದರ್ಶನದ ಸಿದ್ಧಿಯನ್ನು ಪಡೆದು ಕೃತಕೃತ್ಯರಾದರು. ಪುಣ್ಯಕ್ಷೇತ್ರವಾದ ಗೋಕರ್ಣದಲ್ಲಿ ಜನ್ಮತಾಳಿದ ದೈವರಾತರು ನೂತನ ಋಗ್ವೇದ ಮಂತ್ರಗಳ ದರ್ಶನ ಪಡೆಯುವ ಭಾಗ್ಯಕ್ಕೆ ಭಾಜನರಾದದ್ದು ಪಶ್ಚಿಮ ಸಮುದ್ರತೀರದ ಗೋಕರ್ಣ ಕ್ಷೇತ್ರಕ್ಕೂ, ತನ್ಮೂಲಕ ಆಸೇತು ಹಿಮಾಚಲ ಪರ್ಯಂತ ವಿಸ್ತಾರವಾದ ಭಾರತವರ್ಷಕ್ಕೂ ಅಭಿಮಾನದ ಸಂಗತಿಯಾಗಿದೆ.

ಸಾಧನೆಯ ದಾರಿಯಲ್ಲಿ ದೈವರಾತರಿಗೆ ಆ ಕಾಲದ ಅದೆಷ್ಟೋ ಮಹಾಮಹಿಮರಾದ ಆಚಾರ್ಯರ ಸಹವಾಸ, ಮಾರ್ಗದರ್ಶನಗಳು ದೊರಕಿದ್ದು ಅವರ ಸುಕೃತವೇ ಸರಿ. ಅಂತಹ ಶ್ರೇಷ್ಠ ಆಚಾರ್ಯರ ಅಂತೇವಾಸಿತ್ವದಿಂದಲೂ, ಕಠಿಣವಾದ ನಿಷ್ಠೆ, ಪರಿಶ್ರಮಗಳಿಂದಲೂ ದೈವರಾತರು 'ಬ್ರಹ್ಮರ್ಷಿ' ಪಟ್ಟವನ್ನು ಪಡೆದು ಧನ್ಯ ಧನ್ಯರಾದರು.

ಸರ್ವವಿಧವಾದ ಪಾರಮಾರ್ಥಿಕ ಸಾಧನೆಗಳಿಗೆ ವೇದಾಧ್ಯಯನವೇ ಮೂಲವಾದ ಹೇತುವಾಗಿದೆ. ದೈವರಾತರ ಸಾಧನೆಯೂ ವೇದಾಧ್ಯಯನದಿಂದಲೇ ಪ್ರಾರಂಭವಾಯಿತು. ಅನಂತರ ರಾಮದಾಸ ಸ್ವಾಮಿಯವರ ಸಂಪರ್ಕದಲ್ಲಿ ಭಕ್ತಿಯ ಪಾರಮ್ಯವನ್ನು ಸಾಧಿಸಿದರು. ಟೇಂಬೆ ಮಹಾರಾಜರ ಅಂತೇವಾಸಿಗಳಾಗಿ ಯೋಗ, ಹಠಯೋಗ ಸಾಧನೆಗಳಲ್ಲಿ ನಿಪುಣರಾದರು. ಗಣಪತಿಮುನಿಗಳ ಶಿಷ್ಯರಾಗಿ ಜ್ಞಾನನಿಷ್ಠೆಯ ದೀಕ್ಷೆಯನ್ನು ಪಡೆದರು ಮತ್ತು ರಮಣಮಹರ್ಷಿಗಳ ಆಶೀರ್ವಾದಗಳನ್ನು ಪಡೆದರು. ನಿರಂತರವಾದ ಪ್ರಯತ್ನ, ಗುರುಗಳಲ್ಲಿ ದೈವರಾತರಿಗಿದ್ದ ಅಸೀಮವಾದ ಭಕ್ತಿ ಶ್ರದ್ಧೆಗಳು ಮತ್ತು ಗುರುಗಳಿಗೆ ದೈವರಾತರು ನಿಸ್ಪೃಹವಾಗಿ ಮಾಡಿದ ಸೇವೆ ಶುಷ್ರೂಷೆಗಳೇ ಅಂತಿಮವಾಗಿ ದೈವರಾತರಿಗೆ ಮಂತ್ರದರ್ಶನದಂತಹ ಅನೂಹ್ಯ ಹಾಗೂ ನಿರುಪಮವಾದ ಸಿದ್ಧಿಯನ್ನು ತಂದುಕೊಟ್ಟವು ಎಂದರೆ ಅದು ಅತ್ಯುಕ್ತಿಯಾಗಲಾರದು.

ಕಷ್ಟಸಹಿಷ್ಣುವಾಗಿ ನಿರಂತರ ಸಾಧನೆಯ ಮೂಲಕ ವೇದ, ಯೋಗಾದಿ ವಿದ್ಯಾಪ್ರಾಪ್ತಿ ಅದರಿಂದುಂಟಾದ ಸಿದ್ಧಿಗಳು ದೈವರಾತರ ಪೂರ್ವವಯಸ್ಸಿನ ಹೆಗ್ಗುರುತುಗಳಾಗಿದ್ದರೆ ತಾವು ಗಳಿಸಿದ ಅಮೂಲ್ಯ ಭಂಡಾರವಾದ ವಿದ್ಯೆಯ ಪ್ರಸಾರ ಹಾಗೂ ಪ್ರಚಾರಕ್ಕಾಗಿ ವೈದಿಕ ಯುಗದ ಶ್ರೇಷ್ಠ ತತ್ತ್ವಾದರ್ಶಗಳಿಂದ ಸಮನ್ವಿತವಾದ ಋಷಿಕುಲ ಆಶ್ರಮ ಸ್ಥಾಪನೆ, ಅದರ ನಿರ್ವಹಣೆಗಾಗಿ ಸತತ ಪ್ರಯತ್ನ, ವೇದಗಳ ಆಳವಾದ ಅಧ್ಯಯನ, ವ್ಯಾಖ್ಯಾನ ಮತ್ತು ಸಂಶೋಧನೆ ಇವುಗಳು ದೈವರಾತರ ಮಂತ್ರದರ್ಶನಾನಂತರದ ಜೀವನದ ಹೆಗ್ಗುರುತುಗಳು. ಇಂತಹ ಒಬ್ಬ ಶ್ರೇಷ್ಠ ವೈದಿಕ ವಿದ್ವಾಂಸ ಮಂತ್ರದೃಷ್ಟಾರ ಮತ್ತೊಮ್ಮೆ ಆವಿರ್ಭವಿಸಲಿ ಎಂಬುದೆ ಎಲ್ಲರ ಆಶಯವಾಗಿದೆ.

"ಶ್ರೀ ಕೌಸ್ತುಭ"
ಆದರ್ಶನಗರ, ಶಿರಸಿ

10–12–2015

ಡಾ|| ಜಿ. ಎನ್. ಭಟ್ಟ
ನಡಗೋಡು
(ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು)

ಅಂತರಂಗದ ಆಲೇಖನ

ಆರ್ಷಯುಗವು ಕೊನೆಯಾಗಿ ಸುಮಾರು ಮೂರು ಸಾವಿರ ವರ್ಷಗಳ ನಂತರ ಮತ್ತೊಮ್ಮೆ ಋಷಿಯೊಬ್ಬ ಜನ್ಮಿಸಿ ವೇದಮಂತ್ರ ದೃಷ್ಟಾರನಾದುದು ಇಂದಿನ ದಿನಗಳಲ್ಲಿಯೂ ವೇದ ಮಂತ್ರದರ್ಶನ ಸಾಧ್ಯ ಎಂಬುದಕ್ಕೆ ಸಾಕ್ಷಿಯಾಗಿದೆ. ನೋವು– ನಲಿವು, ಆಸೆ–ನಿರಾಸೆ, ಕೈಗೂಡದ ವಿಫಲ ಕಾಮನೆಗಳು ಇವೇ ಮೊದಲಾದ ಜೀವ ವ್ಯಾಪಾರಗಳಿಗೆ ಹಾಗೂ ಪ್ರಕೃತಿ ನಿಯಮಗಳಿಗೆ ಸಹಜವಾದ ರೀತಿಯಲ್ಲಿ ಚಿಂತನೆಯ ಸುಜ್ಞಾನದ ಬೆಳಕಿನಲ್ಲಿ ಅನ್ಯರಿಗೆ ನೋವಾಗದಂತೆ ಅಹಿಂಸೆಯಿಂದ ಬಾಳುವದೇ ಋಷಿಜೀವನ. ಪ್ರಕೃತಿದತ್ತವಾದ ಆಸೆ–ಆಕಾಂಕ್ಷೆಗಳ ಹತ್ತಿಕ್ಕಿ ಒಳಗೊಳಗೇ ಅದಕ್ಕಾಗಿ ಹಿಂಬಾಲಿಸುತ್ತ ಆತ್ಮವಂಚನೆಯಿಂದ ಬಾಳುವುದು ಋಷಿಜೀವನವಲ್ಲ. ಪವಿತ್ರ ಭಾವದ ದಾಂಪತ್ಯದಲ್ಲಿ ಕರ್ಮಯೋಗಿಯಾಗಿಯೇ ಜ್ಞಾನದ ಬೆಳಕನ್ನು ಪಡೆಯುವದೇ ಆರ್ಷಜೀವನದ ಗುರಿ. ಇಂತಹ ಒಂದು ಮಾದರಿಯ ಬದುಕಿನ ಚಿತ್ರಣವೇ ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆಯಾಗಿದೆ.

ಬಾಲಕ ದೈವರಾತನ ಇಷ್ಟದೈವವೇ ವಾಸಿಷ್ಠಗಣಪತಿಮುನಿಗಳ ರೂಪದಲ್ಲಿ ಒಲಿದುಬಂದು ಆತನನ್ನು ತನ್ನ ಅಂತೇವಾಸಿಯಾಗಿ ಸ್ವೀಕರಿಸಿತು. ಆಧ್ಯಾತ್ಮಿಕ ಹಸಿವಿನಿಂದ ಗೊತ್ತು ಗುರಿಯಿಲ್ಲದೆ ತನಗೆ ತಾನೆ ಗುರುವನರಸುತ್ತ ಅಲೆಯುತ್ತಿದ್ದ ಕಾತರದ ಜೀವಕ್ಕೆ ಋಷಿಚೇತನದ ಸಂಸ್ಕಾರ ದೊರೆಯಿತು. ಗಣೇಶ ದೈವರಾತನಾದ; ಗುರು ಗಣಪತಿಮುನಿಗಳ ದಿವ್ಯ ಕಾರುಣ್ಯದಲ್ಲಿ ತಪಸ್ಸಿನ ಸುಪ್ತ ಸಮಾಧಿಯ ಅನುಸಂಧಾನದಲ್ಲಿ ಮಂತ್ರಾದೃಷ್ಟಾರನಾದ.

ನೂತನ ವೇದಮಂತ್ರ ದೃಷ್ಟಾರ ದೈವರಾತರ "ಛಂದೋದರ್ಶನ" ಅದೇ ತಾನೆ ಮುದ್ರಿತವಾದ ಸಮಯ. ಅದನ್ನು ನೋಡಿದ ವಿದ್ವಾಂಸರು ವಿಸ್ಮಿತರಾದರು. ಹೌದು, ಸಂಶಯವೇ ಇಲ್ಲ. ಅದೇ ಭಾಷೆ; ಅದೇ ಪದಪುಂಜಗಳು, ಅದೇ ಛಂದಸ್ಸು. ವೇದಗಳಲ್ಲಿಯೇ ಅತಿ ಪುರಾತನವೆನಿಸಿದ ಋಗ್ವೇದವನ್ನು ಹೋಲುವ ಮಂತ್ರಗಳು! ಪುಣೆಯ ಖ್ಯಾತ ಸಂಸ್ಕೃತ ವಿದ್ವಾಂಸರಾದ ಮಹಾಮಹೋಪಾಧ್ಯಾಯ ದತ್ತೋವಾಮನ ಪೋದ್ದಾರರು "ಛಂದೋದರ್ಶನ"ವನ್ನು ಕಂಡು 'ಎರಡು ಸಾವಿರ ವರ್ಷಗಳ ನಂತರ ಹೊಸದಾಗಿ ಮೂಡಿಬಂದ ಋಗ್ವೇದ ಮಂತ್ರಗಳ ಸಂಹಿತೀಕರಣ ಇದಾಗಿದೆ.' ಎಂದು ಹೇಳಿದರು. ಇನ್ನೊಬ್ಬ ಶ್ರೇಷ್ಠ ವೈದಿಕ ವಿದ್ವಾಂಸರಾದ ವಿನೋಬಾ ಭಾವೆಯವರು ' ಹಾ ! ನವೀನ ಋಗ್ವೇದ ಆಹೇ!' (ಓ! ಇದೊಂದು ನೂತನ ಋಗ್ವೇದ !) ಎಂದು ಉದ್ಗರಿಸಿದರು. ವೈದಿಕ ಸಂಶೋದನ ಮಂಡಲದ ಮಹಾನ್ ವೈದಿಕ –ವಿದ್ವಾಂಸರಾದ ಡಾ. ಎಮ್. ಎಸ್. ಅಣೆಯವರು ಹಾಗೂ ವೈದಿಕ ಸಂಶೋಧನ ಕಾರ್ಯನಿರ್ವಾಹಕರಾದ ಡಾ. ಸೋಂಟಕ್ಕೆಯವರು ನಾಲ್ಕು ನೂರಾ ಐವತ್ತು ನವೀನ ಋಗ್ವೇದ ಮಂತ್ರಗಳನ್ನು ಕಂಡು ಆಶ್ಚರ್ಯಚಕಿತರಾದರು. ಅದೇ ರೀತಿ ಜರ್ಮನಿಯ ವೈದಿಕ ವಿದ್ವಾಂಸರಾದ ಹಾನ್ಸ್ ಪೀಟರವರು ಛಂದೋದರ್ಶನವನ್ನು ಪರೀಕ್ಷಿಸುತ್ತ 'ಸಂಪೂರ್ಣವಾಗಿ ಋಗ್ವೇದ ಶೈಲಿಯಲ್ಲಿದೆ' ಎಂದು ಹೇಳಿದರಲ್ಲದೇ ಅದರ ಅನ್ವಯ ಭಾಷ್ಯವನ್ನು ನೋಡಿ ಬಹುವಾಗಿ ಮೆಚ್ಚಿಕೊಂಡರು.

ನೆನಪಿನ ಸುರುಳಿ ತೆರೆದುಕೊಂಡಾಗ ದೈವರಾತರು ತಮ್ಮ ಜೀವನದ ಸ್ಮರಣೀಯ ಸಂಗತಿಗಳನ್ನು ಹೇಳುತ್ತಿದ್ದ ಆ ದಿನಗಳ ಒಂದೊಂದೇ ದೃಶ್ಯಗಳು ಇಂದಿಗೂ ನನ್ನ ಕಣ್ಣ ಮುಂದಕ್ಕೆ ಅನಾವರಣಗೊಳ್ಳುತ್ತವೆ. ವಾಸಿಷ್ಠ ಗಣಪತಿಮುನಿಗಳ ಅಗಾಧ ಪಾಂಡಿತ್ಯದ ಅಕ್ಷರಜ್ಞಾನ, ವಾಸುದೇವಾನಂದ ಯತಿಗಳ ನಿರಾಡಂಬರ ನಿಷ್ಠೆಯ ವಿರಕ್ತ ಜೀವನ, ರಮಣ ಮಹರ್ಷಿಗಳ ಸಹಜ ಸಮಾಧಿಯ ಆನಂದ ಭಾವ ಇವು ದೈವರಾತರ ತಾಪಸ ಜೀವನಕ್ಕೆ ಪ್ರೇರಣೆಯಾಗಿತ್ತು. ಆ ಮಹಾಚೇತನಗಳ ಕಾರುಣ್ಯದ ಅನುಗ್ರಹದೊಂದಿಗೆ ದೈವರಾತರ ವ್ಯಕ್ತಿತ್ವವು ಅವಿನಾಭಾವದಲ್ಲಿ ಬೆಸೆದುಕೊಂಡಿರುವುದರಿಂದ ಅವರ ದಿವ್ಯ ಚರಿತ್ರೆಗಳೂ ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಸಂಕಲಿತವಾಗಿವೆ. ಸ್ವಂತ ದೈವರಾತರ ಮುಖದಿಂದಲೇ ಕೇಳಿ ದಾಖಲಿಸಿಕೊಂಡ ಸಮಗ್ರ ಜೀವನ ವೃತ್ತಾಂತಗಳಿಗೆ ಲಿಪಿರೂಪ ಕೊಟ್ಟು, ಪ್ರಕಾಶನಗೊಳಿಸುತ್ತಿರುವದಕ್ಕೆ ನನಗೆ ಬಹಳ ಸಂತೋಷವೆನಿಸುತ್ತಿದೆ. ದೈವರಾತರ ಜೀವನದ ಅಪೂರ್ವ ಕ್ಷಣಗಳ ಕೆಲವು ಛಾಯಾಚಿತ್ರಗಳು ಅವರ ವ್ಯಕ್ತಿತ್ವವನ್ನು ಯಥಾವತ್ತಾಗಿ ಬಿಂಬಿಸುವ ನನ್ನ ಪ್ರಯತ್ನಗಳನ್ನು ಸಂಪನ್ನಗೊಳಿಸಿವೆ.

ಈ ಪುಸ್ತಕವನ್ನು ಪ್ರಕಾಶಗೊಳಿಸುವುದಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೂ ಅಂದವಾಗಿ ಮುದ್ರಿಸಿದ ಆಕೃತಿ ಪ್ರಿಂಟರ್ಸ್‌ರವರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ವೇದಶ್ರವ ಶರ್ಮ
ಅಶೋಕವನ, ಗೋಕರ್ಣ
(ಉತ್ತರ ಕನ್ನಡ)

ಮೌನ ಬೋಧ

ನಮ್ಮ ಕೆಲವು ಶಿಷ್ಟ ಆಚರಣೆಗಳು ತಂತಾನೆ ಅಂತರ್ಬೋಧವಾಗಿ ಮೂಡಿಬಂದಂತ ನಮ್ಮ ಮನದ ಸಂವೇದನೆಯ ಪ್ರತೀಕವಾಗಿವೆ. ಉದಾಹರಣೆಗೆ ತಲೆಯ ಮೇಲೆ ಕೈಯಿರಿಸಿ ಹರಸುವುದು, ಎರಡೂ ಕೈಗಳಿಂದ ಕಿವಿಮುಟ್ಟಿ ಅಂದರೆ ಬಲಗೈನಿಂದ ಎಡಗಿವಿಯನ್ನು, ಎಡಗೈನಿಂದ ಬಲಗಿವಿಯನ್ನು ಸ್ಪರ್ಶಿಸುತ್ತಾ ತಾಯಿ - ತಂದೆ, ಗುರು- ಹಿರಿಯರನ್ನು ವಂದಿಸುವುದು. ಹಸ್ತಲಾಘವ ಮಾಡುವದು ಮತ್ತು ಬೆನ್ನುಸವರಿ ಪ್ರೀತಿ ವ್ಯಕ್ತಪಡಿಸುವುದು ಇವೆಲ್ಲ ಅಂತಹ ಆಚರಣೆಗಳಾಗಿವೆ. ಇಂತಹ ಆಚರಣೆ ಕೆಲವರಿಗೆ ಅರ್ಥಹೀನ ಗೊಡ್ಡು ಸಂಪ್ರದಾಯ ಅನಿಸಿದರೂ ಶಿಷ್ಟ ಸಂವೇದನೆಯು ಜನರಿಗೆ ಅಂತರಂಗ ವಿಕಾಸದ ಸೋಪಾನವಾಗಬಲ್ಲದು.

ವಾಸಿಷ್ಠ ಗಣಪತಿಮುನಿಗಳ ಅಂತೇವಾಸಿಯಾದ ದೈವರಾತನಿಗೆ, ಅಂದು ಗುರುವಿನ ಅಂತರಂಗದ ಮೌನಬೋಧೆಯ ಅನುಸಂಧಾನವು ಸಂಸ್ಕೃತಭಾಷಾಜ್ಞಾನದೊಂದಿಗೆ ವೇದಮಂತ್ರ ದೃಷ್ಟಾರನಾಗುವಂತಹ ದಿವ್ಯವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಯಿತು.

ಪರಸ್ಪರ ಒಲವು, ಆತ್ಮೀಯ ಭಾವ, ಆದಮ್ಯ ಪ್ರೀತಿ ಇವುಗಳ ತೀವ್ರವಾದ ತುಡಿತದ ಪರಿಣಾಮವಾಗಿ ಮನಸ್ಸು - ಮನಸ್ಸುಗಳ ಸುಪ್ತ - ಶಕ್ತಿಯ ಹರಿವು ಮತ್ತು ಸ್ವೀಕೃತಗೊಳ್ಳುವ ಕ್ರಿಯೆಗಳು ನಡೆಯುತ್ತಿದ್ದರೂ ಅದು ನಮ್ಮ ಅರಿವಿಗೆ ಬರುವುದಿಲ್ಲ. ಎಲ್ಲ ಜೀವಿಗಳಲ್ಲಿಯೂ ಮಾನಸಶಕ್ತಿಯ ಸಂವಹನ ಮತ್ತು ಸ್ವೀಕರಣ ಕ್ರಿಯೆಗಳಿಂದಲೇ ಅವುಗಳ ಚರಿತ - ಚರ್ಯೆಗಳು ರೂಪಿಸಲ್ಪಡುತ್ತವೆ.

ಯುಗ ಯುಗಮಾನದ ಹಿಂದಿನ ದಿನಗಳ
ಅಂದಿನ ಆರ್ಷಪರಂಪರೆ ಮತ್ತೆ ಚಿಗುರುತ
ನೆಲ-ಮೂಲ ಜ್ಞಾನ ವಿಕಾಸಕ್ಕೆ ಸಾಕ್ಷಿಯಾಗುತ
ನೂತನ ಋಷಿಚೇತನವೊಂದು ಜನ್ಮಿಸಿತು

ವಾಸಿಷ್ಠ ಮುನಿಗಳ ಸನ್ನಿಧಿಯಲ್ಲಿ
ವಾಸುದೇವ ಯತಿಗಳ ಕಾರುಣ್ಯದಲ್ಲಿ
ಮಹಋಷಿ ರಮಣರ ಮೌನಬೋಧದಲಿ
ದೈವರಾತನ ಮನ ದಿವ್ಯ ದರ್ಶನ ಪಡೆಯಿತು.

ದೈವರಾತರ ಕುರಿತು
ಮಹಾಪುರುಷರು ಮತ್ತು ಪ್ರಸಿದ್ಧ ವ್ಯಕ್ತಿಗಳ ಮಾತು

"………. ಸಂಪ್ರತಿ ಇಪ್ಪತ್ತೈದು ವರ್ಷ ವಯಸ್ಸಿನಲ್ಲಿರುವ ಕುಮಾರ ದೈವರಾತನು ವಿಶೇಷವಾಗಿ ಸಂಸ್ಕೃತ ಭಾಷೆಯಲ್ಲಿ ಅಷ್ಟೊಂದು ಪರಿಣತನಲ್ಲವಾದರೂ ಬಾಲ್ಯದಿಂದಲೇ ತಪಸ್ಸು, ಯೋಗಾದಿ ಸಾಧನೆಯಲ್ಲಿ ಸಂತತವಾಗಿ ನಿರತನಾಗಿದ್ದು 'ಛಂದೋದರ್ಶನ'ವನ್ನು ಪಡೆದನು. ಈ ದೈವರಾತನು ತಪಸ್ವಿಯೂ, ಯೋಗಿಯೂ, ಅಧ್ಯಾತ್ಮತತ್ವವೇತ್ತನೂ, ವೇದಮಂತ್ರದೃಷ್ಟಾರನೂ ಆಗಿ ವಿದ್ಯೆ, ಸದಾಚಾರ, ವಿನಯಾದಿ ಸದ್ ವೃತ್ತದಿಂದಲೂ ಪ್ರಾಚೀನ ಋಷಿಗಳು ಅಲಂಕರಿಸಿದ "ಬ್ರಹ್ಮರ್ಷಿ" ಪದವಿಯನ್ನು ಹೊಂದುವುದಕ್ಕೆ ಅರ್ಹನಾಗಿದ್ದಾನೆ.''

ಶ್ರೀ ವಾಸಿಷ್ಠ ಗಣಪತಿಮುನಿಗಳು

"ದತ್ತ ಭಕ್ತನ ಭಕ್ತ ದೈವರಾತ
ನಿನ್ನಾಸೆಗಿದೆ ಕೊನೆಯೆ ಓ, ಯೋಗಿ ! ಓ, ಮುಕ್ತ !
ಯಾವ ಗ್ರಂಥಗಳ ಗಂಟು ಬಿಚ್ಚಲಿಲ್ಲ
ಯಾವ ಮೋಹದ ನಂಟು ನಿನ್ನ ಬಂಧಿಸಲಿಲ್ಲ
ತುಟಿಗಳಲಿ ಸದಾ ವೇದಘೋಷ
ಕಣ್ಣಿನಲಿ ಋಷಿ ಭಾವದಾ ಮಂದಹಾಸ ! ……………………………"

– ವರಕವಿ ದ. ರಾ. ಬೇಂದ್ರೆಯವರು

(ದೈವರಾತರ ನಿರ್ವಾಣದ ಸುದ್ದಿ ತಿಳಿದಾಗ ಸಂತಾಪ ವ್ಯಕ್ತಪಡಿಸಿದ್ದು ಹೀಗೆ)

ಕೆಲವು ವರ್ಷಗಳ ಹಿಂದೆ ಶ್ರೀ ದೈವರಾತರ ಪರಿಚಯ ಆಕಸ್ಮಿಕವಾಗಿ ಆಗಿತ್ತು. ಆಗಲೇ ಅವರ ವಿದ್ವತ್ತು ಮತ್ತು ಯೋಗ – ಸಾಧನೆಗಳ ಪರಿಚಯವೂ ಆಯಿತು. ಆ ಪ್ರಥಮ ಭೇಟಿಯಲ್ಲಿಯೇ ಅವರ ಅಗಾಧ ಸ್ಮರಣಶಕ್ತಿ ಹಾಗೂ ವೇದೋಪನಿಷತ್ತುಗಳ ಕುರಿತಾದ ಅವರ ಅಸಾಧಾರಣ ವಿದ್ವತ್ತು ನನ್ನನ್ನು ಚಕಿತಗೊಳಿಸಿತು …… ಇಂತಹ ಅಸೀಮ ಅಧ್ಯಾತ್ಮಿಕ ಶ್ರದ್ಧಾಳುಗಳು ನಮ್ಮ ದೇಶಕ್ಕೆ ಅವಶ್ಯವಾಗಿ ಬೇಕು.

– ಡಾ. ರಾಜೇಂದ್ರ ಪ್ರಸಾದ


ಭಾರತದ ಪ್ರಥಮ ರಾಷ್ಟ್ರಪತಿಗಳು

"ಕಾವ್ಯಕಂಠ ವಾಸಿಷ್ಠ ಗಣಪತಿಮುನಿಗಳ ಅಂತೇವಾಸಿಯಾಗಿ ಅವರೊಂದಿಗೆ ಅರುಣಾಚಲದ ಶ್ರೀ ರಮಣ ಮಹರ್ಷಿಗಳ ಸನ್ನಿಧಿಯಲ್ಲಿ ಕೆಲವು ಕಾಲ ವಾಸ ಮಾಡಿ ಭಕ್ತಿಯಿಂದ ರಮಣರನ್ನು ಸೇವಿಸಿ ಅವರ ದಿವ್ಯಾನುಗ್ರಹಕ್ಕೆ ಪಾತ್ರರಾಗಿ ವೇದ ಮತ್ತು ಉಪನಿಷತ್ತುಗಳ ಜ್ಞಾನದ ಬೆಳಕನ್ನು ಸಾಕ್ಷಾತ್ಕರಿಸಿಕೊಂಡವರು ದೈವರಾತರು ………………"

– ಡಾ. ರಾಧಾಕೃಷ್ಣನ್

ಭಾರತದ ಎರಡನೇ ರಾಷ್ಟ್ರಪತಿಗಳು

(1962 ಹೋಳಿಹುಣ್ಣಿಮೆಯಂದು ದಿಲ್ಲಿಯಲ್ಲಿ ಏರ್ಪಡಿಸಿದ ವಿದ್ವತ್‌ಸಭೆಯಲ್ಲಿ ಡಾ. ರಾಧಾಕೃಷ್ಣನ್‌ರವರು ದೈವರಾತರನ್ನು ಪರಿಚಯಿಸುವ ಸಂದರ್ಭದಲ್ಲಿ)



ವರಕವಿ ದ. ರಾ. ಬೇಂದ್ರೆಯವರೊಂದಿಗೆ ದೈವರಾತರು

"ದೈವರಾತರು ಯೋಗಿಯೂ, ತಪಸ್ವಿಯೂ ಮತ್ತು ಉನ್ನತ ವೇದವಿದ್ವಾಂಸರು. ಅವರೊಬ್ಬ ಆದರಣೀಯ ಘನವ್ಯಕ್ತಿತ್ವದವರೂ ಆಗಿದ್ದಾರೆ. ಬನಾರಸ ಹಿಂದೂ ವಿಶ್ವವಿದ್ಯಾಲಯದ ಉನ್ನತ ವಿದ್ವಾಂಸರ ಜತೆಗೂಡಿ ನಾನು ಅವರೊಂದಿಗೆ ಹಲವು ವಿಷಯಗಳ ಕುರಿತು ಸಂವಹನ ನಡೆಸಿದ್ದೇನೆ. ಅವರ ಅಪಾರ ಜ್ಞಾನ ಮತ್ತು ವಿದ್ವೆಗಳಿಗೆ ಬೆರಗಾಗಿದ್ದೇನೆ. ನನ್ನ ವಿನಂತಿಯ ಮೇರೆಗೆ ಅವರು ವಿಶ್ವವಿದ್ಯಾಲಯದಲ್ಲಿ ಎರಡು ತಿಂಗಳಕಾಲ ತಂಗಿದ್ದರು. ನಾನು ಅವರೊಂದಿಗೆ ಹಲವು ಮುಸ್ಸಂಜೆಗಳನ್ನು ಸಂತೋಷದಿಂದ ಕಳೆದಿದ್ದೇನೆ."

– ಪಂಡಿತ ಮದನ ಮೋಹನ ಮಾಲವೀಯ
ಬನಾರಸ ಹಿಂದೂ ವಿಶ್ವವಿದ್ಯಾಲಯದ ಕುಲಪತಿಗಳು

"ದೈವರಾತರನ್ನು ಪ್ರತ್ಯಕ್ಷವಾಗಿ ಭೇಟಿಯಾದಾಗ ವೇದಯುಗದ ವಸಿಷ್ಠರೊಂದಿಗೋ, ಯಾಜ್ಞವಲ್ಕ್ಯರೊಂದಿಗೋ ಇದ್ದ ಅನುಭವವಾಯಿತು. ದೈವರಾತರ ವಿಶೇಷವೆಂದರೆ ವೇದವಾಙ್ಮಯದ ಭಾಗಗಳಾದ ಸಂಹಿತೆ, ಬ್ರಾಹ್ಮಣ, ಆರಣ್ಯಕಗಳ ಮತ್ತು ಉಪನಿಷತ್ತುಗಳ ಅಸ್ಖಲಿತವಾದ ಪಠಣದಲ್ಲಿ ಅದ್ವಿತೀಯವಾದ ಪ್ರಭುತ್ವ, ಅವುಗಳ ಅರ್ಥವಿಸ್ತಾರದ ಆಳವಾದ ಜ್ಞಾನ ಮತ್ತು ವೈದಿಕ ವಾಙ್ಮಯದ ಬೆಳವಣಿಗೆಯ ಹಿನ್ನೆಲೆಯ ಸಂಪೂರ್ಣ ಆಲೋಕಗಳೇ ಆಗಿದ್ದಾರೆ. ಇಂತಹ ಪರಿಪೂರ್ಣ ಜ್ಞಾನಿಗಳಾದ ಅಷ್ಟೇ ವಿಚಿಕಿತ್ಸಾಮತಿಗಳಾದ ದೈವರಾತರನ್ನು ನಾಡು ಗೌರವಿಸಬೇಕು ಅಷ್ಟೇ ಅಲ್ಲ; ಅವರಿಗೆ ರಾಷ್ಟ್ರಾಚಾರ್ಯ ಪದವಿಯನ್ನು ಪ್ರದಾನಮಾಡಬೇಕು ...."

– ಶ್ರೀ ವಾಸುದೇವ ಶರಣ ಅಗರವಾಲ
ಬನಾರಸ ಹಿಂದೂವಿಶ್ವವಿದ್ಯಾಲಯ

"ದೇವರಿಗೆ ಅಭಿನಂದನೆಗಳು ! ಭಾರತಮಾತೆಯು ಇನ್ನೂ ಬಂಜೆಯಾಗಿಲ್ಲ ...."

– ಕುಲಪತಿ ಕೆ.ಎಮ್. ಮುನ್ಷಿ
ಭಾರತೀಯ ವಿದ್ಯಾಭವನ

ಛಂದೋದರ್ಶನ ಗ್ರಂಥವು ಪ್ರಕಟಗೊಳ್ಳುವುದಕ್ಕೆ ಬಹುವಾಗಿ ಶ್ರಮಿಸಿ ಪ್ರಮುಖ ಪಾತ್ರ ವಹಿಸಿದ ದೈವರಾತರ ಅತ್ಯಂತ ನಿಕಟವರ್ತಿಗಳೂ, ಆತ್ಮೀಯರೂ ಆದ ಡಾ! ರಂಗನಾಥ ದಿವಾಕರರ ಅಂತರಂಗದ ಮಾತು–

"... ಹಿಂದಿನ ಋಷಿಗಳ ಅಂತರಾತ್ಮದಲ್ಲಿ ಕೃತಿಶೀಲವಾಗಿದ್ದ ದೈವೀಪ್ರೇರಣೆಯು ಇಂದಿಗೂ ನಮ್ಮ ದೇಶದಲ್ಲಿ ಜೀವಂತವಾಗಿದೆ ಎಂಬುದನ್ನು 'ಛಂದೋದರ್ಶನ'ದ ಮಂತ್ರಗಳ ದರ್ಶನ ತೋರಿಸಿಕೊಡುತ್ತದೆ."

– ಆರ್. ಆರ್. ದಿವಾಕರ
ಹುಬ್ಬಳ್ಳಿ (15–09–1968)

ಅನುಕ್ರಮಣಿಕೆ

"ದೈವರಾತರು ಯೋಗಿಯೂ, ತಪಸ್ವಿಯೂ ಮತ್ತು ಉನ್ನತ ವೇದವಿದ್ವಾಂಸರು. ಅವರೊಬ್ಬ ಆದರಣೀಯ ಘನವ್ಯಕ್ತಿತ್ವದವರೂ ಆಗಿದ್ದಾರೆ. ಬನಾರಸ ಹಿಂದೂ ವಿಶ್ವವಿದ್ಯಾಲಯದ ಉನ್ನತ ವಿದ್ವಾಂಸರ ಜತೆಗೂಡಿ ನಾನು ಅವರೊಂದಿಗೆ ಹಲವು ವಿಷಯಗಳ ಕುರಿತು ಸಂವಹನ ನಡೆಸಿದ್ದೇನೆ. ಅವರ ಅಪಾರ ಜ್ಞಾನ ಮತ್ತು ವಿದ್ಯೆಗಳಿಗೆ ಬೆರಗಾಗಿದ್ದೇನೆ. ನನ್ನ ವಿನಂತಿಯ ಮೇರೆಗೆ ಅವರು ವಿಶ್ವವಿದ್ಯಾಲಯದಲ್ಲಿ ಎರಡು ತಿಂಗಳಕಾಲ ತಂಗಿದ್ದರು. ನಾನು ಅವರೊಂದಿಗೆ ಹಲವು ಮುಸ್ಸಂಜೆಗಳನ್ನು ಸಂತೋಷದಿಂದ ಕಳೆದಿದ್ದೇನೆ."

– ಪಂಡಿತ ಮದನ ಮೋಹನ ಮಾಲವೀಯ
ಬನಾರಸ ಹಿಂದೂ ವಿಶ್ವವಿದ್ಯಾಲಯದ ಕುಲಪತಿಗಳು

"ದೈವರಾತರನ್ನು ಪ್ರತ್ಯಕ್ಷವಾಗಿ ಭೇಟಿಯಾದಾಗ ವೇದಯುಗದ ವಸಿಷ್ಠರೊಂದಿಗೋ, ಯಾಜ್ಞವಲ್ಕ್ಯರೊಂದಿಗೋ ಇದ್ದ ಅನುಭವವಾಯಿತು. ದೈವರಾತರ ವಿಶೇಷವೆಂದರೆ ವೇದವಾಙ್ಮಯದ ಭಾಗಗಳಾದ ಸಂಹಿತೆ, ಬ್ರಾಹ್ಮಣ, ಆರಣ್ಯಕಗಳ ಮತ್ತು ಉಪನಿಷತ್ತುಗಳ ಅಸ್ಖಲಿತವಾದ ಪಠಣದಲ್ಲಿ ಅದ್ವಿತೀಯವಾದ ಪ್ರಭುತ್ವ, ಅವುಗಳ ಅರ್ಥವಿಸ್ತಾರದ ಆಳವಾದ ಜ್ಞಾನ ಮತ್ತು ವೈದಿಕ ವಾಙ್ಮಯದ ಬೆಳವಣಿಗೆಯ ಹಿನ್ನೆಲೆಯ ಸಂಪೂರ್ಣ ಆಲೋಕಗಳೇ ಆಗಿದ್ದಾರೆ. ಇಂತಹ ಪರಿಪೂರ್ಣ ಜ್ಞಾನಿಗಳಾದ ಅಷ್ಟೇ ವಿಚಿಕಿತ್ಸಾಮತಿಗಳಾದ ದೈವರಾತರನ್ನು ನಾಡು ಗೌರವಿಸಬೇಕು ಅಷ್ಟೇ ಅಲ್ಲ; ಅವರಿಗೆ ರಾಷ್ಟ್ರಾಚಾರ್ಯ ಪದವಿಯನ್ನು ಪ್ರದಾನಮಾಡಬೇಕು ...."

– ಶ್ರೀ ವಾಸುದೇವ ಶರಣ ಅಗರವಾಲ
ಬನಾರಸ ಹಿಂದೂವಿಶ್ವವಿದ್ಯಾಲಯ

"ದೇವರಿಗೆ ಅಭಿನಂದನೆಗಳು ! ಭಾರತಮಾತೆಯು ಇನ್ನೂ ಬಂಜೆಯಾಗಿಲ್ಲ ...."

– ಕುಲಪತಿ ಕೆ.ಎಮ್. ಮುನ್ಷಿ
ಭಾರತೀಯ ವಿದ್ಯಾಭವನ

ಛಂದೋದರ್ಶನ ಗ್ರಂಥವು ಪ್ರಕಟಗೊಳ್ಳುವುದಕ್ಕೆ ಬಹುವಾಗಿ ಶ್ರಮಿಸಿ ಪ್ರಮುಖ ಪಾತ್ರ ವಹಿಸಿದ ದೈವರಾತರ ಅತ್ಯಂತ ನಿಕಟವರ್ತಿಗಳೂ, ಆತ್ಮೀಯರೂ ಆದ ಡಾ। ರಂಗನಾಥ ದಿವಾಕರರ ಅಂತರಂಗದ ಮಾತು–

"... ಹಿಂದಿನ ಋಷಿಗಳ ಅಂತರಾತ್ಮದಲ್ಲಿ ಕೃತಿಶೀಲವಾಗಿದ್ದ ದೈವೀಪ್ರೇರಣೆಯು ಇಂದಿಗೂ ನಮ್ಮ ದೇಶದಲ್ಲಿ ಜೀವಂತವಾಗಿದೆ ಎಂಬುದನ್ನು 'ಛಂದೋದರ್ಶನ'ದ ಮಂತ್ರಗಳ ದರ್ಶನ ತೋರಿಸಿಕೊಡುತ್ತದೆ."

– ಆರ್. ಆರ್. ದಿವಾಕರ
ಹುಬ್ಬಳ್ಳಿ (15–09–1968)



ಭಾರತಂ ಮಾತೃಭೂಮಿಃ

ಶ್ರೀ ಗೋ ಭೂ ವೇದಧರ್ಮ ಪ್ರಣಯ ವಿನಯ ಧೀ ವೇದವಿದ್ಯಾದಿ ಪೂರ್ಣಂ ।
ಸಂಪನ್ನಂ ಸರ್ವರತ್ನೈಃ ಪಶುಭಿರಬಿ ಜನ್ಯೈಃ ಸತ್ವಶೀಲೈಃ ಸುವೀರ್ಯೈಃ ॥
ಅನ್ನೈಃ ಸಂಜೀವಿನೀಯೈಃ ಫಲರಸ ಕುಸುಮೈರೌಷಧೈಃ ಪ್ರಾಣಸತ್ವೈಃ ।
ಸರ್ವೈಶ್ವರ್ಯೈಃ ಸಮೃದ್ಧಂ ಜಗತಿ ಪರಮಿದಂ ಭಾರತಂ ಮಾತೃಭೂಮಿಃ ॥

– ದೈವರಾತಃ



ಭಾರತಂ ಯೋಗಭೂಮಿಃ

ಪ್ರತ್ಯಕ್ಷೈಕಾಧಿಭೂತ ಪ್ರಕೃತಿಹಿತಕಲಾ ಸತ್ಕ್ರಿಯಾ ಸತ್ವಯೋಗಾತ್ ।
ಪಾರೋಕ್ಷೈಶಾಧಿದೈವ ಪ್ರಣಿಹಿತಪರಧೀ ಭಾವನಾ ಹೃತ್ಪ್ರಯೋಗಾತ್ ॥
ಅಧ್ಯಾತ್ಮೈಕಾಪರೋಕ್ಷ ಪ್ರಚುರತರತಪೋ ಧ್ಯಾನ ನಿಷ್ಠಾದಿಭಾವಾತ್ ।
ತತ್ವೈಕ್ಯಾದಿ ಪ್ರಧಾನಂ ಜಗತಿ ಪರತಮಂ ಭಾರತಂ ಯೋಗಭೂಮಿಃ ॥

– ದೈವರಾತಃ

॥ शान्तिः स्वस्तिः श्रीः ॥

॥ दैवरातस्य जातकम् ॥

		रा १०	
चं गु	रैवतपक्षरीत्या निरयनराशिचक्रम्		
शु ३			ल ९
र २ बु (वक्र)	के ४	कु ८	श ८

ग्रहलाघवरीत्या चेदमेव राशिचक्रं भवति

1813. शालिवाहनशके खरसंवत्सर पुष्यशु
द्धपञ्चमी सोमवासरे जननकालः 36-30.
रैवतपक्षरीत्या अयनांशाः 18-21-30.
ग्रहलाघवरीत्या अयनांशाः 22-49-0
ग्रहलाघवरीत्या धनुर्मासे 22 दिने जन्म
रैवतपक्षरीत्या धनुर्मासे 26 दिने जन्म.
ग्रहलाघवरीत्या शततारा चतुर्थचरणे जन्म
रैवतपक्षरीत्या पूर्वाभाद्राद्वितीयचरणे जन्म.

इति वासिष्ठः गणपतिः

ವಾಸಿಷ್ಠ ಗಣಪತಿಮುನಿಗಳ ಹಸ್ತಾಕ್ಷರದಲ್ಲಿ
ದೈವರಾತರ ಜಾತಕ

ಛಂದೋದರ್ಶನ

ಆವಿರ್ಭಾವ

ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆ

ಗೋಕರ್ಣವು ದಕ್ಷಿಣಭಾರತದ ಪಶ್ಚಿಮ ಸಮುದ್ರ ತೀರದ ಒಂದು ಸುಂದರ ತಾಣ. ಶತಶೃಂಗ ಪರ್ವತಗಳ ಸಾಲಿನಲ್ಲಿ ಹಸಿರುಹೊದ್ದ ನಿಸರ್ಗದ ತೊಟ್ಟಿಲಿನಲ್ಲಿ ಮಲಗಿರುವ ಈ ಪುಣ್ಯಭೂಮಿ ಪುರಾಣ ಕಾಲದಿಂದಲೂ ಪ್ರಸಿದ್ಧವಾಗಿದೆ. ಕೆರೆ-ತೊರೆ-ಹಳ್ಳಗಳ ಪವಿತ್ರ ತೀರ್ಥಗಳಿಂದ ಮನಮೋಹಕ ಗುಡ್ಡ-ಬೆಟ್ಟ- ಗಿರಿಶೃಂಗಗಳಿಂದ ಸಮೃದ್ಧವಾದ ಈ ಕ್ಷೇತ್ರವು ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿದೆ. ಇಲ್ಲಿರುವ ಗುಡ್ಡ-ಬೆಟ್ಟಗಳಿಗೆ, ಕೆರೆ-ತೊರೆಗಳಿಗೆ, ಕಲ್ಲು-ಕಲ್ಲುಗಳಿಗೆ ಒಂದೊಂದು ಇತಿಹಾಸವಿದೆ; ಒಂದೊಂದು ಕಥೆಯಿದೆ. ಪೂರ್ವದಿಕ್ಕಿನೆಡೆಗೆ ಅಘನಾಶಿನಿ ಮತ್ತು ಉತ್ತರಕ್ಕೆ ಗಂಗಾವಳಿ (ಶಾಲ್ಮಲಿ) ನದಿಗಳು ಮೌನವಾಗಿ ಹರಿಯುತ್ತಿದ್ದರೆ ಪಶ್ಚಿಮದಲ್ಲಿ ಜಲಾವೃತ ನೀಲಕಡಲು ಭೋರ್ಗರೆವ ಅಲೆಗಳಿಂದ ನರ್ತಿಸುತ್ತ ರಮಣೀಯ ಭಾವದಲ್ಲಿ ರುದ್ರ ಸಂಗೀತ ಹಾಡುತ್ತಿದೆ.

ಈ ಪುಣ್ಯಕ್ಷೇತ್ರದಲ್ಲಿ 'ವಿಶ್ವಾಮಿತ್ರ, ದೇವರಾತ, ಔದಲ' ಎಂಬ ಈ ಮೂರು ಪ್ರವರಗಳಿಂದ ಯುಕ್ತವಾದ ವಿಶ್ವಾಮಿತ್ರ ಗೋತ್ರದ ಭಡತಿ ಮನೆತನವು ವಾಸವಾಗಿತ್ತು. ಕೃಷಿ ಇವರ ಉದ್ಯೋಗವಾಗಿತ್ತು. ಈ ಕುಟುಂಬದಲ್ಲಿ ವೇದ-ವಿದ್ಯಾಪಾರಂಗತರೂ ಸಂಸ್ಕೃತ ವಿದ್ವಾಂಸರೂ ಆಧ ವಿಘ್ನೇಶ್ವರ ಭಟ್ಟರು ಧರ್ಮಪತ್ನಿ ನಾಗವೇಣಿಯೊಂದಿಗೆ ವಾಸಿಸುತ್ತಿದ್ದರು. ಈ ದಂಪತಿಗಳಿಗೆ ಪುಷ್ಯ ಶುಕ್ಲ ಪಂಚಮಿ ಸೋಮವಾರ (04-01-1892) ದಂದು ಪುತ್ರ ಜನನವಾಯಿತು. ದಂಪತಿಗಳಿಬ್ಬರೂ ಈ ಮಗುವಿಗೆ ಮಾತಾಮಹನ ಹೆಸರಿನಿಂದ 'ಗಣೇಶ' ಎಂದು ನಾಮಕರಣ ಮಾಡಿದರು.

ಸಾವಿರಾರು ವರ್ಷಗಳ ಹಿಂದಿನ ಆರ್ಷಯುಗದ ಋಷಿತೇಜಸ್ಸನ್ನು ಪುನ: ಹೊತ್ತುತಂದ ಸಹಸ್ರಮಾನದ ಯುಗಪುರುಷನಾದ ಈ ಮಗುವು ತಾಯಿ-ತಂದೆಯರ ಮನಮಡಿಲನ್ನು ತುಂಬಿ ಬೆಳೆಯತೊಡಗಿದನು. ಇತರ ಮಕ್ಕಳಿಗಿಂತ ಭಿನ್ನವಾಗಿರುವ ಬಾಲಕ ಗಣೇಶನಲ್ಲಿ ಆಗಲೇ ವಿಲಕ್ಷಣಭಾವವು ಕಂಡುಬರತೊಡಗಿತು. ಶೈಶವದ ಹೊಸಲಿನಿಂದ ಕೌಮಾರ್ಯದತ್ತ ಕಾಲಿಟ್ಟಿದ್ದರೂ ಅವನ ಸ್ವಭಾವ ವಯೋಮಾನಕ್ಕೆ ಅನುಗುಣವಾಗಿರಲಿಲ್ಲ. ಇಳಿಹೊತ್ತಿನ ಸಮಯದಲ್ಲಿ ಒಮ್ಮೊಮ್ಮೆ ಮನೆಯ ಮುಂದಿನ ಕೋಟಿತೀರ್ಥ ಕಟ್ಟೆಯ ಪಾವಟಿಗೆಯ ಮೇಲೆ ಇಹವನ್ನು ಮರೆತು ಅದೆಷ್ಟೋ ಹೊತ್ತಿನವರೆಗೆ ಕುಳಿತಿರುತ್ತಿದ್ದ. ಮರಳಿ ಜಾಗ್ರತಾವಸ್ಥೆಗೆ ಬಂದಾಗ ಯಾರಾದರೂ ಆತನನ್ನು ಸ್ವಲ್ಪ ನಗಿಸಿದರೆ ಸಾಕು, ಬಹಳ ಹೊತ್ತಿನವರೆಗೆ ನಗುತ್ತಲೇ ಇರುತ್ತಿದ್ದ. ರಾತ್ರಿ ಮಲಗುವಾಗ ಅಳುತ್ತಾ ಮಲಗಿದರೆ, ಬೆಳಿಗ್ಗೆ ಅಳುತ್ತಲೇ ಏಳುತ್ತಿದ್ದ. ಎಲ್ಲ ಮಕ್ಕಳ ಹಾಗೆ ಅವನು ತನ್ನ ವಯಸ್ಸಿನ ಜತೆಗಾರರೊಂದಿಗೆ ಆಟ-ಪಾಟಗಳಲ್ಲಿ ಕಲೆಯುತ್ತಿರಲಿಲ್ಲ. ಅವನೊಬ್ಬ ಹಿಂಡನಗಲಿದ ಗಜದಂತೆ ಇದ್ದ. ಮನಸ್ಸು ಬಂದರೆ ಎಲ್ಲ ಹುಡುಗರೊಂದಿಗೆ ನಗುನಗುತ್ತ ಬೆರೆಯುತ್ತಿದ್ದ, ಹಾಗಲ್ಲವಾದರೆ ತನ್ನಷ್ಟಕ್ಕೆ ತಾನು ಬ್ರಹ್ಮವಸ್ತುವಿನಂತೆ ಮೌನ; ಇದು ಗಣೇಶನ ಜಾಯಮಾನ.

ಕೇರಿಯ ಜನರು ಈತನ ಈ ವಿಲಕ್ಷಣ ಗುಣದಿಂದಾಗಿ ಪೆದ್ದ, ಬಲಗೊಂಬೆ, ಜಡಭರತ, ಅಜ್ಜಿಮೊಮ್ಮ ಇತ್ಯಾದಿ ಹೆಸರಿನಿಂದ ಅಪಹಾಸ್ಯ ಮಾಡುತ್ತಿದ್ದರು. ಗಣೇಶನ ಮನಸ್ಸು ಬಹು ಸೂಕ್ಷ್ಮ ಮುಗ್ಧ ಹಾಗೂ ಅಷ್ಟೇ ನಿರ್ಮಲವಾಗಿತ್ತು. ಯೋಗಿಗಳ ವ್ಯಕ್ತಿತ್ವದ ಬಗೆಗೆ ಹೇಳುವಾಗ ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ, ಉನ್ಮನಿ ಎಂದು ಅವರ ಮಾನಸಿಕ ಸ್ಥಿತಿಯನ್ನು ವರ್ಣಿಸುತ್ತಾರೆ. ಬಾಲಕ ಗಣೇಶನಲ್ಲಿ ಅಂತರ್ಗತವಾಗಿರುವ ಈ ಗುಣಗಳು ಆಯಾ ಸಮಯ ಸಂದರ್ಭಕ್ಕೆ ಅನುಗುಣವಾಗಿ ಆ ಸ್ಥಿತಿಗೆ ಆತನನ್ನು ಸಹಜವಾಗಿ ಒಯ್ಯುತ್ತಿದ್ದವು. ತಾಯಿ-ತಂದೆಯರ ಅತಿಪ್ರೀತಿಯ ಪರಿಣಾಮವೋ! ಜನ್ಮಾಂತರದ ಆರ್ಜಿತ ಸಂಸ್ಕಾರದ ಫಲವೋ! ಯಾರ ಅಂಕೆಗೂ ಒಳಪಡದೆ ಅವನ ವ್ಯಕ್ತಿತ್ವವು ರೂಪುಗೊಳ್ಳುತ್ತಿತ್ತು.

ಶ್ರೀ ಜಯರಾಮ ಭಟ್ಟರು - ಗೋಕರ್ಣದಲ್ಲಿ ವೇದ ಮತ್ತು ಆಧ್ಯಾತ್ಮ ವಿದ್ಯೆಗಳ ಪುರೋಗಮನ

ಮಧ್ಯಪ್ರದೇಶದ ಗ್ವಾಲಿಯರ ಮಹಾರಾಣಿಯವರೊಂದಿಗೆ ರಾಜಪುರೋಹಿತ ಶ್ರೀ ಜಯರಾಮ ಭಟ್ಟ ಸಪ್ರೆ ಎಂಬವರು ಗೋಕರ್ಣವನ್ನು ಸಂದರ್ಶಿಸುವದಕ್ಕಾಗಿ ಬಂದರು. ಇವರು ಋಗ್ವೇದವೇ ಮೊದಲಾದ ದಶಗ್ರಂಥಗಳ ವಿದ್ವಾಂಸರಾಗಿದ್ದರು. ಗ್ವಾಲಿಯರ ಸಂಸ್ಥಾನದ ಲಷ್ಕರ ಸಮೀಪದಲ್ಲಿರುವ ಸಾಗರ ಎಂಬ ಗ್ರಾಮದಲ್ಲಿ ಜನಿಸಿದ ಇವರು ಕರ್ಹಾಡೆ ಬ್ರಾಹ್ಮಣರಾಗಿದ್ದರು.

ಮಹಾರಾಣಿಯವರು ಗೋಕರ್ಣಕ್ಕೆ ಬಂದಾಗ ಅವರಿಗೆ ಉಳಿದುಕೊಳ್ಳುವುದಕ್ಕೆ ರಥಬೀದಿಯಲ್ಲಿರುವ ಊರಿಗೇ ಶ್ರೀಮಂತರೆನಿಸಿದ ಸುಬ್ಬಡಿಗಳ ಮನೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಆದರೆ ಜಯರಾಮ ಭಟ್ಟರಿಗೆ ಗೋಕರ್ಣದಲ್ಲಿ ಯಾರ ಪರಿಚಯವೂ ಇರಲಿಲ್ಲ. ಆದ್ದರಿಂದ ಅವರು ಅಲ್ಲಿಯೇ ಸಮೀಪದಲ್ಲಿರುವ ಪ್ರಸಾದ ಭಟ್ಟರ ಮನೆಯ ಹೊರಗಿನ ಚಿಟ್ಟೆಯ ಮೇಲೆ ಕುಳಿತು ತಾನು ಎಲ್ಲಿ ತಂಗಬೇಕು ಎಂದು ಯೋಚಿಸುತ್ತಿದ್ದರು. ಆಗ ಆ ಮನೆಯ ಗೃಹಿಣಿ ವೆಂಕಟರಮಣ ಭಟ್ಟ ಪ್ರಸಾದರ ತಾಯಿ ತಾತಮ್ಮನವರು ವಯೋವೃದ್ಧರೂ, ಜ್ಞಾನವೃದ್ಧರೂ ಆದ ಪ್ರಶಾಂತ ಪುರುಷರೊಬ್ಬರು ತಮ್ಮ ಮನೆಯ ಬಳಿ ಕುಳಿತಿರುವುದನ್ನು ಕಂಡು ಭಕ್ತಿಯಿಂದ ಜಯರಾಮಭಟ್ಟರಿಗೆ ನಮಸ್ಕರಿಸಿ "ಮಹಾರಾಣಿಯವರು ದೊಡ್ಡವರು, ದೊಡ್ಡವರ ಮನೆಗೆ ಹೋದರು, ನಾವು ಬಡವರು ಆದರೆ ಆದರಾತಿಥ್ಯದಲ್ಲಿ ಶ್ರೀಮಂತರು. ಆದ್ದರಿಂದ ತಮ್ಮ ವಾಸ್ತವ್ಯ ನಮ್ಮ ಮನೆಯಲ್ಲಾಗಲಿ" ಎಂದು ವಿನಂತಿಸಿದರು. ಜಯರಾಮ ಭಟ್ಟರಿಗೆ ಕನ್ನಡ ತಿಳಿಯದ ಕಾರಣ ತಾತಮ್ಮನವರು ಏನು ಹೇಳುತ್ತಿದ್ದಾರೆಂದು ಅರ್ಥವಾಗಲಿಲ್ಲ. ಆಗ ಅಲ್ಲಿಯೇ ನಿಂತಿದ್ದ ಕೃಷ್ಣಭಟ್ಟ ಪ್ರಸಾದರು ಮರಾಠಿಯಲ್ಲಿ ಅದನ್ನು ತಿಳಿಸಿದಾಗ 'ಬರಾ ಆಹೆ' ಎಂದು ಉಳಿಯಲು ಒಪ್ಪಿದರು.

ಜಯರಾಮಭಟ್ಟರಿಗೆ ಗೋಕರ್ಣದಲ್ಲಿಯ ವಿದ್ವಜ್ಜನರ ಸಮೂಹವನ್ನು ಕಂಡು ತುಂಬಾ ಸಂತೋಷವಾಯಿತು. ಇಲ್ಲಿಯ ಪ್ರಶಾಂತ ವಾತಾವರಣ ಸುಂದರ ಪರಿಸರ ಹಾಗೂ ಜನರ ಸರಳ ನೇರ ನಡೆ-ನುಡಿ, ಆತ್ಮೀಯ ಒಡನಾಟ ಇವೆಲ್ಲ ಬಹಳ ಇಷ್ಟವಾಯಿತು. ಅಂತಲೇ ಈ ಕ್ಷೇತ್ರವನ್ನು ಬಿಟ್ಟು ತಮ್ಮ ಊರಿಗೆ ಹೋಗಲು ಅವರಿಗೆ ಮನಸ್ಸಾಗಲಿಲ್ಲ. ಆದ್ದರಿಂದ ಜಯರಾಮಭಟ್ಟರು ಮಹಾರಾಣಿಯವರು ಮರಳಿ ಊರಿಗೆ ಹೊರಟಾಗ "ಆಪಣ ಯೇಥೇಥ ರಹಣಾರ" ಎಂದು ಹೇಳಿ ತಾವು ಗೋಕರ್ಣದಲ್ಲಿಯೇ ಉಳಿದರು. ಇವರ ಅಪಾರ ವಿದ್ವತ್ತು, ಘನತೆ, ಸರಳತೆ, ಅನುಷ್ಠಾನ, ನಿಷ್ಠೆ ಮತ್ತು ನಿಯಮಿತವಾದ



ಗುರುಮೂರ್ತಿ ಶ್ರೀ ಸಚ್ಚಿದಾನಂದರು

(ಶ್ರೀ ಜಯರಾಮ ಭಟ್ಟರು)

ಜೀವನ ಕಂಡು ಊರಿನ ಅನೇಕರು ಇವರ ಶಿಷ್ಯರಾದರು. ಅವರಲ್ಲಿ ಮುಖ್ಯರಾದವರು ಕೃಷ್ಣಭಟ್ಟ ಮೈಯರರು, ಮಾರ್ಕಾಂಡೇಯ ವೆಂಕಟರಮಣಭಟ್ಟರು, ಅನಂತ ಉಪಾಧ್ಯಾಯರು, ವಿಘ್ನೇಶ್ವರ ಭಟ್ಟ ಭಡತಿಯವರು ಮುಂತಾದವರಿದ್ದರು. ಇವರಿಗೆಲ್ಲ ಜಯರಾಮಭಟ್ಟರು ಋಗ್ವೇದ ಮತ್ತು ದಶಗ್ರಂಥಗಳ ಅಧ್ಯಾಪನೆ ಮಾಡುತ್ತಿದ್ದರು. ದಿನಾಲು ಇಳಿಹೊತ್ತಿನ ಸಮಯದಲ್ಲಿ ಸಾಯಂಕಾಲದವರೆಗೆ ಊರವರಿಗಾಗಿ ವೇದ ಮತ್ತು ಆಧ್ಯಾತ್ಮ ವಿಷಯವಾಗಿ ವ್ಯಾಖ್ಯಾನ ಮಾಡುತ್ತಿದ್ದರು. ಜಯರಾಮಭಟ್ಟರ ಹೃತ್ಪೂರ್ವಕ ಪ್ರಯತ್ನ ಮತ್ತು ಪರಿಶ್ರಮದಿಂದ ಗೋಕರ್ಣದಲ್ಲಿ ವೇದವಿದ್ಯೆಯು ಉಚ್ಛ್ರಾಯ ಸ್ಥಿತಿಗೇರುವಂತಾಯಿತು.

ಅಶೋಕವನದಲ್ಲಿ ಶ್ರೀ ಮಲ್ಲಿಕಾರ್ಜುನ ದೇವರ ಗುಡಿ ನಿರ್ಮಾಣ

ಪ್ರತಿ ತಿಂಗಳು ಶುಕ್ಲ ಮತ್ತು ಕೃಷ್ಣಪಕ್ಷಗಳ ಅನಧ್ಯಾಯದ ಮೂರುದಿನ ಜಯರಾಮ ಭಟ್ಟರು ತಮ್ಮ ಶಿಷ್ಯರೊಡನೆ ಗೋಕರ್ಣದ ವಿಶೇಷ ಸ್ಥಳಗಳಿಗೆ ಸಂಚರಿಸಿ ಅವುಗಳ ಪರಿಚಯ ಮಾಡಿಕೊಳ್ಳುತ್ತಿದ್ದರು. ಹೀಗಿರುವಾಗ ಒಂದು ದಿನ ಕೋಟಿತೀರ್ಥದ ಆಗ್ನೇಯ ದಿಕ್ಕಿನಲ್ಲಿರುವ ಭೀಮಕುಂಡದ ಕಾಲುದಾರಿ ಮೂಲಕ ಗೋಕರ್ಣ ಮತ್ತು ತದಡಿ ಮಧ್ಯ ಇರುವ ಅಶೋಕವನಕ್ಕೆ ಬಂದರು. ಎಲ್ಲೆಡೆ ತಂಪಾದ ಪ್ರಶಾಂತ ವಾತಾವರಣ. ನೀರವದಲ್ಲಿ ಅದ್ದಿದಂತ ದಟ್ಟ ಮೌನ. ಹಸಿರು ಕಾನನ ನಡುವೆ ತಗ್ಗು ಪ್ರದೇಶದಲ್ಲಿ ಒಂದು ಕೆರೆ; ಅದೇ ಅಶೋಕತೀರ್ಥ. ಅಲ್ಲಿಂದ ಸ್ವಲ್ಪ ಮುಂದಕ್ಕೆ ನಡೆದುಹೋದಾಗ ಜುಳುಜುಳು ನೀನಾದ ಗೈಯುತ್ತ ಹರಿಯುತ್ತಿರುವ ಕಿರುತೊರೆ. ಅದರ ದಂಡೆಯ ಮೇಲೆ ಹೊಂಬಣ್ಣದ ಗೊಂಚಲು ಗೊಂಚಲುಗಳಿಂದ ಪುಷ್ಪಭರಿತವಾಗಿ ಸಾಲಂಕೃತಗೊಂಡ ಅಶೋಕವೃಕ್ಷಗಳು, ಸ್ವಚ್ಛಂದವಾಗಿ ಹಾರಾಡಿಕೊಂಡು ಇಂಚರಗೈಯುತ್ತಿರುವ ಹಕ್ಕಿಗಳ ಮಧುರ ಕೂಜನ; ದೂರದ ಹಾದಿಯಲ್ಲಿ ಕ್ರಮಿಸಿಬಂದ ಆಯಾಸವನ್ನು ಮರೆಯಾಗಿಸಿತ್ತು. ಯಾವುದೋ ನೂತನ ಲೋಕದ ದಿವ್ಯ ಪರಿಸರದ ಅನುಭವ ನೀಡಿತ್ತು. ಹಾಗೆಯೇ ಎಲ್ಲವನ್ನು ವೀಕ್ಷಿಸುತ್ತ ಮುಂದಕ್ಕೆ ಬಂದಾಗ ಒಂದು ಸಮತಟ್ಟಾದ ಅಂಗಳದಲ್ಲಿ ಶಿವಲಿಂಗ ಕಾಣಿಸಿತು. ಅದು ಮಲ್ಲಿಕಾರ್ಜುನ ಲಿಂಗ. ಕುತೂಹಲದಿಂದ ಸುತ್ತಲೂ ಪರೀಕ್ಷಿಸುತ್ತಿರುವಂತೆ ನಾತಿದೂರದಲ್ಲಿ ಒಂದು ಅಶೋಕವೃಕ್ಷ ಹಾಗೂ ಅದರ ಕೆಳಗಡೆ ಒಂದು ತಿಳಿನೀರಿನ ಕುಂಡ ಕಂಡುಬಂತು. ಆಚೆ–ಈಚೆ ಕೇತಕಿ ಸಸ್ಯಗಳು ಪೊದೆಯಾಗಿ ಬೆಳೆದು ಹತ್ತಿರಕ್ಕೆ ಹೋಗುವಂತಿರಲಿಲ್ಲ. ಶಿಷ್ಯರ ಸಹಾಯದಿಂದ ಕೇತಕಿ ಗರಿಗಳನ್ನು ಬದಿಗೆ ಸರಿಸಿ ನೋಡಿದಾಗ ಕುಂಡದೊಳಗೆ ಒಂದು ಶಿಲಾಲಿಂಗವಿತ್ತು. ಇದನ್ನೆಲ್ಲ ನೋಡುತ್ತ ಜಯರಾಮಭಟ್ಟರು ಭಾವುಕರಾಗಿ ಕ್ಷಣಕಾಲ ಮೈಮರೆತರು. ಇಹದ ಪರಿವೆಗೆ ಬರುತ್ತಿರುವಂತೆ ಅವರ ಮನಸ್ಸು ಹೇಳಿತು. ಮಧ್ಯಪ್ರದೇಶದ ಗ್ವಾಲಿಯರ ಎಲ್ಲಿ? ಈ ಗೋಕರ್ಣವೆಲ್ಲಿ? ಯಾವ ಅರಿಯದ ಅಬೋಧಶಕ್ತಿ ನನ್ನನಿಲ್ಲಿಗೆ ಕರೆತಂದಿತು! ಹೀಗೆ ಯೋಚಿಸುತ್ತ ಅನ್ಯಮನಸ್ಕರಾಗಿ ಗೋಕರ್ಣ ತಲುಪಿ ಅಶೋಕವನದಲ್ಲಿ ತಾನು ಕಂಡ ದೃಶ್ಯಗಳ ಬಗೆಗೆ ಊರಿನ ಹಿರಿಯರಲ್ಲಿ ವಿಚಾರಿಸಿದಾಗ ಸಮತಟ್ಟಾದ ಸ್ಥಳದಲ್ಲಿರುವ ಲಿಂಗ ಮಲ್ಲಿಕಾರ್ಜುನ ಲಿಂಗವೆಂತಲೂ, ಅಶೋಕವೃಕ್ಷದ ಕೆಳಗೆ ನೀರಿನ ಕುಂಡದಲ್ಲಿರುವದು ಸೀತಾಲಿಂಗವೆಂತಲೂ ತಿಳಿಸಿದರು. ಆಗ ಜಯರಾಮಭಟ್ಟರು ಊರಿನ ಪ್ರಮುಖರೊಂದಿಗೆ ಚರ್ಚಿಸಿ ಕೆಲವೇ ದಿನಗಳಲ್ಲಿ ಅಶೋಕ ವನದಲ್ಲಿರುವ ಮಲ್ಲಿಕಾರ್ಜುನೇಶ್ವರ ದೇವರಿಗೆ ಗುಡಿ ನಿರ್ಮಾಣ ಮಾಡಿದರು. ಆಗ ಸೀತಾಲಿಂಗವನ್ನು ಎಲ್ಲಿ ಪ್ರತಿಷ್ಠಾಪಿಸಬೇಕು? ಎಂಬ ಜಿಜ್ಞಾಸೆಯುಂಟಾಗಿ

ಕೊನೆಗೆ ಸೀತಾಲಿಂಗವು ನಾಲ್ಕು ಗೋಡೆಗಳ ನಡುವೆ ಇರುವದಕ್ಕಿಂತ ನಿರಾವರಣ ಮುಕ್ತಪರಿಸರದಲ್ಲಿರುವದೇ ಸೂಕ್ತವೆಂದು ತಿಳಿದು ದೇವಾಲಯದ ಹೊರಗೆ ಬಲಭಾಗದಲ್ಲಿ ಪ್ರತಿಷ್ಠಾಪಿಸಿದರು. ಸೀತಾಲಿಂಗವು ನೀರಿನ ಕುಂಡದಲ್ಲಿ ಇದ್ದ ಕಾರಣ ಹಾಗೂ ರಾಮಾಯಣದಲ್ಲಿ ಸೀತೆಯು ಭೂಮಿಯಲ್ಲಿ ದೊರಕಿರುವದಾಗಿ ಹೇಳಲ್ಪಟ್ಟಿರುವುದರಿಂದಲೂ ಅವುಗಳ ಸಂಕೇತವಾಗಿ ಒಂದು ಶಿಲೆಯ ಕಲ್ಲನ್ನು ಕುಂಡದ ಆಕೃತಿಯಲ್ಲಿ ಕೊರೆದು ಅದರಲ್ಲಿ ಸೀತಾಲಿಂಗವನ್ನು ಪ್ರತಿಷ್ಠಾಪಿಸಲಾಯಿತು.

ಸಾಮಾನ್ಯವಾಗಿ ದೇವರ ಮೂರ್ತಿಗಳನ್ನು, ಲಿಂಗಗಳನ್ನು ಶಿಲಾಪೀಠದ ಮೇಲೆ ಪ್ರತಿಷ್ಠಾಪಿಸುವದು ಸಾಂಪ್ರದಾಯಿಕ ಪದ್ಧತಿ. ಆದರೆ ಇಲ್ಲಿ ಸೀತಾಲಿಂಗಕ್ಕೆ ಪೀಠವಿಲ್ಲ. ಮಗುವು ತಾಯಮಡಿಲನ್ನು ತಬ್ಬಿನಿಂತ ಹಾಗೆ ಮಣ್ಣಿನ ಮಗಳಾದ ಸೀತೆಗೆ ಅಂದರೆ ಸೀತಾಲಿಂಗಕ್ಕೆ ಭೂಮಿಯೇ ಪೀಠ ! ಮಿಥ್ಯ ಆಡಂಬರ ವಿಲಾಸ ವೈಭವಗಳ ನಿರಾಕರಣ ಸಂಕೇತವಾಗಿ ಸರಳತೆಯ ಸಂದೇಶ ಸಾರುತ್ತಿದ್ದಾಳೆ ಇಲ್ಲಿ ಈ ಮಾತೆ.

ಅಶೋಕವನ ಎಂಬ ಹೆಸರು ಈ ಸ್ಥಳಕ್ಕೆ ಅಶೋಕವೃಕ್ಷಗಳ ಇರುವಿಕೆಯಿಂದಾಗಲಿ ಅಥವಾ ಯಾವುದೇ ವ್ಯಕ್ತಿಯಿಂದಾಗಲಿ ಬಂದಿದ್ದಲ್ಲ. ಅಶೋಕವನ ಶಬ್ದ ಶೋಕರಹಿತವಾದ ತಾಣ ಎನ್ನುವ ಅರ್ಥದಲ್ಲಿದೆ. ರಾಮಾಯಣ ಮಹಾಕಾವ್ಯದಲ್ಲಿ, ಪುರಾಣಗಳಲ್ಲಿ ನಮೂದಿಸಿರುವ ಅಶೋಕವನ ಇದಲ್ಲ. "ಪ್ರಶಾಂತ ಪರಿಸರದ ದಿವ್ಯಾನುಭೂತಿಯಿಂದ ಮನಸ್ಸಿನ ದುಗುಡ ದುಮ್ಮಾನಗಳನ್ನು ಪರಿಹರಿಸಿ ಶಾಂತಿಯನ್ನು ನೀಡುವ ಯೋಗಭೂಮಿ" ಇದು ಅಶೋಕವನ ಹೆಸರಿನ ತಾತ್ಪರ್ಯ.

'ಅಶೋಕ' ಶಬ್ದದ ಉತ್ಪತ್ತಿ ಮತ್ತು ಅರ್ಥ

ಲೌಕಿಕ ಅರ್ಥ : ಈ ಜಗತ್ತಿನಲ್ಲಿ ಅತ್ಯಂತ ಕಠಿಣವಾಗಿರುವುದು ಶೋಕ; ಶೋಕದಿಂದ ರಹಿತವಾಗಿರುವದು ಅಶೋಕ.

ಅಂತರಾರ್ಥ : "ಶೋಕ" ಶಬ್ದವು "ಶುಚ್ ದೀಪ್ತೌ" ಎಂಬ ಧಾತುವಿನಿಂದ ಬಂದಿದೆ. ದೀಪ್ತಿ ಎಂದರೆ ತಾಪ. ತಾಪರಹಿತವಾದ ಶಾಂತಸ್ಥಿತಿಯನ್ನು ವೇದಿಸುವ ಶಬ್ದ ಅಶೋಕ.

ಅಶ್–ಓಕ=ಅಶೋಕ. ಇಲ್ಲಿ 'ಅಶ್' ಧಾತುವು ವ್ಯಾಪ್ತಿ ಎಂಬ ಅರ್ಥದಲ್ಲಿದೆ. ಓಕ ಎಂದರೆ ಮನೆ, ಮೂಲಸ್ಥಾನ ಎಂಬ ಅರ್ಥವು ವೇದದಲ್ಲಿ ಪ್ರಸಿದ್ಧವಾಗಿದೆ.

ಓಕೋದಧೇ ಬ್ರಹ್ಮಣ್ಯಂತಶ್ಚ ನರ: । ದೇವಾ ಓಕಾಂಸಿ ಚಕ್ರಿರೇ । ಇತ್ಯಾದಿ.

'ಅಶೋಕ' ಶಬ್ದಕ್ಕೆ ಇಲ್ಲಿ ವನ ಎಂಬ ವಿಶೇಷಣವಿದೆ. ವನವು ಏಕಾಂತವಾಗಿರುವದರಿಂದ ತಪಸ್ಸಿಗೆ ಯೋಗ್ಯಸ್ಥಾನ 'ತಪೋವನ' ಎಂದು ಪರಿಗಣಿಸಲ್ಪಟ್ಟಿದೆ.

ವಸಂತೋತ್ಸವ

ಅಶೋಕವನದಲ್ಲಿ ಶ್ರೀ ಮಲ್ಲಿಕಾರ್ಜುನ ದೇವರಿಗೆ ಗುಡಿನಿರ್ಮಿಸಿ ವೈಶಾಖ ಶುದ್ಧ ಪೌರ್ಣಿಮೆಯಂದು ಅಷ್ಟಬಂಧಮಹೋತ್ಸವವನ್ನು ನೆರವೇರಿಸಿದ ನೆನಪಿಗಾಗಿ ಪ್ರತಿವರ್ಷ ಆ ದಿನದಂದು ವಿಶೇಷ ಪೂಜಾರಾಧನೆ ಮತ್ತು ವನ ಭೋಜನಗಳೊಂದಿಗೆ "ವಸಂತೋತ್ಸವ" ಎಂಬ ಹೆಸರಿನಲ್ಲಿ ಆಚರಿಸುವ ಪರಿಪಾಠ ರೂಢಿಗೆ

ಬಂತು. ಹೀಗೆ ಗೋಕರ್ಣದಲ್ಲಿ ಜಯರಾಮಭಟ್ಟರು ವಿವಿಧ ಬಗೆಯ ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಿ ಅಭಿವೃದ್ಧಿಗೊಳಿಸುತ್ತಿರುವುದರಿಂದ ಊರ ಜನರು ಅವರನ್ನು ಪ್ರತಿದಿನ ಸರದಿಯಂತೆ ತಮ್ಮ ಮನೆಗೆ ಭಕ್ತಿಯಿಂದ ಭೋಜನಕ್ಕೆ ಆಮಂತ್ರಿಸುತ್ತಿದ್ದರು. ಭೋಜನಾನಂತರ ಅವರು ಸ್ವಸ್ಥಾನಕ್ಕೆ ಹಿಂದಿರುಗುವಾಗ ಆ ಮನೆಯ ಗೃಹಿಣಿಯರು ಒಂದಷ್ಟು ಕಜ್ಜಾಯವನ್ನು ಪ್ರೀತ್ಯಾದರ ಪೂರ್ವಕವಾಗಿ ಜಯರಾಮ ಭಟ್ಟರ ಕರವಸ್ತ್ರದಲ್ಲಿ ಹಾಕುತ್ತಿದ್ದರು. ಅತ್ಯಂತ ಭಕ್ತಿಯಿಂದ ಅರ್ಪಿಸುತ್ತಿದ್ದ ಇದನ್ನು ನಿರಾಕರಿಸಲಾಗದೇ ಅವರು ಪ್ರೀತಿಯಿಂದ ಸ್ವೀಕರಿಸಿ ದಾರಿಯಲ್ಲಿ ಸಿಕ್ಕಿದ ಮಕ್ಕಳಿಗೆ ಹಂಚುತ್ತಾ ಹೋಗುತ್ತಿದ್ದರು.

ಅಧ್ಯಾತ್ಮದ ಬೀಜಾರೋಪಣ

ಊರಿನ ಎಲ್ಲ ಜನರ ಬಾಯಲ್ಲಿ ಜಯರಾಮಭಟ್ಟರು ಗೈಯುತ್ತಿರುವ ಉದಾತ್ತ ಕಾರ್ಯಗಳು ಹಾಗೂ ಅವರ ಸಜ್ಜನಿಕೆ ಮತ್ತು ಸರಳ ಜೀವನದ ಕುರಿತು ಪ್ರಶಂಸೆಯ ಮಾತುಗಳು ಅಭಿವ್ಯಕ್ತವಾಗುತ್ತಿದ್ದವು. ಇವೆಲ್ಲ ಬಾಲಕ ಗಣೇಶನ ಮನಸ್ಸಿನ ಮೇಲೆ ಸೂಕ್ಷ್ಮವಾಗಿ ಪರಿಣಾಮಬೀರುತ್ತಾ ಆಧ್ಯಾತ್ಮ ಬೀಜಾರೋಪಣಕ್ಕೆ ನಾಂದಿಯಾಯಿತು.

ಜಯರಾಮ ಭಟ್ಟರ ಚರಿತ-ಚರ್ಯೆಗಳು ದಿವ್ಯ ಜೀವನಪಥದಲ್ಲಿ ಸಾಗುತ್ತಿರುವಾಗ ಅವರ ಅಂತರಂಗದ ಒಳದನಿ ಎಚ್ಚರಿಸಿತು. ಮನಸ್ಸು ಜಾಗ್ರತವಾಯಿತು. ಆತ್ಮಾನುಭವದ ದಿವ್ಯಾನುಭೂತಿಯ ಪಡೆಯಲು ಹಾತೊರೆಯಿತು. ಇದಕ್ಕಾಗಿ ಅವರು ಊರ ಮಧ್ಯದಲ್ಲಿರುವ ಮಾರ್ಕಾಂಡೇಶ್ವರ ದೇವರ ದಕ್ಷಿಣ ಭಾಗದಲ್ಲಿರುವ ಒಂದು ಸಣ್ಣ ಕೋಣೆಯನ್ನು ಏಕಾಂತವಾಸಕ್ಕಾಗಿ ಆಯ್ಕೆಮಾಡಿಕೊಂಡರು. ಆನಂತರ ಹೊರಗಿನ ಎಲ್ಲ ಈಷಣೆಗಳನ್ನು ತ್ಯಜಿಸಿ ಅಂತರ್ಮುಖರಾಗಿ ಕೆಲವುಕಾಲ ಮೌನದಿಂದ ಇಪ್ಪತ್ನಾಲ್ಕು ಲಕ್ಷ ಗಾಯತ್ರಿ ಜಪಮಾಡಿ ಸನ್ಯಾಸ ಸ್ವೀಕರಿಸಿದರು. ಆಗ ಜಯರಾಮಭಟ್ಟರಿಗೆ ಗುರುಗಳಿಂದ "ಸಚ್ಚಿದಾನಂದ" ಎಂಬ ಯೋಗ ಪಟ್ಟವು ಕೊಡಲ್ಪಟ್ಟಿತು. ಜನರು ವಾಡಿಕೆಯಲ್ಲಿ ಇವರನ್ನು ಗುರುಮೂರ್ತಿ ಎಂದು ಕರೆಯುತ್ತಿದ್ದರು.

ಜಯರಾಮಭಟ್ಟರು ಸನ್ಯಾಸವನ್ನು ಸ್ವೀಕರಿಸಿದ ನಂತರ ಊರಜನರು ದಿನಾಲು ಅಪರಾಹ್ನ ಸುಮಾರು ನಾಲ್ಕು ಗಂಟೆಯಿಂದ ಸಾಯಂಕಾಲದವರೆಗೆ ಅವರ ದರ್ಶನಕ್ಕೆ ಹೋಗುತ್ತಿದ್ದರು. ತಾಯಿ ನಾಗವೇಣಿಗೆ ಗಣೇಶನ ಮೇಲೆ ಅಪಾರ ಪ್ರೇಮ. ಅವಳು ತಾನು ಹೋಗುವಲ್ಲೆಲ್ಲ ಅವನನ್ನು ಜತೆಗೆ ಕರೆದೊಯ್ಯುತ್ತಿದ್ದಳು. ಗಣೇಶನಿಗೆ ಚಿಕ್ಕವನಿರುವಾಗಲೇ ಗುರುಹಿರಿಯರು, ದೇವರು ಎಂದರೆ ಬಹಳ ಭಕ್ತಿ. ತಾಯಿಯು ಅವನಿಗೆ ನಮಸ್ಕರಿಸಲು ಹೇಳುವ ಮೊದಲೇ ಅವನು ತಾಯಿಯನ್ನನುಸರಿಸಿ ನಮಸ್ಕರಿಸಿ ಗುರುಮೂರ್ತಿಯವರ ಮುಂದೆ ಕೈಮುಗಿದು ನಿಲ್ಲುತ್ತಿದ್ದ. ಇದು ಜನ್ಮಾಂತರದ ಸಂಸ್ಕಾರವೋ ಮನದ ಸಹಜ ಪ್ರವೃತ್ತಿಯೋ! ನಾಗವೇಣಿಗಂತೂ ಮಗನ ವಿನೀತಭಾವ ಅನನ್ಯಭಕ್ತಿಯ ನಡೆ-ನುಡಿಕಂಡು ಬಹಳ ಸಂತೋಷವಾಗುತ್ತಿತ್ತು.

ಊರಿನ ಎಲ್ಲ ಜನರ ಬಾಯಲ್ಲಿ ಜಯರಾಮಭಟ್ಟರು ಗೈಯುತ್ತಿರುವ ಉದಾತ್ತ ಕಾರ್ಯಗಳು ಹಾಗೂ ಅವರ ಸಜ್ಜನಿಕೆ ಮತ್ತು ಸರಳ ಜೀವನದ ಕುರಿತು ಪ್ರಶಂಸೆಯ ಮಾತುಗಳು ಅಭಿವ್ಯಕ್ತವಾಗುತ್ತಿದ್ದವು. ಇವೆಲ್ಲ ಬಾಲಕ ಗಣೇಶನ ಮನಸ್ಸಿನ ಮೇಲೆ ಸೂಕ್ಷ್ಮವಾಗಿ ಪರಿಣಾಮಬೀರುತ್ತಾ ಆಧ್ಯಾತ್ಮ ಬೀಜಾರೋಪಣಕ್ಕೆ ನಾಂದಿಯಾಯಿತು.

ಜಯರಾಮಭಟ್ಟರು ತಮ್ಮ ಅಂತಿಮ ಕ್ಷಣಗಳವರೆಗೂ ಪರಿಪೂರ್ಣ ಸಂತೃಪ್ತ ಜೀವನ ಸಾಗಿಸಿದರು. ವೇದವಿದ್ಯೆಯ ಅಭಿವೃದ್ಧಿಗಾಗಿ ಶ್ರಮಿಸಿ ಜ್ಞಾನದಹಣತೆ ಬೆಳಗಿದರು. ಇನ್ನು ಇಹದ ಬದುಕು ಸಾಕು ಎನಿಸುತ್ತಿರುವಂತೆಯೇ ಅದೊಂದು ದಿನ ಸಮಾಧಿಸ್ಥಿತಿಯಲ್ಲಿ ತಾವು ನಂಬಿದ ದೈವದಲ್ಲಿ ಲೀನರಾದರು. ಭಕ್ತಜನರ ಅನುರಾಗದಲ್ಲಿ ಕರಗುತ್ತ ಪ್ರಾತಃಸ್ಮರಣೀಯರಾದರು. ಅಂದು ಪ್ರಾತಃಕಾಲ ವಿದ್ಯಾರ್ಥಿಗಳು, ಊರಜನರು ಎಲ್ಲ ಸೇರಿ ವೇದಘೋಷದೊಂದಿಗೆ ಶ್ರೀ ಗುರುಮೂರ್ತಿ ಸಚ್ಚಿದಾನಂದರ ಪಾರ್ಥಿವ ದೇಹವನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮಾಡಿದರು. ಅನಂತರ ಸಾವಿರಾರು ತೆಂಗಿನಕಾಯಿಗಳನ್ನು ಒಡೆದು ಅದರ ಹೋಳುಗಳನ್ನು ಅಲ್ಲಿ ನೆರೆದ ಜನರು ಪ್ರಸಾದರೂಪವಾಗಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋದರು. ಬಾಲಕ ಗಣೇಶ ಇದನ್ನೆಲ್ಲವ ಕೌತುಕದಿಂದ ಅವಲೋಕಿಸುತ್ತಿದ್ದ. ಅವನ ಎಳೆಯ ಹಸಿಯಾದ ಮನಸ್ಸಿನ ಮೇಲೆ ಇದು ಹಸಿರಾಗಿ ಉಳಿಯಿತು.

ಬಾಲಕ ಗಣೇಶನ ಉಪನಯನ

ಬಾಲಕ ಗಣೇಶನು ಎಂಟನೇ ವರ್ಷದಲ್ಲಿ ಪಾದಾರ್ಪಣೆ ಮಾಡುತ್ತಿದ್ದನು. ಅಂತರ್ಮುಖಿಯೂ ವಿಲಕ್ಷಣಮತಿಯೂ ಆದ ಅವನ ವ್ಯಕ್ತಿತ್ವವು ಎಲ್ಲರಿಗೂ ಒಂದು ಒಗಟಾಗಿತ್ತು. ಸಣ್ಣವರು, ದೊಡ್ಡವರು, ವೃದ್ಧರು ಎನ್ನುವ ತಾರ–ತಮ್ಯವಿಲ್ಲದೆ ಎಲ್ಲರಿಗೂ ನೆರವಾಗುತ್ತ ಯಾರು ಏನೇ ಕೆಲಸ ಹೇಳಿದರೂ ಅದನ್ನು ಅಕ್ಕರೆಯಿಂದ ಮಾಡುವ ಸ್ವಭಾವ ಅವನದಾಗಿತ್ತು. ಆತನ ಸ್ನೇಹಪರತೆ ಸೇವಾ ಮನೋಧರ್ಮಗಳಿಗಾಗಿ ಸದಾ ಶುಭ ಹಾರೈಸುತ್ತಿದ್ದ ಹಿರಿಯ ವೃದ್ಧರನೇಕರು ಗಣೇಶನು ಬಾಲವಟುವಾಗಿ ಬ್ರಹ್ಮೋಪದೇಶವನ್ನು ಪಡೆಯುವ ಆ ದಿವ್ಯ ಕ್ಷಣಗಳ ದೃಶ್ಯವನ್ನು ಕಣ್ತುಂಬ ನೋಡುವ ಹಂಬಲದಿಂದ ವಿಘ್ನೇಶ್ವರ ಭಟ್ಟರಿಗೆ "ಗಣೇಶನ ಉಪನಯನ ಸಂಸ್ಕಾರವನ್ನು ಯಾವಾಗ ಮಾಡುತ್ತೀಯ?" ಎಂದು ಕೇಳುತ್ತಿದ್ದರು. ಅಂತಲೇ ವಿಘ್ನೇಶ್ವರ ಭಟ್ಟರು ಮಗನಿಗೆ ಆದಷ್ಟು ಬೇಗನೆ ಉಪನಯನ ಸಂಸ್ಕಾರ ನೀಡಲು ನಿಶ್ಚಯಿಸಿದರು. ಅವರ ತಮ್ಮನ ಮಗ ನಾರಾಯಣನು ಗಣೇಶನ ವಯಸ್ಸಿನವನೇ ಆದ ಕಾರಣ ಅವನಿಗೂ ಇದೇ ಕಾಲಕ್ಕೆ ಉಪನಯನ ಮಾಡಲು ನಿರ್ಧರಿಸಿದರು. ನಾರಾಯಣನ ತಂದೆಯು ಮಗನು ಚಿಕ್ಕವನಿರುವಾಗಲೇ ತೀರಿಕೊಂಡಿರುವದರಿಂದ ಅವನನ್ನು ಪೋಷಿಸಿ ವಿದ್ಯಾಭ್ಯಾಸ ಮಾಡಿಸುವ ಹೊಣೆಯೂ ಇವರ ಮೇಲೆಯೇ ಇತ್ತು. ಆದ್ದರಿಂದ ಈ ವಿಷಯವನ್ನು ಅಣ್ಣ ಶಿವಭಟ್ಟರಲ್ಲಿ ಪ್ರಸ್ತಾಪಿಸಿದಾಗ ಅವರು 'ಆಗಲಿ' ಎಂದು ತಮ್ಮ ಒಪ್ಪಿಗೆ ನೀಡಿದರು. ಅವಿಭಕ್ತ ಕುಟುಂಬದ ಆ ಮನೆಯಲ್ಲಿ ಶಿವಭಟ್ಟರು ಹಿರಿಯರಾಗಿರುವದರಿಂದ ಅವರೇ ಮನೆಯ ಯಜಮಾನರಾಗಿದ್ದರು. ವಿಘ್ನೇಶ್ವರ ಭಟ್ಟರು ಅವರೊಂದಿಗೆ ಬಹಳ ಗೌರವದಿಂದ ಅನುನಯದಿಂದ ನಮ್ರವಾಗಿ ನಡೆದುಕೊಳ್ಳುತ್ತಿದ್ದರು. ತಮ್ಮ ದುಡಿತದ ಆದಾಯವನ್ನೆಲ್ಲ ಚಿಕ್ಕಾಸೂ ಇಟ್ಟುಕೊಳ್ಳದೆ ಅಣ್ಣನ ಕೈಗೆ ಒಪ್ಪಿಸಿಬಿಡುತ್ತಿದ್ದರು. ಇದರಿಂದಾಗಿ ಪ್ರತಿಸಲ ತಲೆಗೂದಲ ಕ್ಷೌರಕ್ಕೆ ಬೇಕಾದ ಸಣ್ಣ ಮೊತ್ತದ ಹಣಕ್ಕೂ ಅಣ್ಣನಲ್ಲಿಯೇ ಕೇಳಬೇಕಾಗಿತ್ತು. ಅದೆಷ್ಟೋ ಬಾರಿ ಇಂತಹ ಚಿಲ್ಲರೆ ಚಿಕ್ಕಪುಟ್ಟ ಖರ್ಚಿಗೆ ಹಣ ಪಡೆಯಲು ಅಣ್ಣನ ಬಿಡುವಿನ ವೇಳೆಗಾಗಿ ಅವರು ಕಾಯುವದಿತ್ತು. ಅಷ್ಟೊಂದು ಮುಗ್ಧ, ಅಷ್ಟೊಂದು ನಿಷ್ಕಪಟ ವಿಘ್ನೇಶ್ವರ ಭಟ್ಟರ ವ್ಯಕ್ತಿತ್ವ.

ಒಂದು ಶುಭಮುಹೂರ್ತದಲ್ಲಿ ಗುರುಹಿರಿಯರೆಲ್ಲ ಸೇರಿ ನಿಗದಿಪಡಿಸಿದಂತೆ ಗಣೇಶನ ಉಪನಯನವನ್ನು ನಾಗವೇಣಿ ಮತ್ತು ವಿಘ್ನೇಶ್ವರ ಭಟ್ಟ ದಂಪತಿಗಳೂ, ನಾರಾಯಣನ ಉಪನಯನವನ್ನು ಶಿವಭಟ್ಟ ದಂಪತಿಗಳೂ ನೆರವೇರಿಸಿದರು. ಅಂದಿನ ದಿನಗಳಲ್ಲಿ ಉಪನಯವನ್ನು ಮೂರು ದಿನಗಳಕಾಲ

ಆಚರಿಸಿ ನಾಲ್ಕನೆಯ ದಿನ ವಟುಗಳಿಗೆ ಹೊಸಬಟ್ಟೆಯುಡಿಸಿ ಹೆಗಲಿಗೆ ಶಾಲುಹೊದಿಸಿ ತಲೆಗೆ ಜರಿಯಂಚಿನ ಪೇಟವನ್ನಿಟ್ಟು ಸಿಂಗರಿಸುತ್ತಿದ್ದರು. ಆನಂತರ ಕೈಯಲ್ಲಿ ಒಂದು ಪಾಲಾಶದ ದಂಡ (ಮುತ್ತುಗದ ಕೋಲು) ಹಿಡಿಸಿ ತಾಯಿ–ತಂದೆಯರು ಮನೆಯ ಇತರ ಹೆಂಗಸರು ಮುಂತಾದವರು ಹೊಸಬಟ್ಟೆ ಧರಿಸಿ ಮಂಗಳವಾದ್ಯಗಳೊಂದಿಗೆ ದಿಬ್ಬಣ ಸಹಿತ ದೇವಸ್ಥಾನಕ್ಕೆ ಹೋಗುವರು. ದೇವರಿಗೆ ತೆಂಗಿನಕಾಯಿ ಫಲ–ಪುಷ್ಪಗಳ ಸಮರ್ಪಣೆ ಮಾಡಿ ವಂದಿಸಿಬರುವದು ಗೋಕರ್ಣದಲ್ಲಿ ಸಾಂಪ್ರದಾಯಿಕವಾಗಿ ನಡೆದುಬಂದ ಪದ್ಧತಿ. ಅಂತಲೇ ದೊಡ್ಡತಂದೆ ಶಿವಭಟ್ಟರು ಅದ್ದೂರಿಯಿಂದ ಜರಿಯಂಚಿನ ನವಿರಾದ ಹೊಸಪಟ್ಟೆ ಶಾಲು ಮತ್ತು ಪೇಟಗಳೊಂದಿಗೆ ಗಣೇಶನ ಸಿಂಗರಿಸಲು ಹೋದರು. ಆದರೆ ಗಣೇಶನು ಇದಕ್ಕೆ ಒಪ್ಪದೇ ದೊಡ್ಡತಂದೆಯಿಂದ ಕೊಸರಿಕೊಂಡು ದೂರ ಸರಿದು ನಿಂತನು. ಇದರಿಂದ ಶಿವಭಟ್ಟರು ಕೋಪಗೊಂಡರು. ಚೋಟುದ್ದ ಪೋರ ನನ್ನನ್ನೇ ಧಿಕ್ಕರಿಸುತ್ತಿದ್ದಾನಲ್ಲ! ಆದರೂ ಸಮಾಧಾನದಿಂದ ಹೇಳಿದರು; "ಎಲ್ಲರೂ ದೇವಸ್ಥಾನಕ್ಕೆ ಹೋಗಲು ತಯಾರಾಗುತ್ತಿದ್ದಾರೆ. ನೀನು ಹೀಗೆ ಹಟ ಹಿಡಿದರೆ ಹೊರಡುವದಕ್ಕೆ ತಡವಾಗುತ್ತದೆ," ಎಂದು ಅವನನ್ನು ಪುಸಲಾಯಿಸುತ್ತ ಮತ್ತೆ ಬಟ್ಟೆಯುಡಿಸುವುದಕ್ಕೆ ತೊಡಗಿದರು. ಗಣೇಶ ಮಾತ್ರ ಇದಾವುದಕ್ಕೂ ಜಗ್ಗಲಿಲ್ಲ. ಇದರಿಂದ ಅವರಿಗೆ ಎಲ್ಲಿಲ್ಲದ ಸಿಟ್ಟು ಬಂತು. "ಎಲವೋ ! ನಮ್ಮ ಮನೆಯ ಮರ್ಯಾದೆ ಕಳೆಯಲು ಹುಟ್ಟಿದೆಯಾ?" ನಾಲ್ಕು ಏಟು ಕೊಟ್ಟರು. ಗಣೇಶ ಜೋರಾಗಿ ಅಳುವದಕ್ಕೆ ಪ್ರಾರಂಭಿಸಿದ. ವಿಷಯ ತಿಳಿದ ವಿಘ್ನೇಶ್ವರ ಭಟ್ಟರು ಮಗನ ಮೇಲೆ ಸಿಟ್ಟಾಗಿ ಹತ್ತಿರಕ್ಕೆ ಬಂದು "ಏನೋ ಇದು ಗಣೇಶ ! ದೊಡ್ಡಪ್ಪ ಹೇಳಿದ್ದು ಕೇಳಿಸಲಿಲ್ಲವೆ? ಎಂದು ಗದರಿಸುತ್ತ ಮಗನಿಗೆ ಬಟ್ಟೆಗಳನ್ನುಡಿಸುವದಕ್ಕೆ ಮುಂದಾದರು. ಇದಕ್ಕೆ ಆತ ಒಲ್ಲೆನೆಂದು ತಲೆಯಾಡಿಸುತ್ತ ಕೊಸರಾಡತೊಡಗಿದ. ಅಣ್ಣನ ಮಾತನ್ನು ಧಿಕ್ಕರಿಸಿ ಹಟಹಿಡಿದ ಮಗನ ವರ್ತನೆಯಿಂದ ಸಿಟ್ಟಾಗಿ ಅವರೂ ನಾಲ್ಕು ಏಟುಕೊಟ್ಟರು. ಮೊದಲೇ ಅಳುತ್ತಿದ್ದ ಹುಡುಗ ಈಗ ಇನ್ನೂ ಜೋರಾಗಿ ಅಳುವುದಕ್ಕೆ ಪ್ರಾರಂಭಿಸಿದ. ಇದೆಲ್ಲವನ್ನೂ ದೂರದಿಂದಲೇ ಗಮನಿಸುತ್ತಿದ್ದ ನಾಗವೇಣಿಯ ತಾಯಿ ಕರುಳು ಆತಂಕಗೊಂಡಿತು. ಅವಳಿಗೆ ಮಗನ ಅಂತರಂಗದ ತುಡಿತದ ಒಳದನಿ ಅರ್ಥವಾಗಿತ್ತು. "ಸಾಕು ಸುಮ್ನಿರಿ; ನನ್ನ ಮಗನಿಗೆ ಪಟ್ಟೆಯೂ ಬೇಡ ಪೀತಾಂಬರವೂ ಬೇಡ; ಅವನು ಅದನ್ನೆಲ್ಲಾ ಉಟ್ಟುಕೊಳ್ಳದಿದ್ದರೆ ಜಗತ್ತೇನೂ ಮುಳುಗಿಹೋಗುವುದಿಲ್ಲ, ಎನ್ನುತ್ತ ಮಗನ ಬಳಿ ಬಂದು ಅವನಿಗಿಷ್ಟವಾದ ಶುಭ್ರವಾದ ಬಿಳಿಯ ಪಂಚೆಯುಡಿಸಿ ಹೆಗಲಿಗೆ ಬಿಳಿಯ ಶಾಲು ಹೊದೆಸಿ ಮಗನನ್ನು ಅಣಿಗೊಳಿಸಿದಳು. ಮಕ್ಕಳ ಮನದ ಅಂತರಾಳದ ಅಳಲನ್ನು ಅಭಿವ್ಯಕ್ತಗೊಳಿಸದ ಮೌನವೇದನೆಯನ್ನು ತಾಯಿ ಮಾತ್ರ ಅರ್ಥಮಾಡಿಕೊಳ್ಳಬಲ್ಲಳು. ಅಂತೆಯೇ ಆ ತಾಯಿ ಮಗನ ಅಭಿಲಾಷೆಯಂತೆ ಅವನಿಗೊಪ್ಪುವ ನಿರಾಡಂಬರ ಉಡುಪು ತೊಡಿಸಿದಾಗ ಪ್ರತಿರೋಧ ಮಾಡಲಿಲ್ಲ; ಅತ್ತು ರೋದಿಸಲಿಲ್ಲ, ಶುಭ್ರವಾದ ಬಿಳಿಯ ಬಣ್ಣದ ಉಡುಗೆಯಲ್ಲಿ ಆತನೀಗ ಆರ್ಷ ಪರಂಪರೆಯ ಋಷಿಕುಮಾರನಂತೆ ಬಾಲವಟುವಾಗಿ ಸಾಕಾರ ಪಡೆದನು.

ಅಷ್ಟು ಚಿಕ್ಕಂದಿನಿಂದಲೂ ಬಾಲಕ ಗಣೇಶನಿಗೆ ಅದ್ದೂರೀ ಆಡಂಬರಗಳು ಹಿಡಿಸುತ್ತಿದ್ದಿಲ್ಲ. ಗೊಡ್ಡು ಸಂಪ್ರದಾಯಗಳಿಗೆಲ್ಲ ತಲೆಬಾಗುವ ಜಾಯಮಾನವೇ ಅವನದಲ್ಲ. ಅವನ ನಡೆ–ನುಡಿಗಳು ಇಂದಿನವೇ ಆಗಿರಲಿಲ್ಲ. ಅವು ಸಾವಿರಾರು ವರ್ಷಗಳ ಹಿಂದಿನ ಆರ್ಷೇಯುಗದ ಋಷಿಕಾಲದ್ದಾಗಿದ್ದವು. ಅವನ ಅಂತರ್ಯದಲ್ಲಿ ಆಧ್ಯಾತ್ಮದ ಸೆಳೆತವಿತ್ತು. ಅವನಿಗರಿವಿಲ್ಲದೆಯೇ ಸಮುದ್ಧರಣ ಪಥದತ್ತ ದಿವ್ಯಜೀವನ ಪರಿಪೂರ್ಣತೆಯತ್ತ ಆತ ಮುನ್ನಡೆಯುತ್ತಿದ್ದ.

ತಾಯಿ ನಾಗವೇಣಿಯ ಮರಣ

ಗೋಕರ್ಣದಲ್ಲಿ ಖ್ಯಾತವಿದ್ವಾಂಸರಾಗಿದ್ದ ಗಣೇಶ ಶಾಸ್ತ್ರಿ ಹೊಸ್ಮನೆ ಎಂಬವರ ಮಗಳಾಗಿ ಜನಿಸಿದ ನಾಗವೇಣಿಯದು ಸುಂದರವಾದ ರೂಪ; ಅನುಕರಣೀಯ ವ್ಯಕ್ತಿತ್ವ. ಎತ್ತರವಾದ ನಿಲುವು, ಗೌರವರ್ಣದ ಮೈಕಾಂತಿ, ಅಗಲವಾದ ಅವಳ ಮುಖದಲ್ಲಿ ಮಂದಹಾಸ ಸದಾನಲಿಯುತ್ತಿತ್ತು. ಅವಳು ಮದುವೆಯಾಗಿ ವಿಘ್ನೇಶ್ವರ ಭಟ್ಟರ ಕೈಹಿಡಿದು ನಂದಗೋಕುಲದಂತಹ ತುಂಬಿದ ಮನೆಗೆ ಬಂದಿದ್ದಳು. ದೊಡ್ಡಮನೆ, ದೊಡ್ಡ ಸಂಸಾರ, ಅಲ್ಲಿ ಕೆಲಸಗಳು ಬಹಳ, ಆದರೂ ಅವಳು ಒಂದು ದಿನವೂ ಯಾರಲ್ಲಿಯೂ ಸಿಡುಕಿದವಳಲ್ಲ. ಎಲ್ಲರೊಂದಿಗೆ ಸಹನೆಯಿಂದ ಹೊಂದಿಕೊಂಡು ಸಮರಸ ಭಾವದಲ್ಲಿ ಕರ್ಮಜೀವಿಯಾಗಿ ಬಾಳುತ್ತಿದ್ದಳು. ದಿನಾಲು ಸಾಯಂಕಾಲ ದೇವಾಲಯಗಳಿಗೆ ಹೋಗಿ ದೇವರ ದರ್ಶನ ಪಡೆದು ಮನೆಗೆ ಬಂದು ಹಿರಿಯರಿಗೆ ನಮಸ್ಕರಿಸಿ ಮನೆವಾರ್ತೆಯಲ್ಲಿ ತೊಡಗುವ ಪರಿಪಾಠ ಅವಳದು.

ಗಣೇಶನ ಉಪನಯನ ಸಂಸ್ಕಾರ ಮುಗಿದ ಕೆಲವು ದಿನಗಳಲ್ಲಿ ನಾಗವೇಣಿಗೆ ವಿಷಮಜ್ವರ ಕಾಣಿಸಿಕೊಂಡಿತು. ಒಂದು ದಿನ ಜ್ವರ ಕಡಿಮೆಯಾದರೆ ಇನ್ನೊಂದು ದಿನ ಏರುತ್ತಿತ್ತು. ಅನಿಯಮಿತ ಜ್ವರದ ಬಾಧೆಯಿಂದ ನಾಗವೇಣಿಯ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸತೊಡಗಿತು. ಅಂದು ಇಂದಿನಂತೆ ಸುಸಜ್ಜಿತ ಆಸ್ಪತ್ರೆಗಳಿರಲಿಲ್ಲ. ಬೇರು-ನಾರುಗಳ ಕಷಾಯ, ಮಾತ್ರೆ, ವಟಿ ಇತ್ಯಾದಿ ಔಷಧ ಕೊಡುವ ವೈದ್ಯರ ಮನೆಗಳಿದ್ದವು. ಅಲ್ಲಿಗೆ ಹೋಗಿ ಔಷಧ ತರುತ್ತಿದ್ದರು. ಆದರೆ ಈ ಔಷಧ ಅವಳ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಈ ವೇಳೆಗೆ ತಾಯಿ ನಾಗವೇಣಿಗೆ ಲಲಿತೆ ಎಂಬ ಎಂಟು ತಿಂಗಳಿನ ಪುಟ್ಟ ಹೆಣ್ಣುಮಗುವಿತ್ತು. ತಾಯಿ ಜ್ವರದ ಬಾಧೆಯಿಂದ ಮಲಗಿರುವ ಕಾರಣ ಮಗು ಲಲಿತೆಯನ್ನು ಹೆಚ್ಚು ಸಮಯ ಅವಳ ಬಳಿ ಬಿಡುತ್ತಿರಲಿಲ್ಲ. ಇದರಿಂದಾಗಿ ಮಗು ಒಂದೇ ಸಮನೆ ಅಳುತ್ತಿತ್ತು. ಪಾಪ ಚಿಕ್ಕ ಮಗು! ತಾಯಿಯ ಆಲಸ್ಯ ಅದಕ್ಕೇನು ತಿಳಿಯಬೇಕು? ಇಂತಹ ಮಗುವನ್ನು ನೋಡಿಕೊಳ್ಳುವದು ಸುಲಭವಲ್ಲ. ತಾಯಿ ನಾಗವೇಣಿಗೆ ಲಲಿತೆಯದೇ ದೊಡ್ಡ ಚಿಂತೆಯಾಗಿತ್ತು. ಅವಳಿಗೆ ಲಲಿತೆಯಲ್ಲದೆ ಸೀತಾರಾಮನೆಂಬ ಆರುವರ್ಷ ವಯಸ್ಸಿನ ಇನ್ನೊಬ್ಬ ಮಗನಿದ್ದ. ಈಗಾಗಲೇ ಅವನು ಸಾಕಷ್ಟು ದೊಡ್ಡವನಾಗಿರುವುದರಿಂದ ಅವಳಿಗೆ ಸೀತಾರಾಮನ ಬಗೆಗೆ ಅಷ್ಟೊಂದು ವ್ಯಥೆ ಅನಿಸಲಿಲ್ಲ. ಲಲಿತೆಯಾದರೋ ಚಿಕ್ಕ ಮಗು. ನಾನು ಸತ್ತರೆ ಅವಳನ್ನು ಯಾರು ನೋಡಬೇಕು, ಯಾರು ಪಾಲಿಸಬೇಕು! ಇವೇ ಮುಂತಾದ ಯೋಚನೆಗಳು ಕಾಡುತ್ತಿದ್ದವು. ತಾಯಿ ಹೃದಯ ಮಗುವಿನ ಸುಖಮಯ ಭವಿಷ್ಯಕ್ಕಾಗಿ ಹಂಬಲಿಸುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಅವಳನ್ನು ತವರುಮನೆಗೆ ಕರೆದೊಯ್ಯಲಾಯಿತು. ದಿನಗಳೆದಂತೆ ಎದ್ದು ಓಡಾಡುವುದಕ್ಕೂ ಕಷ್ಟವಾಗತೊಡಗಿತು. ಗಣೇಶನೇ ತಾಯಿಗೆ ಹಿರಿಯಮಗನಾಗಿರುವುದರಿಂದ ಅವಳು ಹಾಸಿಗೆ ಹಿಡಿದಂದಿನಿಂದ ತಾಯ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಮಕಾರದಿಂದ ಮಾಡುತ್ತಿದ್ದನು. ಹೀಗಿರುವಾಗ ಇತ್ತೀಚೆಗೆ ಮೂರು ದಿನಗಳಿಂದ ಜ್ವರದ ತಾಪ ಏರುತ್ತ ದೈಹಿಕ ಸ್ಥಿತಿ ಸಂಪೂರ್ಣ ವಿಷಮಿಸಿತ್ತು. ಅಂದು ಫಾಲ್ಗುಣ ಬಹುಳ ಚತುರ್ಥಿ. ಗಣೇಶನು ತಾಯಿಯ ಬಳಿ ವಿನೀತನಾಗಿ ಕುಳಿತಿದ್ದ. ಆಗ ತಾಯಿ ನಾಗವೇಣಿ ಕ್ಷೀಣವಾದ ಸ್ವರದಿಂದ ತಡೆ ತಡೆದು ಹೇಳಿದಳು. ಒಬ್ಬ ತಾಯಿ ತನ್ನ ಮಗುವನ್ನು ಆಪತ್ಕಾಲದಲ್ಲಿ ಯಾವರೀತಿ ಶುಶ್ರೂಷೆ ಮಾಡುತ್ತಾಳೋ ಅದೇ ರೀತಿ ನೀನು ನನ್ನ ಶುಶ್ರೂಷೆ ಮಾಡಿದೆ. ಇದೇ ರೀತಿ ಗುರುಹಿರಿಯರನ್ನು ಸೇವಿಸು. ದೇವರು ನಿನಗೆ ಮಂಗಳ ಮಾಡಲಿ!

ಇದೇ ತಾಯಿಯ ಕೊನೆಯ ಮಾತು; ಅಂತಿಮ ಸಂದೇಶ. ಗಣೇಶನಿಗೆ ಇದು ದಿವ್ಯ ಸಂದೇಶವಾಯಿತು. ಸುತ್ತಲೂ ಸ್ಮಶಾನ ಮೌನ ಆವರಿಸಿತು. ಕೊನೆಯ ಕ್ಷಣಗಳು ಕಾಣಿಸಿಕೊಂಡವು. ಅಂದು ಫಾಲ್ಗುಣ ಕೃಷ್ಣ ಚತುರ್ಥಿ ದಿವಸ. ಗಣೇಶ ತಾಯಿಯ ಬಾಯಿಗೆ ಎರಡು ಗುಟುಕು ಗಂಗಾಜಲವನ್ನು ಹಾಕಿದ. ಗಂಗಾಜಲವು ಗಂಟಲಿನಲ್ಲಿ ಇಳಿಯುತ್ತಿದ್ದಂತೆ ತಾಯಿ ನಾಗವೇಣಿ ಎಲ್ಲರನ್ನು ಅಗಲಿ ಅವಿಶ್ರಾಂತ ಬದುಕಿಗೆ ವಿದಾಯ ಹೇಳುತ್ತ ಚಿರವಿಶ್ರಾಂತಿ ಪಡೆದಳು. ತರುವಾಯ ಹಿರಿಯರು ಗಣೇಶನಿಂದ ತಾಯಿಯ ಅಂತ್ಯಕರ್ಮಗಳನ್ನು ನೆರವೇರಿಸಿದರು.

ಗಣೇಶನ ಸೇವಾಮನೋಭಾವ

ತಾಯಿಯ ನಿಧನಾನಂತರ ಗಣೇಶನು ತಾಯಿಯ ತವರುಮನೆಯಲ್ಲಿ ಉಳಿದನು. ಗಣೇಶನ ಸೋದರಮಾವ ಗಣಪತಿಶಾಸ್ತ್ರಿಗಳು ಪೋಸ್ಟ್‌ಮಾಸ್ತರರಾಗಿದ್ದರು. ಒಂದು ಊರಿನಿಂದ ಇನ್ನೊಂದೂರಿಗೆ ಅವರು ವರ್ಗವಾಗಿ ಹೋಗುವ ಕಾರಣ ಒಂದೇ ಕಡೆ ನೆಲೆಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ತಾಯಿಯನ್ನವರು ಮನೆಯಲ್ಲಿಯೇ ಬಿಟ್ಟಿದ್ದರು. ಗಣಪತಿಶಾಸ್ತ್ರಿಗಳ ತಾಯಿ ತನ್ನ ಜತೆಗೆ ಉಳಿಯಲು ಯಾರೂ ಇರದ ಕಾರಣ ಮೊಮ್ಮಗ ಗಣೇಶನನ್ನು ತನ್ನ ಮನೆಯಲ್ಲಿ ಉಳಿಸಿಕೊಂಡಳು. ಅವಳೀಗ ಮಗಳು ನಾಗವೇಣಿಯ ಅಕಾಲಮರಣದಿಂದ ಮಾನಸಿಕವಾಗಿಯೂ ವೃದ್ಧಾಪ್ಯದಿಂದ ದೈಹಿಕವಾಗಿಯೂ ಜರ್ಜರಿತಳಾಗಿದ್ದಳು. ದಿನದಿಂದ ದಿನಕ್ಕೆ ಆರೋಗ್ಯವು ಕೆಡುತ್ತ ಆಸರೆಯಿಲ್ಲದೆ ಓಡಾಡುವುದಕ್ಕೂ ಕಷ್ಟವಾಗತೊಡಗಿತು. ಅಜ್ಜಿಯ ಶುಶ್ರೂಷೆ ಮತ್ತು ಮನೆವಾರ್ತೆ ಕೆಲಸಗಳನ್ನು ಗಣೇಶನಿಗೆ ಒಬ್ಬನೇ ನಿರ್ವಹಿಸಲಾಗದ ಕಾರಣ ಅವಳನ್ನು ಅವಳ ಅಕ್ಕನ ಮನೆಗೆ ಸಾಗಿಸಲಾಯಿತು. ಅನಂತರ ಕೆಲವೇ ದಿನಗಳಲ್ಲಿ ಅಜ್ಜಿಯು ಮರಣಹೊಂದಿದಳು.

ಸಂಗಡಿಗರ ಜತೆ ಆಟಪಾಟಗಳಲ್ಲಿ ಕಲೆತು ಸ್ವಚ್ಛಂದವಾಗಿ ನಲಿಯುತ್ತ ಓಡಾಡಿಕೊಂಡಿರುವ ಸಮಯವದು. ಆದರೆ ಗಣೇಶ ಇದೆಲ್ಲ ಮರೆತು ತನ್ನ ತಾಯಿಯ ರುಗ್ಣಶಯ್ಯೆಯಲ್ಲಿ ಅಜ್ಜಿಯ ಅಸಹಾಯಕ–ಸ್ಥಿತಿಯಲ್ಲಿ ಅವರ ಸೇವೆಯನ್ನು ಮಾಡಿದ. ತಾಯಿ–ತಂದೆಯರ ನಿಸ್ವಾರ್ಥ ಚರಿತ–ಚರ್ಯೆಗಳು ಉದಾತ್ತ ಮನೋಭಾವಗಳು ಗಣೇಶನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದ್ದವು. ಆತನ ಸುಪ್ತಮನಸ್ಸಿನಲ್ಲಿ ಬೀಜರೂಪದಲ್ಲಿದ್ದ ತ್ಯಾಗ, ತತ್ಪರತೆ, ಸೇವಾಮನೋಭಾವಗಳು ತಾಯ್ತಂದೆಯರ ದಿವ್ಯಮಮಕಾರದ ಸೋನೆಯಲ್ಲಿ ಅದೇ ತಾನೆ ಮೊಳೆಯುವದಕ್ಕೆ ಆರಂಭವಾಗಿತ್ತು.

ವಿಘ್ನೇಶ್ವರ ಭಟ್ಟರ ಸಂಕ್ಷಿಪ್ತ ಪರಿಚಯ

ವಿಘ್ನೇಶ್ವರ ಭಟ್ಟರು ವೇದವಿದ್ಯಾಪಾರಂಗತರೂ, ಸಂಸ್ಕೃತ ವಿದ್ವಾಂಸರೂ, ಕವಿಗಳೂ ಆಗಿದ್ದರು. ಅವರು ದೇವರನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದರು. ಅವುಗಳಲ್ಲಿ ದೇವರಪೂಜೆಯ ಹಾಡುಗಳು, ಮಂಗಳಾರತಿ ಹಾಡುಗಳು, ಶ್ರೀ ಅನಂತಚತುರ್ದಶಿ ವ್ರತದಲ್ಲಿ ಹೇಳುವ ಅನಂತನ ಹಾಡುಗಳು ಇತ್ಯಾದಿ ಪ್ರಸಿದ್ಧವಾಗಿದ್ದವು. ದೇವರ ಹಾಡುಗಳಲ್ಲದೆ ಮದುವೆಯಲ್ಲಿ ಹಾಡುವ ಸಭಾಪೂಜೆ, ಕನ್ಯಾಸಮರ್ಪಣೆ, ವಧೂ–ವರೋಪದೇಶ ಹಾಡುಗಳು ಅವರ ಘನವಿದ್ವತ್ತು ಮತ್ತು ಕರುಣಾಪೂರಿತ ಅಂತ:ಕರಣವನ್ನು

ನಿವೇದಿಸುತ್ತಿದ್ದವು. ಮದುವೆ ಸಮಯದಲ್ಲಿ ಹೆಂಗಳೆಯರು ಹಾಡುತ್ತಿದ್ದ ಈ ಹಾಡಿನಿಂದ ನೆರೆದವರ ಕಣ್ಣುಗಳು ಒದ್ದೆಯಾಗುತ್ತಿದ್ದವು. ವಿಘ್ನೇಶ್ವರ ಭಟ್ಟರು ಕೇವಲ ಹಾಡುಗಳನ್ನು ಬರೆಯಬಲ್ಲವರಾಗಿರದೆ ಶಾಸ್ತ್ರೀಯವಾಗಿ ಶ್ರುತಿಬದ್ಧವಾಗಿ ಹಾಡುತ್ತಿದ್ದರು. ಅವರ ಕಂಠವು ಬಹಳ ಮಧುರವಾಗಿತ್ತು.

ಗಣೇಶನ ವಿದ್ಯಾಭ್ಯಾಸ

ಗಣೇಶನಿಗೆ ಉಪನಯನಾನಂತರದಲ್ಲಿ ತಂದೆ ವಿಘ್ನೇಶ್ವರ ಭಟ್ಟರು ಮನೆಯಲ್ಲಿಯೇ ವಿದ್ಯಾಭ್ಯಾಸ ಪ್ರಾರಂಭಿಸಿದರು. ದಿನಾಲು ಬೆಳಗಿನ ಸಮಯ ಮತ್ತು ಮಧ್ಯಾಹ್ನದ ನಂತರ ಸಂಜೆಯವರೆಗೆ ಋಗ್ವೇದಪಾಠ ಹೇಳಿಕೊಡುತ್ತಿದ್ದರು. ಅವರಿಗೆ ಕೃಷಿ ಎಂದರೆ ಬಲು ಇಷ್ಟ ಸಮಯ ದೊರೆತಾಗಲೆಲ್ಲ ಅವರು ಸಮುದ್ರ ತೀರದ ತಮ್ಮ ತೆಂಗಿನತೋಟಕ್ಕೆ ಹೋಗಿಬರುತ್ತಿದ್ದರು. ತೆಂಗಿನತೋಟಕ್ಕೆ ತಾಗಿ ಭತ್ತದ ಗದ್ದೆಯಿತ್ತು. ಅದರಲ್ಲಿ ಭತ್ತದ ಕೊಯ್ಲಾದ ನಂತರ ಬಗೆಬಗೆಯ ತರಕಾರಿಗಳನ್ನು ಬೆಳೆಯಲಾಗುತ್ತಿತ್ತು. ಪಡುವಲ, ಹೀರೆ, ಹಾಲುಗುಂಬಳ, ಗೆಣಸು, ಮೆಣಸು ಹೀಗೆ ವೈವಿಧ್ಯಮಯ ತರಕಾರಿಗಳು ಕರಾವಳಿಯ ತೀರದಲ್ಲಿ ಕಂಗೊಳಿಸುತ್ತಿದ್ದವು. ಇಲ್ಲಿ ಯಾರೂ ಕೃಷಿಯನ್ನು ಯಾರಿಗು ಕಲಿಸುತ್ತಿದ್ದಿಲ್ಲ. ರೈತರು ಒಬ್ಬರು ಮಾಡುವದನ್ನು ಇನ್ನೊಬ್ಬರು ನೋಡಿ ಕಲಿತುಕೊಳ್ಳುತ್ತಿದ್ದರು. ಅದೊಂದು ನಿಸರ್ಗದ ಮಡಿಲಿನ ಕೃಷಿಯ ವಿಶ್ವವಿದ್ಯಾಲಯವಾಗಿತ್ತು. ಕೇವಲ ಗಂಡಸರಲ್ಲದೆ ಹೆಂಗಸರು, ಮಕ್ಕಳು, ವೃದ್ಧರಾದಿಯಾಗಿ ಎಲ್ಲರೂ ಅದರಲ್ಲಿ ದುಡಿಯುತ್ತ ಕೃಷಿಮಾಡುತ್ತಿದ್ದರು. ಗಣೇಶ ತಂದೆಯ ಜತೆಗೆ ಇಲ್ಲಿಗೆ ಬರುತ್ತಿದ್ದ. ಅವನಿಗೆ ಕೃಷಿಯಲ್ಲಿ ಎಂತಹುದೋ ಆಕರ್ಷಣೆ. ಆತ ಸುತ್ತಲಿನ ಪ್ರಪಂಚವನ್ನು ಮರೆತು ಅದರಲ್ಲಿ ತಲ್ಲೀನನಾಗಿ ಬಿಡುತ್ತಿದ್ದ. ಇಲ್ಲಿಗೆ ಬಂದಾಗ ಉಳಿದುಕೊಳ್ಳುವದಕ್ಕೆ ತೆಂಗಿನಗರಿಗಳಿಂದ ಹೊದೆಸಿದ ಒಂದು ಗುಡಿಸಲನ್ನು ಅಲ್ಲಿ ಕಟ್ಟಲಾಗಿತ್ತು. ಮನೆಯಿಂದ ಈ ಸ್ಥಳಕ್ಕೆ ಸುಮಾರು ಐದು ಮೈಲಿಗಳಷ್ಟು ಅಂತರವಿತ್ತು. ತಂದೆಯ ಜತೆ ಗಣೇಶನು ನಿರಾಯಾಸವಾಗಿ ಇಷ್ಟು ದೂರಕ್ಕೆ ನಡೆದುಬರುತ್ತಿದ್ದ. ವಿಶೇಷ ಕೆಲಸವಿರುವಾಗ ಸುಮಾರು ಒಂದು ವಾರ ಇಲ್ಲಿಯೇ ಉಳಿಯುತ್ತಿದ್ದರು. ಇಲ್ಲಿಗೆ ಬಂದಾಗಲೆಲ್ಲ ಊಟಕ್ಕೆ ಗಂಜಿಮಾಡುವದು ವಾಡಿಕೆ ಯಾಗಿತ್ತು. ವೇದಪಾಠದ ಜೊತೆಗೆ ಗಣೇಶನಿಗೆ ಪ್ರಾಥಮಿಕ ಕೃಷಿಪಾಠವೂ ಅವನಿಗರಿವಿಲ್ಲದೆ ಕೊಡಲ್ಪಟ್ಟಿತು.

ವಿಘ್ನೇಶ್ವರ ಭಟ್ಟರಿಗೆ ಈ ನಡುವೆ ಕೆಲಸಗಳ ಒತ್ತಡದಿಂದ ಮಗನಿಗೆ ಸರಿಯಾಗಿ ಪಾಠಮಾಡಲು ಸಾಧ್ಯವಾಗುತ್ತಿರಲಿಲ್ಲ. ಮಗನ ವಿದ್ಯಾಭ್ಯಾಸವು ಸುಗಮವಾಗಿ ಸಾಗಲೆಂದು ಅವನನ್ನು ಋಗ್ವೇದ ಕುಲಪುರೋಹಿತರೆನಿಸಿದ ವೇ/ಕೃಷ್ಣಶರ್ಮ ಮೈಯರ ಇವರ ಪಾಠಶಾಲೆಗೆ ಕಳಿಸಿದರು. ಅಂದಿನ ದಿನಗಳಲ್ಲಿ ಇಂದಿನಂತೆ ಪಾಠಶಾಲೆಗೆ ಪ್ರತ್ಯೇಕವಾದ ಕಟ್ಟಡದ ವ್ಯವಸ್ಥೆ ಇರುತ್ತಿರಲಿಲ್ಲ. ವಿದ್ಯಾರ್ಥಿಯಾಗಿ ಬಂದ ಮಕ್ಕಳಿಗೆ ಮನೆಯಲ್ಲಿಯೇ ಪಾಠವನ್ನು ಮಾಡಲಾಗುತ್ತಿತ್ತು. ಅಲ್ಲಿಯ ಯಮ ನಿಯಮಗಳು ಬಹುಕಷ್ಟನಿಷ್ಠುರವಾಗಿದ್ದವು. ವಿದ್ಯಾರ್ಥಿಗಳು ಮುಂಜಾನೆ ನಸುಕಿನಲ್ಲಿಯೇ ಎದ್ದು ಪ್ರಾತರ್ವಿಧಿ ನಿತ್ಯಕರ್ಮಗಳನ್ನು ತೀರಿಸಿ ಪಾಠಶಾಲೆಯನ್ನು ಸೇರುತ್ತಿದ್ದರು. ಬೆಳಗಿನ ಹೊತ್ತು ಶಾಲೆಗೆ ಹೊರಡುವಾಗ ಉಪಹಾರವಿಲ್ಲ. ಒಂದು ಲೋಟ ಆಕಳ ಹಾಲು ಕುಡಿದು ಹೋದರೆ ಸುಮಾರು ಹತ್ತು ಗಂಟೆಯ ವೇಳೆಗೆ ಗಂಜಿಯೂಟ ಮಾಡುವದಕ್ಕಾಗಿ ಸ್ವಲ್ಪ ಕಾಲಾವಕಾಶ ದೊರೆಯುತ್ತಿತ್ತು. ಅದು ಅಂದಿನ ಉಪಹಾರವಾಗಿತ್ತು. ಹೀಗಿದ್ದರೂ ಒಂದು ದಿನ ಗುರುಗಳು ಸಿಟ್ಟಾಗಿ ವಿದ್ಯಾರ್ಥಿಗಳು ಗಂಜಿಯೂಟಕ್ಕಾಗಿ

ಮನೆಗೆ ಹೋಗಿ ಬರುವದಕ್ಕೆ ಬಹಳ ಸಮಯ ತೆಗೆದುಕೊಳ್ಳುವರೆಂದು ಒಂದು ಕರಾರು ಮಾಡಿದರು. "ವಿದ್ಯಾರ್ಥಿಗಳು ಗಂಜಿಯೂಟಕ್ಕೆ ಹೋಗುವಾಗ ಒಂದು ಒಣಗಿದ ಗಾರೆ ಹೆಂಚಿನ ಮೇಲೆ ಉಗುಳಿ ಹೋಗಬೇಕು. ಅದು ಆರುವದರೊಳಗಾಗಿ ಪಾಠಕ್ಕೆ ಬಂದು ಸೇರಬೇಕು. ಇದೇ ಆ ಕರಾರು. ಇದು ಕರಾರು ಅಲ್ಲ ಕಟ್ಟಪ್ಪಣೆ ! ಇದಕ್ಕೆ ಯಾರೂ ತಪ್ಪುವಂತಿರಲಿಲ್ಲ. ತಪ್ಪಿದವರನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದರು. ಹೀಗೆ ಕಷ್ಟ ನಿಷ್ಠುರವಾದ ನಿಯಮ-ನಿಷ್ಠೆಯನ್ನು ವಿದ್ಯಾರ್ಥಿಗಳು ಪಾಲಿಸುವದು ಅನಿವಾರ್ಯವಾಗಿತ್ತು. ಪಾಠಶಾಲೆಗೆ ಬಿಡುವಿರುವ ಅನಧ್ಯಾಯದ ದಿನಗಳಲ್ಲಿ ಮಕ್ಕಳಿಗೆ ಬಹಳ ಆನಂದವಾಗುತ್ತಿತ್ತು. ಬಂಧಿಸಿಟ್ಟ ಪಕ್ಷಿಗಳನ್ನು ಬಯಲಿಗೆ ಬಿಟ್ಟ ಅನುಭವವಾಗುತ್ತಿತ್ತು.

ಸಂತರಾಮದಾಸ ಸ್ವಾಮಿಗಳ ಸಂಕ್ಷಿಪ್ತ ಪರಿಚಯ

ಸಂತರಾಮದಾಸ ಸ್ವಾಮಿಯವರು ಮಧ್ಯಪ್ರದೇಶ ರಾಜ್ಯದ ಇಂದೂರು ಸಂಸ್ಥಾನದ ಖಡೌದ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಕೃಷ್ಣರಾವ್ ಖೇರ್, ಆ ಸಮಯಕ್ಕೆ ಇಂದೂರು ಒಂದು ಸ್ವತಂತ್ರ ಸಂಸ್ಥಾನವಾಗಿತ್ತು. ಇಲ್ಲಿ ಚರಮಣ್ವತಿ ನದಿ ಸಮೀಪ ಸುಮಾರು ಎರಡು ಮೈಲಿಗಳ ಅಂತರದಲ್ಲಿ ಖೇರ್ ಮನೆತನವು ವಾಸವಾಗಿತ್ತು. ಅಪಾರ ಸಿರಿಸಂಪತ್ತು ಮತ್ತು ಜಮೀನುಗಳನ್ನು ಹೊಂದಿದ ಖೇರ್ ಮನೆತನವು ಸುತ್ತಮುತ್ತಲಿನ ಗ್ರಾಮಗಳಲ್ಲಿ ಬಹಳ ಪ್ರಸಿದ್ಧವಾಗಿತ್ತು. ಇಂದೂರಿನ ರಾಜಪ್ರಭುತ್ವವು ಇವರನ್ನು ಐದು ಜಿಲ್ಲೆಗಳಿಗೆ ದಂಡಾಧಿಕಾರಿಯೆಂದು ನಿಯಮಿಸಿತ್ತು. ಅದಕ್ಕೆ ಅನುಸಾರವಾಗಿ ರಾಮದಾಸ ಸ್ವಾಮಿಯವರು ತಮ್ಮ ತಂದೆಯವರಿಂದ "ಸರ್-ಸುಬಾ" ಎಂಬ ಮುದ್ರೆಯೊಂದಿಗೆ ದಂಡಾಧಿಕಾರವನ್ನು ಪಡೆದು ಅದನ್ನು ನಿರ್ವಹಿಸುತ್ತ ಉಜ್ಜಯಿನಿಯಲ್ಲಿ ವಾಸವಾಗಿದ್ದರು. ಸರ್-ಸುಬಾ ದಂಡಾಧಿಕಾರ ಸ್ಥಾನವನ್ನು ವಹಿಸಿಕೊಂಡ ನಂತರ ಜನರು ಇವರನ್ನು ರಾಮದಾಸ ಮಹಾರಾಜರು ಎಂದು ಕರೆಯುತ್ತಿದ್ದರು. ಹೀಗಿರುವಾಗ ಕೆಲವು ಕಾಲ ರಾಮದಾಸ ಮಹಾರಾಜರು ಸಂಪತ್ತು ಮತ್ತು ಅಧಿಕಾರದೊಂದಿಗೆ ಸಾಂಸಾರಿಕ ಸುಖ-ಸಂತೋಷಗಳನ್ನು ಅನುಭವಿಸಿದರು. ಲೌಕಿಕವಾಗಿ ಯಾವುದೆಲ್ಲ ಬೇಕೆಂದು ಸಹಜವಾಗಿ ಬಯಸಲಾಗುತ್ತದೆಯೋ ಅದೆಲ್ಲವೂ ಅವರಿಗೆ ದೊರಕಿತ್ತು. ಆ ವೇಳೆಗಾಗಲೇ ಅವರಿಗೆ ಒಬ್ಬ ಮಗಳೂ ಜನಿಸಿದ್ದಳು. ಆದರೆ ಪ್ರೀತಿಯ ಮಡದಿ ತೀರಿಕೊಂಡ ಕಾರಣ ಅವರಿಗೆ ಈ ಐಹಿಕ ಭೋಗ್ಯ ಭಾಗ್ಯ ಸಂಪತ್ತು ಬೇಡವೆನಿಸಿತು. ಅಂತರಂಗದಲ್ಲಿಯ ಯಾವುದೋ ಶಕ್ತಿ ಅವರನ್ನು ಆಧ್ಯಾತ್ಮದತ್ತ ಸೆಳೆಯುತ್ತಿತ್ತು. ವಿರಕ್ತಿ ಮೂಡಿತು. ಸಕಲ ಸಂಪತ್ತು ಅಧಿಕಾರ ತೊರೆದು ಲೌಕಿಕ ಬದುಕಿನ ಭವಬಂಧನವ ಕಿತ್ತೆಸೆದು ಮುಕ್ತ ಬದುಕಿನತ್ತ ಹೆಜ್ಜೆ ಹಾಕಿದರು. ಧ್ಯಾನ, ಭಜನೆ, ನರ್ತನ ಮುಂತಾದ ಸದಾಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಮಗ್ರ ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಕೊನೆಯಲ್ಲಿ ಒಂದೇ ಕಡೆ ಸ್ಥಿರವಾಗಿ ನಿಂತು ಆಧ್ಯಾತ್ಮ ಸಾಧನೆಯಿಂದ ಆತ್ಮಾನುಭವ ಪಡೆದು ಮಹಾತ್ಮರಾದರು.

ಗೋಕರ್ಣಕ್ಕೆ ಸಂತರಾಮದಾಸ ಸ್ವಾಮಿಯವರ ಆಗಮನ

ಅಂದು ಸಾಯಂಕಾಲ ಗಣೇಶನು ಪಾಠಶಾಲೆಯಿಂದ ಮನೆಗೆ ಹಿಂದಿರುಗುತ್ತಿದ್ದ. ಆಗ ರಾಮದಾಸಸ್ವಾಮಿ ಎಂಬ ಸಂತರೊಬ್ಬರು ಉಜ್ಜಯಿನಿಯಿಂದ ಗೋಕರ್ಣಕ್ಕೆ ಬಂದಿರುವುದಾಗಿಯೂ ಅವರು ಶ್ರೀಮಹಾಬಲೇಶ್ವರ ಮಂದಿರದ ಮುಂಭಾಗದಲ್ಲಿರುವ ಧರ್ಮಶಾಲೆಯ ಮಹಡಿಯ ಮೇಲೆ

ಉಳಿದುಕೊಂಡಿರುವುದಾಗಿಯೂ ದಾರಿಯಲ್ಲಿ ಕೆಲವರು ಮಾತನಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿ ಗಣೇಶನಿಗೆ ಏಂತಹದೋ ಅರಿಯದ ಅವ್ಯಕ್ತ ಅನುಭವವುಂಟಾಯಿತು. ಏಕೋ ಏನೋ ಅವರನ್ನು ಕಾಣಬೇಕು ಅನಿಸಿತು. ಬೇಗ ಬೇಗನೆ ಮನೆಯ ಕಡೆಗೆ ಹೆಜ್ಜೆಹಾಕಿದ. ಮನೆ ತಲುಪಿದಾಗ ಪುಸ್ತಕದ ಗಂಟನ್ನು ಸ್ವಸ್ಥಾನದಲ್ಲಿಟ್ಟು ಲಗುಬಗೆಯಿಂದ ಕೈಕಾಲು ಮುಖ ತೊಳೆದು ಸಂಧ್ಯಾವಂದನೆ ಮುಗಿಸಿದ. ಆಧ್ಯಾತ್ಮದ ಕೂಗು ಅವ್ಯಕ್ತಶಕ್ತಿಯ ಕರೆ ಅವನ ಅಂತರಂಗದ ಕದ ತಟ್ಟಿತ್ತು. ಆತ ನೇರವಾಗಿ ಶ್ರೀಮಹಾಬಲೇಶ್ವರ ದೇವಸ್ಥಾನಕ್ಕೆ ಹೋದ. ಆ ಸಮಯಕ್ಕೆ ಒಳಗಡೆ ರಾಮದಾಸಸ್ವಾಮಿಯವರು ಕಾಲಿಗೆ ಗೆಜ್ಜೆ ಕಟ್ಟಿ ಭಕ್ತಿಯಿಂದ ಹಾಡುತ್ತ ಭಾವಪರವಶರಾಗಿ ನರ್ತಿಸುತ್ತಿದ್ದರು. ಅದನ್ನು ನೋಡುತ್ತ ಗಣೇಶನಿಗೆ ಅನಿರ್ವಚನೀಯ ಆನಂದವಾಯಿತು. ಅವನು ತನ್ನ ಸುತ್ತಲಿನ ಪ್ರಪಂಚ ಮರೆತು ಭಜನೆಯ ಹಾಡಿನ ಮೋಡಿಗೆ ತಾಳ ಹಾಕುತ್ತ ತಾನೂ ಕುಣಿಯತೊಡಗಿದ. ನಂತರ ರಾಮದಾಸಸ್ವಾಮಿಯವರು ನರ್ತನ, ಭಜನೆ ನಿಲ್ಲಿಸಿದಾಗಲೇ ಅವನಿಗೆ ಇಹದ ಅರಿವಾಯಿತು. ಹೀಗೆ ಗಣೇಶನು ಪ್ರತಿದಿನ ಸಾಯಂಕಾಲ ಪಾಠಶಾಲೆಯಿಂದ ಹಿಂದಿರುಗಿದ ಬಳಿಕ ಶ್ರೀಮಹಾಬಲೇಶ್ವರ ದೇವಸ್ಥಾನಕ್ಕೆ ತೆರಳಿ ಭಜನೆಯಲ್ಲಿ ತೊಡಗುವುದು ಗಣೇಶನ ಪರಿಪಾಠವಾಯಿತು.

ಎಲ್ಲಿಂದಲೋ ಬಂದ ಗುರುತು ಪರಿಚಯವಿಲ್ಲದ ಒಬ್ಬ ಸಂತನ ಜತೆ ಮರುಳಾಗಿ ಹಾಡು, ಕುಣಿತಗಳಲ್ಲಿ ತೊಡಗಿರುವುದನ್ನು ಕಂಡು ಗಣೇಶನ ಓರಗೆಯವರಿಗೆ ಆತನ ವರ್ತನೆ ವಿಲಕ್ಷಣವೆನಿಸಿತು. ಅಂತಲೇ ಆತನನ್ನು ಅವರು 'ರಾಮದಾಸ' ಎಂದು ಅಪಹಾಸ್ಯ ಮಾಡತೊಡಗಿದರು. ಈ ಮೊದಲು ಅಜ್ಜಿಮೊಮ್ಮ, ಬಲಗೊಂಬೆ, ಜಡಭರತ ಮುಂತಾಗಿ ಪರಿಹಾಸ್ಯ ಮಾಡುತ್ತಿದ್ದು ಈಗ ಅವುಗಳ ಪಟ್ಟಿಯಲ್ಲಿ ರಾಮದಾಸ ಎಂಬ ಹೆಸರೂ ಸೇರಿತು. ಆದರೆ ಗಣೇಶನಿಗೆ ಇದರಿಂದ ಯಾವುದೇ ತರದ ಲಜ್ಜೆಯಾಗಲಿ ಮುಜುಗರವಾಗಲಿ ಅನಿಸುತ್ತಿರಲಿಲ್ಲ. ರಾಮದಾಸರ ಆಗಮನದಿಂದ ಅವರ ದಿವ್ಯ ಸಾನ್ನಿಧ್ಯದಲ್ಲಿ ಆತನಿಗೆ ಭಕ್ತಿಯ ಗುಂಗು ಹತ್ತಿತು. ಅಧ್ಯಾತ್ಮದ ಆಮೋದ ನರನಾಡಿಗಳಲ್ಲಿ ಹರಿದಾಡಿತು. ರಾಮದಾಸಸ್ವಾಮಿಗಳು ಸುಮಾರು ಒಂದು ತಿಂಗಳ ಕಾಲ ಗೋಕರ್ಣದಲ್ಲಿ ವಾಸವಾಗಿದ್ದು, ಅನಂತರ ಕೊಲ್ಹಾಪುರಕ್ಕೆ ಹೋದರು. ಇದನ್ನು ತಿಳಿದ ಆತ ಏನನ್ನೋ ಕಳೆದುಕೊಂಡವನಂತೆ ದುಃಖಿತನಾದ.

ಅಂದು ಶಾಲೆಯಿಂದ ಮನೆಗೆ ಬಂದ ಗಣೇಶ ಅನ್ಯಮನಸ್ಕನಾಗಿ ಶ್ರೀಮಹಾಬಲೇಶ್ವರ ದೇವಸ್ಥಾನದತ್ತ ಹೆಜ್ಜೆ ಹಾಕಿದ. ಅಲ್ಲಿ ಗುರುಗಳೊಂದಿಗೆ ದಿನಾಲು ನರ್ತಿಸುತ್ತಿದ್ದ ಮುಖಮಂಟಪಕ್ಕೆ ಬಂದು ಸ್ವಲ್ಪ ಹೊತ್ತು ಸುಮ್ಮನೆ ನಿಂತ. ಭಕ್ತಾದಿಗಳು ಆಗಾಗ ಬಾರಿಸುತ್ತಿದ್ದ ಘಂಟಾನಾದ ಮಾತ್ರ ಕೇಳಿಸುತ್ತಿತ್ತು. ಗುರುಗಳೊಂದಿಗೆ ದಿನಾಲು ನರ್ತಿಸುತ್ತಿದ್ದ ಆ ದೃಶ್ಯ ಕಣ್ಮುಂದೆ ಬಂತು. ಇಹದ ಪರಿವೆ ಜಾರಿತು. ಆತ ಭಾವಪರವಶನಾಗಿ ಭಜನೆ ಮಾಡುತ್ತ ಕುಣಿಯುವದಕ್ಕೆ ಆರಂಭಿಸಿದ. ಭಜನೆಯ ಗುಂಗು ಭಕ್ತಿಯ ಆಮೋದದಲ್ಲಿ ಕಳೆದ ಸಮಯದ ಅರಿವು ಆಗಲಿಲ್ಲ. ದೇವಸ್ಥಾನದ ಬಾಗಿಲು ಮುಚ್ಚುವ ವೇಳೆಯಾಗಿತ್ತು. ಆದರೂ ಈತನ ನರ್ತನ ನಿಂತಿರಲಿಲ್ಲ. ಬಾಗಿಲು ಮುಚ್ಚುವವರು ಹೊರಹೋಗಲು ಹೇಳಿದರೂ ಗಣೇಶ ಇನ್ನೂ ಕುಣಿಯುತ್ತಲೇ ಇದ್ದ. ಇದರಿಂದ ಕೋಪಗೊಂಡ ಅವರು ಆತನ ಕೈಹಿಡಿದು ದರದರನೆ ಹೊರಗೆಳೆದು ಮಂದಿರದ ಬಾಗಿಲುಹಾಕಿ ಹೋದರು. ನರ್ತನದ ಗುಂಗು ಇನ್ನೂ ಇಳಿದಿರಲಿಲ್ಲ. ಆತ ನೇರವಾಗಿ ಸಮುದ್ರತೀರದತ್ತ ಹೆಜ್ಜೆಹಾಕಿದ. ಕತ್ತಲಿನಲ್ಲೂ ನಕ್ಷತ್ರಗಳ ಮಂದಕಾಂತಿಯ ಬಾನಬೆಳಕು ದಾರಿ ತೋರುತ್ತಿತ್ತು. ಸಮುದ್ರತೀರ ಸಮೀಪಿಸುತ್ತಿರುವಂತೆ ಕಡಲ ಅಲೆಗಳು ಭೋರ್ಗರೆಯುತ್ತ ಮರ್ಮರ

ಸಂಗೀತ ಹಾಡುತ್ತ ಲಯಬದ್ಧವಾಗಿ ನರ್ತಿಸುತ್ತಿದ್ದವು. ಅದನ್ನು ನೋಡುತ್ತ ಮೈಮರೆತ ಈ ಬಾಲಕ ತೆರೆದ ಬಯಲಿನ ಮುಕ್ತ ಪರಿಸರದಲ್ಲಿ ತಾನೂ ನರ್ತಿಸತೊಡಗಿದ. ರಾತ್ರಿಯೆಲ್ಲ ಹೀಗೆಯೇ ಕಳೆಯಿತು. ಮನದಣಿಯೆ ಕುಣಿದು ತೃಪ್ತನಾದ ಗಣೇಶನಿಗೆ ದೂರದಲ್ಲಿ ಜಾವದ ಕೋಳಿ ಕೂಗುತ್ತಿರುವಾಗ ಇರುಳು ಕಳೆದು ಬೆಳಗಿನಯಾಮವಾಗುತ್ತಿರುವ ಅರಿವಾಯಿತು. ಆತ ರಾತ್ರಿ ಊಟ ಮಾಡಿರಲಿಲ್ಲ; ಆದರೂ ಹಸಿವು, ಬಾಯಾರಿಕೆಗಳು ಆತನನ್ನು ಬಾಧಿಸಲಿಲ್ಲ. ಈಗ ಭಕ್ತಿಯ ಭಾವುಕ ಲೋಕದಿಂದ ಬಾಹ್ಯ ಜಗತ್ತಿಗೆ ಬರುತ್ತಿರುವಂತೆ ಹಸಿವು, ಬಾಯಾರಿಕೆಗಳ ಅನುಭವ ಆಗತೊಡಗಿತು. ಇಹದ ಬದುಕಿನ ಸಹಜ ಕರ್ತವ್ಯ ಪಾಲನೆಗಾಗಿ ಅವನು ಮನೆಯತ್ತ ಸಾಗಿದ.

ರಾಮದಾಸಸ್ವಾಮಿಯವರ ಭಕ್ತಿಗೀತೆಯ ಗಾನಕ್ಕೆ ನೃತ್ಯಗತಿಯ ಕಾಲಗೆಜ್ಜೆಯ ನಾದಕ್ಕೆ ಮಂತ್ರಮುಗ್ಧನಾಗಿ ಹೆಜ್ಜೆ ಹಾಕಿದ ಬಾಲಕ ಗಣೇಶನಿಗೆ ಅವರ ನಿರ್ಗಮನದಿಂದ ತಾನು ಆತ್ಮೀಯರನ್ನು ಕಳೆದುಕೊಂಡಂತೆ ಭಾಸವಾಯಿತು. ಅವರು ತನ್ನನ್ನು ನಡುನೀರಿನಲ್ಲಿ ಕೈಬಿಟ್ಟು ಹೋದ ಅನುಭವವಾಗಿ ಚಡಪಡಿಸಿದ: ಅವರ ಸಾನ್ನಿಧ್ಯಕ್ಕಾಗಿ ಹಂಬಲಿಸಿದ. ಮುಂದೇನು? ಎಂದು ಚಿಂತಿಸಿದ. ತಿಳಿದವರಲ್ಲಿ ವಿಚಾರಿಸಿ ಕೊಲ್ಹಾಪುರಕ್ಕೆ ಹೋಗುವ ದಾರಿಯನ್ನು ಅರಿತು ಅಲ್ಲಿಗೆ ಹೋಗಲು ನಿಶ್ಚಯಿಸಿದ. ಲೋಕಜ್ಞಾನವಿಲ್ಲದ ಬಾಲಕನೊಬ್ಬ ದೂರದ ಕೊಲ್ಹಾಪುರಕ್ಕೆ ಹೋಗುವದೆಂದರೆ ಅದು ಸುಲಭದ ಮಾತಲ್ಲ. ಆದರೆ ಅದಮ್ಯ ಅಭಿಲಾಷೆ, ಅನಂತ ನಿರೀಕ್ಷೆ ಆತನನ್ನು ವಿಚಲಿತನನ್ನಾಗಿ ಮಾಡಲಿಲ್ಲ. ಮನಸ್ಸಿದ್ದರೆ ಮಾರ್ಗ ಎಂಬಂತೆ ಅವನ ಇಚ್ಛಾಶಕ್ತಿ ಆತನಿಗೆ ದಾರಿತೋರಿ ಮುನ್ನಡೆಸುತ್ತಿತ್ತು.

ಗಣೇಶನ ಮದುವೆ ನಿಶ್ಚಯ

ಗಣೇಶನು ಹದಿಮೂರನೇ ವಯಸ್ಸಿಗೆ ಕಾಲಿಡುತ್ತಿರುವಾಗ ವಿಘ್ನೇಶ್ವರ ಭಟ್ಟರು ಅವನಿಗೆ ಮದುವೆ ಮಾಡಲು ನಿಶ್ಚಯಿಸಿದರು. ಸಾಮಾನ್ಯವಾಗಿ ಗಂಡುಹುಡುಗರಿಗೆ ಹನ್ನೊಂದರಿಂದ ಹದಿನಾರು ವರ್ಷಗಳಲ್ಲಿ ಹೆಣ್ಣುಹುಡುಗಿಯರಿಗೆ ಐದರಿಂದ ಹನ್ನೊಂದು ವರ್ಷಗಳಲ್ಲಿ ಮದುವೆ ಮಾಡುವ ಕಾಲ ಅದಾಗಿತ್ತು. ಮಗ-ಸೊಸೆಯರ ಪುಟ್ಟ ಸಂಸಾರವನ್ನು ಕಾಣುವದಕ್ಕೆ ಅವರ ಮನ ಹಂಬಲಿಸಿತ್ತು. ತಮ್ಮ ಮರೆಯಾದ ಹೆಂಡತಿ ಮತ್ತು ಅತ್ತೆಯವರ ಅಂತಿಮ ಅಪೇಕ್ಷೆಯಂತೆ ಗಣೇಶನಿಗೆ ಸೋದರ ಮಾವನ ಮಗಳಾದ ಅರುಂಧತಿಯೊಡನೆ ಮದುವೆ ಮಾಡಲು ಯೋಚಿಸಿದರು. ನಾಗವೇಣಿ ಸಾಯುವ ಮೊದಲು ತನ್ನ ಅಣ್ಣನಲ್ಲಿ "ನಿನ್ನ ಮಗಳು ಅರುಂಧತಿಯನ್ನು ನನ್ನ ಮಗ ಗಣೇಶನಿಗೆ ಕೊಟ್ಟು ಮದುವೆ ಮಾಡಬೇಕು" ಎಂದು ಕೇಳಿದಾಗ ಅವನು ಹಾಗೆಯೇ ಆಗಲಿ ಎಂದು ತಂಗಿಗೆ ವಚನವಿತ್ತಿದ್ದನು. ಗಣೇಶನ ಅಜ್ಜಿಯೂ ತಮ್ಮ ಕೊನೆಯ ದಿನಗಳಲ್ಲಿ ಮೊಮ್ಮಗನ ಸೇವೆಯಿಂದ ಸಂಪ್ರೀತರಾಗಿ ಮಗನಿಗೆ "ನಿನ್ನ ಮಗಳು ಅರುಂಧತಿಯನ್ನು ಗಣೇಶನಿಗೆ ಕೊಡಬೇಕು ಇದೇ ನನ್ನ ಅಂತಿಮ ಆಸೆ" ಎಂದು ನುಡಿದಿದ್ದಳು. ಅಂತೆಯೇ ವಿಘ್ನೇಶ್ವರ ಭಟ್ಟರು ಮತ್ತು ಗಣಪತಿ ಶಾಸ್ತ್ರಿಗಳು ಪರಸ್ಪರ ಚರ್ಚಿಸಿ ಮದುವೆ ಮುಹೂರ್ತವನ್ನು ಫಾಲ್ಗುಣ ಶುಕ್ಲ ಷಷ್ಠಿ ಆದಿತ್ಯವಾರದಂದು ಗೊತ್ತು ಮಾಡಿದರು. ಅರುಂಧತಿಗೆ ಆಗ ಆರು ವರ್ಷದ ಹರಯ. ವಿಘ್ನೇಶ್ವರಭಟ್ಟರು ಪಂಚಮಿ ದಿನ ಪ್ರಾತಃಕಾಲ ಮಗನನ್ನು ಎಣ್ಣೆ ಹನಿಸಿಕೊಳ್ಳುವ ಶಾಸ್ತ್ರವಿಧಿಯನ್ನು ಪೂರೈಸುವುದಕ್ಕಾಗಿ ಮಾವನಮನೆಗೆ ಕಳಿಸಿದರು. ಪಾರಂಪರಿಕವಾಗಿ ನಡೆದುಬಂದ ಸಾಂಪ್ರದಾಯಿಕ

ಪದ್ಧತಿಯಂತೆ ಗಣೇಶನ ಅತ್ತೆ ಶಾರದಮ್ಮನವರು ದೇವರ ಮುಂದೆ ರಂಗವಲ್ಲಿ ಹಾಕಿ ನೀಲಾಂಜನ ಬೆಳಗಿ ನೆರಮನೆಯ ಇನ್ನೋರ್ವ ಮುತ್ತೈದೆಯ ಕರೆದು ಅವಳ ಜತೆಗೂಡಿ ಗಣೇಶನಿಗೆ ಮಂಗಲಾಕ್ಷತೆಯೊಂದಿಗೆ ಎಣ್ಣೆಹನಿಸುವ ವಿಧಿ ಪೂರೈಸಿದರು. ಅನಂತರ ಗಣೇಶನು ಸ್ನಾನಮಾಡಿ ಮಾವನವರೊಂದಿಗೆ ಊಟ ಮಾಡಿದನು. ಅಂದು ಊಟಕ್ಕೆ ಗಣೇಶನ ಅತ್ತೆ ಶಾರದಮ್ಮ 'ಹಾಲುಬಾಯಿ' ಎಂಬ ಸಿಹಿಕಜ್ಜಾಯವನ್ನು ಮಾಡಿದ್ದಳು. ಗಣೇಶನಿಗೆ ಹಾಲುಬಾಯಿ ಎಂದರೆ ಬಲುಇಷ್ಟ ಅಂತಲೇ ಗಣಪತಿಶಾಸ್ತ್ರಿಗಳು ಹೆಂಡತಿಗೆ ಹೇಳಿ ಅಂದಿನ ಊಟಕ್ಕೆ ಅದನ್ನೇ ಮಾಡಲು ತಿಳಿಸಿದ್ದರು. ಸಾಮಾನ್ಯವಾಗಿ ಎಣ್ಣೆಹನಿಸುವ ಶಾಸ್ತ್ರದಲ್ಲಿ ಊಟಕ್ಕೆ ಹಾಲುಬಾಯಿ ಕಜ್ಜಾಯವನ್ನೇ ಮಾಡುವುದು ವಾಡಿಕೆಯಾಗಿತ್ತು. ಗಣೇಶನು ಊಟದ ನಂತರ ಅತ್ತೆ–ಮಾವಂದಿರಿಗೆ ನಮಸ್ಕರಿಸಿ ಮನೆಗೆ ಬಂದ.

ಗಣೇಶನ ಮನಸ್ಸಿನ ತುಂಬ ಆಧ್ಯಾತ್ಮದ ಆಮೋದ ಭಕ್ತಿಯ ಗುಂಗು ಆವರಿಸಿತ್ತು. ಸಾಂಸಾರಿಕ ಬಂಧನ ಬೇಡವೆನಿಸಿತು. ಸಾಂಪ್ರದಾಯಿಕ ಏಕತಾನತೆಯ ಬದುಕು ಹಿಡಿಸಲಿಲ್ಲ. ಈಗ ಆತನ ಗುರಿ ಒಂದೇ; ಏನೇ ಆಗಲಿ, ಹೇಗಾದರೂ ರಾಮದಾಸಸ್ವಾಮಿಯವರನ್ನು ಹುಡುಕಿಕೊಂಡು ಹೋಗಬೇಕು. ಅವರಂತೆ ಹಾಡುತ್ತ ಕುಣಿಯುತ್ತ ಆ ರಸೋನ್ಮಾದದಲ್ಲಿ ಮೈಮರೆಯಬೇಕು; ದಿವ್ಯ ಜೀವನ ಪಡೆಯಬೇಕು. ಇದೇ ಆತನ ಮಹತ್ವಾಕಾಂಕ್ಷೆ ಆಧ್ಯಾತ್ಮಿಕ ದಿವ್ಯದೀಕ್ಷೆಯಾಗಿತ್ತು. ನಿರಂತರ ಪ್ರಯತ್ನ, ತತ್ಪರತೆ, ದೃಢನಿರ್ಧಾರ ಇವು ಅವನಲ್ಲಿ ಪ್ರಕೃತಿದತ್ತವಾಗಿದ್ದವು. ತನ್ನ ಗುರಿ ಸಾಧನೆಗಾಗಿ ಮನೆ–ಮಾರು–ಊರು ಎಲ್ಲವನ್ನು ತೊರೆದುಹೋಗಲು ಆತ ನಿರ್ಧರಿಸಿದ. ಇದಕ್ಕಾಗಿಯೇ ಪೂರ್ವಯೋಜಿತವಾಗಿ ನಾಲ್ಕಾರು ದಿನಗಳ ಮೊದಲೇ ಒಂದು ದೊಡ್ಡ ತೆಂಗಿನಕಾಯಿ ತಂದು ಅದನ್ನು ಕೊರೆದು ನುಣುಪಾಗಿ ಕೆತ್ತಿ ಅಂದವಾದ ಕಮಂಡಲ ತಯಾರಿಸಿದ. ಸ್ವಲ್ಪ ಅವಲಕ್ಕಿ ಕಾಗದದಲ್ಲಿ ಹಾಕಿ ಪೊಟ್ಟಣಮಾಡಿ ಅದನ್ನು ಕರವಸ್ತ್ರದಲ್ಲಿ ಗಂಟುಕಟ್ಟಿ ಸಮುದ್ರತೀರದ ಸಮೀಪ ತೆಂಗಿನತೋಟದ ಬೇಲಿ ಅಂಚಿನಲ್ಲಿ ಗುರುತುಮಾಡಿ ಹೂತಿಟ್ಟಿದ್ದ. ಸತ್‌ಸಂಕಲ್ಪ; ಅದು ಯಾವಾಗಲೂ ಭಗವತ್‌ಸಂಕಲ್ಪವೇ ಆಗುವುದು.

ಅರಿಯದ ದಾರಿಯಲ್ಲಿ ಗುರುವನರಸಿ ಪಯಣ

ಅಂದು ಫಾಲ್ಗುಣ ಶುಕ್ಲ ಪಂಚಮಿ ಶನಿವಾರ ಮಧ್ಯಾಹ್ನ ಸುಮಾರು ಒಂದು ಗಂಟೆಯ ಸಮಯ. ಗಣೇಶನು ಮಾವನ ಮನೆಯಿಂದ ಮನೆಗೆ ಬಂದವನು ಯಾರಿಗೂ ತಿಳಿಯದಂತೆ ದೇವರ ಪೀಠದ ಬಳಿಗೆ ನಡೆದ. ಅಲ್ಲಿ ತನ್ನ ಕೈಗಳ ಬೆಳ್ಳಿಬಳೆಗಳು, ಕಿವಿಗಿರುವ ವಂಟಿ, ಸೊಂಟದ ನೇವಾಳ ಎಲ್ಲವನ್ನು ಮೆಲ್ಲಗೆ ತೆಗೆದು ದೇವರ ಪೀಠದಲ್ಲಿರಿಸಿದ. ನಂತರ ಸದ್ದಿಲ್ಲದೆ ಅಲ್ಲಿಂದ ಹೊರಟು ರಥಬೀದಿಯ ಮಾರ್ಗವಾಗಿ ಶ್ರೀ ಮಹಾಬಲೇಶ್ವರ ದೇವಾಲಯದ ಹೊರಾವರಣದೆಡೆಗೆ ಬಂದು ಅಲ್ಲಿ ಪಶ್ಚಿಮದ್ವಾರದ ಸಮೀಪವಿರುವ ಧ್ವಜಗಂಬದ ಸನಿಹ ಸ್ವಲ್ಪ ಹೊತ್ತು ಮೌನವಾಗಿ ನಿಂತ. ಮನಸ್ಸಿನಲ್ಲಿ ತಾಕಲಾಟ ನಡೆದಿತ್ತು. ಆದರೂ ಮನಸ್ಸು ಗಟ್ಟಿಮಾಡಿ ಪಶ್ಚಿಮಾಭಿಮುಖವಾಗಿ ಸಮುದ್ರತೀರದತ್ತ ನಡೆಯತೊಡಗಿದ. ಆ ವೇಳೆಗೆ ಅವನಿಗೆ ಎದುರಾಗಿ ಪರಿಚಿತರಾದ ಚಿತ್ರಿಗೆ ಭಟ್ಟರು ಸಮುದ್ರ ತೀರದ ಕಡೆಯಿಂದ ಬರುತ್ತಿದ್ದು ಏ! ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೊರಟೆಯೋ? ಎಂದು ಕೇಳಿದರು. ಅದಕ್ಕೆ ಗಣೇಶನು "ಸುಮ್ಮನೆ ಸಮುದ್ರ ಬೇಲೆಗೆ ಅಷ್ಟೆ" ಎನ್ನುತ್ತಾ ಸರಸರನೆ ಮುಂದಕ್ಕೆ ನಡೆದು ತೆಂಗಿನ ತೋಟದ ಬಳಿಗೆ ಬಂದ. ಅಲ್ಲಿ ಬೇಲಿಯ ಸಮೀಪ ತಾನು ಹುಗಿದಿರಿಸಿದ್ದ ತೆಂಗಿನಕಾಯಿ ಕರಟದ ಕಮಂಡಲು ಅವಲಕ್ಕಿ ಗಂಟು

ತೆಗೆದುಕೊಂಡು ಸಮುದ್ರತೀರದಗುಂಟ ಬೇಲೆಯಲ್ಲಿ ನಡೆದು ಗಂಗಾವಳಿ ತಲುಪಿದ. ಅಲ್ಲಿ ಗಂಗಾವಳಿ ನದಿ ದಾಟಿ ಮುಂದೆ ಹೋಗಬೇಕು. ಏನು ಮಾಡುವುದು ಎಂದು ಯೋಚಿಸತೊಡಗಿದ. ಅಷ್ಟು ಹೊತ್ತಿಗೆ ತಾರಿದೋಣಿ ಬಿಡುವ ಸಮಯವಾಗಿತ್ತು. ಆಚೆ ಕಡೆಗೆ ಹೋಗಲು ಅನೇಕರು ಕಾಯುತ್ತಿದ್ದರು. ದೋಣಿ ಹೊರಡುತ್ತಲೇ ಅವರೊಂದಿಗೆ ಗಣೇಶನೂ ದೋಣಿಯೇರಿ ಕುಳಿತ. ಆಚೆ ದಡ ಸಮೀಪಿಸುತ್ತಿದ್ದಂತೆ ಎಲ್ಲರೂ ಇಳಿದು ನಾವಿಕನಿಗೆ ಕೊಡಬೇಕಾದ ಹಣ ನೀಡಿದರು. ಆದರೆ ಗಣೇಶನ ಹತ್ತಿರ ನಾವಿಕನಿಗೆ ಕೊಡಲು ಹಣವಿರಲಿಲ್ಲ. ಆತ ಏನೂ ತೋಚದೇ ಸುಮ್ಮನೇ ನಿಂತಿರುವುದನ್ನು ಕಂಡು ನಾವಿಕನು ಕರುಣೆಯಿಂದ ಅವನಿಗೆ ಹೋಗಬಹುದೆಂದು ಕೈಯಿಂದ ಸನ್ನೆ ಮಾಡಿ ತಿಳಿಸಿದ. ಮುಂದೆ ಆತ ನಡೆಯುತ್ತಾ ಕಾರವಾರಕ್ಕೆ ಬಂದ. ಇಲ್ಲಿ ಕಾಳಿನದಿಯನ್ನು ದಾಟಿ ಮುಂದೆ ಹೋಗಬೇಕಾಗಿತ್ತು. ಅಲ್ಲಿ ಸ್ವಲ್ಪ ಹೊತ್ತು ಸುಮ್ಮನೇ ನಿಂತಿರುವಾಗ ನಾಲ್ಕಾರು ಜನ ಆತುರಾತುರವಾಗಿ ಬರುತ್ತಾ ದೋಣಿಯವನಿಗೆ ತಮ್ಮನ್ನು ಆಚೆಗೆ ಒಯ್ಯಲು ತಿಳಿಸಿದರು. ಅವರ ಜತೆ ಗಣೇಶನೂ ದೋಣಿಯಲ್ಲಿ ಕುಳಿತು ಕಾಳಿನದಿ ದಾಟಿ ಈಚೆ ದಡಕ್ಕೆ ಬಂದ. ನಾವಿಕನು ಎಲ್ಲರಿಂದ ಹಣವಸೂಲಿ ಮಾಡಿದ. ಗಣೇಶನ ಹತ್ತಿರವೂ ಹಣಕೊಡುವಂತೆ ಕೇಳಿದ. ಆಗ ಆತ ತನ್ನ ಹತ್ತಿರ ಹಣವಿಲ್ಲ ಎಂದಾಗ ಅವನ ಜತೆಗಿದ್ದ ಪ್ರಯಾಣಿಕರೇ ಹಣಕೊಟ್ಟರು. ಅಲ್ಲಿಂದ ಮುಂದೆ ಎರಡು ದಿನಗಳ ಅವಧಿಯಲ್ಲಿ ಆತ ಕಾಲ್ನಡಿಗೆಯಿಂದ ಮಡಗಾಂವ ತಲುಪಿ ಸಾವರ್ಣೆ-ಬೆಳಗಾವಿ-ಲೋಂಡಾ ಮಾರ್ಗವಾಗಿ ಫಾಲ್ಗುಣ ಶುಕ್ಲ ಏಕಾದಶಿಯಂದು ಸಾಯಂಕಾಲ ಕೊಲ್ಹಾಪುರ ಸೇರಿದ. ಅಲ್ಲಿ ಶ್ರೀಮಹಾಲಕ್ಷ್ಮಿ ಮಂದಿರದ ಆಗ್ನೇಯ ಭಾಗದ ಚಂದ್ರಶಾಲೆಯಲ್ಲಿರುವ ಗೋಕರ್ಣೇಶ್ವರ ಆವರಣದಲ್ಲಿ ರಾಮದಾಸಸ್ವಾಮಿಯವರ ಭಜನೆ ನಡೆಯುತ್ತಿತ್ತು. ಗುರುವನ್ನು ಕಂಡಾಗ ಗಣೇಶನಿಗೆ ಪ್ರಯಾಣದ ಆಯಾಸ ಕ್ಷಣಾರ್ಧದಲ್ಲಿ ಪರಿಹಾರವಾಗಿ ಅವನ ತನುಮನಗಳಲ್ಲಿ ನವಚೈತನ್ಯದ ಸಂಚಾರವಾಯಿತು. ಆತ ಎಲ್ಲವನ್ನು ಮರೆತು ಗುರುವಿನೊಡನೆ ಭಜನೆಯಲ್ಲಿ ತಲ್ಲೀನನಾದ.

ಇತ್ತ ಗೋಕರ್ಣದಲ್ಲಿ ಫಾಲ್ಗುಣ ಶುಕ್ಲ ಷಷ್ಠಿ ಆದಿತ್ಯವಾರದಂದು ಗಣೇಶನ ಮದುವೆ ತಯಾರಿ ನಡೆದಿತ್ತು. ಪಂಚಮಿಯ ದಿನ ಮನೆಯವರೆಲ್ಲ ಮಂಗಳವಾದ್ಯದೊಂದಿಗೆ ದಿಬ್ಬಣ ಹೊರಟು ಊರಿನ ಸಂಬಂಧಿಕರು ಮತ್ತು ಪರಿಚಿತರಿಗೆಲ್ಲ ಮಂಗಲಾಕ್ಷತೆ ಕೊಟ್ಟು ಮದುವೆಗೆ ಕರೆದುಬಂದಿದ್ದರು. ಷಷ್ಠಿಯ ದಿನ ಬೆಳಿಗ್ಗೆ ಪುರೋಹಿತರು ಬಂದು ಗಣಪತಿ ಪೂಜೆ ಪ್ರಾರಂಭಿಸಿ ನಾಂದಿಯಿರಿಸುವುದಕ್ಕೆ ಮೊದಲು ಮಾಡಿ ಮದುವೆಗೆ ಕಂಕಣ ಕಟ್ಟಿಕೊಳ್ಳುವುದಕ್ಕಾಗಿ ವರನಿಗೆ ಬರಲು ತಿಳಿಸಿದರು. ಇಷ್ಟು ಹೊತ್ತಿನವರೆಗೆ ಮದುವೆಯ ಸಂಭ್ರಮದ ಗಡಿಬಿಡಿಯಲ್ಲಿ ಎಲ್ಲರೂ ವರನನ್ನೇ ಮರೆತುಬಿಟ್ಟಿದ್ದರು. ಯಾವಾಗಲೂ ಅಷ್ಟೆ; ಆತ ಮನೆಯಲ್ಲಿ ಇದ್ದಾನೆಯೋ ಇಲ್ಲವೋ ಎಂದು ಅರಿಯದಷ್ಟು ಅವನ ಬಗೆಗೆ ಅವಜ್ಞೆಯಿತ್ತು. ಸಾಮಾನ್ಯವಾಗಿ ಅವನು ಯಾವತ್ತೂ ಕೋಟಿತೀರ್ಥಕಟ್ಟೆಯ ಮೇಲಿರುವ ವರದೇಶ್ವರ ಮಂಟಪದಲ್ಲಿ ಇರುತ್ತಿದ್ದ. ಸಹಜವಾಗಿಯೇ ಆತ ಅಲ್ಲಿಯೇ ಇರುವನೆಂದು ಮನೆಯವರೆಲ್ಲ ತಿಳಿದಿದ್ದರು. ಅಂತಲೇ ಅಲ್ಲಿಗೆ ಹೋಗಿ ನೋಡಿದರು. ಆದರೆ ಆತ ಅಲ್ಲಿರಲಿಲ್ಲ. ಆಗ ಪುರೋಹಿತರಿಗೆ "ಸ್ವಲ್ಪ ತಡೆಯಿರಿ, ಗಣೇಶ ಕಾಣಿಸುತ್ತಿಲ್ಲ." ಎಂದು ವಿಘ್ನೇಶ್ವರಭಟ್ಟರು ಆತಂಕದಿಂದ ಹೇಳಿದರು. ಎಲ್ಲ ಬಂಧು-ಬಳಗ, ಸಂಬಂಧಿಕರು ಪರಿಚಿತರು ಇರುವ ಕಡೆಗಳಲ್ಲಿ ವಿಚಾರಿಸಿದರು. ಆದರೆ ಎಲ್ಲಿಯೂ ಅವನ ಸುಳಿವು ಸಿಗಲಿಲ್ಲ. ಅಷ್ಟರಲ್ಲಿ ದೇವರಿಗೆ ತುಪ್ಪದದೀಪ ಹಚ್ಚಲೆಂದು ಹೋದವರಿಗೆ ದೇವರಪೀಠದ ಒಂದು ಬದಿಯಲ್ಲಿ ಗಣೇಶನು ತೆಗೆದಿರಿಸಿದ ಒಡವೆಗಳು ಕಾಣಿಸಿದವು. ವಿಷಯ ತಿಳಿದ ವಿಘ್ನೇಶ್ವರಭಟ್ಟರು ದೇವರಪೀಠದ

ಬಳಿಬಂದು ಮಗನ ಒಡವೆಗಳನ್ನು ನೋಡಿದರು. ಅವರಿಗೆ ದುಃಖ ತಡೆದುಕೊಳ್ಳಲಾಗದೆ ಜೋರಾಗಿ ಅತ್ತುಬಿಟ್ಟರು. ಆತ ಏಕೆ ಒಡವೆಗಳನ್ನೆಲ್ಲ ತೆಗೆದಿರಿಸಿಹೋದ? ಅವನ ಜೀವಕ್ಕೆ ಏನಾದರೂ ಅಪಾಯ ಸಂಭವಿಸಿರಬಹುದೆ? ಇತ್ಯಾದಿ ಪ್ರಶ್ನೆಗಳು ಅವರನ್ನು ಕಾಡಿದವು. ಅವರು ಊರಿನ ಎಲ್ಲ ಕೆರೆ–ಬಾವಿಗಳಿಗೆ ಜಲ್ಲ ಹಾಕಿ ಹುಡುಕಿಸಿದರು. ಮಗನು ಕೆರೆ–ಬಾವಿ ಬಿದ್ದು ಸತ್ತಿಲ್ಲವೆಂದು ಸಮಾಧಾನವಾದರೂ ಅವನು ಎಲ್ಲಿಗೆ ಹೋದ? ಏನಾದ? ಎಂದು ಯೋಚನೆಗಿಟ್ಟುಕೊಂಡಿತು. ಯೋಚಿಸಿದಷ್ಟೂ ಸಮಸ್ಯೆ ಜಟಿಲವೆನಿಸಲು ಅವರು ಚಿಕ್ಕ ಮಕ್ಕಳಂತೆ ಅತ್ತರು. ಮತ್ತೆ ಮತ್ತೆ ಹಂಬಲಿಸುತ್ತ ಹಲುಬಿದರು: ವಿಘ್ನೇಶ್ವರಭಟ್ಟರ ದುಃಖವನ್ನು ನೋಡಲಾಗದೆ ಅವರ ತಂಗಿಯ ಗಂಡ ಮತ್ತು ಗೆಳೆಯ ಕಾಮಣ್ಣ ಇವರು "ಗಣೇಶನನ್ನು ನಾವು ಹುಡುಕಿ ಕರೆತರುತ್ತೇವೆ" ಎಂದು ಸಮಾಧಾನ ಪಡಿಸಿದರು. ಗಣೇಶನನ್ನು ಹುಡುಕಿ ಕರೆತರುವುದಾಗಿ ವಿಘ್ನೇಶ್ವರಭಟ್ಟರಿಗೆ ಸಮಾಧಾನಪಡಿಸಿದ ಕಾಮಣ್ಣನವರು ತನ್ನ ಸ್ನೇಹಿತನ ಸಂಗಡ ಆ ಬಗ್ಗೆ ಆಳವಾಗಿ ಚರ್ಚಿಸಿದರು. ಆಗ ಅವರಿಗೆ ಆತ ಶ್ರೀರಾಮದಾಸಸ್ವಾಮಿಯವರು ಗೋಕರ್ಣಕ್ಕೆ ಬಂದಾಗ ದಿನಾಲೂ ಸಾಯಂಕಾಲ ಶ್ರೀಮಹಾಬಲೇಶ್ವರ ದೇವಸ್ಥಾನದಲ್ಲಿ ಅವರೊಂದಿಗೆ ಗಣೇಶನು ಭಜನೆ ಮಾಡುತ್ತಿದ್ದ ಸಂಗತಿ ನೆನಪಿಗೆ ಬಂತು. ಕೂಡಲೇ ಅವರು ರಾಮದಾಸಸ್ವಾಮಿಯವರು ಗೋಕರ್ಣದಿಂದ ಯಾವ ಕಡೆಗೆ ಹೋದರು ಎಂಬುದನ್ನು ವಿಚಾರಿಸಲು ಅವರು ಕೊಲ್ಹಾಪುರಕ್ಕೆ ಹೋಗಿರುವುದಾಗಿಯೂ ಇನ್ನೂ ಕೆಲವು ದಿನಗಳ ಕಾಲ ಅಲ್ಲಿಯೇ ಇರುವುದಾಗಿಯೂ ತಿಳಿದುಬಂತು. ತತ್‌ಕ್ಷಣ ಈ ಸುಳಿವಿನ ಜಾಡುಹಿಡಿದು ಕಾರ್ಯಪ್ರವೃತ್ತರಾದ ಅವರು ಕೊಲ್ಹಾಪುರಕ್ಕೆ ಹೊರಟರು. ಕಾಮಣ್ಣನವರಿಗೆ ಅಲ್ಲಿ ಹಲವರ ಪರಿಚಯವಿತ್ತು. ಇದರಿಂದ ರಾಮದಾಸಸ್ವಾಮಿಯವರು ಇರುವ ಸ್ಥಳವನ್ನು ತಿಳಿಯಲು ಕಷ್ಟವಾಗಲಿಲ್ಲ.

ಗಣೇಶನು ಕೊಲ್ಹಾಪುರಕ್ಕೆ ಬಂದು ನಾಲ್ಕು ದಿನಗಳಾಗಿದ್ದವು. ಅಂದು ಸಾಯಂಕಾಲ ಆತ ರಾಮದಾಸಸ್ವಾಮಿಯವರೊಂದಿಗೆ ಮೈಮರೆತು ಭಜನೆಯಲ್ಲಿ ತಲ್ಲೀನನಾಗಿದ್ದ. ಆ ವೇಳೆಗೆ ಅಲ್ಲಿಗೆ ಬಂದ ಕಾಮಣ್ಣ ಮತ್ತು ಆತನ ಸಂಗಡಿಗ ಇಬ್ಬರೂ ಗಣೇಶನ ಬಳಿಬಂದು ಆತನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡರು. ಆಗ ರಾಮದಾಸಸ್ವಾಮಿಗಳು ಯಾಕೆ ಇವರು ಹೀಗೆ ಹಠಾತ್ತನೆ ಬಂದು ಈ ಹುಡುಗನ ಕೈಹಿಡಿದುಕೊಂಡರು ಎಂದು ಯೋಚಿಸುವಷ್ಟರಲ್ಲಿ ಕಾಮಣ್ಣನವರು ಮುಂದೆ ಬಂದು ಆತ ಮನೆಬಿಟ್ಟು ಓಡಿಬಂದಿರುವ ವಿಷಯವನ್ನು ತಿಳಿಸಿ ಅವನನ್ನು ಕರೆದುಕೊಂಡು ಹೊರಟರು. ಗಣೇಶನು ಅವರ ಹಿಂದೆ ಏನೊಂದೂ ಮಾತನಾಡದೆ ಮೂಕನಾಗಿ ನಡೆಯುತ್ತಿರಲು ಅವರು ಹಾಗೆಯೇ ಅಂಚೆಕಛೇರಿಗೆ ಹೋಗಿ "ಗಣೇಶ ಸಿಕ್ಕಿದ್ದಾನೆ; ನಾವು ಅವನನ್ನು ಕರೆದುಕೊಂಡು ಗೋಕರ್ಣಕ್ಕೆ ಬರುತ್ತಿದ್ದೇವೆ" ಎಂದು ವಿಘ್ನೇಶ್ವರ ಭಟ್ಟರಿಗೆ ಟೆಲಿಗ್ರಾಮಿನ ಮೂಲಕ ವಿಷಯ ತಿಳಿಸಿದರು. ಈಗ ಇಬ್ಬರೂ ಭಾರೀ ಸಾಹಸಕಾರ್ಯಗೈದು ಯಶಸ್ವಿಯಾದ ಹಾಗೆ ಹೆಮ್ಮೆಯಿಂದ ಬೀಗುತ್ತಿದ್ದರೆ ಗಣೇಶನಿಗೆ ಸ್ವಚ್ಛಂದದಿಂದ ನಲಿವ ಹಕ್ಕಿಯನ್ನು ಬೇಟೆಗಾರರು ಬಂದು ಬಲೆಹಾಕಿ ಹಿಡಿದು ಒಯ್ಯುತ್ತಿರುವ ಅನುಭವವಾಯಿತು. "ಯಾವ ರೀತಿಯಲ್ಲಿ ಇವರಿಂದ ತಪ್ಪಿಸಿಕೊಳ್ಳಲಿ" ಎಂದು ಮನದಲ್ಲಿಯೇ ಚಿಂತಿಸುತ್ತ ಆತ ಮೌನವಾಗಿ ಅವರೊಂದಿಗೆ ಹೆಜ್ಜೆ ಹಾಕುತ್ತಿದ್ದ. ಸುಮಾರು ಅರ್ಧ ಫರ್ಲಾಂಗು ದೂರ ಕ್ರಮಿಸಿದಾಗ ಅಲ್ಲಿ ತುಂಬಾ ಜನದಟ್ಟಣೆಯಿತ್ತು. ತಾನು ಇವರಿಂದ ತಪ್ಪಿಸಿಕೊಳ್ಳಲು ಇದೇ ಸರಿಯಾದ ಸ್ಥಳವೆಂದು ಯೋಚಿಸಿದ ಗಣೇಶನು ಮೂತ್ರ ವಿಸರ್ಜನೆ ಮಾಡಿ ಬರುವದಾಗಿ ಹೇಳಿ ಅವರ ಪ್ರತಿಕ್ರಿಯೆಗೆ ಕಾಯದೇ ಜನರ ಗುಂಪಿನ ನಡುವೆ ನುಸುಳಿ ಮರೆಯಾದನು.

ಕಾಮಣ್ಣ ಮತ್ತು ಸಂಗಡಿಗ ಇವರಿಂದ ತಪ್ಪಿಸಿಕೊಂಡ ಗಣೇಶ ಪಂಜರದಿಂದ ಹೊರಬಿದ್ದ ಪಕ್ಷಿಯಂತಾದ. ಊರನ್ನು ಬಿಟ್ಟು ಕಾಡಿನ ದಾರಿ ಹಿಡಿದ. ಅಪರಿಚಿತ ಸ್ಥಳವಾದರೂ ಚಿರಪರಿಚಿತವೋ ಎಂಬಂತೆ ಮುಂದೆ ಕಾಣಿಸುತ್ತಿದ್ದ ಬೆಟ್ಟದ ಕಡೆಗೆ ಸಾಗಿದ. ಹೀಗೆ ಅರಿಯದ ದಾರಿಯಲ್ಲಿ ಮರೆಯನರಸುತ್ತ ಮುಂದೆ ಮುಂದೆ ಹೋಗುತ್ತಿರುವಂತೆ ಅವನಿಗೆದುರಾಗಿ ನಾತಿದೂರದಲ್ಲೊಂದು ಶಿಥಿಲ ದೇವಾಲಯ ಕಾಣಿಸಿತು. ವೇಗವಾಗಿ ಅದರತ್ತ ಹೆಜ್ಜೆ ಹಾಕಿ ಸಮೀಪದಿಂದ ದೇವಾಲಯವನ್ನೊಮ್ಮೆ ಆಮೂಲಾಗ್ರವಾಗಿ ಪರಿಶೀಲಿಸಿದ. ಶಿಖರ ಭಾಗದಲ್ಲಿ ಒಬ್ಬ ಮನಷ್ಯ ನುಸುಳಿ ಒಳಗೆತೂರಿಕೊಳ್ಳಬಹುದಾದಷ್ಟು ದೊಡ್ಡದಾದ ಕಿಂಡಿಯಿರುವುದು ಕಾಣಿಸಿತು. ಸಮೀಪದಲ್ಲಿಯೇ ಒಂದು ಮರವಿದ್ದು ಅದರ ಕೊಂಬೆಯೊಂದು ಆ ಕಿಂಡಿಯೊಳಕ್ಕೆ ಪ್ರವೇಶಿಸಲು ಅನುಕೂಲವಾಗುವಂತೆ ಬಾಗಿತ್ತು. ಆಗ ಅದೇ ತಾನೇ ಸೂರ್ಯಾಸ್ತವಾಗಿ ಸ್ವಲ್ಪ ಸಮಯವಾಗಿದ್ದು ಸುತ್ತಲೂ ಕತ್ತಲು ಕವಿಯತೊಡಗಿತ್ತು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ರಾತ್ರಿ ಕಳೆಯಲು ತಕ್ಕ ನೆಲೆಯರಸಿ ಕುಳಿತಿದ್ದವು. ಗಣೇಶನಿಗೆ ತನ್ನನ್ನು ಕರೆದೊಯ್ಯಲು ಬಂದವರ ಹಿಡಿತದಿಂದ ತಪ್ಪಿಸಿಕೊಂಡು ಅಡಗುವುದಕ್ಕೆ ಒಂದು ನೆಲೆಕಂಡುಕೊಂಡ ಆ ಕ್ಷಣ ಬಲು ನೆಮ್ಮದಿ ತಂದಿತು. ಆತ ಸರಸರ ಮರವೇರಿ ಬಾಗಿದ ಕೊಂಬೆಯ ಸಹಾಯದಿಂದ ಕಿಂಡಿಯಲ್ಲಿ ತೂರಿ ಶಿಖರದ ಒಳಗೆ ಸೇರಿಕೊಂಡ. ಆತ ಒಳಗೆ ಪ್ರವೇಶಿಸುತ್ತಿದ್ದಂತೆ ಅಲ್ಲಿ ವಾಸವಾಗಿದ್ದ ಬಾವಲಿಗಳು ಕೀಚ್ ಕೀಚ್ ಎನ್ನುತ್ತ ಒಂದೊಂದೆ ಹೊರಕ್ಕೆ ಹಾರುತ್ತ ಕತ್ತಲಿನಲ್ಲಿ ಮರೆಯಾಗತೊಡಗಿದವು. ಗಾಳಿ, ಬೆಳಕುಗಳ ಸಂಚಾರವಿಲ್ಲದ ಆ ಒಳಗೂಡಿನಲ್ಲಿ ಗಬ್ಬುವಾಸನೆ ತುಂಬಿತ್ತು. ಬಾವಲಿಗಳು ಹಾಕಿದ ಮಲದ ಹಿಕ್ಕೆಗಳಿಂದ ಮತ್ತು ಶಿಖರದ ಗೋಡೆಯ ಮಣ್ಣು ಉದುರಿ ನೆಲವು ಹೊಲಸಾಗಿತ್ತು. ಗಣೇಶನು ಒಬ್ಬ ಮನುಷ್ಯ ಕುಳಿತುಕೊಳ್ಳಲು ಮತ್ತು ಮಲಗಲು ಸಾಲುವಷ್ಟು ಸ್ಥಳವನ್ನು ಸ್ವಚ್ಛಗೊಳಿಸಿ ತನ್ನ ಹೆಗಲಿನ ಪಂಚೆಯನ್ನು ಹಾಸಿ ನಿರಾತಂಕವಾಗಿ ಮಲಗಿದನು. ಕತ್ತಲೆಯ ಗೂಡಿನಲ್ಲಿ ಜ್ಞಾನದ ಮೊಟ್ಟೆಗೆ ಕಾವುಕೊಡುವ ಸಿದ್ಧತೆ ನಡೆದಿತ್ತು! ಭಕ್ತಿಯ ಛಲದಲ್ಲಿ ಹಸಿವು, ಬಾಯಾರಿಕೆಗಳ ಮೀರಿ ಆತನಲ್ಲಿ ಆರ್ಷೇ ವ್ಯಕ್ತಿತ್ವ ಸಾಕಾರ ಪಡೆಯುವದಕ್ಕೆ ಅನುವಾಗುತ್ತಲಿತ್ತು. ಎಲ್ಲೆಲ್ಲೂ ನೀರವ. ಕೊಲ್ಹಾಪುರದ ಅರಮನೆಯಲ್ಲಿ ಬಾರಿಸಿದ ಘಂಟಾನಾದ ಮಾತ್ರ ಕೇಳಿಸುತ್ತಿತ್ತು. ನಸುಕು ಹರಿಯಲು ಇನ್ನೂ ಒಂದು ತಾಸು ಇರುವಾಗಲೇ ಆತನಿಗೆ ಎಚ್ಚರವಾಯಿತು. ತನ್ನ ಮುಂದಿರುವ ತುರ್ತು ಪರಿಸ್ಥಿತಿಯನ್ನು ನೆನೆಯುತ್ತ ಕತ್ತಲಿನಲ್ಲಿಯೇ ಮರದ ಮೂಲಕ ಕೆಳಗಿಳಿದು ಊರ ಸಮೀಪದಲ್ಲಿರುವ ಹೊಳೆಯ ಕಡೆಗೆ ಹೆಜ್ಜೆ ಹಾಕಿ ಪ್ರಾತರ್ವಿಧಿ, ನಿತ್ಯಕರ್ಮಗಳ ಪೂರೈಸಿದ ಗಣೇಶ ಹೊಟ್ಟೆತುಂಬ ನೀರುಕುಡಿದು ಜತೆಗೆ ಕಮಂಡಲಿನಲ್ಲಿ ನೀರುತುಂಬಿಸಿಕೊಂಡು ಮತ್ತೆ ತನ್ನ ಅಡಗುದಾಣಕ್ಕೆ ಮರಳಿದ. ಹೀಗೆ ಅಲ್ಲಿ ಆತ ಮೂರು ದಿನಗಳನ್ನು ಕಳೆದ.

ಸುಲಭದಲ್ಲಿ ಸಿಕ್ಕಿದ ಗಣೇಶನು ಅಷ್ಟೇ ಸುಲಭವಾಗಿ ತಪ್ಪಿಸಿಕೊಂಡು ಹೋದಾಗ ಕಾಮಣ್ಣ ಮತ್ತು ಸಂಗಡಿಗ ಇಬ್ಬರಿಗೂ ತಮ್ಮ ಮಂಕುತನದ ಬಗೆಗೆ ಬಹಳ ವಿಷಾದವಾಯಿತು. ತತ್‌ಕ್ಷಣವೇ ಜಾಗ್ರತರಾದ ಅವರು ಗಣೇಶ ಹೋದ ದಿಕ್ಕಿನಲ್ಲಿ ಆತನನ್ನು ಅರಸುತ್ತ ಹೊರಟರು. ಆದರೆ ಸಂಜೆಯ ಆ ಸಮಯ ಕತ್ತಲೆಯು ದಟ್ಟವಾಗುತ್ತಿರಲು ತಮ್ಮಿಂದ ಆ ಕೆಲಸ ಅಸಾಧ್ಯವೆಂದು ತೋರಿತು. ಅಂತಲೇ ಅವನ ರೂಪು-ರೇಷೆ-ಚಹರೆಯನ್ನು ವಿವರಿಸಿ, ಪೋಲೀಸರಿಗೆ ದೂರು ನೀಡಿದರು. ಆದರೆ ಪೋಲೀಸರಿಂದಲೂ ಆತನನ್ನು ಪತ್ತೆ ಮಾಡಲು ಆಗಲಿಲ್ಲ. ಆಗ ಕಾಮಣ್ಣನವರು ಎರಡು ಜನ ಪೋಲೀಸರ ಜತೆಗೆ ರಾಮದಾಸಸ್ವಾಮಿಯವರು ಭಜನೆ ಮಾಡುತ್ತಿದ್ದ ಗೋಕರ್ಣೇಶ್ವರ ಮಂದಿರಕ್ಕೆ

ಹೋಗಿ, ಅದರ ಎರಡೂ ದ್ವಾರಗಳಲ್ಲಿ ಅವರನ್ನು ನಿಲ್ಲಿಸಿ, ತಾವು ಒಳಗೆ ಹೋದರು. ಅಲ್ಲಿ ರಾಮದಾಸಸ್ವಾಮಿಯವರು ಮಾತ್ರ ಭಜನೆ ಮಾಡುತ್ತಿದ್ದರು. ಗಣೇಶನು ಅಲ್ಲಿ ಇರಲಿಲ್ಲ. ಈಗ ಅವರಿಗೆ ಬೇರೇನೂ ತೋಚದಂತಾಗಿ ರಾಮದಾಸಸ್ವಾಮಿಯವರಿಗೆ "ಗಣೇಶನು ಬಂದರೆ ಅವನನ್ನು ತಮ್ಮ ಸಂಗಡವೇ ಉಳಿಸಿಕೊಳ್ಳಬೇಕು" ಎಂದು ಮನವಿ ಮಾಡಿದರು. ಅದಕ್ಕೆ ಅವರು "ಈಗಾಗಲೇ ನೀವು ಪೋಲೀಸರಿಗೆ ದೂರು ನೀಡಿದ್ದೀರಿ, ಅಲ್ಲದೇ ಎರಡು ಜನ ಪೋಲೀಸರನ್ನು ಕರೆತಂದಿದ್ದೀರಿ. ಆದ್ದರಿಂದ ಆತನನ್ನು ನನ್ನ ಜತೆ ಇರಿಸಿಕೊಳ್ಳಲು ಸಾಧ್ಯವಿಲ್ಲ" ಎಂದು ಹೇಳಿದರು. ಇದಕ್ಕೆ ಗೆಳೆಯರಿಬ್ಬರೂ ಏನೂ ಮಾರ್ನುಡಿಯದೇ ಬರಿಗೈಯಿಂದ ಗೋಕರ್ಣಕ್ಕೆ ಮರಳಿದರು. ಕೊಲ್ಹಾಪುರದಲ್ಲಿ ನಡೆದ ವೃತ್ತಾಂತವನ್ನೆಲ್ಲ ತಿಳಿದ ವಿಘ್ನೇಶ್ವರ ಭಟ್ಟರು ತಾವೇ ಕೊಲ್ಹಾಪುರಕ್ಕೆ ಹೋಗಿ, ಅಲ್ಲಿ ರಾಮದಾಸಸ್ವಾಮಿಯವರನ್ನು ಕಂಡು ವಿನೀತರಾಗಿ ತಮ್ಮ ಅಳಲನ್ನು ಅವರಲ್ಲಿ ನಿವೇದಿಸಿ "ನನ್ನ ಮಗ ಗಣೇಶನು ನಿಮ್ಮಲ್ಲಿಗೆ ಬಂದರೆ ದಯವಿಟ್ಟು ಅವನನ್ನು ನಿಮ್ಮ ಸಂಗಡ ಉಳಿಸಿಕೊಳ್ಳಬೇಕು; ಹಾಗೆ ಉಳಿಸಿಕೊಳ್ಳಲು ನನ್ನದೇನೂ ಅಭ್ಯಂತರವಿಲ್ಲ" ಎಂಬ ಒಕ್ಕಣೆಯಲ್ಲಿ ಒಂದು ಬಿಳಿಯ ಹಾಳೆಯ ಮೇಲೆ ಬರೆದು ಸಹಿ ಮಾಡಿ ರಾಮದಾಸಸ್ವಾಮಿಯವರ ಕೈಗಿತ್ತು, ಗಣೇಶನು ಬಂದರೆ ಉಳಿಸಿಕೊಳ್ಳುವುದಾಗಿ ಅವರಿಂದ ಆಶ್ವಾಸನೆ ಪಡೆದು, ಸಮಾಧಾನದಿಂದ ಊರಿಗೆ ಮರಳಿದರು, ಎಲ್ಲಾದರೂ ಮಗನು ಸುಖವಾಗಿರಲಿ ಎಂದು ಅವರ ಮನ ಹಾರೈಸಿತು.

ಬೆಟ್ಟದ ಮೇಲಿನ ಶಿಥಿಲ ದೇವಾಲಯದಲ್ಲಿ ಕೆಲವು ದಿನಗಳನ್ನು ಕಳೆದ ಗಣೇಶನು ಮೆಲ್ಲನೆ ಊರದಾರಿ ಹಿಡಿದು, ಮಹಾಲಕ್ಷ್ಮೀ ಮಂದಿರದ ಗೋಕರ್ಣೇಶ್ವರ ಗುಡಿಯ ಚಂದ್ರಶಾಲೆಯತ್ತ ಹೆಜ್ಜೆ ಹಾಕಿದ. ಅಂದು ರಾಮದಾಸಸ್ವಾಮಿಯವರು ಶ್ರೀರಾಮನವಮಿಯಂದು ನಡೆಯಲಿರುವ ಶ್ರೀರಾಮಜನ್ಮೋತ್ಸವದ ಆರಾಧನೆಗೆ ಮುಂಚಿತವಾಗಿ ಗಾರ್ಘೋಲಿ ಎಂಬ ಊರಿಗೆ ಹೊರಟು ನಿಂತಿದ್ದರು. ಅಷ್ಟರಲ್ಲಿ ಗಣೇಶನು ಬಂದು ಗುರುವಿನ ಚರಣಕ್ಕೆರಗಿ ಅಭಿವಾದನ ಮಾಡಿದನು. ಮೂರು ದಿನಗಳಿಂದ ಉಪವಾಸವಿದ್ದು ಆತನ ದೇಹ ಹಸಿವಿನ ಭಾದೆಯಿಂದ ಬಳಲುತ್ತಿದ್ದರೂ, ಮನಸ್ಸು ಮಾತ್ರ ಸ್ವಲ್ಪವೂ ದುರ್ಬಲಗೊಂಡಿರಲಿಲ್ಲ. ಓರ್ವ ತಾಯಿ ತನ್ನ ಮಗುವಿನ ಹಸಿವು, ಬಾಯಾರಿಕೆಯನ್ನು ಸಹಜವಾಗಿ ಹೇಗೆ ಅರಿಯಬಲ್ಲಳೋ, ಅದೇ ರೀತಿ ರಾಮದಾಸಸ್ವಾಮಿಯವರು ಆತ ಈ ಮಧ್ಯೆ ಎಲ್ಲೋ ಊಟ–ಉಪಾಹಾರವಿಲ್ಲದೇ ಅಜ್ಞಾತವಾಗಿ ಕಳೆದಿರಬೇಕೆಂದು ಊಹಿಸಿ, ಆತನಿಗೆ ಕೂಡಲೇ ಉಪಾಹಾರದ ವ್ಯವಸ್ಥೆಮಾಡಿ, ತಾವು ಗಾರ್ಘೋಲಿಗೆ ಪ್ರಯಾಣ ಮಾಡಿದರು.

ಗಣೇಶನು ಮರುದಿನ ಕೊಲ್ಹಾಪುರದಿಂದ ಕಾಲ್ನಡಿಗೆಯಿಂದ ಹೊರಟು, ಮೀರಜಿಗೆ ಬಂದು ಅಲ್ಲಿಂದ ಮುಂದೆ ಪಂಢರಪುರವನ್ನು ತಲುಪಿದ. ರಾಮನವಮಿಯವರೆಗೆ ಅಲ್ಲಿಯೇ ಉಳಿದು, ದಶಮಿಯ ದಿನ ಗೋಂಧವಲೆ ಎಂಬ ಊರಿಗೆ ಹೋದ. ಅಲ್ಲಿ ಸಮರ್ಥ ಸಂಪ್ರದಾಯದ ಶ್ರೀಗೋಂಧವಲೆಕರ ಮಹರಾಜ ಸ್ವಾಮಿಗಳು ಅವರ ಮಠದಲ್ಲಿ ಉಳಿಸಿಕೊಂಡರು. ನಾಲ್ಕನೆಯ ದಿನ ಗಣೇಶನು ಅವರ ಅಪ್ಪಣೆ ಪಡೆದು, ಸಜ್ಜನಗಡಕ್ಕೆ ಹೊರಟನು. ಪಂಢರಪುರದಿಂದ ಸಾತಾರೆ ಮಾರ್ಗವಾಗಿ ಸಜ್ಜನಗಡ ತಲುಪಿದ, ಆತ ಅಲ್ಲಿ ಶಿವಾಜಿ ಮಹರಾಜರ ಗುರುಗಳಾದ ಶ್ರೀಸಮರ್ಥರಾಮದಾಸಸ್ವಾಮಿಯವರ ಆರಾಧ್ಯದೈವ ಸೀತಾ–ರಾಮ–ಲಕ್ಷ್ಮಣ ಮತ್ತು ಆಂಜನೇಯಮೂರ್ತಿ ಹಾಗೂ ಅಲ್ಲಿಯೇ ಇರುವ ಅವರ

ಸಮಾಧಿಯನ್ನು ಸಂದರ್ಶಿಸಿದ. ಸಜ್ಜನಗಡವು ಬಹುರಮ್ಯಸ್ಥಳವಾಗಿದ್ದು, ಕೆಳಗಿನ ಊರಿನಿಂದ ಸುಮಾರು ಎರಡು ಮೈಲಿಗಳಷ್ಟು ಎತ್ತರವಿದೆ. ಹಿಂದೆ ಶಿವಾಜಿ ಮಹರಾಜನು ಇಲ್ಲಿಗೆ ಕುದುರೆಯೇರಿ ಬರುವುದಕ್ಕಾಗಿ ಸುಮಾರು ನಾಲ್ಕೈದು ಮೈಲಿ ಉದ್ದದ ರಸ್ತೆ ನಿರ್ಮಿಸಿದ್ದನು. ಈ ರಸ್ತೆಯೇ ಇಂದಿಗೂ ಸಜ್ಜನಗಡದ ಪ್ರಧಾನರಸ್ತೆಯಾಗಿದೆ.

ಗಣೇಶನು ಸಜ್ಜನಗಡಕ್ಕೆ ಬರುವಷ್ಟರಲ್ಲಿ ರಾಮದಾಸಸ್ವಾಮಿಯವರು ತಮ್ಮ ಗುರುಗಳಾದ ಶ್ರೀ ಚೌಂಡೇಸ್ವಾಮಿ ಮಹರಾಜರನ್ನು ಕಾಣುವುದಕ್ಕಾಗಿ ವಾಯಿಗೆ ಹೋಗಿದ್ದರು. ವಾಯಿಯಲ್ಲಿ ಅವರ ಗೋಶಾಲೆಯಿತ್ತು. ಗೋವು ಸಾಕಣೆಯ ಬಗೆಗೆ ಆಸಕ್ತಿಯಿರುವವರು ಅವಶ್ಯವಾಗಿ ಸಂದರ್ಶಿಸಬೇಕಾದ ಆದರ್ಶ ಗೋಶಾಲೆ ಅದಾಗಿತ್ತು. ಈ ವಿಚಾರವನ್ನು ತಿಳಿದಾಗ ಗಣೇಶನಲ್ಲಿ ಅದನ್ನು ನೋಡಬೇಕೆಂಬ ಹಂಬಲವುಂಟಾಯಿತು. ಗೋವುಗಳೆಂದರೆ ಅವನಿಗೆ ಬಹಳ ಪ್ರೀತಿ. ಪ್ರಯಾಣದ ಆಯಾಸದಿಂದ ಬಳಲಿದ ಆತ ಅಂದು ರಾತ್ರಿ ಅಲ್ಲಿಯೇ ಉಳಿದು, ಮರುದಿನ ಬೆಳಗಿನ ಸಮಯ ಪ್ರಯಾಣ ಮುಂದುವರಿಸಿ, ಸಾತಾರೆಯನ್ನು ಸೇರಿದ. ಅಂದು ವೈಶಾಖ ಶುಕ್ಲ ಏಕಾದಶಿಯಾಗಿತ್ತು. ಆದ್ದರಿಂದ ಗಣೇಶನು ಅಂದಿನ ವಿಶೇಷ ಅನುಷ್ಠಾನ ಪೂರೈಸಲು ಹತ್ತಿರದಲ್ಲಿ ಎಲ್ಲಿಯಾದರೂ ಪ್ರಶಸ್ತವಾದ ಸ್ಥಳ ಸಿಗಬಹುದೇ ಎಂದು ಅಲ್ಲಿಯ ಜನರಲ್ಲಿ ವಿಚಾರಿಸಿದನು. ಅದಕ್ಕೆ ಅವರು ಅಲ್ಲಿಂದ ಐದು ಮೈಲಿ ದೂರದಲ್ಲಿ ಶಿವಾಜಿ ಮಹರಾಜರ ಗುರುಗಳಾದ ಸಂತ ಶ್ರೀ. ಸಮರ್ಥರಾಮದಾಸಸ್ವಾಮಿಯವರು ತಪವನ್ನಾಚರಿಸಿದ ಪವಿತ್ರ ಪಂಚಗಂಗಾತೀರವು ಇರುವುದಾಗಿ ತಿಳಿಸಿದರು. ಇದನ್ನು ಕೇಳಿ ಪುಲಕಿತನಾದ ಗಣೇಶನು ಅವರು ತಿಳಿಸಿದ ಮಾರ್ಗದಲ್ಲಿ ನಡೆದು, ಸುಮಾರು ಮಧ್ಯಾಹ್ನ ಹನ್ನೊಂದು ಘಂಟೆಯೊಳಗೆ ಪಂಚಗಂಗಾ ತೀರ ತಲುಪಿದನು. ಅಲ್ಲಿ ಸ್ನಾನಾದಿ ನಿತ್ಯಕರ್ಮ ಅನುಷ್ಠಾನಗಳನ್ನು ಮುಗಿಸಿ, ಅಪರಾಹ್ನ ಎರಡು ಗಂಟೆಯ ವೇಳೆಗೆ ಪುನಃ ಸಾತಾರೆಗೆ ಬಂದು, ಮುಂದೆ ವಾಯಿಗೆ ಹೊರಟನು. ನಿರಂತರ ಬರಿಗಾಲ ನಡೆಯಿಂದ ಅಂಗಾಲಿನ ಚರ್ಮ ಸವೆದು, ರಕ್ತ ಒಸರತೊಡಗಿತು. ಮೇಲೆ ಸೂರ್ಯನ ಪ್ರಖರಕಿರಣ ನೆತ್ತಿಯನ್ನು ಸುಡುತ್ತಿದ್ದರೆ, ಕೆಳಗೆ ಬಿಸಿಲ ಝಳದಿಂದ ಕಾದನೆಲ ಅಂಗಾಲ ಸುಡುತ್ತಿತ್ತು. ವೈಶಾಖದ ಉರಿಬಿಸಿಲ ಬೇಗೆಗೆ ದೇಹದಿಂದ ಬೆವರು ತೊಟ್ಟಿಕ್ಕುತ್ತಿತ್ತು. ಆದರೂ ಸಾವರಿಸಿ, ರಕ್ತ ಜಿನುಗುತ್ತಿದ್ದ ಅಂಗಾಲಿಗೆ ಉಟ್ಟ ಪಂಚೆಯನ್ನೇ ಹರಿದು ಕಟ್ಟಿ, ಗುರುವನ್ನು ಕಾಣುವ ಹಂಬಲದಲ್ಲಿ ಮುಂದಕ್ಕೆ ನಡೆಯತೊಡಗಿದ. ಬದುಕಿನ ಬೇಗೆಗೆ ಬೆಂದ ಮನದ ಅಳಲು ಹಾಡಾಗಿ ಹರಿದಿತ್ತು. ಅನುಭಾವಗೀತೆಯಾಗಿ ಮಾರ್ದನಿಸುತ್ತಿತ್ತು.

ಭಕ್ತಿಯ ಗುಂಗಿನಲಿ ಆಮೋದಗೊಂಡು
ಹೊರಟಿಹೆನು ಮನೆಮಾರು ಊರುಗಳ ತೊರೆದು
ಅರಿಯದ ದಾರಿಯಲಿ ನಿನ್ನನರಸುತ್ತ ಇಂದು
ಓ! ಗುರುವೆ, ನೀ ನನ್ನ ನಿಜವಾದ ಬಂಧು!

ಬದುಕಿನಾ ಭವದ ಬಂಧನ ಹರಿದು
ದಿವ್ಯಜೀವನ ಪಥವನು ಹಿಡಿದು
ಹಸಿವು, ಬಾಯಾರಿಕೆಗಳ ನೀಗಿ
ಛಲದ ಬಲದಿ ಸಾಗುತಿಹೆನು ಮೌನವಾಗಿ

ಭಕ್ತಿಯ ಜಲದಾ ಶಕ್ತಿಯ ಗುಟುಕು
ಕುಡಿಯುತ ಕಷ್ಟದ ದಾರಿಯ ಕ್ರಮಿಸಬೇಕು
ಕಷ್ಟವೋ–ಸುಖವೋ ತೋರದೆ ಅಳುಕು
ಮುನ್ನಡೆಯುತ ಗುರಿಯನು ಸಾಧಿಸಬೇಕು

ಹೊತ್ತಿನ ಪರಿವೆಯಿಲ್ಲದೆ ನೋವನ್ನು ಲೆಕ್ಕಿಸದೆ ದಾರಿಕ್ರಮಿಸುತ್ತಿರಲು, ಹಗಲು ಮಾಸುತ್ತ ಸಂಜೆ ಸಮೀಪಿಸುತ್ತಿತ್ತು. ಪಶ್ಚಿಮದಲ್ಲಿ ಸೂರ್ಯನು ಮರೆಯಾಗುತ್ತಿದ್ದಂತೆ ತಂಪಾದ ಗಾಳಿ ಹಿತವೆರೆಯುತ್ತ ಬೀಸುತ್ತಿತ್ತು. ಆಗ ಮಾರ್ಗಾಯಾಸದಿಂದ ದಣಿದ ದೇಹವನ್ನು ತಣಿಸಲೆಂದು ಅಲ್ಲಿಯೇ ಸಮೀಪದಲ್ಲಿರುವ ಒಂದು ಮರದ ಬುಡದಲ್ಲಿ ಕುಳಿತಾಗ ಇದುವರೆಗೆ ಅಷ್ಟಾಗಿ ಕಾಣಿಸದ ಹಸಿವು, ಬಾಯಾರಿಕೆ, ಬಳಲಿಕೆಗಳು ಈಗ ಆತನನ್ನು ಕಾಡಿಸತೊಡಗಿದವು. ಆದಾಗ್ಯೂ ಸಾವರಿಸಿ ಎದ್ದು ಮತ್ತೆ ನಡೆಯುತ್ತಿರಲು ಅದೇ ಸ್ವಲ್ಪ ಹೊತ್ತಿಗೆ ಕಣ್ಣಿಗೆ ನಿಲುಕುವಷ್ಟು ದೂರದಲ್ಲಿ ದಾರಿಯ ಪಕ್ಕ ಬೆಂಕಿ ಉರಿಯುತ್ತಿರುವುದು ಕಾಣಿಸಿತು. ಹತ್ತಿರ ಹೋಗಿ ನೋಡಲಾಗಿ ಮೂವರು ಕೆಲವು ಹಸುಗಳನ್ನು ಸಮೀಪದಲ್ಲಿಯೆ ಮರಗಳಿಗೆ ಕಟ್ಟಿಹಾಕಿ, ಮಾತನಾಡುತ್ತ ಕುಳಿತಿದ್ದರು. ಅವರು ಸಾತಾರೆಯಿಂದ ಬಂದವರಾಗಿದ್ದು, ಹಸುಗಳನ್ನು ಹೊಡೆದುಕೊಂಡು ಮುಂದೆ ವಾಯಿಗೆ ಹೋಗುವವರಾಗಿದ್ದರು. ರಾತ್ರಿ ಅಷ್ಟು ಹೊತ್ತಿನಲ್ಲಿ ಯಾವುದೋ ಹುಡುಗನು ಒಬ್ಬಂಟಿಯಾಗಿ ಹೊರಟಿರುವುದನ್ನು ಮತ್ತು ಆತನ ಕಾಲಿಗೆ ಒದಗಿದ ದುಃಸ್ಥಿತಿಯನ್ನು ಕಂಡು ಅನುಕಂಪದಿಂದ ಅವನು ಮುಂದಕ್ಕೆ ಹೋಗದಂತೆ ತಡೆದು, ಅಲ್ಲಿಯೇ ಉಳಿಸಿಕೊಂಡರು. ನಂತರ ಅವರು ತಮ್ಮೊಟ್ಟಿಗೆ ತಂದ ಬುತ್ತಿಗಂಟನ್ನು ಬಿಚ್ಚಿ, ತಾವು ತಿನ್ನುವಾಗ ಅವನಿಗೂ ಒಂದು ಪಾಲನ್ನು ಕೊಟ್ಟರು. ಅಕ್ಕರೆಯಿಂದ ಆದರಿಸಿ ಕೊಟ್ಟ ಅದನ್ನು ಒಲ್ಲೆ ಎನ್ನಲು ಮನಸ್ಸಾಗದೆ ಆತ್ಮೀಯವಾಗಿ ಸ್ವೀಕರಿಸಿದ. ರೊಟ್ಟಿ, ಪಲ್ಲೆ ತಿಂದು ಹೊಟ್ಟೆ ತುಂಬಿದಾಗ ಅವರಲ್ಲಿ "ವಾಯಿಗೆ ಇನ್ನೆಷ್ಟು ದೂರವಿದೆ?" ಎಂದು ಕೇಳಲು ಅವರು "ಇನ್ನೂ ಏಳು ಮೈಲಿ ದೂರವಿದೆ" ಎಂದರು. ಈಗಾಗಲೇ ಆತ ಸಾತಾರೆಯಿಂದ ಎಂಟು ಮೈಲಿ ದೂರ ನಡೆದುಬಂದಿರುವುದರಿಂದ ದಣಿದ ದೇಹ ವಿಶ್ರಾಂತಿ ಬಯಸುತ್ತಿತ್ತು. ಮರದಡಿಯಲ್ಲಿ ಮೈಚೆಲ್ಲಿ ಮಲಗುತ್ತಿದ್ದಂತೆಯೇ ಆತ ನಿದ್ದೆಹೋದ.

ಗೋಸೇವೆಯ ಶಿಕ್ಷಣ

ರಾತ್ರಿ ಕಳೆದು ಮೂರನೇ ಜಾವ ಆರಂಭವಾಗುವುದರೊಳಗೆ ಗಣೇಶನು ಎದ್ದು ವಾಯಿ ಕಡೆ ಹೆಜ್ಜೆ ಹಾಕಿ ಬೆಳಗಿನ ಸುಮಾರು ಎಂಟು ಗಂಟೆಯ ವೇಳೆಗೆ ಹೇಗೋ ಆತ ಅಂಗಾಲಿನಲ್ಲಿ ಗಾಯಗಳಾಗಿದ್ದರೂ ಕುಂಟುತ್ತ, ಚೌಂಡೇಸ್ವಾಮಿಗಳ ಗೋಶಾಲೆಯನ್ನು ತಲುಪಿದ. ಆಗ ಅಲ್ಲಿ ರಾಮದಾಸಸ್ವಾಮಿಗಳಾಗಲಿ, ಅವರ ಗುರುಗಳಾದ ಚೌಂಡೇಸ್ವಾಮಿಗಳಾಗಲಿ ಇರಲಿಲ್ಲ. ಆದರೆ ಗೋಶಾಲೆಯನ್ನು ನೋಡಿಕೊಳ್ಳುತ್ತಿದ್ದ ಚೌಂಡೇಸ್ವಾಮಿಗಳ ಶಿಷ್ಯರಾದ ಶ್ರೀ ದತ್ತಾರಾವ್ ಮತ್ತು ಶ್ರೀ ದಾಮೋದರ ಬೋವಾ ಇವರಿದ್ದರು. ಅವರು ಗಣೇಶನ ಕಾಲಿನ ದುಸ್ಥಿತಿಯನ್ನು ಕಂಡು ಕನಿಕರ ಪಟ್ಟು, ಕಾಲಿನ ಗಾಯವು ಗುಣವಾಗುವವರೆಗೆ ಆತನನ್ನು ತಮ್ಮಲ್ಲಿಯೇ ಉಳಿಸಿಕೊಂಡರು. ಈ ಅವಧಿಯಲ್ಲಿ ಆತ ದಿನಾಲೂ ಪ್ರಾತಃಕಾಲ ಬೆಳಕು ಹರಿಯುವ ಮುನ್ನವೇ ಎದ್ದು, ಕೃಷ್ಣೆಯ ತೀರಕ್ಕೆ ಹೋಗಿ ಪ್ರಾತರ್ವಿಧಿ ನಿತ್ಯಕರ್ಮ, ಸಂಧ್ಯಾವಂದನೆ ಮುಗಿಸಿ, ದತ್ತಾರಾವ್ ಮತ್ತು ದಾಮೋದರ ಬೋವಾ ಇವರ ಬಳಿಬಂದು, ಗೋವುಗಳ ಮೈತೊಳೆಸುವುದು,

ಮೇವು ಹಾಕಿ ನೀರು ಕೊಡುವುದು, ಅಗತ್ಯ ಚಿಕಿತ್ಸೆ, ಪರಿಪಾಲನೆ ಇತ್ಯಾದಿ ಶಿಕ್ಷಣವನ್ನು ಅತ್ಯಂತ ನಿಷ್ಠೆಯಿಂದ, ಆಸಕ್ತಿಯಿಂದ ಕಲಿತುಕೊಂಡನು. ಪಶು–ಪಕ್ಷಿ ಮೊದಲಾದ ಮೂಕಪ್ರಾಣಿಗಳೆಂದರೆ ಆತನಿಗೆ ಬಹಳ ಮಮಕಾರ. ಹೀಗೆ ಗೋವುಗಳ ಸೇವೆ, ಶುಶ್ರೂಷೆ ಮಾಡುವ ಸದವಕಾಶ ಒದಗಿ ಬಂದುದಕ್ಕಾಗಿ ಅವನಿಗೆ ಬಹಳ ಸಂತೋಷವಾಯಿತು. ದಿನಾಲೂ ಸಂಧ್ಯಾವಂದನೆ ಸಮಯದಲ್ಲಿ ಉಸುರುವ 'ಶಂ ನೋ ಅಸ್ತು ದ್ವಿಪದೇ ಶಂ ಚತುಷ್ಪದೇ' (ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಎಲ್ಲ ಜೀವಿಗಳಿಗೆ ಮಂಗಳವಾಗಲಿ!) ಎಂಬ ವಿಶಾಲ ಅರ್ಥದಲ್ಲಿರುವ ಆರ್ಷವಾಣಿಯು ಆತನಿಗೆ ಪಶುಪಾಲನೆಯ ಶಿಕ್ಷಣವನ್ನು ಕಲಿಯಬೇಕು ಎನ್ನುವದಕ್ಕೆ ಪ್ರೇರಣೆಯಾಗಿತ್ತು.

ರಾಮದಾಸಸ್ವಾಮಿಯವರು ವಾಯಿಯಿಂದ ಉಜ್ಜಯಿನಿಗೆ ಹೋಗಿದ್ದರು. ಆದ್ದರಿಂದ ಗಣೇಶನು ಅಲ್ಲಿಗೆ ಹೋಗಲು ನಿಶ್ಚಯಿಸಿ, ವಾಯಿಯಿಂದ ಕಾಲ್ನಡಿಗೆಯಲ್ಲಿ ಹೊರಟು, ಇಪ್ಪತ್ತು ಮೈಲಿ ದೂರದಲ್ಲಿರುವ ಪುಣೆಯ ರೈಲು ನಿಲ್ದಾಣಕ್ಕೆ ಬಂದ. ಆದರೆ ಅಲ್ಲಿಂದ ಮುಂದಕ್ಕೆ ರೈಲಿನಲ್ಲಿ ಹೋಗಲು ಆತನಲ್ಲಿ ಹಣವಿರಲಿಲ್ಲ. ಹೀಗಿರಲು ಮುಂದಕ್ಕೆ ಹೋಗುವುದು ಹೇಗೆಂದು ಚಿಂತಿಸುತ್ತ ರೈಲು ನಿಲ್ದಾಣದ ಆವರಣದಲ್ಲಿ ಮೂರು ದಿನಗಳನ್ನು ಕಳೆದ. ನಾಲ್ಕನೆಯ ದಿನ ರಾತ್ರಿ 9 ಗಂಟೆಯ ರೈಲಿನಲ್ಲಿ ದತ್ತಮಹರಾಜರೆಂಬ ಒಬ್ಬ ಸಾಧುಪುರುಷರು ಪುಣೆಯ ನಿಲ್ದಾಣದಲ್ಲಿ ಇಳಿದಾಗ ಸ್ವಲ್ಪ ದೂರದಲ್ಲಿ ತೇಜಸ್ವಿ ಹುಡುಗನೊಬ್ಬ ಖಿನ್ನನಾಗಿ ಏನನ್ನೋ ಯೋಚಿಸುತ್ತ ಕುಳಿತಿರುವುದನ್ನು ಕಂಡು, ಆತನ ಬಗೆಗೆ ಏಕೋ ಅನುಕಂಪವೆನಿಸಿ, ಹತ್ತಿರಕ್ಕೆ ಹೋಗಿ "ನೀನು ಯಾರು? ಇಲ್ಲೇಕೆ ಕುಳಿತಿರುವೆ?" ಎಂದು ವಿಚಾರಿಸಿದರು. ಅದಕ್ಕೆ ಗಣೇಶನು "ನಾನು ಗೋಕರ್ಣದವನು; ನನ್ನ ಗುರುಗಳಾದ ಸಂತರಾಮದಾಸಸ್ವಾಮಿಯವರನ್ನು ನೋಡಲು ಉಜ್ಜಯಿನಿಗೆ ಹೋಗಬೇಕು" ಎಂದು ನುಡಿದನು. ಇದನ್ನು ಕೇಳಿದ ಅವರು ತಮ್ಮ ಜತೆ ಅವನಿಗೂ ರೈಲಿನ ಟಿಕೆಟ್ ಮಾಡಿಸಿ, ಮುಂಬಯಿಗೆ ಕರೆದೊಯ್ದರು. ಅಲ್ಲಿ ಅವರು ವಾಸವಾಗಿರುವ ಗಿರಗಾಂವದ ಲಕ್ಷ್ಮಿನಾರಾಯಣ ಮಂದಿರದ ಚಂದ್ರಶಾಲೆಯಲ್ಲಿ ಎಂಟು ದಿನಗಳವರೆಗೆ ಅವನನ್ನು ಉಳಿಸಿಕೊಂಡರು. ಆ ವೇಳೆಗೆ ಆತ ಉಟ್ಟಿರುವ ಪಂಚೆ ಹರಿದಿರುವುದನ್ನು ಗಮನಿಸಿ, ಉಡುವದಕ್ಕೆ ಮತ್ತು ಹೊದೆಯುವದಕ್ಕೆ ಒಂದು ಜತೆ ಹೊಸಪಂಚೆಯನ್ನು ಕೊಟ್ಟು, ಇನ್ನೇನಾದರೂ ಬೇಕೆ? ಎಂದು ಕೇಳಲು ಗಣೇಶನು 'ಋಗ್ವೇದ ಸಂಹಿತಾ' ಮತ್ತು 'ದಾಸಬೋಧ' ಎಂಬ ಎರಡು ಪುಸ್ತಕಗಳು ಬೇಕೆಂದು ತಿಳಿಸಿದ. ದತ್ತ ಮಹರಾಜರು ಅವನು ಏನು ಕೇಳಿದರೂ ಕೊಡಲು ಸಿದ್ಧರಿದ್ದರು. ಆದರೆ ಗಣೇಶನು ಹಣವನ್ನಾಗಲಿ ಅಥವಾ ಬೇರೇನನ್ನಾಗಲಿ ಕೇಳಲಿಲ್ಲ. ಆತನ ದಿನಚರಿಯನ್ನು ಅವಲೋಕಿಸಿದ ಅವರು ಈ ಎಳೆ ವಯಸ್ಸಿನಲ್ಲಿ ಅವನು ಸಂತರಿಗೆ ಯೋಗ್ಯವೆನಿಸುವ ಯಮ ನಿಯಮಗಳ ಅನುಸರಿಸುತ್ತ ಧ್ಯಾನ, ಸಂಧ್ಯಾವಂದನೆ, ಅನುಷ್ಠಾನಗಳಲ್ಲಿ ಅನುರಕ್ತನಾಗಿರುವುದನ್ನು ಕಂಡು ಬೆರಗಾದರು. ಮರುದಿನ ಆತನ ಬೇಡಿಕೆಯಂತೆ 'ಋಗ್ವೇದ ಸಂಹಿತಾ' ಮತ್ತು 'ದಾಸಬೋಧ' ಪುಸ್ತಕಗಳನ್ನು ಕೊಡಿಸಿ, ನಾಗಪುರದ ರೈಲ್ವೆ ಸ್ಟೇಷನ್ ಮಾಸ್ತರರಲ್ಲಿಗೆ ಅವನನ್ನು ಕರೆದೊಯ್ದು, "ಈ ಹುಡುಗನನ್ನು ಉಜ್ಜಯಿನಿಗೆ ಮುಟ್ಟಿಸಬೇಕು" ಎಂದು ವಿನಂತಿಸಿ ಗಣೇಶನನ್ನು ಅವರಿಗೆ ಒಪ್ಪಿಸಿದರು.

ನಾಗಪುರದ ರೈಲ್ವೆ ಸ್ಟೇಷನ್ ಮಾಸ್ತರರು ತಮ್ಮ ಸ್ವಂತ ಜವಾಬ್ದಾರಿಯಿಂದ ಆತನಿಗೆ ನಾಸಿಕ, ತ್ರ್ಯಂಬಕೇಶ್ವರ ಕ್ಷೇತ್ರಗಳನ್ನು ತೋರಿಸಿ, ಅಲ್ಲಿಂದ ಮುಂದೆ ಇಟಾರ್ಸಿ ಗಾಡಿಯಿಂದ ಅವನನ್ನು

ಕರೆದೊಯ್ಯುತ್ತಿರುವಾಗ ಮನ್ಮಾಡ ರೈಲು ನಿಲ್ದಾಣದಲ್ಲಿ ಆತ ಬಾಯಾರಿಕೆಯೆಂದು ರೈಲಿನಿಂದ ಇಳಿದು, ನೀರು ಕುಡಿದು ಮತ್ತೆ ರೈಲು ಏರಲೆಂದು ಹೋಗುವಷ್ಟರಲ್ಲಿ ಅದು ಹೊರಟು ಹೋಯಿತು. ಆಗ ನಾಗಪುರದ ರೈಲ್ವೆ ಸ್ಟೇಷನ್ ಮಾಸ್ತರರು ಆತನ ಸಾಮಾನುಗಳನ್ನು ಮನ್ಮಾಡ್ ಸ್ಟೇಷನ್ ಮಾಸ್ತರರ ಹತ್ತಿರ ಕೊಟ್ಟು "ಗಣೇಶ ಎಂಬ ಹೆಸರಿನ ಗೋಕರ್ಣದ ಹುಡುಗ ಬಂದು ಕೇಳಿದರೆ ಇದನ್ನು ಅವನಿಗೆ ಕೊಡಬೇಕು" ಎಂದು ತಿಳಿಸಿ ನಾಗಪುರಕ್ಕೆ ಮರಳಿದರು. ಆದರೆ ಗಣೇಶನಿಗೆ ಅದು ಹೇಗೆ ತಿಳಿಯಬೇಕು? ಆತ ಸ್ವಲ್ಪ ಹೊತ್ತು ಏನು ಮಾಡುವುದು ಅಂತ ಯೋಚಿಸಿದ. ಆಗ ಅವನಿಗೆ ಈ ಹಿಂದೆ ಗೋಕರ್ಣಕ್ಕೆ ಬಂದು ಕೆಲವು ಕಾಲ ಸಮುದ್ರತೀರ ಸಮೀಪದ ಜೋಗಳೇಕರರ ಮನೆಯಲ್ಲಿ ವಾಸವಾಗಿದ್ದ ಗೋದಾವರಿಬಾಯಿ ಎಂಬವರ ಪರಿಚಯವಾಗಿದ್ದು, ಅವರು ಬುಸವಾಳದವರು ಅಂತ ನೆನಪಾಯಿತು. ಕೂಡಲೇ ಅವಳನ್ನು ವಿಚಾರಿಸುತ್ತ ಹೇಗೋ ಅವಳ ಮನೆ ತಲುಪಿ ಅನುಮಾನಿಸುತ್ತಾ "ಗೋದಾವರಿ ಬಾಯಿ ಇದ್ದಾರೆಯೇ?" ಎಂದು ಆತ ಕೇಳಿದಾಗ ಅಲ್ಲಿಯೇ ಇದ್ದ ಅವರು ಹೊರಬಂದು ನೋಡಿದಾಗ ಅಲ್ಲಿ ಗಣೇಶ ನಿಂತಿದ್ದ. ಅರೆ! ಗಣೇಶ! ಗೋದಾವರಿ ಬಾಯಿಯವರ ಬಾಯಿಂದ ಉದ್ಗಾರ ಹೊರಟಿತ್ತು. ಅವರಿಗೆ ಅಚ್ಚರಿಯೂ, ಆನಂದವೂ ಒಮ್ಮೆಲೆ ಆಗಿತ್ತು. ಅವರು ಅವನನ್ನು ಆದರದಿಂದ ಒಳಗೆ ಕರೆದು ಕ್ಷೇಮ ಸಮಾಚಾರ ವಿಚಾರಿಸಿದರು. ಆಗ ಗಣೇಶನು ರೈಲಿನಲ್ಲಿ ನಡೆದ ಘಟನೆಯನ್ನು ವಿವರಿಸಿದ. ಅಂದು ಅವರು ಆತನನ್ನು ತಮ್ಮ ಮನೆಯಲ್ಲಿಯೇ ಉಳಿಸಿಕೊಂಡರು.

ಗೋಕರ್ಣದಲ್ಲಿ ಗಣೇಶನು ದಿನಾಲೂ ಪಾಠಶಾಲೆ ತಲುಪಲು ಗೋದಾವರಿ ಬಾಯಿಯವರು ವಾಸವಾಗಿರುವ ಮನೆ ಮುಂದೆಯೇ ಹಾದುಹೋಗಬೇಕಾಗಿತ್ತು. ಅವರು ಧಾರ್ಮಿಕ ಪ್ರವೃತ್ತಿಯವರೂ, ಸಾತ್ವಿಕರೂ, ವಾತ್ಸಲ್ಯಮಯಿಗಳೂ ಆಗಿದ್ದು, ಸ್ನೇಹಮಯಿಗಳಾದ ಅವರು ಬುಸವಾಳದ ಗೋದಾವರಿ ಬಾಯಿ ಎಂದೇ ಗೋಕರ್ಣದ ಜನರಿಗೆ ಪರಿಚಿತರಾಗಿದ್ದರು. ಹೀಗಿರುವಾಗ ಅವರ ದೇವರ ಪೂಜೆಗೆ ಬೇಕಾದ ಹೂಗಳು, ತುಳಸಿ, ಗರಿಕೆ ಮುಂತಾದ ಪೂಜಾಪರಿಕರಗಳ ಒದಗಿಸಿಕೊಡುವುದು ಹಾಗೂ ಸಾಧ್ಯವಾದ ಸಣ್ಣ ಪುಟ್ಟ ಸಹಾಯ ಮಾಡುವುದು ಗಣೇಶನ ಪರಿಪಾಟವಾಗಿತ್ತು. ಅಂತಲೇ ಈಗ ಆತ ಅವಳನ್ನು ಅರಸಿ ಬಂದಾಗ ಒಂದು ದಿನ ಉಳಿಸಿಕೊಂಡು ಮರುದಿನ ಅವನನ್ನು ಕರೆದುಕೊಂಡು ಅಲ್ಲಿಯ ಸ್ಟೇಷನ್ ಮಾಸ್ತರರ ಹತ್ತಿರ ಹೋಗಿ, ನಡೆದ ವೃತ್ತಾಂತವನ್ನೆಲ್ಲ ತಿಳಿಸಿದರು. ಅವರು ತಾರಿನಿಂದ ಮನ್ಮಾಡ ರೈಲ್ವೆ ಸ್ಟೇಷನ್ ಮಾಸ್ತರರನ್ನು ಸಂಪರ್ಕಿಸಿದಾಗ, ಅವರು ಆತನ ಸಾಮಾನುಗಳೆಲ್ಲ ತನ್ನಲ್ಲಿ ಇರುವುದಾಗಿಯೂ ಹಾಗೂ ಅವನನ್ನು ಅಲ್ಲಿಗೆ ಕಳಿಸುವಂತೆಯೂ ತಿಳಿಸಿದರು. ಆಗ ಗೋದಾವರಿ ಬಾಯಿಯವರು ಕೂಡಲೇ ಗಣೇಶನನ್ನು ಮನ್ಮಾಡ ರೈಲ್ವೆ ಸ್ಟೇಷನ್‌ಗೆ ಕಳಿಸಿದರು. ಆತ ಅಲ್ಲಿಗೆ ತಲುಪಿದಾಗ ಸ್ಟೇಷನ್ ಮಾಸ್ತರರು ಆತನ ಎಲ್ಲ ಸಾಮಾನುಗಳು ಮತ್ತು ನಾಗಪುರದ ಸ್ಟೇಷನ್ ಮಾಸ್ತರರು ಹತ್ತು ರೂಪಾಯಿಗಳನ್ನು ಕೊಟ್ಟಿರುವುದಾಗಿ ತಿಳಿಸಿ, ಅದನ್ನೂ ಅವನಿಗೆ ನೀಡಿದರು. ಮನ್ಮಾಡ್ ರೈಲ್ವೆ ನಿಲ್ದಾಣದಿಂದ ತನ್ನ ಸಾಮಾನುಗಳನ್ನು ಪಡೆದ ಗಣೇಶನು ಪುನಃ ಬುಸವಾಳಕ್ಕೆ ಬಂದು ಅಲ್ಲಿಯ ಸ್ಟೇಷನ್ ಮಾಸ್ತರರಿಗೆ ಧನ್ಯವಾದ ತಿಳಿಸಿ, ಗೋದಾವರಿ ಬಾಯಿಯ ಮನೆಗೆ ಬಂದು ಅವಳಿಗೂ ತನ್ನ ಕೃತಜ್ಞತೆ ಸಲ್ಲಿಸಿದ. ಇದರಿಂದ ಅವಳಿಗೆ ಬಹಳ ಸಂತೋಷವಾಯಿತು. ಅವಳು ಆ ದಿನ ಆತನನ್ನು ಮುಂದಕ್ಕೆ ಹೋಗಗೊಡದೆ ಒತ್ತಾಯದಿಂದ ತನ್ನ ಮನೆಯಲ್ಲಿಯೇ ಉಳಿಸಿಕೊಂಡು, ಆದರದಿಂದ

ಸಿಹಿಯೂಟ ತಯಾರಿಸಿ ಬಡಿಸಿದಳು. ಮರುದಿನ ಬೆಳಿಗ್ಗೆ ಗಣೇಶನು ಗೋದಾವರಿ ಬಾಯಿಗೆ ನಮಸ್ಕರಿಸಿ ಹೊರಟಾಗ ಅವಳು ಹೃತ್ಪೂರ್ವಕ ವಾತ್ಸಲ್ಯದಿಂದ ಶುಭ ಹಾರೈಸಿದಳು.

ಉಜ್ಜಯಿನಿಗೆ ಪ್ರಯಾಣ

ಬುಸವಾಳದಿಂದ ಹೊರಟ ಗಣೇಶನು ಖಾಂಡ್ವಾ ಮತ್ತು ಖೇಡಿಘಾಟ್ ಮಾರ್ಗವಾಗಿ ಉಜ್ಜಯಿನಿ ತಲುಪಿದ. ಅಲ್ಲಿ ಬ್ರಾಹ್ಮಣ ಸಮುದಾಯದ ಜನವಸತಿಯ ಮಧ್ಯದಲ್ಲಿರುವ 'ಪಾನದರೀಬಾ' ಎಂಬ ಮೊಹಲ್ಲಾದ ಗಣಪತಿ ದೇವಸ್ಥಾನದ ಚಂದ್ರಶಾಲೆಯಲ್ಲಿ ವಾಸ್ತವ್ಯಮಾಡಿ, ರಾಮದಾಸಸ್ವಾಮಿಯವರ ಬಗೆಗೆ ವಿಚಾರಿಸಿದಾಗ, ಅಲ್ಲಿಂದ ಸ್ವಲ್ಪ ದೂರ ಗೋವಿಂದರಾವ್ ಜೋಶಿಯವರ ಮನೆಯಲ್ಲಿ ಅವರು ಇರುವುದಾಗಿ ತಿಳಿಯಿತು. ಅಲ್ಲಿಗೆ ಹೋಗಿ ವಿಚಾರಿಸಿದಾಗ ರಾಮದಾಸಸ್ವಾಮಿಯವರು ಅಲ್ಲಿ ಇರಲಿಲ್ಲ. ಆದರೆ ವಯೋವೃದ್ಧರಾದ ಅವರ ಅತ್ತೆಯವರು ಮತ್ತು ಮಗಳು ಸುಂದರತಾಯಿ ಇದ್ದರು. ಅವರು ಗಣೇಶನನ್ನು ಆದರದಿಂದ ಸ್ವಾಗತಿಸಿದರು. ರಾಮದಾಸಸ್ವಾಮಿಯವರು ಗೋಕರ್ಣದಲ್ಲಿ ಇರುವಾಗ ಇವರಿಬ್ಬರೂ ಅಲ್ಲಿಗೆ ಬಂದು ಸ್ವಲ್ಪಕಾಲ ಉಳಿದಿದ್ದರು. ಆ ಸಮಯದಲ್ಲಿ ಗಣೇಶನಿಗೆ ಇವರ ಪರಿಚಯವಾಗಿತ್ತು. ರಾಮದಾಸಸ್ವಾಮಿಯವರು ಅಲ್ಲಿ ಕಾಣದಿರಲು "ಗುರುವರ್ಯರು ಯಾವ ಕಡೆಗೆ ಇರುವರು" ಎಂದು ಗಣೇಶನು ವಿಚಾರಿಸಿದನು. ಅದಕ್ಕೆ ರಾಮದಾಸಸ್ವಾಮಿಯವರ ಅತ್ತೆಯವರು "ಅವರು ತಮ್ಮ ಮಗಳ ಮದುವೆ ನಿಶ್ಚಯಿಸುವುದಕ್ಕಾಗಿ ನಾದಿನಿ ಮುಸಾತಾಯಿಯವರೊಂದಿಗೆ ಮಹತ್ಪುರಕ್ಕೆ ಹೋಗಿದ್ದಾರೆ. ಇನ್ನೇನು ಎರಡು ಅಥವಾ ಮೂರು ದಿನಗಳಲ್ಲಿ ಬರಬಹುದು" ಎಂದರು. ಅದೇ ಮೂರು ದಿನಗಳಿಗೆ ಸರಿಯಾಗಿ ಗುರು ರಾಮದಾಸಸ್ವಾಮಿಯವರು ನಾದಿನಿಯೊಂದಿಗೆ ಮಗಳ ಮದುವೆಯ ನಿಶ್ಚಿತಾರ್ಥ ಮುಗಿಸಿ ಬಂದಾಗ, ಅಲ್ಲಿ ಗಣೇಶನನ್ನು ಕಂಡು ಬಹಳ ಸಂತೋಷಪಟ್ಟು ತಮ್ಮ ಅತ್ತೆ ಹಾಗೂ ನಾದಿನಿಯವರೊಂದಿಗೆ "ಗಣೇಶ ಬಂದ ಮೇಲೆ ಮದುವೆಯ ಸಿದ್ಧತೆಯಲ್ಲಿ ಬಹಳಷ್ಟು ಕೆಲಸದ ಭಾರ ನನಗೆ ಕಡಿಮೆಯಾದಂತೆಯೇ ಸರಿ. ಅವನು ಜವಾಬ್ದಾರಿಯಿಂದ ಶ್ರದ್ಧೆಯಿಂದ ಕೆಲಸ ನಿರ್ವಹಿಸುತ್ತಾನೆ ಎಂದರು.

ಮದುವೆಗೆ ಎರಡು ದಿನಗಳ ಮೊದಲು ಗುರುವರ್ಯ ರಾಮದಾಸಸ್ವಾಮಿಗಳೊಂದಿಗೆ ಎಲ್ಲರೂ ಮಹತ್ಪುರಕ್ಕೆ ಹೋದರು. ಅಲ್ಲಿ ತಮ್ಮ ವಸತಿಗಾಗಿ ಏರ್ಪಡಿಸಿದ ಬಿಡದಿಯಲ್ಲಿ ಉಳಿದು, ನಿಗದಿ ಪಡಿಸಿದ ಸಮಯಕ್ಕೆ ಸರಿಯಾಗಿ ಮದುವೆಯನ್ನು ಸಾಂಗವಾಗಿ ನೆರವೇರಿಸಲಾಯಿತು. ರಾಮದಾಸಸ್ವಾಮಿಯವರ ಅತ್ತೆಯವರು ವಧೂ-ವರರಿಗೆ ಅಪಾರ ಬೆಲೆಯ ಚಿನ್ನದ ಆಭರಣಗಳು, ಬೆಳ್ಳಿಯ ಪಾತ್ರೆಗಳು, ಚಿನ್ನದ ಝರಿ ರೇಷ್ಮೆ ಸೀರೆಗಳು ಇತ್ಯಾದಿ ಉಡುಗೊರೆ ನೀಡಿದರು. ಮದುವೆಯು ವೈಭವದಿಂದ ಮಂಗಳಕರವಾಗಿ ಮುಕ್ತಾಯವಾಯಿತು.

ಉಜ್ಜಯಿನಿಯ ಮಹಾಕಾಲ ಮಂದಿರವು ಅತ್ಯಂತ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ ಉಜ್ಜಯಿನಿಯ ಮಹಾಕಾಲ ದೇವರ ಪ್ರಸ್ತಾಪವಿರುವುದನ್ನು ಕಾಣಬಹುದು. ವ್ಯಾಸ, ಕಾಳಿದಾಸ, ಭೋಜರಾಜ ಮತ್ತು ಬಾಣಭಟ್ಟ ಮುಂತಾದವರ ಸಾಹಿತ್ಯಗಳಲ್ಲಿ ಇದರ ಉಲ್ಲೇಖವಿದೆ. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಉಜ್ಜಯನಿಯ ಮಹಾಕಾಲೇಶ್ವರ ಲಿಂಗವೂ ಒಂದಾಗಿದೆ.

ಚಾತುರ್ಮಾಸ್ಯ ವ್ರತಾಚರಣೆ

ಆಷಾಢ ಪೌರ್ಣಮಿ 'ಗುರುಪೌರ್ಣಮಿ' ಎಂದು ಪ್ರಸಿದ್ಧವಾಗಿದೆ. ಇದು ಸಂತರಿಗೆಲ್ಲ ಪವಿತ್ರ ದಿನ. ಅಂದಿನಿಂದ ಚಾತುರ್ಮಾಸ್ಯ ವ್ರತವು ಆರಂಭವಾಗುವುದು. ಚಾತುರ್ಮಾಸದ ಈ ಅವಧಿಯಲ್ಲಿ ಗುರುವರ್ಯರು ನಸುಕಿನಲ್ಲಿಯೇ ಕ್ಷಿಪ್ರಾನದಿಗೆ ಹೋಗಿ ಸ್ನಾನ ಮಾಡಿ ತಾಳ ಹಿಡಿದು ಭಜನೆ ಮಾಡುತ್ತ ಮಹಾಕಾಲ ಮಂದಿರಕ್ಕೆ ಹೋಗಿ ಮಹಾಕಾಲೇಶ್ವರ ದೇವರ ದರ್ಶನ ಮಾಡಿ, ತಮ್ಮ ಸ್ಥಾನಕ್ಕೆ ಹಿಂತಿರುಗುತ್ತಿದ್ದರು. ಆ ವೇಳೆಗೆ ಗಣೇಶನೂ ಭಜನೆ ಮಾಡುತ್ತ, ಅನುಸರಿಸುತ್ತಿದ್ದನು. ಪುನಃ ಕ್ಷಿಪ್ರಾ ನದಿಯಲ್ಲಿ ಸಾಯಂಕಾಲ ಸ್ನಾನ ಮಾಡಿ, ಮಹಾಕಾಲದೇವರ ದರ್ಶನ ಮಾಡಿ, ಹೊರವಲಯದ ಸಭಾಮಂಟಪದಲ್ಲಿರುವ ರಾಮದೇವರ ಮುಂದೆ ಸುಮಾರು ಮೂರು ತಾಸುಗಳ ಪರ್ಯಂತರ ಅವ್ಯಾಹತವಾಗಿ ನೃತ್ಯ ಸಹಿತ ಭಜನೆ ಮಾಡುತ್ತಿದ್ದರು. ಆ ಸಮಯಕ್ಕೆ ಗುರುಪುತ್ರಿ ಸುಂದರತಾಯಿ ಮತ್ತು ಅವಳ ಚಿಕ್ಕಮ್ಮ ಮುಸಾತಾಯಿಯವರೂ ಭಜನೆಗೆ ಬರುತ್ತಿದ್ದರು. ಚಾತುರ್ಮಾಸದ ಅವಧಿಯಲ್ಲಿ ಗಣೇಶನು ಮಹಾರಾಷ್ಟ್ರ ಪದ್ಧತಿಯ ಅಡಿಗೆ ವಿಧಾನವನ್ನು ಕಲಿತುಕೊಂಡನು. ಗೋಧಿಯ ಪುಲಕಾ, ರೋಟಿ, ಪೂರಿ ಮತ್ತು ಫೇಣಿ, ಘೀವರ, ಚಿರೋಟಿ, ಶಂಕರ ಪಾಳೆ, ಖರ್ಜಿಕಾಯಿ ಮುಂತಾದವು ಪ್ರಧಾನವಾಗಿದ್ದವು. ಮಧ್ಯಾಹ್ನ ಅಡಿಗೆ ಕೆಲಸ ಮುಗಿಯುತ್ತಲೇ ಗಣೇಶನು ಮಧುಕರಿ ಮಾಡಿ, ಅದರಿಂದಲೇ ಊಟ ಮಾಡುತ್ತಿದ್ದನು. ಹೀಗೆ ಚಾತುರ್ಮಾಸ ವ್ರತವು ಪೂರ್ಣಗೊಂಡಿತು.

ಚಾತುರ್ಮಾಸ್ಯ ಮುಗಿದು, ನವರಾತ್ರಿಯ ಕಾಲ ಸನ್ನಿಹಿತವಾಯಿತು. ಉಜ್ಜಯಿನಿಯಲ್ಲಿ ವಿಕ್ರಮಾದಿತ್ಯನಿಂದ ಪೂಜಿಸಿ, ಆರಾಧಿಸಲ್ಪಟ್ಟಿರುವದೆಂದು ಐತಿಹ್ಯವಿರುವ ದೇವಿವಿಗ್ರಹವನ್ನು ನೋಡುವ ಭಾಗ್ಯ ಗಣೇಶನಿಗೆ ಒದಗಿತು. ಆಷಾಢದಿಂದ ಕಾರ್ತಿಕ ಪೌರ್ಣಮಿವರೆಗೆ ಸುಮಾರು ನಾಲ್ಕು ತಿಂಗಳ ಕಾಲ ಉಜ್ಜಯಿನಿಯಲ್ಲಿ ವಾಸ ಮಾಡಿದ ಆತನಿಗೆ ಈ ಸಮಯದಲ್ಲಿ ಖಗೋಳಶಾಸ್ತ್ರಕ್ಕೆ (ಜ್ಯೋತಿಃಶಾಸ್ತ್ರ) ಸಂಬಂಧಪಟ್ಟ ಸಂವತ್ಸರ ಚಕ್ರ, ರಾಶಿಚಕ್ರ, ನಕ್ಷತ್ರಚಕ್ರ, ನವಗ್ರಹ ಚಕ್ರ ಇವುಗಳಿಂದ ಕೂಡಿದ ಕಾಲಚಕ್ರದ ಯಂತ್ರಾಲಯವೋ ಎನಿಸುವಂತಹ ವೇಧಶಾಲೆಯನ್ನು ಮೂರುಬಾರಿ ನೋಡುವ ಅವಕಾಶ ದೊರೆಯಿತು.

ಕಾರ್ತಿಕ ಪೌರ್ಣಮಿಯ ಅನಂತರ ಗಣೇಶನು ಗುರುವರ್ಯ ರಾಮದಾಸರು ಹಾಗೂ ಅವರ ವಯೋವೃದ್ಧ ಅತ್ತೆಯವರು ಮುಂತಾದ ಪರಿವಾರದೊಂದಿಗೆ ಝಾನ್ಸಿಗೆ ಹೊರಟ. ಅಲ್ಲಿ ಅವರು ಝಾನ್ಸಿಮಹರಾಣಿಯ ಅರಮನೆಯನ್ನು ನೋಡಿದರು. ಆಗ ಗುರುವರ್ಯರ ಅತ್ತೆಯವರು ಝಾನ್ಸಿಮಹರಾಣಿಯು ತನ್ನ ಅಜ್ಜಿಯಾಗಿದ್ದಳು ಎಂದು ಹೇಳಿದರು. ಹಾಗೆಯೇ ಭಾವುಕರಾದ ಅವರು ರಾಜಮನೆತನ ಮತ್ತು ಬ್ರಿಟಿಷರ ನಡುವೆ ನಡೆದ ಕೆಲವು ದುರಂತ ಕಥೆಗಳನ್ನು ಹೇಳುತ್ತಿರುವಂತೆ ಕಂಠ ತುಂಬಿ ಬಂದು ಅವರ ಕಣ್ಣುಗಳು ಒದ್ದೆಯಾದವು.

ಝಾನ್ಸಿಯಿಂದ ಮುಂದೆ ಅವರು ಕಾನಪುರಕ್ಕೆ ಹೋಗಿ ಅಲ್ಲಿಂದ ಛೋಟೆಲೈನ್ ಗಾಡಿ ಮೂಲಕ ಬ್ರಹ್ಮಾವರ್ತ ತಲುಪಿದರು. ಶ್ರೀ ವಾಸುದೇವಾನಂದ ಸರಸ್ವತಿ ಟೇಂಬೆಸ್ವಾಮಿಯವರು ಸನ್ಯಾಸವನ್ನು ಪರಿಗ್ರಹಿಸಿದ ನಂತರ ಮೂರು ವರ್ಷಗಳ ಕಾಲ ಇಲ್ಲಿ ತಪಸ್ಸನ್ನಾಚರಿಸಿದ್ದರು. ಆ ಸಮಯಕ್ಕೆ ಅವರು ಉಳಿದ ರಾಮಮಂದಿರದಲ್ಲಿಯೇ ಇವರು ಮೂರು ತಿಂಗಳು ವಾಸವಾಗಿ ಧ್ಯಾನ, ಜಪ, ಅನುಷ್ಠಾನಗೈದು

ಆಮೇಲೆ ಪ್ರಯಾಗಕ್ಕೆ ಹೋದರು. ಅಲ್ಲಿ ಮಕರಮಾಸ ಒಂದು ತಿಂಗಳ ಕಾಲ ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿ ತಲ್ಪವಾಸ, ಧ್ಯಾನ, ಅನುಷ್ಠಾನ ಭಜನೆಗಳನ್ನು ಮಾಡಿದರು.

ಗುರು-ಪರಮ ಗುರುಗಳ ಸಹಯೋಗ

ಪ್ರಯಾಗದಿಂದ ಗುರುವರ್ಯರಾಮದಾಸಸ್ವಾಮಿಗಳು ತಮ್ಮ ಪರಿವಾರದೊಡನೆ ಕಾಶಿಗೆ ಹೋಗಿ ಅಲ್ಲಿ ಚೌಂಡೇಸ್ವಾಮಿಯವರ ಬಾಲಕರಾಮ ಮಂದಿರದಲ್ಲಿ ವಾಸ್ತವ್ಯ ಮಾಡಿರಲು ಅದೇ ಕೆಲವು ದಿನಗಳಲ್ಲಿಯೇ ಚೌಂಡೇಸ್ವಾಮಿಯವರು ಅಲ್ಲಿಗೆ ಬಂದರು. ಗುರು, ಪರಮಗುರು ಇವರ ದಿವ್ಯಸಾನ್ನಿಧ್ಯದಲ್ಲಿ ಧ್ಯಾನ, ಅನುಷ್ಠಾನ, ಭಜನ-ಭೋಜನಾದಿಗಳನ್ನು ಪ್ರಸಾದವಾಗಿ ಪಡೆಯುವ ಭಾಗ್ಯ ಗಣೇಶನಿಗೆ ಒದಗಿಬಂತು. ಚೌಂಡೇಸ್ವಾಮಿಗಳ ವ್ಯಕ್ತಿತ್ವ ಶಾಂತವೂ, ಸರಳವೂ ಆಗಿತ್ತು. ಪಶು-ಪಕ್ಷಿ, ಮೂಕಪ್ರಾಣಿಗಳ ಮೇಲೆ ಅವರಿಗೆ ಅಪಾರ ಪ್ರೀತಿ. ಅಂತಲೇ ಸಾತಾರೆಯಲ್ಲಿ ಅವರು ಗೋಶಾಲೆ ಮಾಡಿ, ಗೋವುಗಳ ಸಂಗೋಪನ ಮಾಡುತ್ತ, ವಿರಕ್ತವಾದ ತಾಪಸ ಜೀವನ ನಡೆಸುತ್ತಿದ್ದರು. ಚೌಂಡೇಸ್ವಾಮಿಗಳು ಬಾಲಕರಾಮ ಮಂದಿರಕ್ಕೆ ಬಂದು ಸುಖಾಸೀನರಾಗುತ್ತಿರುವಂತೆ ರಾಮದಾಸಸ್ವಾಮಿಗಳು ಅವರ ಪಾದಸ್ಪರ್ಶಿಸಿ, ವಂದಿಸಿದರು. ಗುರುವರ್ಯರನ್ನು ಅನುಸರಿಸಿ, ಗಣೇಶನೂ ಅವರಿಗೆ ಗೋತ್ರಾಭಿವಾದನಪೂರ್ವಕ ನಮಸ್ಕರಿಸಿದಾಗ ರಾಮದಾಸಸ್ವಾಮಿಗಳು ಆತನ ಪರಿಚಯ ಮಾಡಿಕೊಟ್ಟರು. ಆಗ ಚೌಂಡೇಸ್ವಾಮಿಗಳು ಪ್ರೀತಿಯಿಂದ ಆತನ ಮೈದಡವಿ ಶುಭ ಹಾರೈಸಿದರು. ಗಣೇಶನಿಗೆ ಬಹಳ ಸಂತೋಷವಾಯಿತು.

ಕಾಶಿಯ ಬಾಲಕರಾಮಮಂದಿರವು ಸಜ್ಜನಗಡದಲ್ಲಿ ಯಾವ ರೀತಿ ಇರುವದೋ ಅದೇ ರೀತಿ ಸೀತಾ-ರಾಮ-ಲಕ್ಷ್ಮಣ ವಿಗ್ರಹಗಳು, ರಾಮವಿಗ್ರಹದ ಎದುರಿಗೆ ಆಂಜನೇಯ ವಿಗ್ರಹವೂ, ಅದರ ಕೆಳಗಡೆ ಸಂತ ಶ್ರೀ ಸಮರ್ಥರಾಮದಾಸಸ್ವಾಮಿಯವರ ವಿಗ್ರಹವೂ ಮತ್ತು ಪಾದುಕೆಗಳೂ ಇರುವವು. ಇದನ್ನು ಗುರು ಶ್ರೀ ಚೌಂಡೇಸ್ವಾಮಿಗಳು ನಿರ್ಮಾಣ ಮಾಡಿಸಿದ್ದರು.

ಮಾಘ ಕೃಷ್ಣ ನವಮಿಯು 'ದಾಸನವಮಿ' ಎಂದು ಪ್ರಸಿದ್ಧವಾಗಿದೆ. ಮಹಾರಾಷ್ಟ್ರದಲ್ಲಿ ಈ ದಿನವನ್ನು ಸಂತ ಶ್ರೀ ಸಮರ್ಥರಾಮದಾಸ ಸ್ವಾಮಿಯವರು ಸಮಾಧಿಗೈದ ದಿನವೆಂದು ಆಚರಿಸಲಾಗುವುದು. ಗುರುವರ್ಯರು ಹಾಗೂ ಅವರ ಗುರು ಶ್ರೀ ಚೌಂಡೇಸ್ವಾಮಿಯವರು ಇವರ ಸಾನ್ನಿಧ್ಯದಲ್ಲಿ ಗಣೇಶನು ದಾಸನವಮಿಯನ್ನು ಭಕ್ತಿಯಿಂದ ಮತ್ತು ಸಂತೋಷ ಸಡಗರದಿಂದ ಆಚರಿಸಿದ. ಅನಂತರ ಶ್ರೀ ಚೌಂಡೇಸ್ವಾಮಿಯವರು ಸಾತಾರೆಗೆ ಹೋದರು. ಆಗ ಅದೇ ಕೆಲವು ದಿನಗಳಲ್ಲಿ ಮಹಾಶಿವರಾತ್ರಿಯು ಸನ್ನಿಹಿತವಾಗುತ್ತಿರಲು ಅದನ್ನು ಆಚರಿಸಲು ರಾಮದಾಸಸ್ವಾಮಿಯವರು ನೇಪಾಳಕ್ಕೆ ಹೋಗಲು ನಿರ್ಧರಿಸಿದರು. ಅಂತೆಯೇ ಕೂಡಲೇ ಅವರು ಛಪ್ರಾ, ಸೋನಪುರ, ಮುರ್ಝುಪ್ಪರಪುರ, ಸಹೋಲಿ ಮಾರ್ಗವಾಗಿ ನೇಪಾಳದ ಸರಹದ್ದಿನ ಬೀರಗಂಜನ್ನು ತಲುಪಿದರು. ಆದರೆ ಅವರಿಗೆ ನೇಪಾಳಕ್ಕೆ ಹೋಗಲು ರಹದಾರಿಯ ಅನುಜ್ಞಾಪತ್ರ (ಪಾಸ್‌ಪೋರ್ಟ್) ಸಿಗದ ಕಾರಣ ಆ ವಿಚಾರವನ್ನು ಕೈಬಿಡಲಾಯಿತು. ಹೀಗಿರುವುದರಿಂದ ಅವರು ಅಲ್ಲಿಂದ ಹಿಂದಿರುಗಿ ಜನಕಪುರ, ಸೀತಾಮಡಿ ಮತ್ತು ಅಯೋಧ್ಯಾ ಕ್ಷೇತ್ರಗಳನ್ನು ಸಂದರ್ಶಿಸಿ, ಪುನಃ ಪ್ರಯಾಗಕ್ಕೆ ಬಂದರು. ಅಲ್ಲಿ ದಾರಾಗಂಜಿನ ವೇಣುಮಾಧವ ದೇವಸ್ಥಾನದ ಸಮೀಪ ಶ್ರೀ ನಾರಾಯಣರಾವ್ ಪೋತ್ನೀಸ್ ಎಂಬ ಪ್ರಸಿದ್ಧ ಜಹಗೀರುದಾರರು ಕಟ್ಟಿಸಿದ ಧರ್ಮಶಾಲೆಯಲ್ಲಿ

ವಾಸ್ತವ್ಯ ಮಾಡಿ, ಚೈತ್ರ ಶುಕ್ಲ ಪ್ರತಿಪದೆಯಿಂದ ಶ್ರೀರಾಮ ಜನ್ಮೋತ್ಸವ ಆಚರಣೆಗಾಗಿ ಭಜನೆಯನ್ನು ಪ್ರಾರಂಭಿಸಿದರು. ರಾಮದಾಸಸ್ವಾಮಿಯರ ಆರಾಧನೆಯಲ್ಲಿ ಅವರದೇ ಆದಂತಹ ವೈಶಿಷ್ಟ್ಯವಿತ್ತು. ಹೂವು, ಹಾರ, ಕುಂಕುಮಾದಿ ಅಲಂಕಾರಗಳ ಆಡಂಬರಗಳಿಗೆ ಮಹತ್ವ ನೀಡದೇ ಸರಳ ಧ್ಯಾನ, ಅನುಷ್ಠಾನ, ಭಜನೆ, ನೃತ್ಯ ಇವುಗಳ ಸಹಜ ಆಚರಣೆಗೇ ಅವರು ಹೆಚ್ಚು ಪ್ರಾಧಾನ್ಯತೆ ನೀಡುತ್ತಿದ್ದರು. ಅವರಿಗೆ ಮಾನಸಪೂಜಾ ವಿಧಾನದಲ್ಲಿಯೇ ಹೆಚ್ಚಿನ ಒಲವಿತ್ತು. ಅವರು ಆರಾಧನೆಗೆ ಕುಳಿತ ಸ್ವಲ್ಪ ಹೊತ್ತಿನಲ್ಲಿಯೇ ಅಂತರ್ಮುಖಿಗಳಾಗಿ ಬಿಡುತ್ತಿದ್ದರು. ಇದು ಗಣೇಶನ ಮೇಲೆ ಗಾಢ ಪ್ರಭಾವ ಬೀರಿತ್ತು. ಆಗ ಆತನೂ ಅವರಿಂದ ಸ್ವಲ್ಪ ದೂರದಲ್ಲಿ ಕುಳಿತು ಧ್ಯಾನದಲ್ಲಿ ತತ್ಪರನಾಗುತ್ತಿದ್ದ. ಕೆಲವು ಸಲ ಗುರುವರ್ಯರು ಧ್ಯಾನ ಮುಗಿಸಿ ಎದ್ದುಬಂದರೂ, ಆತ ಇನ್ನೂ ಧ್ಯಾನದಲ್ಲಿಯೇ ಮೈಮರೆತು ಕುಳಿತಿರುತ್ತಿದ್ದ. ಆಗ ಅವರು ಆತನ ಏಕಾಂತಕ್ಕೆ ಭಂಗ ಬಾರದಂತೆ ಮೆಲ್ಲನೆ ನಿಃಶಬ್ದವಾಗಿ ಅಲ್ಲಿಂದ ನಿರ್ಗಮಿಸುತ್ತಿದ್ದರು. ಈ ಪರಿ ಶಿಷ್ಯನ ಸಾಧನೆಗೆ ಗುರುವಿನ ಪ್ರೋತ್ಸಾಹ ಇಂಬುಗೊಡುತ್ತಲಿತ್ತು. ಇದು ಆತನ ತಪೋಜೀವನಕ್ಕೆ ಮಾರ್ಗದರ್ಶಿಯಾಗಿ ಮೊದಲ ಪಾಠವಾಗಿ ಪರಿಣಮಿಸಿತು.

ಚೈತ್ರ ಶುಕ್ಲ ಪ್ರತಿಪದೆಯಿಂದ ಅಷ್ಟಮಿ ವರೆಗೆ ಧ್ಯಾನ, ಅನುಷ್ಠಾನ, ನೃತ್ಯ, ಭಜನೆ ಇತ್ಯಾದಿ ಆಚರಣೆ ಮಾಡಿ, ನವಮಿಯ ದಿನ ಶ್ರೀರಾಮ ಜನ್ಮೋತ್ಸವ ಮುಕ್ತಾಯಗೊಳಿಸಿ, ದಶಮಿಯಂದು ಪರಿವಾರ ಸಹಿತ ಎಲ್ಲರೂ ಉಜ್ಜಯಿನಿಗೆ ಬಂದರು. ಅಲ್ಲಿ ಎರಡು ದಿನ ಕಳೆದಿರಲು ರಾಮದಾಸಸ್ವಾಮಿಯವರು ಉಜ್ಜಯಿನಿಗೆ ಬಂದ ಸಮಾಚಾರ ತಿಳಿದು, ಖಡೌದೆಯಿಂದ ಅವರ ತಮ್ಮ ಯಶವಂತರಾವ್ ಅವರು ಹಾಗೂ ಊರಿನ ಕೆಲವು ಗಣ್ಯ ವ್ಯಕ್ತಿಗಳ ಜತೆಗೂಡಿ ಉಜ್ಜಯಿನಿಗೆ ಬಂದು ರಾಮದಾಸಸ್ವಾಮಿಯವರನ್ನು ಕಂಡು ಊರಿಗೆ ಬರುವಂತೆ ಪ್ರಾರ್ಥಿಸಿದರು. ಅದಕ್ಕೆ ರಾಮದಾಸಸ್ವಾಮಿಯವರು "ನೀವೆಲ್ಲ ಸೇರಿ ರಾಮನಾಮ ಸಪ್ತಾಹವನ್ನು ಆಚರಿಸುವುದಾದರೆ ನಾನು ಬಂದು ಅದರಲ್ಲಿ ಭಾಗವಹಿಸುತ್ತೇನೆ" ಎಂದು ಹೇಳಿದರು. ಇದಕ್ಕೆ ಅವರು ಸಂತೋಷದಿಂದ ಒಪ್ಪಿದಾಗ ಎಲ್ಲರೂ ಖಡೌದೆಗೆ ಹೋದರು. ಖಡೌದೆಯು ಶ್ರೀರಾಮದಾಸಸ್ವಾಮಿಯವರ ಜನ್ಮಭೂಮಿ. ಅಲ್ಲಿಯ ಜನರು ಗುರುವರ್ಯರ ಆದೇಶದಂತೆ ಊರ ಮಧ್ಯದಲ್ಲಿ ಶ್ರೀರಾಮದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿ, ರಾಮನಾಮ ಸಪ್ತಾಹಕ್ಕೆ ಏರ್ಪಾಡು ಮಾಡಿದರು.

ಖಡೌದೆಯಲ್ಲಿ ರಾಮನಾಮ ಸಪ್ತಾಹದ ಆಚರಣೆ

ಶ್ರೀರಾಮದಾಸಸ್ವಾಮಿಯವರು ಹಾಡುತ್ತಿದ್ದ ಭಜನೆಗಳೆಲ್ಲ ಗಣೇಶನಿಗೆ ಕಂಠಪಾಠವಾಗಿದ್ದವು. ಆತ ಅವರ ಹಾಡಿಗೆ ದನಿಗೂಡಿಸಿ ನರ್ತಿಸುತ್ತಿದ್ದ. ಗುರುವರ್ಯರು ನಿರಂತರ ಪ್ರವಾಸದಿಂದ ಎಡೆಬಿಡದ ಜಪ-ತಪ ಅನುಷ್ಠಾನಗಳಿಂದ ಬಳಲಿದ್ದು, ಅವರ ಆರೋಗ್ಯ ಅಷ್ಟೊಂದು ಸರಿಯಿರಲಿಲ್ಲ. ಅಂತಲೇ ಅವರ ತಮ್ಮ ಯಶವಂತರಾವ್ ಮತ್ತು ಊರಿನ ಕೆಲವು ಗಣ್ಯವ್ಯಕ್ತಿಗಳು ಮಧ್ಯ ಮಧ್ಯ ಸ್ವಲ್ಪ ಕಾಲ ವಿರಾಮ ಮಾಡುವಂತೆಯೂ ಆಗ ಗಣೇಶನು ನರ್ತನ ಮತ್ತು ಭಜನೆಯನ್ನು ಮುಂದುವರಿಸುವಂತೆಯೂ ರಾಮದಾಸಸ್ವಾಮಿಯವರಲ್ಲಿ ವಿನಂತಿಸಿ, ಅವರ ಸಮ್ಮತಿಯಿಂದ ಅವರಿಗೆ ಆಯಾಸವಾಗದಂತೆ ಕಾರ್ಯಕ್ರಮ ನಿರೂಪಿಸಿದರು. ಅದರಂತೆ ಗಣೇಶನು ಭಜನೆ ಪ್ರಾರಂಭ ಮಾಡಿ, ಪ್ರತಿ ಹಾಡಿನ ಕೊನೆಯಲ್ಲಿ ಗುರುವರ್ಯರ

ಸುತ್ತ ನರ್ತಿಸುತ್ತ, ಪ್ರದಕ್ಷಿಣ ಮಾಡಿ ಕೈಮುಗಿದು ಮತ್ತೆ ಬೇರೆ ಭಜನೆ ಪ್ರಾರಂಭಿಸುತ್ತಿದ್ದ. ಹೀಗೆ ತನ್ನದೇ ಆದ ರೀತಿಯಲ್ಲಿ ಮುಂದುವರಿಯುತ್ತ ಪಾಣಿನಿಯ "ಅ ಇ ಉಣ ಋ ಲೃ ಕ" ಸೂತ್ರದಿಂದ ಮೊದಲು ಮಾಡಿ ಹಾಡಿನ ಅಂತ್ಯದಲ್ಲಿ 'ಏತತ್ ಸಾಮಗಾಯನ್ನಾಸ್ತೇ, ಭದ್ರಂಕರ್ಣೇಭಿಃ ಶೃಣುಯಾಮದೇವಾ ಸಹನಾಭವತು' ಇತ್ಯಾದಿ ವೇದಮಂತ್ರಗಳನ್ನು ಸಮಯೋಚಿತವಾಗಿ ಬಳಸಿಕೊಳ್ಳುತ್ತ ತನ್ನ ಆರ್ಷೀ ವ್ಯಕ್ತಿತ್ವವನ್ನು ಪ್ರಕಟಗೊಳಿಸುತ್ತಿದ್ದ. ಗುರುವರ್ಯ ರಾಮದಾಸಸ್ವಾಮಿಯವರಿಗೆ ಇದರಿಂದ ಅನಿರ್ವಚನೀಯವಾದ ಆನಂದವಾಯಿತು. ಹೀಗೆ ಏಳು ದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ಊರಜನರು ರಾಮನಾಮಭಜನೆ ಮಾಡುತ್ತ ರಾಮನಾಮಸಪ್ತಾಹವನ್ನು ಸಾಂಗವಾಗಿ ನೆರವೇರಿಸಿದರು. ಕೊನೆಯ ದಿನ ಊರವರಿಗೆಲ್ಲ ಭೋಜನ ಸಂತರ್ಪಣೆಯಿಂದ ಪ್ರಸಾದ ವಿತರಿಸಲಾಯಿತು.

ಶ್ರೀರಾಮಭಜನೆಯ ಸಪ್ತಾಹವು ಮುಕ್ತಾಯವಾದ ಮರುದಿನ ರಾಮದಾಸಸ್ವಾಮಿಯವರು ಏಳು ದಿನಗಳ ಕಾಲ ಸಮಾಧಿ ಕೈಗೊಳ್ಳುವುದಾಗಿ ತಿಳಿಸಿದರು. ಇದನ್ನು ಕೇಳಿ ಗಣೇಶನಿಗೆ ಆತಂಕವಾಯಿತು. ಆತ ಗುರುವರ್ಯರಿಗೆ ಕೈಮುಗಿದು, "ಈಗಾಗಲೇ ತಾವು ಏಳು ದಿನಗಳ ನಿರಂತರ ನೃತ್ಯ, ಭಜನೆ, ಜಾಗರಣೆಗಳಿಂದಾಗಿ ತುಂಬಾ ದಣಿದಿದ್ದೀರಿ; ಆದ್ದರಿಂದ ಸ್ವಲ್ಪ ದಿನಗಳ ಕಾಲವಾದರೂ ವಿಶ್ರಾಂತಿ ಮಾಡದೇ ಸಮಾಧಿಗೆ ಕುಳಿತುಕೊಳ್ಳುವುದು ಸರಿಯಲ್ಲ" ಎಂದು ವಿನಯಪೂರ್ವಕವಾಗಿ ಪ್ರಾರ್ಥಿಸಿದನು. ಆದರೆ ರಾಮದಾಸಸ್ವಾಮಿಗಳ ನಿರ್ಧಾರ ಅಚಲವಾಗಿತ್ತು. ಗಣೇಶನು ಈ ಮೊದಲು ಗೋಕರ್ಣದ ಗುರುಲಿಂಗ ದೇವಸ್ಥಾನದಲ್ಲಿರುವ ಪಕ್ಕದ ಕೋಣೆಯಲ್ಲಿ ಒಮ್ಮೆ ಹಾಗೂ ಉಜ್ಜಯಿನಿಯ ಖತ್ರೀವಾ ಎಂಬ ಅವರ ಹಳೆಯ ಮನೆಯ ಚಿಕ್ಕ ಕೋಣೆಯಲ್ಲಿ ಇನ್ನೊಮ್ಮೆ ಹೀಗೆ ಅವರು ಎರಡು ಬಾರಿ ಸಮಾಧಿಗೆ ಕುಳಿತಿರುವುದನ್ನು ನೋಡಿದ್ದ. ಆ ಸಮಯದಲ್ಲಿ ಅವರು ಮರಳಿ ಜಾಗ್ರತಾವಸ್ಥೆಗೆ ಬಂದಾಗ ದೇಹ ತುಂಬಾ ಆಯಾಸದಿಂದ ನಿತ್ರಾಣಗೊಂಡಿದ್ದು, ಚೇತರಿಸಿಕೊಂಡು ಸಹಜಸ್ಥಿತಿಗೆ ಬರಲು ಸುಮಾರು ಒಂದು ವಾರ ಕಾಲಾವಕಾಶ ಬೇಕಾಗಿತ್ತು. ಅವರು ಸಮಾಧಿಗೆ ಕುಳಿತಿರುವಾಗ ಹೊರಗಿನ ಶಬ್ದ ಒಳಗೆ ಕೇಳಿಸದಂತೆ ಬಾಗಿಲಿನ ಸಂದಿಯನ್ನು ಚಿಕ್ಕಪುಟ್ಟ ರಂಧ್ರಗಳನ್ನು ಮಣ್ಣಿನಿಂದ ಮುಚ್ಚಲಾಗುತ್ತಿತ್ತು. ಆ ವೇಳೆಗೆ ಯಾರಾದರೊಬ್ಬರು ಬಾಗಿಲ ಬಳಿ ಕಾವಲಿರುತ್ತಿದ್ದರು. ಇದು ಅವರು ಸಮಾಧಿಗೆ ಕುಳಿತುಕೊಳ್ಳುವ ವಿಧಾನವಾಗಿತ್ತು.

ಶ್ರೀರಾಮದಾಸಸ್ವಾಮಿಯವರ ಜೀವನ ನಿರ್ಯಾಣ

ರಾಮದಾಸಸ್ವಾಮಿಯವರ ಇಚ್ಛೆಯಂತೆ ಖಡೌದೆಯಲ್ಲಿ ಏಕಾಂತ ಸ್ಥಳದಲ್ಲಿರುವ ಮನೆಯ ಮಾಳಿಗೆ ಮೇಲೆ ಸೂಕ್ತವಾದ ಒಂದು ಕೋಣೆಯನ್ನು ಆಯ್ಕೆ ಮಾಡಿ, ಅವರು ಸಮಾಧಿಗೆ ಕುಳಿತುಕೊಳ್ಳುವುದಕ್ಕೆ ಅಣಿಗೊಳಿಸಲಾಯಿತು. ಅಂದು ಸಂಜೆ ಗುರುವರ್ಯ ರಾಮದಾಸಸ್ವಾಮಿಯವರು ಸ್ನಾನಾದಿ ನಿತ್ಯಕರ್ಮಗಳನ್ನು ಪೂರೈಸಿ, ಅನುವಾದ ಕೋಣೆಗೆ ಹೋಗಿ ಸಮಾಧಿಗೆ ಕುಳಿತುಕೊಂಡರು. ಅನಂತರ ಅವರ ಅಪ್ಪಣೆಯಂತೆ ಬಾಗಿಲನ್ನು ಬಂದುಮಾಡಿ, ಬೀಗಹಾಕಿ ಬಾಗಿಲು ಕಾಯುವದಕ್ಕೆ ಗಣೇಶನನ್ನು ನಿಯಮಿಸಿದರು.

ಗುರುವರ್ಯರು ಸಮಾಧಿಗೆ ಕೂಡ್ರುವ ಮೊದಲು ತಾವು ಪೂಜಿಸುತ್ತಿದ್ದ ಪಟ್ಟಾಭಿರಾಮ ವಿಗ್ರಹ, ವಿಷ್ಣು ಸಾಲಿಗ್ರಾಮದೇವರು ಇವುಗಳನ್ನು ಗಣೇಶನಿಗೆ ಒಪ್ಪಿಸಿ, ದಿನಾಲೂ ಪೂಜಿಸಲು ಹಾಗೂ ಗುರುಪುತ್ರಿ

ಏಳು ವರ್ಷ ವಯಸ್ಸಿನ ಸುಂದರತಾಯಿಯ ಯೋಗಕ್ಷೇಮ ನೋಡಿಕೊಳ್ಳಲು ತಿಳಿಸಿದರು. ಸೋದರ ಯಶವಂತರಾವ್ ಅವರಿಗೂ ಮಗಳು ಸುಂದರತಾಯಿಯ ಊಟೋಪಚಾರ ಯೋಗಕ್ಷೇಮದ ಬಗೆಗೆ ಕಾಳಜಿ ವಹಿಸುವಂತೆ ಕೇಳಿಕೊಂಡರು. ಗಣೇಶನು ದಿನಾಲೂ ನಿತ್ಯಕರ್ಮ ಅನುಷ್ಠಾನ ಮತ್ತು ಪಟ್ಟಾಭಿರಾಮ ದೇವರು, ವಿಷ್ಣು-ಸಾಲಿಗ್ರಾಮ ಪೂಜೆ ಮುಗಿಸಿ, ಗುರುವರ್ಯರು ಸಮಾಧಿಗೆ ಕುಳಿತಿರುವತ್ತ ಹೋಗುತ್ತಿದ್ದ.

ಏಳುದಿನಗಳ ತರುವಾಯ ಊರಿನ ನೂರಾರು ಜನರು ಸೇರಿ ರಾಮಭಜನೆ ಮಾಡುತ್ತ ಬಾಗಿಲು ತೆರೆಯಲಾಗಿ, ಗುರುವರ್ಯರು ಕುಳಿತಿದ್ದ ಪದ್ಮಾಸನವು ಸಡಿಲಿಸಿ, ದೇಹವು ಗೋಡೆಗೆ ಒರಗಲ್ಪಟ್ಟಿತ್ತು. ಅವರ ಆತ್ಮವು ಪಾರ್ಥಿವ ದೇಹದಿಂದ ಮುಕ್ತವಾಗಿ ಅನಂತದಲ್ಲಿ ಲೀನವಾಗಿತ್ತು. ಈ ಸಮಯಕ್ಕೆ ಅವರನ್ನು ನೋಡಲು ವಮೌನಿಬಾಬಾ ಎಂಬ ಯೋಗಿಯೊಬ್ಬರು ಬಂದಿದ್ದರು. ಅವರು ರಾಮದಾಸಸ್ವಾಮಿಯವರ ಪ್ರಾಣ ಶಿರಸ್ಸಿನ ಮೂಲಕ ಹೋಗಿದೆ ಎಂದರು. ಅನಂತರ ಅವರ ಅಂತ್ಯಕ್ರಿಯೆಯನ್ನು ಚರಮಣ್ವತಿ ನದೀತೀರದಲ್ಲಿ ಪೂರೈಸಲಾಯಿತು.

ಉಜ್ಜಯಿನಿಯಲ್ಲಿ ಹೆಚ್ಚುಕಾಲ ನೆಲೆಸಿದ್ದ ರಾಮದಾಸಸ್ವಾಮಿಗಳು ಅನಂತರ ಸಮಗ್ರ ಭಾರತದ ಎಲ್ಲ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ, ಮತ್ತೆ ಉಜ್ಜಯಿನಿಗೆ ಬಂದು ಅಲ್ಲಿಯೇ ಜಪ-ತಪ-ಅನುಷ್ಠಾನಗಳಿಂದ ಕಾಲಕಳೆಯಲು ಯೋಜಿಸಿದ್ದರು. ಆದರೆ ವಿಧಿಲಿಖಿತ ಬೇರೆಯೇ ಆಗಿತ್ತು. ಊರಿನ ಜನರ ಆಹ್ವಾನಕ್ಕೆ ಓಗೊಟ್ಟು ತಮ್ಮ ಹುಟ್ಟೂರಾದ ಇಂದೂರಿನ ಖಡೌದಾ ಗ್ರಾಮಕ್ಕೆ ಮರಳಿ ಬಂದರು. ಅಂತರಂಗದ ಆತ್ಮೀಯ ಕರೆ ಅವರನ್ನು ಅಲ್ಲಿಗೆ ಕರೆತಂದಿತ್ತು. ತಾಯ್ನೆಲದ ಮಣ್ಣಿನಲ್ಲಿ ಅವರ ಉಸಿರು ಹಸಿರಾಯಿತು.

ಗಣೇಶನು ಗುರುವರ್ಯ ರಾಮದಾಸಸ್ವಾಮಿಯವರು ಸಮಾಧಿ ಹೊಂದಿದ ಬಳಿಕ ಹದಿನಾಲ್ಕು ದಿನಗಳವರೆಗೆ ಖಡೌದೆಯಲ್ಲಿಯೇ ಉಳಿದು, ಅವರ ಅಂತ್ಯಕ್ರಿಯೆ ಮುಕ್ತಾಯವಾದ ನಂತರ ಗುರುಪುತ್ರಿ ಸುಂದರತಾಯಿಯನ್ನು ಕರೆದುಕೊಂಡು ಉಜ್ಜಯಿನಿಗೆ ಬಂದನು. ಗಣೇಶನ ಕಂಡ ಒಡನೆಯೇ ಗುರುವರ್ಯರ ಅತ್ತೆಯವರಿಗೆ ಮತ್ತು ಮುಸಾತಾಯಿಯವರಿಗೆ ದುಃಖ ಒತ್ತರಿಸಿ ಬಂತು. ಅವರು ಚಿಕ್ಕ ಮಕ್ಕಳಂತೆ ಅತ್ತುಬಿಟ್ಟರು. ಆಗ ಸುಂದರತಾಯಿಯೂ ಅಳತೊಡಗಿದಳು. ಗಣೇಶನಿಗೆ ಏನು ಹೇಳಬೇಕೋ ತೋಚದಂತಾಯಿತು. ಆತ ಸ್ತಬ್ಧನಾಗಿ ನಿಂತುಬಿಟ್ಟಿದ್ದ. ಸ್ವಲ್ಪ ಸಮಯದ ಬಳಿಕ ಅವನು ಗುರುವರ್ಯರು ಸದಾ ಪೂಜಿಸುತ್ತಿದ್ದ ಪಟ್ಟಾಭಿರಾಮ ದೇವರ ಮೂರ್ತಿಯನ್ನು ಅವರಿಗೆ ಒಪ್ಪಿಸಿದ. ಮರುದಿನ ಗುರುವರ್ಯರ ಅತ್ತೆಯವರು ಹಾಗೂ ಮುಸಾತಾಯಿಯವರಿಗೆ ವಂದಿಸಿ, ಅವರಿಂದ ಬೀಳ್ಕೊಂಡು ಗಣೇಶನು ಗೋಕರ್ಣಕ್ಕೆ ಹೊರಟ. ಆ ವೇಳೆಗೆ ರಾಮದಾಸಸ್ವಾಮಿಯವರ ಪರಿವಾರದೊಂದಿಗೆ ಸೇವಾಮನೋಭಾವದಿಂದ ಬಂದು ಸೇರಿಕೊಂಡಿದ್ದ. ಗೋಕರ್ಣದ 'ಗಟ್ಟಿಮೋರ' (ಇದು ಇವರ ವಾಡಿಕೆಯ ಹೆಸರು; ನಾರಾಯಣ ಉಪಾಧ್ಯ ಎಂಬುದು ನಿಜನಾಮಧೇಯ.) ಎಂಬವರು ಆತನ ಜತೆ ಬರಲು ಅವರೊಂದಿಗೆ ಮುಂಬಯಿ ಮಾರ್ಗವಾಗಿ ಗಣೇಶನು ಗೋಕರ್ಣ ತಲುಪಿದನು.

ಶ್ರೀ ರಾಮದಾಸಸ್ವಾಮಿಯವರ ಸಹಯೋಗದಲ್ಲಿ ಗಣೇಶನಿಗೆ ಭಕ್ತಿಯೋಗದ ಸಮಗ್ರ ಪರಿಚಯವಾಯಿತು. ಉತ್ತರಭಾರತದ ಅಡಿಗೆ ವಿಧಾನವೂ ಕರಗತವಾಯಿತು. ದೇಶದ ಉದ್ದಗಲ ಸಂಚರಿಸಿ, ಲೋಕಾನುಭವ, ಆಧ್ಯಾತ್ಮದ ದಿವ್ಯಾನುಭವಗಳನ್ನು ಪಡೆದ. ಅವನ ಆಧ್ಯಾತ್ಮದ ಹಸಿವು ಇಷ್ಟಕ್ಕೆ ತಣಿಯಲಿಲ್ಲ. ಅಂತಲೇ ಅವನು ಮತ್ತೆ ತನಗೆ ತಕ್ಕ ಗುರುವನ್ನು ಅರಸುವುದರಲ್ಲಿ ಮಗ್ನನಾದ.

ಶ್ರೀ ಬಳವಂತರಾವ್ ಭಾಗವತರು

ಮಧ್ಯಪ್ರದೇಶದ ಇಂದೂರು ಸಂಸ್ಥಾನದ ರಾಣಿ ಅಹಲ್ಯಾಬಾಯಿಯು ವಿರಾಗಿಯಾಗಿದ್ದು, ಗೋಕರ್ಣ ಕ್ಷೇತ್ರಕ್ಕೆ ಬಂದು ಧ್ಯಾನ, ಅನುಷ್ಠಾನಗಳಲ್ಲಿ ಕಾಲ ಕಳೆಯುತ್ತಿರುವಾಗ ಈ ಕ್ಷೇತ್ರಕ್ಕೆ ಬರುತ್ತಿದ್ದ ಸಂತರು ಹಾಗೂ ದೈವ ಭಕ್ತರಿಗೆ ತಂಗಲು ಅನುಕೂಲವಾಗುವಂತೆ ಒಂದು ಛತ್ರವನ್ನು ಕಟ್ಟಿಸಿದಳು. ಅಲ್ಲಿ ರೇವಾಳೇಶ್ವರ ಲಿಂಗವನ್ನು ಸ್ಥಾಪಿಸಿ, ಅದಕ್ಕೆ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದಳು. ಈ ಛತ್ರದಲ್ಲಿ ವ್ಯವಸ್ಥಾಪಕರಾಗಿದ್ದ ಬಳವಂತರಾಯರು ಸಂತರು ಹಾಗೂ ಭಕ್ತಜನರಿಗೆ ಅಲ್ಲಿ ತಂಗುವ ವ್ಯವಸ್ಥೆ ಮಾಡುತ್ತಿದ್ದರು.

ಶ್ರೀ ಬಳವಂತರಾವ್ ಭಾಗವತರು ಮಧ್ಯಪ್ರದೇಶದ ಇಂದೂರು ಸಂಸ್ಥಾನದವರಾಗಿದ್ದು, ಗೋಕರ್ಣದ ಅಹಲ್ಯಾಬಾಯಿ ಛತ್ರದ ವ್ಯವಸ್ಥಾಪಕರಾಗಿದ್ದರು. ಆಧ್ಯಾತ್ಮದಲ್ಲಿ ಬಹಳ ಒಲವಿರುವ ಇವರು ಕೊರಳಲ್ಲಿ ರುದ್ರಾಕ್ಷಿ ಮಾಲೆ, ಸ್ಫಟಿಕ ಮಾಲೆಗಳನ್ನು ಧರಿಸಿ, ಸಾತ್ವಿಕವಾದ ಸಂತ ಜೀವನ ನಡೆಸುತ್ತಿದ್ದರು. ದಿನಾಲೂ ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಆಸಕ್ತ ಯುವಕರಿಗೆ ಯೋಗಕ್ರಿಯೆಗಳನ್ನು ಕಲಿಸುತ್ತಿದ್ದರು. ಬೆಳಿಗ್ಗೆ ನಸುಕಿನಲ್ಲಿಯೇ ಎದ್ದು, ಸ್ನಾನಾದಿ ಪ್ರಾತಃಕರ್ಮ ಮುಗಿಸಿ, ಸೂರ್ಯೋದಯದಿಂದ ಬೆಳಿಗ್ಗೆ ಒಂಭತ್ತು ಘಂಟೆಯವರೆಗೆ ಏಕಾಂತದಲ್ಲಿ ಕುಳಿತು ಅನುಷ್ಠಾನ ಮಾಡುತ್ತಿದ್ದರು.

ಶ್ರೀ ರಾಮದಾಸಸ್ವಾಮಿಯವರೊಂದಿಗೆ ಉತ್ತರಭಾರತದ ವಿವಿಧ ಪುಣ್ಯ ಕ್ಷೇತ್ರಗಳಲ್ಲಿ ಸಂಚರಿಸಿ, ಅವರ ಮರಣಾನಂತರ ಊರಿಗೆ ಮರಳಿದ ಗಣೇಶನು ಮತ್ತೆ ತಾನು ಹಿಂದೆ ವಾಸವಾಗಿದ್ದ ಕೋಟಿತೀರ್ಥದ ಉತ್ತರಭಾಗದಲ್ಲಿರುವ ಚಿಕ್ಕ ವರದೇಶ್ವರ ಮಂಟಪದಲ್ಲಿ ಉಳಿದುಕೊಂಡನು. ಆಗ ಅದೇ ತಾನೆ ಉಜ್ಜಯಿನಿಯಿಂದ ಗೋಕರ್ಣಕ್ಕೆ ಮರಳಿರಲು, ಮರುದಿನ ಗುರುವರ್ಯ ರಾಮದಾಸಸ್ವಾಮಿಯವರ ಸೋದರಮಾವನ ಮಗನಾದ ಬಳವಂತರಾಯರಲ್ಲಿಗೆ ತೆರಳಿ ಖಿನ್ನಮನದಿಂದ ಗುರುವರ್ಯರು ಸ್ವರ್ಗಸ್ಥರಾದ ವೃತ್ತಾಂತವನ್ನು ಅರುಹಿದಾಗ ಅದನ್ನು ಕೇಳಿದ ಅವರು ಬಹಳ ಸಂತಾಪಗೊಂಡರು. ರಾಮದಾಸ ಸ್ವಾಮಿಯವರು ಹಿಂದೆ ಗೋಕರ್ಣಕ್ಕೆ ಬಂದಾಗ ಅಹಲ್ಯಾಬಾಯಿ ಛತ್ರದಲ್ಲಿ ವಾಸವಾಗಿದ್ದರು. ಆ ವೇಳೆಗೆ ಗಣೇಶನಿಗೆ ಬಳವಂತರಾಯರ ಪರಿಚಯವಾಗಿತ್ತು. ಇಬ್ಬರಲ್ಲೂ ಇರುವ ಆಧ್ಯಾತ್ಮದ ಒಲವು ಅವರಲ್ಲಿ ಆತ್ಮೀಯ ಬಾಂಧವ್ಯ ಬೆಳೆಯುವಂತೆ ಮಾಡಿತ್ತು. ಈಗಾಗಲೇ ಭಕ್ತಿಯ ಜಲದಲ್ಲಿ ಮಿಂದು ಸಂಸ್ಕಾರಗೊಳ್ಳುತ್ತ, ಉದಾತ್ತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಿದ್ದ ಗಣೇಶನಲ್ಲಿ ಈಗ ಯೋಗಾಭ್ಯಾಸದ ಹಂಬಲ ಅಂಕುರಿಸಿತು. ಅಂತೆಯೇ ಆತ ದಿನಾಲೂ ಬೆಳಗಿನ ಸಮಯ ಮತ್ತು ಸಾಯಂಕಾಲಗಳಲ್ಲಿ ಅವರಲ್ಲಿಗೆ ಹೋಗಿ ಆಸನ, ಪ್ರಾಣಾಯಾಮ, ಧೌತಿ, ನೇತಿ, ನವಲಿ ಮುಂತಾದ ಯೋಗದ ಕ್ರಿಯೆಗಳನ್ನು ಕಲಿಯಲು ಪ್ರಾರಂಭಿಸಿದನು. ಭಕ್ತಿಯೋಗದೊಂದಿಗೆ ಈಗ ಹಠಯೋಗದ ಪ್ರಕ್ರಿಯೆಗಳೂ ಅವನಿಗೆ ಸಿದ್ಧಿಸತೊಡಗಿತು.

ಗಣೇಶ ಮತ್ತು ಅರುಂಧತಿ ವಿವಾಹ

ಮಗನು ದೇಶಾಂತರ ಅಲೆದು ಊರಿಗೆ ಬಂದಾಗ ತಂದೆ ವಿಘ್ನೇಶ್ವರ ಭಟ್ಟರಿಗೆ ಮತ್ತೆ ಮಗನ ಮದುವೆ ಮಾಡುವ ಆಸೆ ಚಿಗುರಿತು. ಕೂಡಲೇ ಅವರು ಜಾಗ್ರತೆಯಿಂದ ಇಷ್ಟಮಿತ್ರರು ಮತ್ತು ಬಂಧುಗಳೊಂದಿಗೆ ಪರಸ್ಪರ ಚರ್ಚಿಸಿ, ವಿಚಾರ ವಿನಿಮಯ ನಡೆಸಿ, ಈ ಮೊದಲು ನಿಶ್ಚಯಿಸಿದ್ದ

ಹುಡುಗಿ ಅರುಂಧತಿಯೊಡನೆ ಮಗನ ವಿವಾಹವನ್ನು ಶುಭ ಮುಹೂರ್ತದಲ್ಲಿ ನೆರವೇರಿಸಿದರು. ಅದೇ ತಾನೆ ಎಂಟು ವರುಷದ ಹೊಸಲಿನಲ್ಲಿ ಕಾಲಿರಿಸುತ್ತಿದ್ದ ಅರುಂಧತಿಗೆ ಸಹಜವಾಗಿಯೇ ಅದು ಕವಡಿ, ಗಜ್ಜುಗಗಳನ್ನಾಡುವ ವಯಸ್ಸು, ಗಣೇಶನಾದರೋ ಲೌಕಿಕ ವ್ಯವಹಾರಗಳಲ್ಲಿ ಅನುರಕ್ತಿಯಿಲ್ಲದ ವಿರಾಗಿ, ಸಾಧು-ಸಂತರನ್ನೊಳಗೊಂಡ ಆಧ್ಯಾತ್ಮಿಕ ಪ್ರಪಂಚವೇ ಆತನಿಗೆ ಆಪ್ತವಾಗಿತ್ತು. ಅವನ ಜಪ, ತಪ, ಅನುಷ್ಠಾನ, ಚರಿತ-ಚರ್ಯೆಗಳೆಲ್ಲ ಮನೆಯಿಂದ ಹೊರಗೇ ವ್ಯಾಪಕವಾಗಿದ್ದವು. ಆತ ಮನೆಯಲ್ಲಿರುವ ಸಮಯ ಪ್ರಾತರ್ವಿಧಿ, ಸ್ನಾನ, ಊಟೋಪಚಾರಗಳಿಗೆ ಮಾತ್ರ ಸೀಮಿತವಾಗಿತ್ತು. ವಿಘ್ನೇಶ್ವರಭಟ್ಟರಿಗೆ ಮಾತ್ರ ಈ ಮದುವೆಯಿಂದ ಖುಷಿಯೋ ಖುಷಿ, ಮಗನ ಮದುವೆಯಾಗಿ ಪುಟ್ಟ ಸೊಸೆ ಮನೆಯಲ್ಲಿ ಓಡಾಡಿಕೊಂಡಿರುವುದೇ ಅವರ ಕಣ್ಣಿಗೆ ಹಬ್ಬವೆನಿಸಿತ್ತು.


ಆದರೆ ಅವರ ಈ ಸಂತೋಷ ಬಹಳ ದಿನ ಉಳಿಯಲಿಲ್ಲ. ಅದೇ ಕೆಲವು ದಿನಗಳಲ್ಲಿ ಅರುಂಧತಿ ತೀವ್ರವಾದ ಜ್ವರದಿಂದ ಆಕಸ್ಮಿಕವಾಗಿ ತವರಿನಲ್ಲಿ ತೀರಿಕೊಂಡಳು.

ಶ್ರೀ ವಾಸುದೇವಾನಂದ ಸರಸ್ವತಿ ಸ್ವಾಮಿಗಳು

ಮಹಾರಾಷ್ಟ್ರ ರಾಜ್ಯದ ಕೊಂಕಣ ಪ್ರದೇಶದ ಸಾವಂತವಾಡಿ ಸಂಸ್ಥಾನದಲ್ಲಿ ನಿರ್ಮಲಾನದಿ ದಂಡೆಯ ಮೇಲೆ ಮಾಣಗಾಂವ ಎಂಬ ಹಳ್ಳಿಯಿದೆ. ಈ ಹಳ್ಳಿಯಲ್ಲಿ ವಾಸಿಸುತ್ತಿದ್ದ ಶ್ರೀಗಣೇಶಭಟ್ಟ-ರಮಾಬಾಯಿ ಎಂಬ ದಂಪತಿಗಳಿಗೆ ಮಗನಾಗಿ ಶ್ರೀವಾಸುದೇವಾನಂದರು ಶ್ರೀ.ಶಾ.ಶಕೆ 1776 (ಸನ್ 1854) ಆನಂದನಾಮ ಸಂವತ್ಸರದ ವೈಶಾಖ ಕೃಷ್ಣ ಪಂಚಮಿ ಶುಕ್ರವಾರ ಸೂರ್ಯೋದಯಕ್ಕೆ ಜನಿಸಿದರು. ತಂದೆ ಗಣೇಶಭಟ್ಟರು ಕರ್‍ಹಾಡ ಬ್ರಾಹ್ಮಣರಾಗಿದ್ದು, ಪರಮ ದೈವಭಕ್ತರೂ, ದತ್ತಾತ್ರೇಯನ ಉಪಾಸಕರೂ ಆಗಿದ್ದರು. ಇವರು ವಿರಕ್ತರಾಗಿದ್ದು, ಸಂಸಾರದ ಬಗೆಗೆ ನಿರಾಸಕ್ತರಾಗಿರುವದರಿಂದ ಅವರ ತಂದೆ ಹರಿಭಟ್ಟರೇ ಮನೆಯ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು.

ಮೊಮ್ಮಗ ವಾಸುದೇವನಿಗೆ ನಾಲ್ಕು ವರ್ಷಗಳು ಕಳೆದು ಐದನೇ ವರ್ಷ ಪ್ರಾರಂಭವಾಗುತ್ತಿದ್ದಂತೆ ಸ್ವತ: ತಾತ ಹರಿಭಟ್ಟರೇ ವಿದ್ಯೆಯನ್ನು ಕಲಿಸತೊಡಗಿದರು. ಹರಿಭಟ್ಟರು ಋಗ್ವೇದವೇ ಮೊದಲಾದ ವೇದ ವೇದಾಂಗ ದಶಗ್ರಂಥಗಳ ಘನ ವಿದ್ವಾಂಸರೂ ಸಂಸ್ಕೃತ ಪಂಡಿತರೂ ಆಗಿದ್ದರು, ಅಂತಲೇ ಅವರು ಮೊಮ್ಮಗನಿಗೆ ಸುಲಭವಾದ ರೀತಿಯಲ್ಲಿ ಚಿಕ್ಕ ಚಿಕ್ಕ ಸರಳ ಸಂಸ್ಕೃತ ಶ್ಲೋಕಗಳು, ಪಾಣಿನಿಯ ಅಷ್ಟಾಧ್ಯಾಯ ಸೂತ್ರಗಳು, ಶಿಕ್ಷಾ ಇವೇ ಮೊದಲಾದ ಸಂಸ್ಕೃತ ವ್ಯಾಕರಣ ಪಾಠಗಳನ್ನು ಕಲಿಸುತ್ತಿದ್ದಂತೆ ಅಜ್ಜ ಹೇಳಿ ಕೊಟ್ಟದ್ದನ್ನೆಲ್ಲ ವಾಸುದೇವನು ಅಲ್ಪಕಾಲದಲ್ಲಿಯೇ ಬಾಯಿಪಾಠ ಒಪ್ಪಿಸುತ್ತಿದ್ದನು. ಮೊಮ್ಮಗನ ಈ ಅಸಾಧಾರಣ ಜ್ಞಾನವನ್ನೂ ಚುರುಕುತನವನ್ನೂ ಕಂಡು ಹರಿಭಟ್ಟರಿಗೆ ಬಹಳ ಆನಂದವಾಗುತ್ತಿತ್ತು.

ಮುಂದೆ ಎಂಟನೇ ವಯಸ್ಸಿನಲ್ಲಿ ವಾಸುದೇವನಿಗೆ ತಂದೆ ಗಣೇಶಭಟ್ಟರು ಉಪನಯನ ಮಾಡಿದರು. ಆಗ ಮೊಮ್ಮಗನಿಗೆ ಸಂಪೂರ್ಣವಾಗಿ ತಾವೇ ವೇದಾಧ್ಯಯನವನ್ನು ಮಾಡಿಸಬೇಕೆಂಬ ಅಭಿಲಾಷೆಯಿಂದ ತಾತ ಹರಿಭಟ್ಟರು ವೇದಪಾಠವನ್ನು ಪ್ರಾರಂಭಿಸಿದರು. ಆದರೆ ಸಾಂಸಾರಿಕ ಜವಾಬ್ದಾರಿಯ ನಡುವೆ ಆದ ಅನೇಕ ತೊಡಕುಗಳಿಂದಾಗಿ ಅವರಿಗೆ ಸರಿಯಾಗಿ ವೇದಪಾಠವನ್ನು ಮಾಡಲು ಸಾಧ್ಯವಾಗದೆ ವಾಸುದೇವನ ವೇದಾಧ್ಯಯನವು ಕುಂಠಿತವಾಗಿ ಸಾಗತೊಡಗಿತು. ಈ ನಡುವೆ ವಾಸುದೇವನು ವ್ಯರ್ಥವಾಗಿ ಕಾಲಕ್ಷೇಪ



ಶ್ರೀ ವಾಸುದೇವಾನಂದ ಸರಸ್ವತೀ ಟೇಂಬೆ ಸ್ವಾಮಿಗಳು

ಮಾಡದೆ ಜಪ, ತಪ, ಅನುಷ್ಠಾನಗಳಿಂದ ದಿನಗಳೆಯುತ್ತಿರುವಂತೆಯೇ ತಾತ ಹರಿಭಟ್ಟರು ಸ್ವರ್ಗಸ್ಥರಾದರು. ಇದರಿಂದ ವಾಸುದೇವನು ಒಳ್ಳೆಯ ಗುರುವೂ ಮಾರ್ಗದರ್ಶಕರೂ ಎನಿಸಿದ ಅಜ್ಜನನ್ನು ಕಳೆದುಕೊಂಡು ಅಪಾರ ದು:ಖಪಟ್ಟನು. ತಾತನ ಸಾವಿನಿಂದ ಆತನಿಗೆ ಬಹಳ ಕಷ್ಟವು ಬಂದೊದ್ದಗಿತು. ತಂದೆ ಗಣೇಶ ಭಟ್ಟರು ವಿರಕ್ತರಾಗಿದ್ದು ಅವರು ಮಗನ ವ್ಯಾಸಂಗದ ಬಗೆಗಾಗಲಿ ಸಂಸಾರದ ಬಗೆಗಾಗಲಿ ಯಾವದೇ ರೀತಿಯ ಜವಾಬ್ದಾರಿ ಹೊಂದಿರಲಿಲ್ಲ. ಆದ್ದರಿಂದ ವಾಸುದೇವನು ಅದೇ ತಾನೆ ಹತ್ತನೇ ವರ್ಷದ ಹದಿಹರೆಯದಲ್ಲಿ ಕಾಲಿರಿಸುತ್ತಿದ್ದರೂ ಕುಟುಂಬದ ಪೋಷಣೆಯ ಭಾರವನ್ನು ಹೊರಬೇಕಾಯಿತು. ತಾಯಿಯು ತುಂಬಾ ಕೋಪದ ಸ್ವಭಾವದವಳಾದುದರಿಂದ ಅನೇಕ ವೇಳೆ ಆತ ಬಹು ಕಷ್ಟಪಡುವ ಪ್ರಸಂಗಗಳು ಬರುತ್ತಿದ್ದವು. "ಮಾತಾ ಪ್ರತ್ಯಕ್ಷ ದೇವತಾ" ಎಂದು ನಂಬಿದ್ದ ಅವನು ಎಲ್ಲವನ್ನು ಸಹಿಸಿ ತಾಳ್ಮೆಯಿಂದ ಇರುತ್ತಿದ್ದ.

ತಾತ ಹರಿಭಟ್ಟರ ಮರಣಾನಂತರ ವಾಸುದೇವನು ಅದೇ ಹಳ್ಳಿಯಲ್ಲಿರುವ ವಿಷ್ಣುಭಟ್ಟರಲ್ಲಿ ವೇದಾಭ್ಯಾಸ ಮುಂದುವರಿಸಿದ. ತಮ್ಮಂದಿರು ದೊಡ್ಡವರಾಗಿ ವಯಸ್ಕರಾದಾಗ ವಾಸುದೇವನಿಗೆ ಕುಟುಂಬದ ಜವಾಬ್ದಾರಿಯು ಕಳೆಯಿತು. ಆಗ ಅವನಿಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಬೇರೆ ಕಡೆಗೆ ಹೋಗಲು ತಾಯಿಯಿಂದ ಅನುಮತಿ ದೊರೆಯಿತು. ಕೂಡಲೇ ಆತ ಮಾಣಗಾಂವಿನಿಂದ ಸಾಂಗಲಿಗೆ ಬಂದು ಅಲ್ಲಿ ಶ್ರೀ ತಾತ್ಯಾ ಉಕೀಡವೆ ಎಂಬವರ ವೇದಶಾಲೆಯಲ್ಲಿ ಪಾಠವನ್ನು ಕಲಿಯಲು ಪ್ರಾರಂಭಿಸಿದನು. ಅಂದಿನಿಂದ ಮೊದಲ್ಗೊಂಡು ಒಂದು ವರ್ಷದ ಅವಧಿಯಲ್ಲಿಯೇ ಆತ ಋಗ್ವೇದ, ಬ್ರಾಹ್ಮಣ ಮುಂತಾದ ವೇದಗ್ರಂಥಗಳ ಅಧ್ಯಯನ ಮುಗಿಸಿದನು. ಮುಂದೆ ಒಬ್ಬ ಪ್ರಸಿದ್ಧ ಶಾಸ್ತ್ರಿಗಳಿಂದ ಸಂಸ್ಕೃತ ಕಲಿಯಲು ಆರಂಭಿಸಿ ರಘುವಂಶ ಕಾವ್ಯದ ಹದಿನೈದು ಶ್ಲೋಕಗಳು ಮುಗಿಯುತ್ತಲೇ ವಾಸುದೇವನಿಗೆ ಚೆನ್ನಾಗಿ ಸಂಸ್ಕೃತಜ್ಞಾನವಾಯಿತು. ಆತನ ಅದ್ಭುತವಾದ ಗ್ರಹಣ ಶಕ್ತಿಯನ್ನು ಕಂಡು ಗುರುಗಳಿಗೆ ವಿಸ್ಮಯವುಂಟಾಯಿತು.

ವಾಸುದೇವನಿಗೆ ಇಪ್ಪತ್ತೊಂದನೇ ವಯಸ್ಸಿನಲ್ಲಿ ಅನ್ನಪೂರ್ಣ ಎಂಬ ಕನ್ಯೆಯೊಡನೆ ವಿವಾಹವಾಯಿತು. ಪತ್ನಿ ಅನ್ನಪೂರ್ಣ ಸಾಧ್ವಿಯೂ ಸುಗುಣ ಸಂಪನ್ನೆಯೂ ಆಗಿದ್ದಳು. ಆತನಿಗೆ ಮದುವೆಯಾದ ಕೆಲವೇ ದಿನಗಳಿಗೆ ಗಣೇಶಭಟ್ಟರು ಸ್ವರ್ಗಸ್ಥರಾದರು. ಗ್ರಹಸ್ಥಾಶ್ರಮಿಗಳಾದ ಬಳಿಕ ಇವರು ಅಗ್ನಿಉಪಾಸನೆ ಪ್ರಾರಂಭಿಸಿ ಗಾಯತ್ರಿ ಪುರಶ್ಚರಣವನ್ನು ಕೈಗೊಂಡರು. ಅದಾದ ತರುವಾಯ ಊರ ಸಮೀಪ ಗುಡ್ಡದ ಮೇಲಿರುವ ಗುಹೆಯಲ್ಲಿ ಕೆಲವು ಕಾಲ ಯೋಗಾಭ್ಯಾಸಮಾಡಿ ಸಾಧನೆಯನ್ನು ಸಿದ್ಧಿಸಿಕೊಂಡರು. ಆನಂತರ ದತ್ತಕ್ಷೇತ್ರವಾದ ನರಸೋಬಾವಾಡಿಗೆ ಹೋಗಿ ಸ್ವಲ್ಪಕಾಲ ದತ್ತಾತ್ರೇಯನ ಉಪಾಸನೆ ಮಾಡಿ ಮಾಣಗಾಂವಿಗೆ ಮರಳಿ ಬಂದು ಅಲ್ಲಿ ಕಷ್ಟ ನಿಷ್ಠುರವಾದ ನಿಯಮಗಳಿಂದ ಚಾಂದ್ರಾಯಣ ವ್ರತವನ್ನು ಆಚರಿಸಿದರು. ವ್ರತವು ಪೂರ್ಣಗೊಳ್ಳುತ್ತಲೆ ಅಲ್ಲಿ ಒಂದು ಸಣ್ಣ ಮಂದಿರವನ್ನು ಕಟ್ಟಿ ದತ್ತಾತ್ರೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಏಳು ವರ್ಷಗಳ ಕಾಲ ದತ್ತದೇವರ ಉಪಾಸನೆ ಮಾಡಿದರು. ಹೀಗೆ ಸುಗುಣೋಪಾಸನೆಯನ್ನು ಸಿದ್ಧಿಸಿಕೊಂಡ ಅವರು ಮುಂದೆ ನಿರ್ಗುಣೋಪಾಸನೆಗಾಗಿ ಉಪನಿಷತ್ ಮತ್ತು ಅವುಗಳ ಅಧ್ಯಯನದಿಂದ ನಿರ್ಗುಣ ನಿರಾಕಾರ ತತ್ವದ ಅನುಸಂಧಾನ ಮಾಡಿ ತತ್ವಜ್ಞಾನವನ್ನೂ ಸಿದ್ಧಿಸಿಕೊಂಡರು.

ಸುಗುಣ ಮತ್ತು ನಿರ್ಗುಣ ಉಪಾಸನೆಯಲ್ಲಿ ಸಿದ್ಧಿಯನ್ನು ಪಡೆದ ವಾಸುದೇವನಿಗೆ ಪತ್ನಿ ಜತೆ ಪವಿತ್ರ ತೀರ್ಥಕ್ಷೇತ್ರಗಳ ಸತ್ಸಂಚಾರ ಕೈಗೊಳ್ಳಬೇಕೆಂಬ ಅವ್ಯಕ್ತ ಪ್ರೇರಣೆಯುಂಟಾಯಿತು. ಆಗ ಉಟ್ಟ ಬಟ್ಟೆಯಲ್ಲಿಯೇ ಅಲ್ಲಿಂದ ಹೊರಟ ದಂಪತಿಗಳು ಮರಳಿ ಆ ಹಳ್ಳಿಗೆ ಬರಲಿಲ್ಲ. ಪೂರ್ವನಿರ್ಧಾರವಾಗಲಿ ಪೂರ್ವ ತಯಾರಿಯಾಗಲಿ ಇಲ್ಲದೆ ಆಕಸ್ಮಿಕವಾಗಿ ಹೊರಟ ದಂಪತಿಗಳು ನರಸೋಬಾವಾಡಿ, ಕೊಲ್ಹಾಪುರ, ಭಿಲವಾಡಿ, ಪಂಢರಪುರ ಮುಂತಾದ ಪುಣ್ಯ ಕ್ಷೇತ್ರಗಳಲ್ಲಿ ಸಂಚರಿಸಿ ಗೋದಾವರಿ ತೀರದ ಗಂಗಾಖೇಡ ಎಂಬ ಹಳ್ಳಿಯನ್ನು ತಲುಪಿದರು. ಈ ಸ್ಥಳವು ಅವರಿಗೆ ಬಹಳ ಮೆಚ್ಚುಗೆಯಾಗಲು ಅಲ್ಲಿ ಅವರು ಹಲವು ದಿನಗಳವರೆಗೆ ಉಳಿದು ದಿನವೂ ಗೋದಾವರಿ ನದಿಯಲ್ಲಿ ಸ್ನಾನಮಾಡುತ್ತಾ ಅನುಷ್ಠಾನ ಮಾಡಿದರು.

ಅದೊಂದು ದಿನ ಅನ್ನಪೂರ್ಣ ಬಾಯಿಯವರಿಗೆ ಜ್ವರ ಬಂದು ಅದು ಕಡಿಮೆಯಾಗುತ್ತಲೆ ವಾಂತಿ-ಭೇದಿ ಪ್ರಾರಂಭವಾಯಿತು. ಅದು ಯಾವ ಔಷಧ ಚಿಕಿತ್ಸೆಗೂ ಕಡಿಮೆಯಾಗದೆ ಉಲ್ಬಣಾವಸ್ಥೆಗೇರಿತು. ಪತ್ನಿಯು ಇನ್ನು ಕೆಲವೇ ಗಳಿಗೆಯಲ್ಲಿ ಇಹಲೋಕ ಯಾತ್ರೆ ಮುಗಿಸುವಳೆಂದು ಅರಿವಾಗಲು ಅವಳ ಅಂತಿಮ ಆಸೆಯಂತೆ ನದಿಗೆ ಹೋಗಿ ಸ್ನಾನ ಮಾಡಿ, ಒಂದು ಕೊಡದಲ್ಲಿ ಗೋದಾವರಿ ನದಿಯ ಪವಿತ್ರ ಜಲವನ್ನು ತಂದು ಹೆಂಡತಿಗೆ ಸ್ನಾನ ಮಾಡಿಸಿದರು. ಅವಳ ಹಣೆಗೆ ಅರಿಷಿಣ-ಕುಂಕುಮ ಹಚ್ಚಿ, ಸುವಾಸಿನಿಯರನ್ನು ಕರೆದು, ಹೆಂಡತಿ ಕೈಯಿಂದ ಅವರಿಗೆ ಸೌಭಾಗ್ಯ ವಸ್ತುಗಳನ್ನು ದಾನ ಕೊಡಿಸಿದರು. ಅದಾದ ಕೆಲವು ನಿಮಿಷಗಳಲ್ಲಿ ಅನ್ನಪೂರ್ಣಬಾಯಿಯವರು ಕೊನೆಯುಸಿರೆಳೆದರು.

ವಾಸುದೇವ-ಅನ್ನಪೂರ್ಣದೇವಿಯವರದು ಬಹು ಆದರ್ಶ ದಾಂಪತ್ಯವಾಗಿತ್ತು. ವಾಸುದೇವನು ಒಂದು ದಿನವೂ ಪತ್ನಿಯ ಜತೆ ಸ್ವರವೆತ್ತಿ ಜೋರಾಗಿ ಮಾತನಾಡಿದವನಲ್ಲ. ಆತ ಅವಳೊಂದಿಗೆ ಬಹು ಶಾಂತರೀತಿಯಿಂದ ನಡೆದುಕೊಳ್ಳುತ್ತಿದ್ದನು. ಪತ್ನಿ ತೀರಿಕೊಂಡ ನಂತರ ಆತನೇ ಅವಳ ಅಂತ್ಯಕ್ರಿಯೆಗಳನ್ನು ಮುಗಿಸಿ, ಅದೇ ಮರುದಿನ ಚತುರ್ಥಾಶ್ರಮ ಸನ್ಯಾಸವನ್ನು ಸ್ವೀಕರಿಸಿದನು. ಆಗ ಅವರಿಗೆ "ಶ್ರೀ ವಾಸುದೇವಾನಂದ ಸರಸ್ವತಿ" ಎಂಬ ಯೋಗಪಟ್ಟವನ್ನು ನೀಡಲಾಯಿತು. ಅನಂತರ ಅವರು ಪುಣ್ಯಕ್ಷೇತ್ರಗಳನ್ನು ಸಂಚರಿಸುತ್ತ ಜನರಿಗೆ ಸದ್ಧರ್ಮ ಬೋಧಿಸುತ್ತ ಜ್ಞಾನದ ಬೆಳಕನ್ನು ನೀಡಿದರು.

ಶ್ರೀ ಕ್ಷೇತ್ರ ಬನವಾಸಿಗೆ ಶ್ರೀ ವಾಸುದೇವಾನಂದರ ಆಗಮನ

ಬನವಾಸಿಯು ಕರ್ನಾಟಕದ ಒಂದು ಅತ್ಯಂತ ಪ್ರಾಚೀನ ನಗರವಾಗಿದೆ. ಇದು ವರದಾ ನದಿ ದಂಡೆಯ ಮೇಲೆ ನಿರ್ಮಾಣಗೊಂಡಿದ್ದು ಇಲ್ಲಿಯ ಮಧುಕೇಶ್ವರ ದೇವಾಲಯವು ಬಹು ಪ್ರಸಿದ್ಧವಾಗಿದೆ. ಐತಿಹಾಸಿಕವಾಗಿಯೂ ಅತ್ಯಂತ ಮಹತ್ವದ ಸ್ಥಳವಾಗಿರುವ ಈ ಪ್ರದೇಶವು ಹಲವು ಧರ್ಮಗಳ ನೆಲೆವೀಡಾಗಿದೆ.

ವಾಸುದೇವಾನಂದ ಸರಸ್ವತಿ ಟೇಂಬೆ ಸ್ವಾಮಿಯವರು ದಕ್ಷಿಣ ಭಾರತದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತ ಬನವಾಸಿಗೆ ಬಂದು ಶ್ರೀ ಮಧುಕೇಶ್ವರ ದೇವರನ್ನು ಸಂದರ್ಶಿಸಿ ಈ ಕ್ಷೇತ್ರದಲ್ಲಿ ಹಲವು ದಿನಗಳ ಕಾಲ ವಾಸವಾಗಿದ್ದರು. ಮಹಾತಪಸ್ವಿಗಳೂ, ದತ್ತಭಕ್ತರೂ ಆಗಿರುವ ಇವರು ಇಲ್ಲಿ ವಾಸವಾಗಿರುವ ವೇಳೆ ಶ್ರೀ ರಾಮದೇವರ ಗುಡಿಯಲ್ಲಿ ದತ್ತಾತ್ರೇಯ ಪಾದುಕೆಗಳನ್ನು ಸ್ಥಾಪಿಸಿದರು.

ಶ್ರೀ ವಾಸುದೇವಾನಂದ ಸ್ವಾಮಿಯವರ ಸಂದರ್ಶನ

ಗಣೇಶನು ನಿತ್ಯದಂತೆ ಹಠಯೋಗದ ಅಭ್ಯಾಸಕ್ಕಾಗಿ ಅಹಲ್ಯಾಬಾಯಿ ಛತ್ರದ ಕಡೆಗೆ ನಡೆದನು. ಅಂದು ಯೋಗಾಭ್ಯಾಸದ ಪ್ರಕ್ರಿಯೆಗಳೆಲ್ಲ ಮುಗಿದ ಬಳಿಕ ಬಳವಂತರಾಯರು ಶ್ರೀ ವಾಸುದೇವಾನಂದ ಸ್ವಾಮಿ ಎಂಬ ಮಹಾತ್ಮರೊಬ್ಬರು ಬನವಾಸಿಗೆ ಬಂದಿರುವುದಾಗಿ ತಿಳಿಸಿ, "ನಾವಿಬ್ಬರೂ ಅಲ್ಲಿಗೆ ಹೋಗಿ ಅವರನ್ನು ಕಂಡು ಬರೋಣ" ಎಂದರು. ಅಂತೆಯೇ ಅವರಿಬ್ಬರೂ ಎತ್ತಿನಗಾಡಿಯ ಮೂಲಕ ಶಿರಸಿಗೆ ಹೋಗಿ ಅಲ್ಲಿಂದ ಮುಂದೆ ಬನವಾಸಿಗೆ ತಲುಪಿದರು. ಬನವಾಸಿಯ ಮಧುಕೇಶ್ವರ ದೇವಾಲಯದ ಚಂದ್ರಶಾಲೆಯ ಮೂಲೆಯಲ್ಲಿ ಒಂದು ಕಡೆ ಶ್ರೀ ವಾಸುದೇವಾನಂದ ಸ್ವಾಮಿಯವರು ಒಬ್ಬರೇ ಕುಳಿತಿದ್ದರು. ಆಗ ಗಣೇಶ ಮತ್ತು ಬಳವಂತರಾಯರು ಅವರ ಬಳಿಸಾರಿ ಬಾಗಿ ನಮಸ್ಕರಿಸಿ, "ನಾವು ಗೋಕರ್ಣದಿಂದ ಬಂದಿದ್ದೇವೆ; ದಯವಿಟ್ಟು ನಮ್ಮ ಊರಿಗೆ ತಾವು ಸಂದರ್ಶನವೀಯಬೇಕು" ಎಂದು ನಮ್ರವಾಗಿ ಪ್ರಾರ್ಥಿಸಿದರು. ಆಗ ಅವರು "ನಾನೇ ಬರುತ್ತಿದ್ದೆ; ನೀವೇಕೆ ಇಲ್ಲಿಯವರೆಗೆ ಬಂದಿರಿ?" ಎಂದು ಕೇಳಿದರು. ಅದಕ್ಕೆ "ನಾವು ತಮ್ಮ ದರ್ಶನ ಪಡೆಯುವುದಕ್ಕಾಗಿ ಬಂದೆವು" ಎಂದು ಬಳವಂತರಾಯರು ತಿಳಿಸಿದರು. "ಆಗಲಿ ಬರುತ್ತೇನೆ" ಎಂದು ಅವರು ಮಾರ್ನುಡಿದರು.

ಗಣೇಶ ಮತ್ತು ಬಳವಂತರಾಯರು ಬನವಾಸಿಯಿಂದ ಗೋಕರ್ಣಕ್ಕೆ ಬಂದ ಎರಡು ದಿನಗಳ ತರುವಾಯ ಗೋಕರ್ಣ ಸಮೀಪದ ಸಿದ್ಧೇಶ್ವರ ಕ್ಷೇತ್ರಕ್ಕೆ ಯಾವುದೋ ಸನ್ಯಾಸಿಗಳೊಬ್ಬರು ಬಂದಿರುವುದಾಗಿ ಸುದ್ದಿ ಬಂತು. ಅದನ್ನು ಕೇಳಿದ ಬಳವಂತರಾಯರು ಗಣೇಶನೊಡನೆ ಕೆಲವು ವೈದಿಕ ಬ್ರಾಹ್ಮಣರನ್ನು ಕರೆದುಕೊಂಡು ಸಿದ್ಧೇಶ್ವರಕ್ಕೆ ಹೋದರು. ಅಲ್ಲಿ ಶ್ರೀ ವಾಸುದೇವಾನಂದರ ದರ್ಶನ ಮಾಡಿ, ಭವ್ಯ ಸ್ವಾಗತದೊಂದಿಗೆ ಗೋಕರ್ಣಕ್ಕೆ ಕರೆತರಲಾಯಿತು. ಊರ ಪ್ರವೇಶಕ್ಕೆ ಮೊದಲು ಶ್ರೀಭದ್ರಕಾಳಿ ಮಂದಿರವಿದ್ದು, ಅಲ್ಲಿಂದ ವೇದಮಂತ್ರ ಘೋಷದೊಂದಿಗೆ ಹೊರಟು ಶ್ರೀಮಹಾಗಣಪತಿ ಮತ್ತು ಶ್ರೀ ಮಹಾಬಲೇಶ್ವರ ದೇವಾಲಯಗಳನ್ನು ಸಂದರ್ಶಿಸಲಾಯತು. ಅಲ್ಲಿ ಆತ್ಮಲಿಂಗಕ್ಕೆ ದಂಡವಂದನೆ ಮಾಡಿದ ವಾಸುದೇವಾನಂದರು ಆ ಸಮಯಕ್ಕೆ ತಮಗೆ ಸ್ಫುರಿಸಿದ ಎರಡು ಸಂಸ್ಕೃತ ಶ್ಲೋಕಗಳನ್ನು ಒಂದು ಕಾಗದದಲ್ಲಿ ಬರೆದು ದೇವರಿಗೆ ಸಮರ್ಪಿಸಿದರು. ಅವರ ಸಮೀಪದಲ್ಲಿ ನಿಂತಿದ್ದ ಗಣೇಶನು ಆ ಕಾಗದವನ್ನು ತೆಗೆದುಕೊಂಡು ಓದಿದಾಗ ಅದರಲ್ಲಿ ಬರೆದ ಶ್ಲೋಕಗಳು ಈ ರೀತಿಯಾಗಿದ್ದವು.

ಮಹಾಬಲೇಶ್ವರ ತ್ರಾಹಿ ಹಾಲಾಹಲ ಸಮುದ್ಭವಾತ್ ।
ಬಂಧಮೋಚನ ಕೃತ್ತವತ್ತಃ ಲೇಖಾಗ್ರೇಷ್ವಪಿ ದುರ್ಲಭಃ ॥
ಶ್ವಪಾಕೋಪ್ಯುಧೃತೇಶ್ಸೇವಂ ರವೀಂದ್ವಗ್ನೀಕ್ಷಣಾಚ್ಛತಂ ।
ತ್ರಾತಾರಂ ತ್ವಾಂ ಪ್ರಪನ್ನೋಽಸ್ಮಿ ಹಿತಕೃತ್ ಪರಿಪಾಹಿ ಮಾಮ್ ॥

<u>ಶ್ಲೋಕದ ಅರ್ಥ :</u> ಹಾಲಾಹಲ ವಿಷದಿಂದ ದೇವತೆಗಳನ್ನು ರಕ್ಷಿಸಿದ ಹೇ, ಮಹಾಬಲೇಶ್ವರ (ನನ್ನನ್ನು) ರಕ್ಷಿಸು, ಸೂರ್ಯ, ಚಂದ್ರ ಮತ್ತು ಅಗ್ನಿಗಳೆಂಬ ನಿನ್ನ ನೇತ್ರಗಳಿಂದ ಈಕ್ಷಿಸಿದರೆ ಚಂಡಾಲನೂ ಉದ್ಧಾರವಾಗುತ್ತಾನೆಂಬುದನ್ನು ಕೇಳಿ ರಕ್ಷಕನಾದ ನಿನ್ನ ಬಳಿ ಬಂದಿದ್ದೇನೆ. ಹೇ, ಹಿತವನ್ನುಂಟುಮಾಡುವ ಪರಮೇಶ್ವರ ನನ್ನನ್ನು ರಕ್ಷಿಸು. ಈ ಶ್ಲೋಕದ ವೈಶಿಷ್ಟ್ಯವೆಂದರೆ ಶ್ಲೋಕದ ಪ್ರತಿಯೊಂದು ಪಾದದ

ಮೊದಲನೇ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿದರೆ ಶ್ಲೋಕದ ಮೊದಲನೇ ಪಾದವಾದ 'ಮಹಾಬಲೇಶ್ವರ ತ್ರಾಹಿ' ಎಂಬ ಪಾದ ಸಿದ್ಧವಾಗುತ್ತದೆ.

ಅನಂತರ ತಾಮ್ರಗೌರಿ ಮಂದಿರಕ್ಕೆ ತೆರಳಿ ದೇವಿಯ ದರ್ಶನ ಪಡೆದರು. ಬಳವಂತರಾಯರು ಅಹಲ್ಯಾಬಾಯಿಯ ಛತ್ರದ ಮಹಡಿಯ ಮೇಲೆ ಅವರಿಗೆ ವಸತಿ ಏರ್ಪಡಿಸಿದ್ದರು. ಸದಾ ಸಾಧು-ಸಂತರ ಸಹವಾಸಕ್ಕಾಗಿ ಹಾತೊರೆಯುತ್ತಿದ್ದ ಗಣೇಶನಿಗೆ ವಾಸುದೇವಾನಂದರ ಪ್ರಾತರ್ವಿಧಿ, ಸ್ನಾನ, ಮಧುಕರಿ ಮುಂತಾದ ನಿತ್ಯಕರ್ಮಗಳಿಗೆ ಸಹಾಯಕ-ಸೇವಕನಾಗಿ ಕಾರ್ಯ ನಿರ್ವಹಿಸುವ ಜವಾಬ್ದಾರಿ ವಹಿಸಲಾಯಿತು. ಇದೊಂದು ತನಗೆ ಒದಗಿದ ಸೌಭಾಗ್ಯ ಎಂದು ಆತ ಸಂತೋಷಪಟ್ಟ. ಒಂದು ದಿನ ಪ್ರಾತಃಕಾಲ ಯತಿವರ್ಯರ ಪಾದತೊಳೆದು ಪಂಚಾಮೃತ ಅಭಿಷೇಕ ಮಾಡಿ, ಪೂಜಿಸಿ ತೀರ್ಥ-ಪ್ರಸಾದ ಸ್ವೀಕರಿಸಬೇಕೆಂಬ ಹಂಬಲದಿಂದ ಫಲ-ಪುಷ್ಪ, ಪಂಚಾಮೃತಾದಿ ಪೂಜಾ ಪರಿಕರಗಳ ಸಿದ್ಧತೆಯೊಂದಿಗೆ ವಾಸುದೇವಾನಂದರ ಬಳಿ ಬಂದಾಗ ಅವರು ಪಾದಪೂಜೆಗೆ ಸಮ್ಮತಿಸಲಿಲ್ಲ. ಆದರೆ ಕರುಣೆಯಿಂದ "ಪಾದಪೂಜೆ ಮಾಡಿಸಿಕೊಳ್ಳುವುದೆಂದರೆ, ಅದು ವ್ಯಕ್ತಿತ್ವದ ವೈಭವೀಕರಣವಾಗುತ್ತದೆ. ವಿರಕ್ತನಾಗಿ ಎಲ್ಲವನ್ನೂ ಪರಿತ್ಯಜಿಸಿದವನಿಗೆ ಇದು ಉಚಿತವಾದುದಲ್ಲ. ನೀನು ನನ್ನನ್ನು ಪೂಜಿಸುವದರಿಂದ ಏನನ್ನೂ ಪಡೆಯಲಾರೆ. ನಾನು ನಿನಗೆ ಶುಭವನ್ನು ಹಾರೈಸಿ, ಆಶೀರ್ವದಿಸಬಹುದು. ಆದರೆ ನಿನ್ನ ವ್ಯಕ್ತಿತ್ವ ವಿಕಾಸಕ್ಕೆ, ನಿನ್ನ ಭವಿಷ್ಯದ ಗುರಿ ಸಾಧನೆಗೆ ನೀನೇ ಪ್ರಯತ್ನಿಸಬೇಕು. ಸತ್-ಸಂಕಲ್ಪದ ಸತತ ಪ್ರಯತ್ನವೇ ತಪಸ್ಸು. ತಪಸ್ಸಿನಿಂದ ನೀನೇನು ಆಗಬೇಕೆಂದು ಆಶಿಸುವೆಯೋ ಅದೇ ಆಗುವೆ. ಕೀರ್ತಿಯ ಕಾಮನೆ, ಪ್ರತಿಷ್ಠೆಯ ವಾಸನೆ ಏನೇನೋ ಆಮಿಷಗಳು ದಾರಿನ ತಪ್ಪುವಂತೆ ಮಾಡುತ್ತವೆ. ಭಾವ ವೈಕಲ್ಯಗಳಿಗೆ ವಶವಾಗದೇ ಶಿಷ್ಟ ಸಂಸ್ಕಾರದಲ್ಲಿ ದೈವತ್ವವನ್ನು ಪಡೆಯುವದೇ ಸಾಕ್ಷಾತ್ಕಾರ" ಹೀಗೆ ಮುಗ್ಧ ಮನಸ್ಸಿನ ಎಳಸು ಭಾವನೆಗಳ ಕತ್ತಲೆಯ ತೆರೆ ಸರಿಸುತ್ತ ಗಣೇಶನ ಮನೋಭೂಮಿಕೆಯಲ್ಲಿ ವಾಸ್ತವದ ಬೀಜ ಬಿತ್ತಿದರು. ಆಗ ಗಣೇಶನು "ನನಗೆ ಮಂತ್ರೋಪದೇಶ ನೀಡಿ ಶಿಷ್ಯನನ್ನಾಗಿ ಸ್ವೀಕರಿಸಬೇಕು" ಎಂದು ಪ್ರಾರ್ಥಿಸಿದನು. ಆಗ ವಾಸುದೇವಾನಂದರು ಗಣೇಶನಿಗೆ ದತ್ತಾತ್ರೇಯನ ದ್ವಾದಶಾಕ್ಷರಿ ಮಂತ್ರವನ್ನು ಉಪದೇಶಿಸಿದರು. "ಸಜ್ಜನರ ಸಂಗ ಹೆಜ್ಜೇನು ಸವಿದಂತೆ" ಎಂಬ ಗಾದೆಯ ಮಾತಿನಂತೆ ಆತ ಸಂತರ ಸಂಗದಲ್ಲಿ ದಿವ್ಯಾನುಭೂತಿ ಆನಂದವನ್ನು ಸವಿದನು.

ವಾಸುದೇವಾನಂದರದು ಅತ್ಯಂತ ಸರಳ ಜೀವನ. ದಂಡ, ಕಮಂಡಲ, ಎರಡು ಜತೆ ಕಾವಿಶಾಟಿಗಳು ಇವಿಷ್ಟರಿಂದಲೇ ಅವರ ಬದುಕು ಪೂರ್ಣಗೊಂಡಿದ್ದವು. ದಿನಾಲು ಮಧ್ಯಾಹ್ನ ಮೂರು ಮನೆಗಳಿಗೆ ಮಾತ್ರ ಅವರು ಭಿಕ್ಷೆಗೆ ಹೋಗುತ್ತಿದ್ದು, ಒಂದು ಮನೆಯಲ್ಲಿ ಮೂರು ಮುಷ್ಟಿ ಅನ್ನ ಮಾತ್ರ ಸ್ವೀಕರಿಸುತ್ತಿದ್ದರು. ಯಾವುದೇ ಕಾರಣದಿಂದ ಆ ಮನೆಗಳಲ್ಲಿ ಭಿಕ್ಷೆ ದೊರೆಯದಿದ್ದರೆ ಅಂದು ಅವರು ಉಪವಾಸ ಇರುತ್ತಿದ್ದರು. ಅವರು ಹೋದ ಕಡೆಯಲ್ಲೆಲ್ಲ ಆ ಊರಿನ ಜನರು ತಮ್ಮ ಮನೆಗಳಲ್ಲಿ ವಿಶೇಷ ಅಡುಗೆ ತಯಾರಿಸಿ, ವಾಸುದೇವಾನಂದರು ಭಿಕ್ಷೆಗೆ ಬರುವುದನ್ನು ಎದುರುನೋಡುತ್ತಿದ್ದರು. ಅವರಿಗೆ ಭಿಕ್ಷೆ ನೀಡುವ ಭಾಗ್ಯ ತಮ್ಮದಾಗಲಿ ಎಂದು ಎಲ್ಲರೂ ಹಾರೈಸುತ್ತಿದ್ದರು.

ಪ್ರತಿದಿನ ಸಾಯಂಕಾಲ ಅಹಲ್ಯಾಬಾಯಿಯ ಛತ್ರದಲ್ಲಿ ವಾಸದೇವಾನಂದರು ಉಪನ್ಯಾಸ ಮಾಡುತ್ತಿದ್ದರು. ಈಗಾಗಲೇ ಗಣೇಶನು ಅವರ ಪ್ರೀತಿಗೆ ಪಾತ್ರನಾಗಿ ಅಂತರಂಗದ ಶಿಷ್ಯನಾಗಿದ್ದನು.

ಅಂತಲೇ ಅವರು ಆತನನ್ನು ಹತ್ತಿರಕ್ಕೆ ಕರೆದು "ವಾಸುದೇವ ಮನನ" ಎಂಬ ಪ್ರಸಿದ್ಧ ಸಂಸ್ಕೃತ ಗ್ರಂಥವನ್ನು ಓದಲು ಹೇಳಿ, ತಾವು ಅದನ್ನು ಅರ್ಥ ಸಹಿತ ಮರಾಠಿ ಭಾಷೆಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದರು. ಅನಂತರ ಋಗ್ವೇದ, ಯಜುರ್ವೇದ ಸಂಹಿತೆಗಳೊಂದಿಗೆ ಪದ, ಕ್ರಮ, ಘನ, ಜಟಾ, ಬ್ರಾಹ್ಮಣ ಇವುಗಳ ಪಠನ ನಡೆಯುತ್ತಿತ್ತು. ಇವೆಲ್ಲವೂ ಗೋಕರ್ಣ ಬ್ರಾಹ್ಮಣರಿಂದ ಪರಿಶುದ್ಧವಾಗಿ ಸ್ಪಷ್ಟವಾಗಿ ಉಚ್ಚರಿಸಲ್ಪಡುವದನ್ನು ಕೇಳಿ ವಾಸುದೇವಾನಂದರಿಗೆ ತುಂಬಾ ಸಂತೋಷವಾಯಿತು. ಮುಂದಿನ ದಿನಗಳಲ್ಲಿ ಅವರು 'ವೈದಿಕ ದತ್ತಾತ್ರೇಯ ತತ್ವ' ಹಾಗೂ 'ವೈದಿಕ ಋಭು ದೇವತಾತತ್ವ' ಇವುಗಳ ಮೇಲೆ ಪ್ರವಚನ ನೀಡಿದರು.

ಗೋಕರ್ಣದಲ್ಲಿ ಹದಿಮೂರು ದಿನಗಳ ಕಾಲ ತಂಗಿದ ವಾಸುದೇವಾನಂದರು ಒಂದೊಂದು ದಿನ ಒಂದೊಂದು ಬಗೆಯ ವಿಶಿಷ್ಟ ವಿಷಯದ ಕುರಿತು ವ್ಯಾಖ್ಯಾನ ಮಾಡಿದರು. ಅವುಗಳಲ್ಲಿ ವೈದಿಕ ಋಭುದೇವತಾತತ್ವ ಗಣೇಶನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಕಾರಣ ಇದರಲ್ಲಿ ಅವರು ಹೇಗೆ ಮನುಷ್ಯನು ತಪಸ್ಸಿನಿಂದ ದೈವತ್ವ ಪಡೆದುಕೊಳ್ಳಬಹುದು; ಸೋಮಪಾನ ಎಂದರೇನು? ಅಮೃತಪಾನ ಎಂದರೇನು? ಸಾಂಕೇತಿಕವಾಗಿ ಹೇಳಲ್ಪಡುವ ಇದರ ನಿಜವಾದ ತಾತ್ಪರ್ಯವೇನು? ಹಾಗೂ ಋಭುದೇವತೆಗಳ ಕಥೆಯಲ್ಲಿ ಹೇಳಲ್ಪಟ್ಟಿರುವ ಮನುಷ್ಯಗಂಧ ನಿವಾರಣೆಯಾಗದೆ ದೈವತ್ವ ಅಥವಾ ಅಮೃತತ್ವ ಪ್ರಾಪ್ತಿ ಸಾಧ್ಯವಿಲ್ಲ... ಇತ್ಯಾದಿ ವಿಷಯಗಳ ಬಗೆಗೆ ಬಹಳ ವಿಸ್ತಾರವಾಗಿ ಮನಮುಟ್ಟುವಂತೆ ವಿವರಿಸಿದಾಗ ಆತನ ಮುಂದೆ ಹೊಸದೊಂದು ಆಧ್ಯಾತ್ಮಿಕ ಲೋಕವೇ ತೆರೆದುಕೊಂಡಿತು. ಹೀಗೆ ವಾಸದೇವ ಸರಸ್ವತಿ ಯತಿಗಳಿಂದ ಗಣೇಶನಿಗೆ ವೈದಿಕತತ್ವಗಳ ಪ್ರಾಥಮಿಕ ಪರಿಚಯವಾಯಿತು.

ಅಂದು ಪುಷ್ಯ ಪೌರ್ಣಿಮಿ ದಿನ. ಯತಿಗಳು ಕ್ಷೌರ ಮಾಡಿಸಿಕೊಳ್ಳುವ ನಿಯಮವಿರುವುದರಿಂದ ಗಣೇಶನು ವಾಸದೇವಾನಂದರನ್ನು ಕೋಟಿತೀರ್ಥದ ಉತ್ತರದಿಕ್ಕಿನಲ್ಲಿ ತಾನು ವಾಸವಾಗಿರುವ ಚಿಕ್ಕ ಮಂಟಪಕ್ಕೆ ಕರೆದೊಯ್ದು, ಕ್ಷೌರಾದಿ ಮೃತ್ತಿಕಾ ಸ್ನಾನ ವಿಧಿಯನ್ನು ಪೂರಯಿಸುವುದಕ್ಕೆ ಅನುವು ಮಾಡಿಕೊಟ್ಟನು. ತನ್ನ ಆ ಪುಟ್ಟ ಮಂಟಪಕ್ಕೆ ಅವರು ಆಗಮಿಸಿದಾಗ ಸಾಕ್ಷಾತ್ ದೇವರೇ ತನ್ನ ಮನೆಗೆ ಬಂದಷ್ಟು ಸಂತೋಷವಾಯಿತು ಸಂತ ಸೇವಕ ಗಣೇಶನಿಗೆ. ಗುರುವೇ ಪ್ರತ್ಯಕ್ಷ ದೇವರು ಎಂದು ತಿಳಿದ ಆತನಿಗೆ ಅವರಿಗಾಗಿ ಅದು ಎಂತಹ ಕೆಲಸವೇ ಇರಲಿ ಅದನ್ನು ಶಿರಸಾ ವಹಿಸಿ ಜವಾಬ್ದಾರಿಯಿಂದ ನಿರ್ವಹಿಸುವುದು ಅಭಿಜಾತ ಗುಣವಾಗಿತ್ತು.

ಮಧುಕರಿ ಅಂದರೆ ಜೇನುದುಂಬಿಗಳು ಸಸ್ಯದೇವಿಯ ಬಳಿಗೆ ತೆರಳಿ ಅವಳ ಕರಗಳ ಪುಷ್ಪಪಾತ್ರೆಯಿಂದ ಮಧುವನ್ನು ತರುವ ಸಹಜವೃತ್ತಿ. ಮಗುವು ತಾಯಿಯ ಬಳಿಸಾರಿ ಉಣಿಸು ಸ್ವೀಕರಿಸುವ ಪರಿ ಅಷ್ಟು ಪವಿತ್ರ ಈ ಮಧುಕರಿ. ಅಂತೆಯೇ ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳು, ಯತಿಗಳು ಜ್ಞಾನಾರ್ಜನೆಯ ಸಿದ್ಧಿಗಾಗಿ, ಅಹಂಕಾರ ನಿವಾರಣೆಗಾಗಿ ಇದನ್ನು ಕೈಗೊಳ್ಳುವ ಪರಿಪಾಟವಿತ್ತು. ಈ ಜಗತ್ತಿನಲ್ಲಿ ಜನಿಸಿದ ಎಲ್ಲ ಜೀವಿಗಳಿಗೂ ಪ್ರಕೃತಿಮಾತೆಯೇ ಅನ್ನವನ್ನು ನೀಡುತ್ತಾಳೆ. ಅಂದರೆ ಹಣ್ಣು-ಹಂಪಲುಗಳು, ಕಂದ-ಮೂಲಗಳು, ದವಸ-ಧಾನ್ಯಗಳು ಎಲ್ಲವೂ ಅವಳ ಕೃಪೆಯೇ ಆಗಿದೆ. ಹಾಗೆಯೇ ಗೃಹಿಣಿ (ಅನ್ನಪೂರ್ಣೆ) ಪ್ರಕೃತಿಯ ಪ್ರತಿರೂಪವಾಗಿರುವುದರಿಂದ ಅವಳ ಕೈಯಿಂದ ಅನ್ನ ಸ್ವೀಕರಿಸುವ ಪರಿಪಾಟ ರೂಢಿಗೆ ಬಂತು.

ಪುಷ್ಯಕೃಷ್ಣ ಬಿದಿಗೆ ದಿನ ಮಧ್ಯಾಹ್ನ ಭಿಕ್ಷೆ ಮುಗಿಸಿ, ಸಾಯಂಕಾಲ ಸುಮಾರು ನಾಲ್ಕು ಗಂಟೆಯ ವೇಳೆಗೆ ವಾಸುದೇವಾನಂದರು ಗೋಕರ್ಣದಿಂದ ಹೊರಡಲುದ್ಯುಕ್ತರಾದಾಗ ಗಣೇಶನೊಂದಿಗೆ ಬಳವಂತರಾಯರು ಅನೇಕ ವೈದಿಕ ಬ್ರಾಹ್ಮಣರೊಡಗೂಡಿ, ವೇದಮಂತ್ರಘೋಷದೊಂದಿಗೆ ಸಿದ್ಧೇಶ್ವರ ಕ್ಷೇತ್ರದವರೆಗೆ ಅನುಸರಿಸಿ ಹೋದರು. ಅಲ್ಲಿ ವಾಸುದೇವಾನಂದರು "ಇದೇ ಗೋಕರ್ಣದ ಗಡಿ" ಎನ್ನುತ್ತ ಮಾರ್ಗದ ಮೇಲೆ ಒಂದು ಅಡ್ಡಗೆರೆ ಎಳೆದು "ನೀವೆಲ್ಲ ಇನ್ನು ಹಿಂದಿರುಗಬಹುದು" ಅಂತ ಹೇಳಿ ಕಾಲ್ನಡಿಗೆಯಲ್ಲಿ ಮುನ್ನಡೆದರು. ಆಗ ಎಲ್ಲರೂ ಕಣ್ಣಿಂದ ಅವರ ರೂಪ ಮರೆಯಾಗುವ ವರೆಗೂ ನೋಡುತ್ತಲಿದ್ದು ಬಳಿಕ ಅಲ್ಲಿಂದ ಹಿಂದಿರುಗಿದರು.

ವಾಸಿಷ್ಠ ಗಣಪತಿ ಮುನಿಗಳ ದಿವ್ಯಜೀವನ

ವಿಶ್ವದ ಸಾಹಿತ್ಯಗಳಲ್ಲೆಲ್ಲ ಅತಿ ಪ್ರಾಚೀನವಾದುದು ಭಾರತೀಯ ಆರ್ಷದರ್ಶನ ವೇದವಾಙ್ಮಯಗಳು. ವೇದವು ಭಾರತೀಯ ಭಾಷೆಗಳಿಗೆಲ್ಲ ಮೂಲಸೆಲೆಯಾದ ಸಂಸ್ಕೃತ ಭಾಷೆಯಲ್ಲಿದೆ. 'ಸಂಸ್ಕೃತ' ಎಂದರೆ ಸಂಸ್ಕಾರಗೊಂಡಿರುವದು, ಉತ್ತಮವಾದುದು ಪ್ರತಿನಿಧಿಸುವ ಅರ್ಥವನ್ನು ಸೂಚಿಸುತ್ತದೆ. ಸಂಸ್ಕೃತಿಯನ್ನೂ ಪ್ರತಿನಿಧಿಸುವ ಪದವೂ ಆಗಿದೆ. ಇದರ ಮಹತ್ವವನ್ನು ಮನಗಂಡು ಆಕರ್ಷಿತರಾಗಿ ಆರ್ಷ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು ವಾಸಿಷ್ಠ ಗಣಪತಿಮುನಿಗಳು.

ವಾಸಿಷ್ಠಗಣಪತಿಮುನಿಗಳು ಆರ್ಷೇಯಯುಗಾನಂತರ ಸರ್ವಜ್ಞಕಲ್ಪ ಪದವನ್ನು ಪಡೆದ ಮಹಾಪುರುಷರಾಗಿದ್ದಾರೆ. ಆಂಧ್ರಪ್ರದೇಶದ ವಿಶಾಖಪಟ್ಟಣ ಮಂಡಲಕ್ಕೆ ಸೇರಿದ ಕಲವರಾಯಿ (ಕುಮುದೋಪಲ) ಎಂಬ ಚಿಕ್ಕ ಗ್ರಾಮವು ಗಣಪತಿಮುನಿಗಳ ಜನ್ಮಭೂಮಿ. ಇಲ್ಲಿ ನರಸಿಂಹಶಾಸ್ತ್ರಿ ಮತ್ತು ನರಸಮಾಂಬ ಎಂಬ ದಂಪತಿಗಳು ವಾಸಿಸುತ್ತಿದ್ದರು. ಋಗ್ವೇದಿಗಳಾದ ನರಸಿಂಹಶಾಸ್ತ್ರಿಗಳು ಆಯುರ್ವೇದ, ಜ್ಯೋತಿಷಶಾಸ್ತ್ರ, ತಂತ್ರಶಾಸ್ತ್ರ ಮುಂತಾದವುಗಳನ್ನು ಬಲ್ಲ ವಿದ್ವಾಂಸರು.

ನರಸಿಂಹ ಶಾಸ್ತ್ರಿಗಳ ಮೊದಲ ಮಗನಾದ ಭೀಮಾಶಾಸ್ತ್ರಿಯು ಚಿಕ್ಕಂದಿನಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದನು. ಅಂತೆಯೇ ಅದರ ನಿವಾರಣೆಗಾಗಿ ತಾಯಿ ನರಸಮಾಂಬಳು ಸೂರ್ಯದೇವನಿಗೆ ಹರಕೆ ಹೊತ್ತಿದ್ದಳು. ಆಂಧ್ರಪ್ರದೇಶದಲ್ಲಿ ಅರಸವಲ್ಲಿ ಎಂಬ ಸೂರ್ಯಕ್ಷೇತ್ರವಿದೆ. ಪತಿಯಿಂದ ಸೂರ್ಯಅಷ್ಟಾಕ್ಷರೀ ಮಂತ್ರದ ಉಪದೇಶ ಪಡೆದ ನರಸಮಾಂಬಳು ಅದನ್ನು ಜಪಿಸುತ್ತ ತನ್ನ ಇಷ್ಟದೈವ ಸೂರ್ಯದೇವನನ್ನು ಆರಾಧಿಸುತ್ತಿದ್ದಳು. ಭೀಮನು ನಾಲ್ಕು ವರ್ಷದ ಬಾಲಕನಾಗಿರುವಾಗ ಹರಕೆ ನೆರವೇರಿಸಿ ಮುಡಿ ಒಪ್ಪಿಸುವದಕ್ಕಾಗಿ ಸಮೀಪದ ಅರಸವಲ್ಲಿ ಕ್ಷೇತ್ರದ ಸೂರ್ಯದೇವಾಲಯಕ್ಕೆ ಅವನನ್ನು ಕರೆದೊಯ್ದಳು. ಅಂದು ಈಶ್ವರನಾಮ ಸಂವತ್ಸರ ಮಾಘ ಶುಕ್ಲ ರಥಸಪ್ತಮಿ. ಹರಕೆ ಪೂರಯಿಸಿದ ನಂತರ ನರಸಮಾಂಬಳು ನಿತ್ಯದಂತೆ ಸೂರ್ಯದೇವನ ಆರಾಧಿಸಿ ದೇವಾಲಯದ ಆವರಣದಲ್ಲಿಯೇ ಅಂದು ರಾತ್ರಿ ಸೂರ್ಯದೇವನನ್ನು ಧ್ಯಾನಿಸುತ್ತ ನಿದ್ದೆಹೋದಳು. ರಾತ್ರಿ ಕಳೆದು ಮೂರನೇ ಜಾವ ಸಮೀಪಿಸುತ್ತಿರುವಂತೆ ಸೂರ್ಯಮಂಡಲದಿಂದ ಸುವರ್ಣವರ್ಣದ ಮೈಕಾಂತಿಯಿಂದ ಒಪ್ಪುವ ದಿವ್ಯಸ್ತ್ರೀಯೊಬ್ಬಳು ಇಳಿದುಬಂದು ಪ್ರಕಾಶಮಾನವಾದ ವಸ್ತುವೊಂದನ್ನು ಅವಳ ಉಡಿಯಲ್ಲಿ ಹಾಕಿದಂತೆಯೂ ಅದು ಕಣ್ಣು ಕೋರೈಸಿ ಮಿಂಚಿ ಮಾಯವಾದಂತೆ ಸ್ವಪ್ನವಾಯಿತು.ಇದರಿಂದ ಭಯಗೊಂಡ ನರಸಮಾಂಬಳಿಗೆ ಎಚ್ಚರವಾಯಿತು.



ಶ್ರೀ ಕಾವ್ಯಕಂಠ ವಾಸಿಷ್ಠ ಗಣಪತಿಮುನಿಗಳು

ನಸುಕು ಹರಿಯುತ್ತಲೇ ಪ್ರಾತರ್ವಿಧಿಗಳನ್ನು ಪೂರೈಸಿ ಸ್ವಪ್ನವನ್ನು ಮತ್ತೆ ಮತ್ತೆ ನೆನೆಯುತ್ತಾ ಇಷ್ಟದೇವರಿಗೆ ಭಯ ಭಕ್ತಿಯಿಂದ ಕೈಮುಗಿದು ಸಂಭ್ರಮ ಸಂತೋಷಗಳಿಂದ ಮಗನೊಂದಿಗೆ ಕುಮುದೋಪಲದಲ್ಲಿರುವ ತನ್ನ ಮನೆಗೆ ಬಂದಳು.

ಪತಿ ನರಸಿಂಹ ಶಾಸ್ತ್ರಿಗಳಿಗೆ ಸ್ವಪ್ನ ವೃತ್ತಾಂತವನ್ನು ಅರುಹಿದಾಗ ಅವರು ಇದು ದೈವೀ ಅನುಗ್ರಹದ ಶುಭಸೂಚನೆಯೆಂದು ತಿಳಿಸಿದರು.ಹೀಗಿರುವಾಗ ಆರೇಳು ತಿಂಗಳು ಕಳೆಯುತ್ತಿರುವಂತೆ ನರಸಿಂಹಶಾಸ್ತ್ರಿಗಳ ಮನಸ್ಸಿನಲ್ಲಿ ಕಾಶಿಗೆ ಹೋಗಿರಬೇಕೆಂಬ ಅವ್ಯಕ್ತ ಪ್ರೇರಣೆಯುಂಟಾಯಿತು. ಆಗಿನ ಕಾಲದಲ್ಲಿ ಕಾಶಿಗೆ ಹೋಗಿಬರಲು ಕಾಲನಡಿಗೆ ಮತ್ತು ರೈಲು ಪ್ರಯಾಣವೂ ಸೇರಿದಂತೆ ಸುಮಾರು ಮೂರು ತಿಂಗಳ ಅವಧಿಯು ಹಿಡಿಯುತ್ತಿತ್ತು. ದೃಢಕಾಯರಾಗಿ ಧೈರ್ಯ, ಸ್ಥೈರ್ಯ, ಆರೋಗ್ಯ ಚೆನ್ನಾಗಿರುವವರು ಮಾತ್ರವೇ ಕಾಶಿಯಾತ್ರೆಗೆ ಹೋಗುತ್ತಿದ್ದರು. ನರಸಿಂಹ ಶಾಸ್ತ್ರಿಗಳು ಯಾವುದನ್ನೂ ಲೆಕ್ಕಿಸದೇ ತನ್ನಾಸೆಯು ದೈವೀಪ್ರೇರಣೆಯೆಂದೇ ಬಗೆದು ವಾರಣಸಿಗೆ ನಡೆದು ಅಲ್ಲಿ ವಿಶ್ವೇಶ್ವರಘಾಟಿನ ಶ್ರೀ ಧುಂಡಿ ಗಣಪತಿಯ ಸನ್ನಿಧಿಯಲ್ಲಿ ತಪೋನಿರತರಾದರು. ತನ್ಮಯಭಾವದ ಆರಾಧನೆಯಲ್ಲಿ ಸ್ವಲ್ಪಕಾಲ ಕಳೆದಿರಲು ಅದೊಂದು ದಿನ ಅವರು ಧ್ಯಾನಮಗ್ನರಾಗಿರುವಾಗ ಶಿಶುವೊಂದು ಬಂದು ತೊಡೆಯೇರಿದಂತೆ ತೋರಲು ವಿಚ್ಛಿತ್ತ ಶಾಸ್ತ್ರಿಗಳು ಕಣ್ತೆರೆದು ಸುತ್ತಲೂ ನೋಡಿದರು. ಎಲ್ಲಿಯೂ ಏನೂ ಕಾಣಿಸಲಿಲ್ಲ. ಇದು ಗಣಪತಿಯ ಅನುಗ್ರಹವೇ ಸರಿ ಎಂದು ಯೋಚಿಸುತ್ತ ತಮ್ಮ ಆರಾಧನೆಯನ್ನು ಅಂದಿಗೇ ಪೂರ್ಣಗೊಳಿಸಿ ಕಾಶಿಯಿಂದ ಹೊರಟು ಮಾವನ ಮನೆಗೆ ಬಂದರು.

ಬಹುಧಾನ್ಯ ಸಂವತ್ಸರ ಕಾರ್ತಿಕ ಬಹುಳ ಅಷ್ಟಮಿ ಆದಿತ್ಯವಾರ ಸಂಜೆ 5 ಘಂಟೆಗೆ (17–11–1878) ಗಣಪತಿಮುನಿಗಳ ಜನನವಾಯಿತು. ತಾಯಿ ತನಗೆ ಸೂರ್ಯದೇವರ ಅನುಗ್ರಹವೆಂದೂ ತಂದೆ ಗಣಪತಿಯ ವರಪ್ರಸಾದವೆಂದೂ, ನಂಬಿರುವ ಕಾರಣ ಮಗುವಿಗೆ ದಂಪತಿಗಳಿಬ್ಬರೂ ಪ್ರೀತಿಯಿಂದ 'ಸೂರ್ಯಗಣಪತಿ' ಎಂದು ನಾಮಕರಣ ಮಾಡಿದರು.

ಸಂತಾಪ, ಸಂಕಷ್ಟಗಳ ಸಾಂಗತ್ಯವಾದ ಬಾಲ್ಯ

ತಾಯಿ–ತಂದೆಯರ ಏನೆಲ್ಲ ನಿರೀಕ್ಷೆಗಳೊಂದಿಗೆ ದೈವಾನುಗ್ರಹದ ಶುಭ ಸೂಚನೆಯ ಹಿನ್ನಲೆಯಲ್ಲಿ ಜನಿಸಿದ್ದರೂ ಮಗುವಿನ ಬಾಲ್ಯದ ದಿನಗಳು ಸಂತೋಷದಾಯಕವಾಗಿರಲಿಲ್ಲ. ಬಾಲಗ್ರಹ, ಅಪಸ್ಮಾರ, ಮೂರ್ಛೆ ಮುಂತಾದ ರೋಗಗಳು ತೀವ್ರವಾಗಿ ಬಾಧಿಸುತ್ತಿದ್ದವು. ಸದಾ ಮಂಕು ಕವಿದಂತೆ ಇರುವದು. ಅಳುವದು ತಾಯಿ–ತಂದೆಯರಿಗೆ ಆತಂಕವನ್ನುಂಟುಮಾಡಿತ್ತು. ಐದನೇ ವರ್ಷ ಆರಂಭವಾಗುತ್ತಿರುವಂತೆ ನರಸಿಂಹಶಾಸ್ತ್ರಿಗಳು ಮಗನಿಗೆ ಶಿವಪಂಚಾಕ್ಷರೀ ಮಂತ್ರವನ್ನು ಉಪದೇಶಿಸಲು ಆತನು ಅದನ್ನು ಮನಸ್ಸಿನಲ್ಲಿಯೇ ಜಪಿಸುತ್ತಿದ್ದನು. ಕೃಶಾಂಗನೂ ದುರ್ಬಲನೂ ಆದ ಮೂಕಬಾಲಕನ ಮುಂದಿನ ಭವಿಷ್ಯದ ಬಗೆಗೆ ಚಿಂತಿಸಿದ ತಂದೆ ಅವನನ್ನು ಕಾಶಿ, ಪ್ರಯಾಗ ಮುಂತಾದ ಪುಣ್ಯಕ್ಷೇತ್ರಗಳಿಗೆ ಕರೆದೊಯ್ದು ತೀರ್ಥಯಾತ್ರೆಗೈದು ಊರಿಗೆ ಮರಳಿದರು.

ಚಿಟಿಕಾ ಚಿಕಿತ್ಸೆ

ಆರನೇ ವಯಸ್ಸಿಗೆ ಕಾಲಿಡುತ್ತಿದ್ದಂತೆ ನೆಪಮಾತ್ರದ ಚಿಕಿತ್ಸೆಯೊಂದರಿಂದ ಶಾರೀರಿಕ ತೊಂದರೆಗಳೆಲ್ಲವೂ ಇನ್ನಿಲ್ಲದಂತೆ ಮಾಯವಾಗಿ ಹೋದವು. ನರಸಿಂಹಶಾಸ್ತ್ರಿಗಳು ಆ ಕಾಲದಲ್ಲಿ ರೂಢಿಯಲ್ಲಿದ್ದ 'ಚಿಟಿಕೆ ಹಾಕುವದು' ಎಂಬ ಆಯುರ್ವೇದ ಚಿಕಿತ್ಸಾಪದ್ಧತಿಯಂತೆ ಕಬ್ಬಿಣದ ಚಿಕ್ಕ ಮೊಳೆಯನ್ನು ಚಿಮುಟದಿಂದ ಹಿಡಿದು ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ ರೋಗಗ್ರಸ್ತ ಮಗುವಿನ ಹಣೆಯ ಎರಡೂ ಬದಿಗಳಲ್ಲಿ, ಕೈಗಳು, ಕಾಲುಗಳು, ಪೃಷ್ಠ ಮತ್ತು ಪಕ್ಕೆಗಳ ಮೇಲೆ ಒತ್ತಿಹಿಡಿದು ತೆಗೆಯುವ ಈ ವಿಧಾನದಿಂದ ಚಿಕಿತ್ಸೆ ಮಾಡಿದರು.

ಕನ್ನಡವನ್ನೂ ಬಲ್ಲವರಾಗಿದ್ದ ಗಣಪತಿಮುನಿಗಳು ತಮ್ಮ ಜೀವನದ ಕೆಲವು ವಿಷಯಗಳನ್ನು ತೆಲಗು, ಸಂಸ್ಕೃತ ಹಾಗೂ ಕನ್ನಡದಲ್ಲಿಯೂ ಟಿಪ್ಪಣಿ ಬರೆದಿಡುತ್ತಿದ್ದರು. ಚಿಟಿಕಾ ಪ್ರಯೋಗದ ಚಿಕಿತ್ಸೆ ಬಗೆಗೆ ಅವರ ಅನುಭವದ ಮಾತುಗಳಿವು.

"ಚಿಟಿಕಾ ಚಿಕಿತ್ಸೆಯು ಒಂದು ರೀತಿಯ ಕ್ರೂರವಾದ ರಕ್ಕಸ ಪ್ರಯೋಗವೇ ಆದರೂ ಒಳ್ಳೆಯ ಪರಿಣಾಮವಿರುವ ಕಾರಣ ಹಳ್ಳಿಗಾಡು ಪ್ರದೇಶದಲ್ಲಿ ಅದು ಅನಿವಾರ್ಯವೂ ಆಗಿದೆ."

ವಿಶ್ವ ಚೈತನ್ಯ ಶಕ್ತಿಯ ಅಗಾಧತೆಯನ್ನು ಪ್ರಕೃತಿಸೃಷ್ಟಿಯ ರಹಸ್ಯವನ್ನು ಅರಿತವರಾರು ! ಪವಾಡ ಸದೃಶ ರೀತಿಯಲ್ಲಿ ಜನ್ಮಜಾತವಾಗಿ ಬಂದಿದ್ದ ಅನಾರೋಗ್ಯ, ಶಾರೀರಿಕ-ಮಾನಸಿಕ ತೊಂದರೆಗಳು ಕೇವಲ ಕೆಲವೇ ದಿನಗಳಲ್ಲಿ ಊಹಿಸಲೂ ಸಾಧ್ಯವಿಲ್ಲದ ರೀತಿಯಲ್ಲಿ ಹರಿದುಹೋಗುವದೆಂದರೇನು! ಗ್ರಹಣದಿಂದ ಬಿಡುಗಡೆಯಾದ ಸೂರ್ಯನಂತೆ ಹೊಸಕಾಂತಿಯಿಂದ ನವೋತ್ಸಾಹ ಪಡೆದುಕೊಳ್ಳುವ ಗುಟ್ಟೇನು? ಇವೆಲ್ಲ ಮನುಜ ಕಲ್ಪನೆಗೂ ನಿಲುಕದ ನಿಗೂಢ ವಿಸ್ಮಯಗಳು.

ದಿನದಿಂದ ದಿನಕ್ಕೆ ಬಾಲಕ ಗಣಪತಿಯಲ್ಲಿ ಆರೋಗ್ಯ ಸುಧಾರಿಸುತ್ತಿರಲು ಹೊಸಚೈತನ್ಯ, ಅಪಾರ ಉತ್ಸಾಹ, ಕಣ್ಣುಗಳಲ್ಲಿ ಕಾಂತಿ ಚಿಮ್ಮತೊಡಗಿತು. ಅಕ್ಷರ ಕಲಿಕೆಯೊಂದಿಗೆ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಆರಂಭವಾಯಿತು. ಮನೆಯಲ್ಲಿಯೂ ಮೊದಲಿಗೆ ರಾಮಾಯಣಮಹಾಕಾವ್ಯದ ಬಾಲಕಾಂಡ ಕಂಠಗತವಾಯಿತು. ಒಂದೊಂದಾಗಿ ಸಂಸ್ಕೃತ ಗ್ರಂಥಗಳನ್ನು ಓದುತ್ತ ಗ್ರಹಣಶಕ್ತಿ ಬೆಳೆಯುತ್ತಿದ್ದಂತೆ ಧಾರಣ ಸಾಮರ್ಥ್ಯ ಹೆಚ್ಚಿತು. ಏಳರಿಂದ ಎಂಟನೇ ವಯಸ್ಸಿನಲ್ಲಿ ಯಾವ ವಿಷಯವೇ ಆಗಲಿ ಒಮ್ಮೆ ಓದಿದರೆ ಅಥವಾ ಕೇಳಿಸಿಕೊಂಡರೆ ಅದು ನೆನಪಿನಲ್ಲಿ ಸ್ಥಿರವಾಗಿ ಉಳಿಯುತ್ತಿತ್ತು. ತನ್ನ ಅಸಾಮಾನ್ಯವಾದ ಚುರುಕು ಬುದ್ಧಿಯಿಂದ ಪಾಠಶಾಲೆಯಲ್ಲಿ ಈತನೇ ನಾಯಕನಾದನು. ಆಟ, ಓಟಗಳಲ್ಲಿ ಪ್ರಕೃತಿಯ ಮುಕ್ತ ವಾತಾವರಣದಲ್ಲಿ ತನ್ನ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರೂ ಪರೀಕ್ಷೆ ಸಮೀಪಿಸುತ್ತಿರುವಾಗ ತನ್ಮಯನಾಗಿ ಓದಿ ಸುಲಭವಾಗಿ ಉತ್ತೀರ್ಣನಾಗುತ್ತಿದ್ದನು.

ಗಣಪತಿಮುನಿಗಳ ಮಾತೃಪ್ರೇಮ ಅನನ್ಯವಾಗಿತ್ತು. ನಿತ್ಯ ಸಂಧ್ಯಾ ಸಮಯದಲ್ಲಿ ತಾಯಿಯು ದೇವರಿಗೆ ದೀಪ ಬೆಳಗುವ ಕಾಲಕ್ಕೆ ಸರಿಯಾಗಿ ಗೆಳೆಯರ ಜತೆಯ ಬಯಲಿನಾಟವ ಮುಗಿಸಿ ಮನೆ ಸೇರುತ್ತಿದ್ದನು. ಒಡನೆಯೇ ಕೈಕಾಲು ಮುಖತೊಳೆದು ದೇವರಿಗೆ ನಮಸ್ಕರಿಸಿ ತಾಯಿಬಳಿಗೆ ಬಂದು ಪ್ರಾಂಜಲಭಾವದಿಂದ ಅಂಜಲಿಬದ್ಧನಾಗಿ ಅವಳಿಗೂ ವಂದಿಸಿ ತನ್ನ ನಿತ್ಯಪಾಠದಲ್ಲಿ ಮಗ್ನನಾಗುತ್ತಿದ್ದನು.

ತಾಯಿ–ತಂದೆಯರ ಬಗೆಗೆ ಅವನಿಗಿರುವ ಭಯ ಭಕ್ತಿ ವಿಧೇಯಭಾವಗಳೇ ಆತನ ಉದಾತ್ತ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಯಿತು.

ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಮುಗಿದಾಗ ಜನ್ಮಭೂಮಿ ಸಂಸ್ಕೃತಿಯಕರೆ ಬಾಲಕ ಗಣಪತಿಯನ್ನು ತನ್ನೆಡೆಗೆ ಸೆಳೆಯಿತು. ನಮ್ಮ ನೆಲದ ಮೂಲಭಾಷೆಯಾದ ಸಂಸ್ಕೃತದತ್ತ ಒಲವು ಬೆಳೆಯಿತು. ಅಂತೆಯೇ ಸಂಸ್ಕೃತಕಾವ್ಯ, ನಾಟಕ, ಅಲಂಕಾರ, ವ್ಯಾಕರಣ ಮುಂತಾದವುಗಳ ಕಲಿಕೆಗೆ ಮನ ಹಂಬಲಿಸಿತು. ಎಂಟನೇ ವಯಸ್ಸಿಗೆ ಭಾರತೀಯ ತತ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ನ್ಯಾಯ ಮತ್ತು ಮೀಮಾಂಸಾದಿ ಶಾಸ್ತ್ರಗಳ ಅಭ್ಯಾಸ ಮಾಡಿದ. ಹತ್ತನೇ ವಯಸ್ಸಿಗೆ ಸರಾಗವಾಗಿ ಪಂಚಾಂಗ ಗಣನೆಮಾಡಿ ಹನ್ನೆರಡನೇ ವರ್ಷಕ್ಕೆ ಕಾಳಿದಾಸನ 'ಮೇಘದೂತ' ಓದಿ ತಾನೂ ಅದರಂತೆಯೇ ಸಂಸ್ಕೃತದಲ್ಲಿ 'ಭೃಂಗ ಸಂದೇಶ' ಎಂಬ ಖಂಡಕಾವ್ಯವನ್ನು ರಚಿಸಿದ. ಹದಿನಾಲ್ಕರಿಂದ ಹದಿನೆಂಟನೇ ವಯಸ್ಸಿನವರೆಗೆ ಬೊಬ್ಬಿಲಿ ಸಂಸ್ಥಾನದ ಪಾಠಶಾಲೆ ಲೋಕೇಶ ಅಗ್ರಹಾರದ ಪಂಡಿತ ಶ್ರೇಷ್ಠರಾದ ವೆಂಕಟೇಶರವರ ಬಳಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ನಡೆಯಿತು. ಈ ಅವಧಿಯಲ್ಲಿ ವಸತಿ ಸಮಸ್ಯೆ, ವಾರದ ಮನೆಯ ಊಟ ಮುಂತಾದವುಗಳಿಂದಾಗಿ ಕಷ್ಟ ಅನುಭವಿಸಬೇಕಾಯಿತು.

ಗಣಪತಿ ಮುನಿಗಳಿಗೆ ಆಗ ಹದಿಹರೆಯ. ಸಹಜವಾಗಿ ಗೆಳೆಯರೊಡನೆ ಆಟ ಪಾಟಗಳಲ್ಲಿ ಕಲಿತು ಸುಖಿಸುವ ವಯಸ್ಸು. ಆದರೆ ಅವರ ಅಂತರಂಗದಲ್ಲಿ ಮಾತ್ರ ಏನೋ ಅರಿಯದ ತಾಕಲಾಟ ವಯಸ್ಸಿಗೆ ಮೀರಿದ ಚಿಂತನೆ ನಡೆದಿತ್ತು. ತತ್ವಶಾಸ್ತ್ರ, ಪುರಾಣ, ಧಾರ್ಮಿಕ ಗ್ರಂಥಗಳೇ ಮೊದಲಾಗಿ ಎಲ್ಲವನ್ನು ಅಧ್ಯಯನ ಮಾಡಿದ ಅವರಿಗೆ ಅವುಗಳಲ್ಲಿ ತೋರಿಬರುವ ವಿರೋಧಾಭಾಸ ವಿಚಾರಗಳಿಂದಾಗಿ ಹಲವು ಪ್ರಶ್ನೆಗಳು ಸಂಶಯಗಳು ಹುಟ್ಟಿಕೊಂಡವು. ಹುಟ್ಟು, ಸಾವು, ಬದುಕು, ಆತ್ಮ ಇತ್ಯಾದಿ ಜಗತ್ತಿನ ಆಗು–ಹೋಗುಗಳ ಬಗೆಗೆ "ಇದು ಹೀಗೆ" ಎಂಬ ಒಂದು ಖಚಿತವಾದ ನಿಲುವಿಗೆ ಬರಲಾಗಲಿಲ್ಲ.

ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಜೀವನದ ಸಹಜ ಆಗು–ಹೋಗುಗಳನ್ನು ತೊರೆದು ವಿರಕ್ತನಾಗಿ ತಪಸ್ಸು ಆಚರಿಸಿ ಆತ್ಮಸಾಕ್ಷಾತ್ಕಾರ ಪಡೆಯುವದು ಒಂದು ಕಠಿಣ ವಿಧಾನವಾದರೆ, ವೇದಕಾಲೀನ ಋಷಿ–ಮುನಿಗಳಂತೆ ದಾಂಪತ್ಯದಿಂದ ಯುಕ್ತವಾದ ಸಹಜೀವನದ ಸಾಂಗತ್ಯದಲ್ಲಿ ತಪೋನಿರತನಾಗಿ ದಿವ್ಯಜ್ಞಾನ ಪಡೆಯುವದು ನಿಜವಾದ ಒಂದು ಸಹಜವಿಧಾನ. ಆರ್ಷಿಯುಗದಲ್ಲಿ ಸತಿ–ಪತಿ,ತಂದೆ, ಮಗ, ಮೊಮ್ಮಗ ಹೀಗೆ ವಂಶ ಪರಂಪರಾಗತವಾಗಿ ವೈವಾಹಿಕ ಜೀವನದಿಂದ ಯುಕ್ತರಾಗಿಯೇ ತಪಸ್ಸುಗೈಯುತ್ತ ದಿವ್ಯಜ್ಞಾನವನ್ನು, ಮಂತ್ರದರ್ಶನವನ್ನು ಪಡೆಯುತ್ತಿದ್ದರು. ತರುಣ ಗಣಪತಿಯ ಅಂತರಂಗ ಋಷಿಜೀವನವನ್ನೇ ಹಂಬಲಿಸಿತು. 'ನಾನೂ ತಪಸ್ಸು ಮಾಡಬೇಕು; ಋಷಿಯಾಗಬೇಕು ; ಎಂಬ ಸಂವೇದನೆ ಮನದಲ್ಲಿ ತುಂಬಿತ್ತು. ಅಂತೆಯೇ ತಪಸ್ಸನ್ನಾಚರಿಸಲು ಆತ ತಂದೆಯಿಂದ ಅನುಮತಿ ಪಡೆದುಕೊಂಡನು.

ಗಣಪತಿಮುನಿಗಳು ಹದಿನೆಂಟರ ಹರೆಯದಲ್ಲಿರುವಾಗ ಅವರ ಮಡದಿ ವಿಶಾಲಾಕ್ಷಿಯವರು ಒಮ್ಮೆ ತವರಿಗೆ ತೆರಳಿದರು. ಆಗ ಇದೇ ಸರಿಯಾದ ಸಮಯವೆಂದು ಗಣಪತಿ ಮುನಿಗಳು ಯೋಚಿಸಿ ತಪಸ್ಸುಗೈಯಲು ಎಲ್ಲಿಯಾದರೂ ದೂರಹೋಗಲು ನಿಶ್ಚಯಿಸಿದರು. ಅವರ ಅಣ್ಣಭೀಮಾಶಾಸ್ತ್ರಿ ಮತ್ತು ಗೆಳೆಯ ವೆಂಕಟೇಶ ಇವರೂ ಜತೆಯಲ್ಲಿ ಹೊರಟು ಹಲವಾರು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಭುವನೇಶ್ವರ ಮತ್ತು ಕಾಶಿಯಲ್ಲಿ ಸುಮಾರು ಎರಡು ವರ್ಷಕಾಲ ಜಪ, ತಪ, ಅನುಷ್ಠಾನಗೈದರು.

ಹೀಗಿರುವಾಗ ಈ ಸಮಯಕ್ಕೆ ಬಂಗಾಲ ಪ್ರಾಂತದ ನವದ್ವೀಪದಲ್ಲಿ ಪಂಡಿತ ಪರಿಷತ್ ನಡೆಯಲಿರುವದಾಗಿಯೂ ಅಲ್ಲಿ ಪಾಂಡಿತ್ಯ ಹಾಗೂ ಕವಿತ್ವದ ವಿದ್ವತ್‌ಪರೀಕ್ಷೆ ಜರುಗಲು ವೇದಿಕೆ ಸಜ್ಜಾಗುತ್ತಿರುವುದಾಗಿಯೂ ತಿಳಿಯಿತು. ಆಗ ಆತ್ಮೀಯರ ಒತ್ತಾಯಕ್ಕೆ ಮಣಿದು ಅವರ ಆಪ್ತವಾಕ್ಯವ ಮೀರಲಾಗದೇ ಗಣಪತಿಮುನಿಗಳು ನವದ್ವೀಪಕ್ಕೆ ತೆರಳಿ ಪಂಡಿತಪರಿಷತ್ತಿನಲ್ಲಿ ಭಾಗವಹಿಸಿದರು. ಆಗ ಅವರಿಗೆ ಕೇವಲ ಇಪ್ಪತ್ತು ವರ್ಷ ವಯಸ್ಸು.

1900 ರಲ್ಲಿ ನಡೆದ ಹರಿಸಭಾ ವಿದ್ವತ್‌ಪರೀಕ್ಷೆಯ ಸಂದರ್ಭದಲ್ಲಿ ಹೊರಹೊಮ್ಮಿದ ಗಣಪತಿ ಮುನಿಗಳ ಕಾವ್ಯಚಮತ್ಕಾರ, ವಾಕ್‌ಚಾತುರ್ಯ, ಪ್ರತಿಭಾಕೌಶಲ್ಯಗಳ ರಸಮಯ ಘಟನೆಗಳು ಬಹುಕೌತುಕವಾಗಿವೆ.

ದಿವ್ಯ ವ್ಯಕ್ತಿತ್ವದ ಮುಖಕಾಂತಿಯಿಂದ ಬೆಳಗುತ್ತಿರುವ ತರುಣ ಗಣಪತಿ ಮುನಿಗಳು ಸಭೆಯನ್ನು ಪ್ರವೇಶಿಸುತ್ತಿರುವಂತೆಯೇ ಅವರ ದೃಷ್ಟಿ ವೇದಿಕೆಯ ಕಡೆಗೆ ಹೋಯಿತು. ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದ ವಯೋವೃದ್ಧರ ಕಡೆಗೆ ಕೈ ತೋರಿಸಿ 'ಕೋ ಸೌ ಮಹಾಶಯಃ' ಈ ಮಹನೀಯರು ಯಾರು ? ಎಂದು ಸಂಗಡ ಇರುವವರನ್ನು ಕೇಳಲು ಈ ಮಾತುಗಳು ಅಧ್ಯಕ್ಷರಿಗೂ ಕೇಳಿಸಿತು. ಅದನ್ನು ಕೇಳಿದ ಅವರು ಕೂಡಲೇ ತಮ್ಮ ಪರಿಚಯವನ್ನು ಪದ್ಯರೂಪವಾಗಿ ಅರ್ಧಶ್ಲೋಕದಿಂದ ತಿಳಿಸಿಕೊಟ್ಟರು.

'ಸತ್ವರ ಕವಿತಾ ಸವಿತಾ ಗೌಡೋಽಹಂ ಕಶ್ಚಿದಂಬಿಕಾದತ್ತಃ'

'ಆಶುಕವಿತಾ ರಚನೆಯಲ್ಲಿ ಅಗ್ರಗಣ್ಯನೂ ಗೌಡ (ಬಂಗಾಲ) ದೇಶೀಯನೂ ಆದ ಅಂಬಿಕಾದತ್ತ ಎಂಬವನು ನಾನು'

ಉಳಿದ ಅರ್ಧಶ್ಲೋಕದ ಮೂಲಕ ಈ ತರುಣನು ತನ್ನ ಪರಿಚಯವನ್ನು ಮಾಡಿಕೊಡಬಲ್ಲನೇ ಎಂಬುದು ಅಂಬಿಕಾದತ್ತರ ಉದ್ದೇಶವಾಗಿತ್ತು. ಇದನ್ನೊಂದು ಸವಾಲೆಂದು ಪರಿಗಣಿಸಿದ ಗಣಪತಿಮುನಿಗಳ ಮುಖದಿಂದ ಕೂಡಲೇ ಶ್ಲೋಕದ ಉತ್ತರಾರ್ಧವು ಅಭಿವ್ಯಕ್ತವಾಯಿತು.

'ಗಣಪತಿರಿತಿ ಕವಿಕುಲಪತಿರತಿದಕ್ಷೋ ದಾಕ್ಷಿಣಾತ್ಯೋಽಹಂ'

ಕವಿಕುಲ ಶ್ರೇಷ್ಠನೂ ಸಮರ್ಥನೂ ದಕ್ಷಿಣದೇಶದವನೂ ಆಗಿರುವ ಗಣಪತಿ ನಾನು.

ಹೀಗೆ ಸವಾಲಿಗೆ ತಕ್ಕರೀತಿಯಲ್ಲಿ ಪ್ರತ್ಯುತ್ತರ ನೀಡಿ ತನ್ನ ಪರಿಚಯಮಾಡಿಕೊಟ್ಟ ತರುಣ ಗಣಪತಿಮುನಿಗಳು ಅಷ್ಟಕ್ಕೆ ಸುಮ್ಮನಾಗದೇ ಇಡೀ ಸಭೆಯೇ ನಿಬ್ಬೆರಗಾಗುವಂತೆ

'ಭವಾನ್ ದತ್ತಃ, ಅಹಂ ತ್ವೌರಸಃ' ಎಂದು ನುಡಿದರು.

ನೀವು ಅಂಬಿಕೆಯ (ಪಾರ್ವತಿಯ) ದತ್ತುಮಗನಾದರೆ ನಾನು ದೇವಿಯಿಂದಲೇ ಜನಿಸಿದ ಔರಸಪುತ್ರ.

ಗಣಪತಿಮುನಿಗಳ ಅಗಾಧ ಪಾಂಡಿತ್ಯದ ಈ ಒಂದು ಕಿರು ತುಣುಕಿನಿಂದಲೇ ಪ್ರಭಾವಿತರಾದ ಸಭಾಧ್ಯಕ್ಷ ಅಂಬಿಕಾದತ್ತರು ಅವರನ್ನು ಗೌರವದಿಂದ ವೇದಿಕೆಗೆ ಆಹ್ವಾನಿಸಿದರು. ಪರೀಕ್ಷೆಯ ನಿಯಮಗಳನ್ನು ವಿವರಿಸಿ ಸಮಸ್ಯೆಯನ್ನು ಪೂರ್ತಿಮಾಡುವಂತೆ ತಿಳಿಸಿದರು.

ಸಮಸ್ಯೆ –

ಸ್ತನವಸ್ತ್ರಂ ಪರಿತ್ಯಜ್ಯ ವಧೂಃ ಶ್ವಶುರಮಿಚ್ಛತಿ ॥

(ಕಿಂ ತು ಅನವದ್ಯಚರಿತಾ)

ತನ್ನ ಎದೆಯ ಮೇಲಿನ ವಸ್ತ್ರವನ್ನು ತೆಗೆದುಹಾಕಿ ಸೊಸೆಯು ಮಾವನ ಆಗಮನವನ್ನು ನಿರೀಕ್ಷಿಸುತ್ತಾಳೆ. (ಆದರೆ ಅವಳು ನೀತಿಗೆಟ್ಟವಳು ಅಲ್ಲ)

ಕೂಡಲೇ ಪ್ರಸಂಗಾವಧಾನದಿಂದ ಸ್ವಲ್ಪವೂ ತಡವರಿಸದೆ ಗಣಪತಿ ಮುನಿಗಳು ಸಮಸ್ಯೆಯನ್ನು ಈ ರೀತಿಯಾಗಿ ಪೂರ್ತಿಗೊಳಿಸಿದರು.

ಉತ್ತರ–

ಹಿಡಿಂಬಾ ಭೀಮದಯಿತಾ ನಿದಾಘೇ ಘರ್ಮಪೀಡಿತಾ । ಇತಿ ಪೂರಿತಮ್

ಸ್ತನವಸ್ತ್ರಂ ಪರಿತ್ಯಜ್ಯ ವಧೂಃ ಶ್ವಶುರಮಿಚ್ಛತಿ ॥ ಇತಿ ಸಮಸ್ಯಾ

ಬೇಸಿಗೆಯ ಬೇಗೆಯನ್ನು ತಾಳಲಾಗದೆ ಭೀಮಸೇನನ ಪ್ರೇಯಸಿ ಹಿಡಿಂಬೆಯು ಮೇಲುವಸ್ತ್ರವನ್ನು ಕಳಚಿ ಗಾಳಿಗೆ ಎದೆಯೊಡ್ಡುತ್ತಾಳೆ. ಭೀಮಸೇನನು ವಾಯುಪುತ್ರನಾಗಿರುವದರಿಂದ ವಾಯುವು ಹಿಡಿಂಬೆಗೆ ಮಾವನಾಗುವನಲ್ಲವೇ? ಬೇಗೆಯನ್ನು ತಣಿಸುವುದಕ್ಕಾಗಿ ಗಾಳಿಗೆ ತೆರೆದ ಎದೆಯನ್ನು ಒಡ್ಡುವದರಿಂದ ಅವಳು ಚರಿತ್ರಹೀನಳು ಎನ್ನುವಂತಿಲ್ಲವಷ್ಟೇ?

ಸಮಸ್ಯೆ –

ವತ್ಸರಸ್ಯೈಕದಾ ಗೌರೀ ಪತಿವಕ್ತ್ರಂ ನ ಪಶ್ಯತಿ ॥

ಗೌರೀದೇವಿಯು ವರ್ಷದಲ್ಲಿ ಒಂದು ದಿನ ಪತಿ ಪರಶಿವನ ಮುಖ ನೋಡುವುದಿಲ್ಲ.

ಇದನ್ನು ಕೇಳಿದ ಗಣಪತಿಮುನಿಗಳು ಸಮಸ್ಯೆಯನ್ನು ಹೀಗೆ ಪೂರ್ಣಗೊಳಿಸಿದರು.

ಉತ್ತರ–

ಚತುರ್ಥ್ಯಾಂ ಭಾದ್ರಶುಕ್ಲಸ್ಯ ಚಂದ್ರದರ್ಶನ ಶಂಕಯಾ । ಇತಿ ಪೂರಿತಮ್ ।

ವತ್ಸರಸ್ಯೈಕದಾ ಗೌರೀ ಪತಿವಕ್ತ್ರಂ ನ ಪಶ್ಯತಿ ॥ ಇತಿ ಸಮಸ್ಯಾ.

ಭಾದ್ರಪದ ಶುಕ್ಲಚತುರ್ಥಿ ಗಣೇಶಚೌತಿಯ ದಿನ ಗೌರೀದೇವಿಯು ಗಂಡನ ಮುಖನೋಡುವದಿಲ್ಲ. ಚಂದ್ರನನ್ನು ಶಿರದಲ್ಲಿ ಧರಿಸಿರುವ ಶಿವನ ಮುಖನೋಡಿದರೆ ಚಂದ್ರದರ್ಶನವಾಗಿಬಿಡುತ್ತದೆ. ಅಂದು ಚಂದ್ರನನ್ನು ನೋಡಿದರೆ ಮಿಥ್ಯಾಪವಾದಕ್ಕೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಆದಿನ ಗೌರಿದೇವಿಯು ಗಂಡನ ಮುಖನೋಡುವದಿಲ್ಲ.

ಸಮಸ್ಯೆ –

ಪಿಪೀಲಿಕಾ ಚುಂಬತಿ ಚಂದ್ರಮಂಡಲಮ್ ॥

ಇರುವೆಯು ಚಂದ್ರಮಂಡಲವನ್ನು ಮುತ್ತಿಕ್ಕುತ್ತದೆ.

ಒಡನೆಯೇ ಗಣಪತಿಮುನಿಗಳು ಹೀಗೆ ಸಮಸ್ಯಾಪೂರ್ತಿಗೊಳಿಸಿದರು.

"ಸತೀವಿಯೋಗೇನ ವಿಷಣ್ಣ ಚೇತಸಃ
ಪ್ರಭೋಃಶಯಾನಸ್ಯ ಹಿಮಾಲಯೇಗಿರೌ ।
ಶಿವಸ್ಯ ಚೂಡಾಕಲಿತಂ ಸುಧಾಶಯಾ'' ಇತಿ ಪೂರಿತಮ್
ಪಿಪೀಲಿಕಾ ಚುಂಬತಿ ಚಂದ್ರಮಂಡಲಮ್ ॥ ಇತಿ ಸಮಸ್ಯಾ

ದಕ್ಷಯಜ್ಞದಲ್ಲಿ ತಂದೆಯಿಂದ ಅವಮಾನಿತಳಾಗಿ ಅಗ್ನಿಕುಂಡದಲ್ಲಿ ಹಾರಿ ತನುಸಮರ್ಪಣೆ ಮಾಡಿಕೊಂಡ ತನ್ನ ಅರ್ಧಾಂಗಿ ಸತಿದೇವಿಯ ವಿಯೋಗದಿಂದ ವಿಷಣ್ಣನಾದ ಶಿವನು ಹಿಮಾಲಯಪರ್ವತದಲ್ಲಿ ನೆಲಕ್ಕೆ ತಲೆಯಾನಿಸಿ ಮಲಗಿರಲು ಅವನ ಜಟೆಯಲ್ಲಿರುವ ಅಚ್ಚ ಬಿಳಿಯ ಚಂದ್ರಬಿಂಬವನ್ನು ಹಾಲು ಎಂದು ಭ್ರಮಿಸಿದ ಇರುವೆ ಅದಕ್ಕೆ ಮುತ್ತಿಕೊಳ್ಳುತ್ತದೆ.

ಗಣಪತಿಮುನಿಗಳ ಅದ್ಭುತ ಪ್ರತಿಭೆಗೆ ಇಡೀ ಸಭೆಯೇ ಬೆರಗಾಗಿ ಸ್ತಬ್ಧವಾಗಿತ್ತು. ಅಂಬಿಕಾದತ್ತರ ಮುಖದಲ್ಲಿ ಇಂತಹ ಜ್ಞಾನ ಸಂಪನ್ನರನ್ನು ಪುರಸ್ಕರಿಸುವ ಸೌಭಾಗ್ಯ ತನಗೆ ದೊರಕಿದ ಬಗ್ಗೆ ಧನ್ಯತಾಭಾವ ತುಂಬಿತ್ತು. ಇವರ ಅಸಾಧಾರಣ ಪಾಂಡಿತ್ಯ ಮತ್ತು ಕವಿತ್ವವನ್ನು ಪ್ರಶಂಸಿಸಿ ಪಂಡಿತ ಪರಿಷತ್ತು 'ಕಾವ್ಯಕಂಠ' ಎಂಬ ಬಿರುದನ್ನಿತ್ತು ಸನ್ಮಾನಿಸಿತು.

ಅನಂತರ ಅವರು ಉತ್ತರಭಾರತದ ಕಡೆಗೆ ಸಂಚರಿಸಿ ಕಾಂಚಿಪುರ ಕ್ಷೇತ್ರಕ್ಕೆ ಬಂದು ತಂಗಿರುವಾಗ ಅಲ್ಲಿ ನಾರಾಯಣ ಜೋಯಿಸರೆಂಬ ಜ್ಯೋತಿಷಿಗಳ ಪರಿಚಯವಾಯಿತು. ಗಣಪತಿಮುನಿಗಳು ಅವರಲ್ಲಿ ತಪಸ್ಸನ್ನಾಚರಿಸಲು ಸೂಕ್ತ ಸ್ಥಳದ ಬಗೆಗೆ ವಿಚಾರಿಸಲು ಅವರು ಪ್ರಸಿದ್ಧ ಅರುಣಾಚಲದ ಹೆಸರನ್ನು ಸೂಚಿಸಿದರು. ಅದನ್ನು ಕೇಳುತ್ತಲೇ ಗಣಪತಿಮುನಿಗಳ ಮನದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅರುಣಾಚಲದಲ್ಲಿ ಅಂದು ತಾನು ಸಂದರ್ಶಿಸಿದ ಬ್ರಾಹ್ಮಣಸ್ವಾಮಿಯ ನೆನಪಿನ ಚಿತ್ರ ಕಣ್ಮುಂದೆ ತೇಲಿ ಬಂದಿತು. ಅವರಲ್ಲಿ ಏನೋ ಅವ್ಯಕ್ತ ಪ್ರೇರಣೆ ಉಂಟಾಗಿ ಅಲ್ಲಿಯೇ ತಪಸ್ಸು ಮಾಡಲು ನಿರ್ಧರಿಸಿದರು.

ಕಾಂಚಿಪುರದಿಂದ ಮುಂದೆ ಮದ್ರಾಸ ಪ್ರಾಂತಕ್ಕೆ ತೆರಳಿದ ಗಣಪತಿ ಮುನಿಗಳು ಅಲ್ಲಿ ಸ್ವಲ್ಪಕಾಲ ತಂಗಿದ್ದು ಅಷ್ಟಾವಧಾನ ಗೋಷ್ಠಿಗಳಲ್ಲಿ ಭಾಗವಹಿಸಿ ಪ್ರಸಿದ್ಧಿಯನ್ನು ಪಡೆದು ತಮ್ಮ ಊರಿಗೆ ಮರಳಿದರು. ಆಗ ಊರಿನಲ್ಲಿ ಸ್ವ ಪ್ರತಿಷ್ಠೆಯಿಂದ ತಮಗೆ ತಾವೇ ಬೀಗುತ್ತಿದ್ದ ಕೆಲವು ಬ್ರಾಹ್ಮಣರು ಗಣಪತಿ ಮುನಿಗಳ ಪ್ರಸಿದ್ಧಿಯನ್ನು ಸಹಿಸಲಾಗದೆ ಅಸೂಯೆಪಟ್ಟು ಅವಮಾನಿಸುವ ಉದ್ದೇಶದಿಂದ ಅವರಲ್ಲಿಗೆ ಬಂದರು. "ನೀನು ದೊಡ್ಡ ದೊಡ್ಡ ಪಂಡಿತರೊಂದಿಗೆ ವಿದ್ವತ್ ಸಭೆಯಲ್ಲಿ ಭಾಗವಹಿಸಿ ಸಮಸ್ಯಾ –ಪೂರಣ ಕಾರ್ಯಕ್ರಮದಲ್ಲಿ ಗೆದ್ದುಬಂದಿರುವುದನ್ನು ಕೇಳಿ ಸಂತೋಷವಾಯಿತು. ನಮಗೂ ಅಂತಹ 'ಸಮಸ್ಯಾ-ಪೂರ್ತಿ' ಯ ಸಂವಹನ ನಡೆಸಬೇಕೆಂಬ ಆಸೆಯಾಗಿದೆ." ಎಂದಾಗ ಗಣಪತಿ ಮುನಿಗಳು "ಆಗಲಿ, ಅದಕ್ಕೇನು ! ಈಗಲೇ ಪ್ರಾರಂಭಿಸೋಣ" ! ಅಂದರು. ಆಗ ಅವರಲ್ಲಿ ಒಬ್ಬ ಉಪನಯನ, ವಿವಾಹ

ಮುಂತಾದವುಗಳನ್ನು ಮಾಡಿಸುವ ಪುರೋಹಿತನಾಗಿದ್ದು ಆತ ವಿವಾಹ ಪ್ರಯೋಗದ 'ಕನ್ಯಾಂ ಕನಕ ಸಂಪನ್ನಾಂ' ಎಂಬ ಮಂತ್ರವನ್ನು ಹೇಳಲು ಪ್ರಾರಂಭಿಸಿದಾಗ ಗಣಪತಿ ಮುನಿಗಳು ಅವನನ್ನು ಅಷ್ಟಕ್ಕೇ ತಡೆದು ಮುಂದಿನವನಿಗೆ ಹೇಳಲು ಸೂಚಿಸಿದರು. ವ್ಯಾಕರಣ ಪಂಡಿತನಾದ ಅವನು ಅಮರಕೋಷದ "ಸಶ್ರಿಯೈ ಚಾಮೃತಾಯ ಚ" ಎಂದು ಶ್ಲೋಕದ ತುಣುಕೊಂದನ್ನು ನುಡಿಯಲು ಶ್ರಾದ್ಧಕರ್ಮ ಮಾಡಿಸುವ ಇನ್ನೊಬ್ಬ "ದಾಸ್ಯಾಮಿ ತೇ ಭ್ಯೋವಿಕಿರಂ" ಎಂದು ಹೇಳುತ್ತಿರುವಂತೆ ಗಣಪತಿ ಮುನಿಗಳು" ಯೇ ಭ್ಯೋದಾದಂಬಿಕಾಸುತಃ" ಎಂದು ಸಮಸ್ಯಾ–ಪೂರ್ತಿಮಾಡಿದರು. ಬ್ರಾಹ್ಮಣರಿಗೆ ಏನೂ ಅರ್ಥವಾಗದೇ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಆಗ ಗಣಪತಿ ಮುನಿಗಳೇ ನಗುತ್ತಾ ಅದರ ಅರ್ಥವನ್ನು ಹೀಗೆ ವಿವರಿಸಿದರು.

ವಿವಾಹ ಪ್ರಯೋಗ– ಕನ್ಯಾಂ ಕನಕ ಸಂಪನ್ನಾಂ
ಅಮರಕೋಷ–ಸಶ್ರಿಯೈ ಚಾಮೃತಾಯ ಚ । ಸಮಸ್ಯಾ
ಶ್ರಾದ್ಧಪ್ರಯೋಗ–ದಾಸ್ಯಾಮಿ ತೇ ಭ್ಯೋ ವಿಕಿರಂ
ಕಾವ್ಯಕಂಠರು– ಯೇಭ್ಯೋದಾದಂಬಿಕಾ ಸುತಃ ॥ ಪೂರಿತ

ಸುವರ್ಣಾಭರಣದಿಂದ ಕೂಡಿದ ಕನ್ಯಾಮಣಿ ದ್ರೌಪದಿಯನ್ನು ಸಂಪತ್ತಿಗಾಗಿ ಮತ್ತು ಅಮೃತತ್ವಕ್ಕಾಗಿ ದ್ರುಪದನು ಯಾವ ಪಾಂಡವರಿಗೆ ಕೊಟ್ಟನೋ ಆ ಪಾಂಡವರಿಗೆ ಧೃತರಾಷ್ಟ್ರನು ವಿಕಿರಾನ್ನವನ್ನು ಕೊಟ್ಟನು.

ಅರಗಿನಮನೆಯಲ್ಲಿ ಪಾಂಡವರು ಬೆಂಕಿಬಿದ್ದು ಸತ್ತುಹೋದರು ಎಂದು ತಿಳಿಯಲಾದ ಸಂದರ್ಭದಲ್ಲಿ ಅವರಿಗೆ ಧೃತರಾಷ್ಟ್ರನು ವಿಕಿರಾನ್ನವನ್ನು ಕೊಟ್ಟನು ಎಂಬುದು ಇದರ ತಾತ್ಪರ್ಯ.

(ಅಂಬಿಕಾಸುತ–ಧೃತರಾಷ್ಟ್ರ ವಿಕಿರಾನ್ನ–ಶ್ರಾದ್ಧಕರ್ಮದಲ್ಲಿ ಸತ್ತವರಿಗೆ ಅರ್ಪಿಸುವ ಅನ್ನ.)

ಯಾವ ರೀತಿಯಿಂದಲೂ ಒಂದಕ್ಕೊಂದು ಸಂಬಂಧವಿಲ್ಲದ ಹಾಗೆ ತಾವು ಸಮಸ್ಯೆಯನ್ನು ಒಡ್ಡಿದ್ದರೂ ಅದನ್ನು ಸರಿಯಾದ ರೀತಿಯಲ್ಲಿ ಅರ್ಥಬರುವಂತೆ ಗಣಪತಿಮುನಿಗಳು ಪೂರ್ತಿಗೊಳಿಸಿದ್ದನ್ನು ಕಂಡು ಬ್ರಾಹ್ಮಣರು ಬೆರಗಾಗಿ ತಮ್ಮ ಸಣ್ಣತನಕ್ಕೆ ನಾಚಿ ಏನೊಂದೂ ಮಾತನಾಡದೇ ಹೊರಟುಹೋದರು.

ಗೃಹಸ್ಥಾಶ್ರಮಿಗಳಾಗಿದ್ದರೂ ಗಣಪತಿಮುನಿಗಳು ಸರಳ ಜೀವನವನ್ನು ನಡೆಸುತ್ತಿದ್ದರು. ಅಂತೆಯೇ ತಾಂಬೂಲವನ್ನು ಸೇವಿಸುತ್ತಿರಲಿಲ್ಲ. ಆದ್ದರಿಂದ ಅವರನ್ನು ತಾಂಬೂಲಚರ್ವಣ ವಿಷಯದಲ್ಲಿ ಕವಿತೆ ರಚಿಸುವಂತೆ ಕೇಳಿದರೆ ಅವರು ರಚಿಸಿದ ಆ ಕವಿತೆ ಹೇಗಿರಬಹುದು ಎಂಬ ಕುತೂಹಲದಿಂದ ಒಮ್ಮೆ ಅವರಿಗೆ ಈ ಬಗ್ಗೆ ಕವಿತೆ ರಚಿಸುವಂತೆ ಕೇಳಿದಾಗ ರಚಿಸಿದ ಕವಿತೆಯಿದು. ಇದು ಅವರ ಸರಸ ಕವಿತಾಚಾತುರ್ಯಕ್ಕೊಂದು ಉದಾಹರಣೆ.

ಸುಧಾಧಿಕ್ಯಂ ಸ್ವಹೇತ್ ಶತ್ರುಃ
ಫಲಾಧಿಕ್ಯಂ ಸ್ವಹೇತ್ ಭಿಷಕ್ ।
ಪತ್ರಾಧಿಕ್ಯಂ ಸ್ವಹೇತ್ ಜಾಯಾ
ಮಾತಾತು ತ್ರಿತಯಾ ಸ್ವಹೇತ್ ॥

ಶತ್ರುವು ನಾನು ವೀಳ್ಯದೆಲೆಗೆ ಹೆಚ್ಚು ಹೆಚ್ಚು ಸುಣ್ಣವನ್ನು ಹಚ್ಚಿ ತಿಂದು ನಾಲಿಗೆ ಸುಟ್ಟಿಕೊಂಡು ತೊಂದರೆಪಡಲಿ ಎಂದು ನಿರೀಕ್ಷಿಸುತ್ತಾನೆ. ವೈದ್ಯನು ನಾನು ಅಡಿಕೆಯನ್ನು ಹೆಚ್ಚಾಗಿ ಬಳಸಿ ರೋಗಪೀಡಿತನಾಗಿ ಚಿಕಿತ್ಸೆಗೆ ತನ್ನಲ್ಲಿಗೆ ಬರಲಿ ಎಂದು ಬಯಸುತ್ತಾನೆ. ಹೆಂಡತಿಯು ವೀರ್ಯವರ್ಧಕವಾದ ವೀಳ್ಯದೆಲೆಯನ್ನು ಹೆಚ್ಚು ತಿನ್ನಲಿ ಎಂದು ಇಚ್ಚಿಸಿದರೆ; ತಾಯಿಯು ಎಲೆ– ಅಡಿಕೆ–ಸುಣ್ಣಗಳನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸಿ ನಾನು ತಾಂಬೂಲ ಚರ್ವಣಮಾಡಿ ನಿರೋಗಿಯೂ ದೀರ್ಘಾಯುವೂ ಆಗಲೆಂದು ಆಶಿಸುತ್ತಾಳೆ.

ಗಣಪತಿಮುನಿಗಳು ಸಮಾಜಸುಧಾರಕ ಮನೋಭಾವದವರೂ ಆಗಿದ್ದರು. ಅಸ್ಪ್ರಶ್ಯತಾ ನಿವಾರಣೆಯ ಪ್ರತಿಪಾದಕರೂ ಆಗಿದ್ದ ಅವರು ಮಹಾತ್ಮಾಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿಯ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸಂಸ್ಕೃತಭಾಷೆಯಲ್ಲಿ 'ಅಸ್ಪ್ರಶ್ಯತಾ ನಿವೃತ್ತಿರ್ನ ಅಶಾಸ್ತ್ರೀಯಾ' ಅಸ್ಪ್ರಶ್ಯತೆಯನ್ನು ನಿವಾರಿಸುವುದಕ್ಕೆ ಶಾಸ್ತ್ರಗಳಲ್ಲಿ ವಿರೋಧವಿಲ್ಲ ಎಂಬ ಭಾಷಣ ತುಂಬ ಪ್ರಶಂಸೆ ಪಡೆಯಿತು. ಮುಂದೆ ಸಾಂಪ್ರದಾಯಿಕ ತೀವ್ರವಾದಿಗಳಿಂದ ಇದಕ್ಕೆ ವಿರೋಧ ಬಂದಾಗ 'ಪಂಚಮ ಚಂಡಾಲ ಮೀಮಾಂಸಾ' ಎಂಬ ಲೇಖನ ಬರೆದು 'ಅಸ್ಪ್ರಶ್ಯತೆಯ ಆಚರಣೆಗೆ ಶಾಸ್ತ್ರ ಸಮ್ಮತವಿಲ್ಲ ಎಂದು ಆಧಾರಸಹಿತವಾಗಿ ಅದನ್ನು ನಿರೂಪಿಸಿದರು. ನಮ್ಮಲ್ಲಿ ಬೆಳೆದುಬಂದ ಅನೇಕ ಅಂಧಾಚಾರಗಳ ದುಷ್ಪರಿಣಾಮಗಳ ಬಗೆಗೆ ಅರಿವು ಮೂಡಿಸುವಕ್ಕಾಗಿಯೂ ಅವರು ಪ್ರಯತ್ನಿಸುತ್ತಿದ್ದರು. ಆದರೆ ಅವರೆಂದೂ ಸುಧಾರಣೆಯ ತೀವ್ರವಾದಿಯಾಗಿರದೆ ಸೌಮ್ಯವಾದಿಯಾಗಿದ್ದರು. ಮನುಷ್ಯ ತನ್ನಲ್ಲಿರುವ ಲೋಪದೋಷಗಳನ್ನು ತೊರೆಯುತ್ತ ಪರಿಪೂರ್ಣತೆಯತ್ತ ಸಾಗಬೇಕೆಂಬುದೇ ಅವರ ಆಶಯವಾಗಿತ್ತು. ಹೀಗೆ ಜನಸಾಮಾನ್ಯರ ಸಹಜ ಜೀವನಕ್ಕೆ ಅವರು ಬಹಳ ಹತ್ತಿರವಾಗಿದ್ದರು.

ವಿಸ್ಮಯ ಪ್ರತಿಭಾ ವಿಶೇಷ

ಗಣಪತಿ ಮುನಿಗಳು ಒಬ್ಬ ವಿಸ್ಮಯ ಪ್ರತಿಭೆಯ ಜ್ಞಾನಸಂಪನ್ನರು. ಅಷ್ಟಾವಧಾನ ಪ್ರದರ್ಶನ, ಘಂಟಾಶತಕರಚನೆ (ಒಂದು ಘಂಟೆಯ ಅವಧಿಯಲ್ಲಿ ಬೇರೆ ಬೇರೆಯವರು ಸೂಚಿಸುವ ವಿಷಯದ ಮೇಲೆ ವಿವಿಧ ವೃತ್ತದ ನೂರು ಶ್ಲೋಕಗಳನ್ನು ರಚಿಸುವದು) ಚದುರಂಗದ ಆಟದಲ್ಲಿ ಬಹು ನಿಷ್ಣಾತರು. ಆಟದ ನಡೆಯನ್ನು ನೋಡದಂತೆಯೇ ಕೇವಲ ಕೇಳುವದರಿಂದಲೇ ಯಾವ ಕಾಯಿಯನ್ನು ಹೇಗೆ ಎಲ್ಲಿ ಮುಂದಕ್ಕೆ ಹಾಕಬೇಕು ಎಂದು ಕ್ಷಣ ಮಾತ್ರದಲ್ಲಿ ಹೇಳಬಲ್ಲ ನಿಶಿತಮತಿಯಾಗಿದ್ದರು. ಚದುರಂಗದಾಟದಲ್ಲಿ ಸೋಲನೆಂದಿಗೂ ಅವರು ಕಂಡಿರಲೇ ಇಲ್ಲ.

ಒಂದುಬಾರಿ ಓದಿದರೆ ಅಥವಾ ಕೇಳಿದರೆ ಅದು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತಿತ್ತು. ಹಲವು ವಿಷಯಗಳನ್ನು ಏಕಕಾಲಕ್ಕೆ ಒಟ್ಟಿಗೆ ಗ್ರಹಿಸಿ ನೆನಪಿನಲ್ಲಿಡುವದು ಹಾಗೂ ಅದೆಷ್ಟೇ ದೊಡ್ಡಗ್ರಂಥವಿರಲಿ ಓದಿದ ನಂತರ ಅದನ್ನು ತಿರವು–ಮುರುವಿನ ಕ್ರಮದಲ್ಲಿ ಅಂದರೆ ಹಿಮ್ಮುಖವಾಗಿ ಹೇಳುವ ಅಸಾಧಾರಣ ಶಕ್ತಿ ಅವರಲ್ಲಿತ್ತು. ಇದು ಅವರ ಜನ್ಮಜಾತ ಸಹಜ ಪ್ರತಿಭೆಯಾಗಿತ್ತು. ಅದೆಂತಹ ಕ್ಲಿಷ್ಟ ಸಮಸ್ಯೆಯನ್ನೊಡ್ಡಿದರೂ ಅದಕ್ಕೆ ಅವರು ಲೀಲಾಜಾಲವಾಗಿ ಕ್ಷಣಮಾತ್ರದಲ್ಲಿ ಉತ್ತರಿಸುತ್ತಿದ್ದರು.

ಆತ್ಮಜ್ಞಾನದ ಹಂಬಲದಲ್ಲಿ ಸತ್ಯಶೋಧನೆಯ ಮಾರ್ಗವನ್ನು ಅರಸುತ್ತ ಕಾಂಚಿಪುರದಿಂದ ಹೊರಟ ಗಣಪತಿಮುನಿಗಳು ಅರುಣಾಚಲ ತಲುಪಿದರು. ಕಾರ್ತಿಕ ಶುಕ್ಲ ಚತುರ್ದಶಿ ಸೋಮವಾರ

ಕೃತ್ತಿಕೋತ್ಸವದಂದು ಅರುಣಗಿರಿಯ ಮೇಲೆ ಧ್ಯಾನಾಸಕ್ತರಾಗಿರುವಾಗ ಅಲ್ಲಿಗೆ ಬಂದ ದನಕಾಯುವ ಹುಡುಗರಿಂದ ವಿಚಲಿತರಾಗಿ ಧ್ಯಾನಮಾಡುವುದನ್ನು ಬಿಟ್ಟು ಅಲ್ಲಿಗೆ ಸಮೀಪದಲ್ಲಿ ತಪಸ್ಸು ಮಾಡುತ್ತಿದ್ದ ಬ್ರಾಹ್ಮಣಸ್ವಾಮಿ ಇರುವ ಗುಹೆಯತ್ತ ನಡೆದರು. ಅಲ್ಲಿ ಅಚಲಚಿತ್ತದಿಂದ ಪ್ರಸನ್ನಭಾವದಲ್ಲಿ ಇಹವನ್ನು ಮರೆತು ನೀರವದಲ್ಲಿ ಅದ್ದಿದಂತೆ ಕುಳಿತಿರುವ ಮೌನಿಸ್ವಾಮಿಯನ್ನು ಕಂಡರು. ಆಗ ಆತ ಸುಪ್ತ ಸಮಾಧಿಸ್ಥಿತಿಯಲ್ಲಿರುವದರಿಂದ ಗಣಪತಿಮುನಿಗಳು ಅವನು ಎಚ್ಚರಗೊಳ್ಳುವ ತನಕ ಕಾದಿದ್ದು ಜಾಗ್ರತಾವಸ್ಥೆಗೆ ಬರುತ್ತಲೇ ತಮ್ಮ ಮನಸ್ಸಿನ ಅಳಲನ್ನು ತೋಡಿಕೊಂಡರು. "ನಾನು ಜಪ, ತಪ, ಅನುಷ್ಠಾನಗಳನ್ನು ಮಾಡಿದೆ. ನನಗೆ ನಿಜವಾದ ಜ್ಞಾನದ ದರ್ಶನವಾಗಲಿಲ್ಲ, ಶಾಂತಿ ಸಿಗಲಿಲ್ಲ. ನನಗೆ ಜ್ಞಾನೋದಯದ ಮಾರ್ಗವನ್ನು ಬೋಧಿಸಬೇಕು" ಎಂದು ಪ್ರಾರ್ಥಿಸಿದರು. ಆದರೆ ಮೌನಿಸ್ವಾಮಿ ಏನೊಂದೂ ಮಾತನಾಡದಿರಲು "ತಮ್ಮಿಂದ ಉತ್ತರ ಸಿಗುವವರೆಗೂ ನಾನು ಇಲ್ಲಿಂದ ಕದಲುವುದಿಲ್ಲ" ಎಂದು ಗಣಪತಿಮುನಿಗಳು ಅಚಲವಾಗಿ ಕುಳಿತಾಗ ಯಾರೊಂದಿಗೂ ಮಾತನಾಡದ ಅರುಣಗಿರಿಯ ಆ ಮಹಾಯೋಗಿ ಕ್ಷಣಕಾಲ ಅವರನ್ನು ದಿಟ್ಟಿಸಿನೋಡಿ ಕನಿಕರಿಸಿ ಮೌನವೊಡೆದು ಮಾತನಾಡಿದನು.

"ಆತ್ಮಶೋಧನೆಯೇ ಮನುಷ್ಯನ ನಿಜವಾದ ಕರ್ತವ್ಯ. 'ನಾನು' ಎಂಬುದು ಎಲ್ಲಿಂದ ಹೊರಹೊಮ್ಮುವುದೋ ಅದರಲ್ಲಿ ಲೀನವಾಗುವುದೇ ತಪಸ್ಸು. 'ನಾನು ಯಾರು' ಎಂಬುದನ್ನು ತಿಳಿದು ಆತ್ಮ ನಿರೀಕ್ಷಣೆಯ ಹಾದಿಯಲ್ಲಿ ನಡೆಯುವುದೇ ತಪಸ್ಸು. ಈ ತಪಸ್ಸಿನಿಂದಲೇ ಆತ್ಮಜ್ಞಾನವು ಲಭ್ಯವಾಗುವುದು ಇದೇ "ಆತ್ಮಸಾಕ್ಷಾತ್ಕಾರ" ಇದೇ ನಿಜವಾದ ಶಾಂತಿಯ ಮೂಲ"

ಕತ್ತಲಿನ ದಾರಿಯಲ್ಲಿ ಅಲೆಯುತ್ತಿರುವವನಿಗೆ ಬೆಳಕು ತೋರಿದ ಅನುಭವವಾಯಿತು. ಗಣಪತಿಮುನಿಗಳಿಗೆ ಅವರ ಮನದ ಸಂಶಯಗಳೆಲ್ಲವೂ ದೂರವಾದವು. ಅರುಣಗಿರಿ ಮಹಾಯೋಗಿಯ ಮಾತುಗಳನ್ನು ಈ ಒಂದು ಚಿಕ್ಕ ಶ್ಲೋಕದಲ್ಲಿ ಅವರು ಬಹು ಸುಂದರವಾಗಿ ಹಿಡಿದಿಟ್ಟಿದ್ದಾರೆ.

ಅಹಮಿತಿ ಸ್ಮೃತಿಃಕ್ವನು ಭಾಸತೇ ।
ಇದಮನುಸ್ಮರನ್ ಸಪದಿಶೀಯತೇ ॥

ನಾನು ಎಂಬ ಅರಿವು ಎಲ್ಲಿ ಬೆಳಗುವದು ಎಂಬುದನ್ನು ಮತ್ತೆ ಮತ್ತೆ ವಿಚಾರ ಮಾಡಿದರೆ ಮನಸ್ಸು ಅಲ್ಲಿ ಮರೆಯಾಗುತ್ತದೆ.

ರಮಣ ಮಹರ್ಷಿ

ಅರುಣಗಿರಿ ಮಹಾಯೋಗಿಗೆ ಗಣಪತಿ ಮುನಿಗಳಿಂದ ದಿವ್ಯ ನಾಮಂಕನ.

ಜನರು ವಾಡಿಕೆಯಲ್ಲಿ 'ಮೌನಸ್ವಾಮಿ, ಬ್ರಾಹ್ಮಣಸ್ವಾಮಿ' ಎಂದು ಕರೆಯುತ್ತಿದ್ದ ಅರುಣಾಚಲ ಮೌನಯೋಗಿಯ ತಾಯಿ-ತಂದೆಯರು ಇಟ್ಟ ಹೆಸರು 'ವೆಂಕಟರಮಣ' ಎಂದಿತ್ತು. ಗಣಪತಿಮುನಿಗಳು ಅದರಲ್ಲಿಯ 'ವೆಂಕಟ' ಎಂಬ ಪದವನ್ನು ತೆಗೆದು 'ರಮಣ' ಎಂಬ ಮುಂದಿನ ಮೂರಕ್ಷರ ಉಳಿಸಿಕೊಂಡು 'ರಮಣಮಹರ್ಷಿ' ಎಂದು ಅವರಿಗೆ ಅತ್ಯಂತ ಒಪ್ಪವಾದ ಹಾಗೂ ದಿವ್ಯವಾದ ಪುನರ್ನಾಮಕರಣ ಮಾಡಿದರು. ಈ ಹೆಸರೇ ಮುಂದೆ ಆಧ್ಯಾತ್ಮ ಜಗತ್ತಿನ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯಾಯಿತು.

ಜ್ಞಾನದ ಬೆಳಕು ತೋರಿದ ರಮಣಮಹರ್ಷಿಗಳನ್ನು ಗಣಪತಿ ಮುನಿಗಳು ತಮ್ಮ ಗುರುವನ್ನಾಗಿ ಸ್ವೀಕರಿಸಿದ ಆ ದಿವಸ ತನ್ನ ಜೀವನದಲ್ಲಿ ಅದೊಂದು ಪರ್ವದಿನ ಎಂದು ಅವರು ಭಾವಿಸಿದರು.

ಎಲ್ಲವನ್ನೂ ಮರೆತು ರಮಣರಲ್ಲಿ ಶರಣಾದಾಗ ಅವರು ಬಹು ಪ್ರೀತಿಯಿಂದ 'ನಾಯನಾ' ಎಂದು ಉದ್ಗರಿಸಿದರು. ಪ್ರೀತಿಯಿಂದ ಕರೆಯುವಾಗ ತೆಲುಗಿನಲ್ಲಿ 'ನಾಯನಾ' ಎನ್ನುತ್ತಾರೆ. ತಂದೆಗೂ 'ನಾಯನಾ' ಎಂದು ಕರೆಯುತ್ತಾರೆ. ಅಂತೆಯೇ ಗಣಪತಿಮುನಿಗಳನ್ನು ಅವರ ಆತ್ಮೀಯರು ಮತ್ತು ಅಭಿಮಾನಿಗಳು 'ನಾಯನಾ' ಎಂದೇ ಕರೆಯುತ್ತಿದ್ದರು.

ದೇವಿ ಉಪಾಸಕರಾಗಿದ್ದ ಗಣಪತಿಮುನಿಗಳು ಆ ಜಗನ್ಮಾತೆಯ ಅನುಗ್ರಹದಿಂದಲೇ ಭಗವಾನ್ ರಮಣ ಮಹರ್ಷಿಗಳು ತನಗೆ ಗುರುವಾಗಿ ದೊರಕಿದರು ಎಂದು ತಿಳಿದು ಅದರ ಸ್ಮರಣೆಗಾಗಿ 'ಉಮಾಸಹಸ್ರ' ಎಂಬ ಗ್ರಂಥವನ್ನು ಕೇವಲ ಇಪ್ಪತ್ತು ದಿನಗಳ ಅವಧಿಯಲ್ಲಿ ರಚಿಸಿದರು. ಇದೇ ಸಮಯದಲ್ಲಿ 'ಗೋಕರ್ಣೇ ಭದ್ರಕರ್ಣಿಕಾ' ಎಂದು ಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿರುವದನ್ನು ನೋಡಿ ಭಾರತದಲ್ಲಿರುವ ಹದಿನೆಂಟು ಶಕ್ತಿಪೀಠಗಳಲ್ಲಿ ಗೋಕರ್ಣದ ಭದ್ರಕರ್ಣಿಕೆಯೂ ಒಂದಾಗಿದೆ ಎಂದು ತಿಳಿದುಬಂದಾಗ ಅದನ್ನು ಸಂದರ್ಶಿಸಬೇಕೆಂಬ ಹಂಬಲವುಂಟಾಯಿತು. ಗೋಕರ್ಣವು ವೇದಾಧ್ಯಯನಕ್ಕೆ ಕೇಂದ್ರಸ್ಥಾನವಾಗಿರುವದರಿಂದ ವೇದಾರ್ಥಜ್ಞಾನವನ್ನು ಪಡೆಯಬೇಕೆಂಬ ಅವರ ಬಹುದಿನಗಳ ಆಸೆಗೆ ಈಗ ಕಾಲವು ಸನ್ನಿಹಿತವಾಗಿತ್ತು. ಅಂತೆಯೇ ಪತ್ನಿ ವಿಶಾಲಕ್ಷಿಅಮ್ಮನವರೊಂದಿಗೆ ಅರುಣಾಚಲದಿಂದ ಹೊರಟು ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಟಿಯನ್ನು ಸಂದರ್ಶಿಸಿ ಮಂಗಳೂರು ಮಾರ್ಗವಾಗಿ ಉಡುಪಿಗೆ ಬಂದರು. ಅಲ್ಲಿಂದ ವಡಭಾಂಡೇಶ್ವರ ಕ್ಷೇತ್ರಕ್ಕೆ ಹೋಗಿ ಅಲ್ಲಿ ಶಿವಳ್ಳಿ ಬ್ರಾಹ್ಮಣರಾದ ಮಹಾಬಲೇಶ್ವರ ಶಾಸ್ತ್ರಿಗಳ ಮನೆಯಲ್ಲಿ ಒಂದು ವಾರಕಾಲ ತಂಗಿದರು. ಅವರು ಗೋಕರ್ಣದಲ್ಲಿ ತಮಗೆ ಪರಿಚಿತರಾದ ವೆಂಕಟರಮಣ ಉಪಾಧ್ಯಾಯ (ವಾಡಿಕೆಯಲ್ಲಿ ಜನರು ಇವರನ್ನು ತಿಗಳಾರಿ ಉಪಾಧ್ಯಾಯ ಎಂದು ಕರೆಯುತ್ತಿದ್ದರು) ಇವರ ವಿಳಾಸವನ್ನು ನೀಡಿದರು. ಕೋಟ ಬ್ರಾಹ್ಮಣರಾದ ಇವರು ಋಗ್ವೇದ ಸಂಹಿತಾಧ್ಯಯನ ಮಾಡಿದ ಘನ ವಿದ್ವಾಂಸರಾಗಿದ್ದರು. ಉಡುಪಿಯಿಂದ ಗೋಕರ್ಣಕ್ಕೆ ಬಂದ ಗಣಪತಿಮುನಿಗಳು ಸುಮಾರು ಎರಡು ತಿಂಗಳಕಾಲ ಇವರ ಮನೆಯಲ್ಲಿ ವಾಸವಾಗಿದ್ದರು. ಆ ವೇಳೆಗೆ ಗೋಕರ್ಣದಲ್ಲಿ ಯಾರಿಗೂ ಇವರು ಯಾರು ಎಲ್ಲಿಂದ ಬಂದವರು ಎಂಬ ವಿಷಯವಾಗಲಿ ಇವರ ಅಗಾಧಜ್ಞಾನದ ದಿವ್ಯವ್ಯಕ್ತಿತ್ವದ ಪರಿಚಯವಾಗಲಿ ಇರಲಿಲ್ಲ.

ಗಣಪತಿಮುನಿಗಳ ಪ್ರಥಮ ದರ್ಶನ

ಗಣೇಶನು ದಿನಾಲು ಕೋಟಿತೀರ್ಥದ ಕಡೆಯಿಂದ ನಾಗಬೀದಿ ಮಾರ್ಗವಾಗಿ ಸಮುದ್ರತಡಿಯ ಗುಡ್ಡದ ಅಂಚಿನಲ್ಲಿರುವ ಕೃಷ್ಣಭಟ್ಟ ಮೈಯರರ ವೇದಪಾಠಶಾಲೆಗೆ ಹೋಗುತ್ತಿದ್ದ. ಆಗ ದೂರದ ಊರಿನಿಂದ ಯಾರೋ ಅಪರಿಚಿತರು ತಿಗಳಾರಿ ಉಪಾಧ್ಯಾಯರ ಮನೆಯಲ್ಲಿ ವಾಸವಾಗಿರುವುದನ್ನು ಗಮನಿಸಿದ್ದ. ಬಿಳುಪೂ ಅಲ್ಲದ ಕಪ್ಪೂ ಅಲ್ಲದ ಸಾಧಾರಣ ಮೈಬಣ್ಣ, ಕೃಶವಾದ ಕಾಯ ಅಷ್ಟೇನೂ ಆಕರ್ಷಕವಲ್ಲದ ವ್ಯಕ್ತಿತ್ವ ಅವರದಾಗಿತ್ತು. ಮಂಗಳೂರಿನಿಂದ ಕುಮಟಾವರೆಗೆ ಸಮುದ್ರಮಾರ್ಗವಾಗಿ ಪ್ರಯಾಣಿಸಿದ ಪರಿಣಾಮವಾಗಿ ಅನಾರೋಗ್ಯದಿಂದ ಬಳಲುತ್ತಿರುವ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಸಮಯ

ಅದಾಗಿತ್ತು. ತಿಗಳಾರಿ ಉಪಾಧ್ಯಾಯರ ಮನೆಯ ಜಗಲಿಯ ಹೊರಬಾಗಿಲಿಗೆ ಹೊಂದಿಕೊಂಡಿರುವ ಕೋಣೆಯಲ್ಲಿ ಗಣಪತಿಮುನಿಗಳು ಪತ್ನಿ ವಿಶಾಲಕ್ಷಿಅಮ್ಮನವರೊಂದಿಗೆ ವಾಸವಾಗಿದ್ದರು. ಗಣೇಶನು ಬೆಳಿಗ್ಗೆ ಪಾಠಶಾಲೆಗೆ ಹೋಗುವಾಗ ಮತ್ತು ಮಧ್ಯಾಹ್ನ ಊಟದ ವೇಳೆಗೆ ಮನೆಗೆ ಮರಳುವಾಗ ಹಾಗೂ ಊಟ ಮುಗಿಸಿ ಪಾಠಶಾಲೆಗೆ ಹೋಗುವಾಗಲೂ ಸಾಯಂಕಾಲ ಪಾಠಶಾಲೆಯಿಂದ ಮನೆಗೆ ಹಿಂದಿರುವಾಗ ಹೀಗೆ ನಾಲ್ಕು ಬಾರಿ ಗಣಪತಿ ಮುನಿಗಳು ವಾಸವಾಗಿರುವ ಕೋಣೆಯ ಬಾಗಿಲ ಬಳಿಗೆ ಹೋಗಿ ದೂರದಿಂದಲೇ ನಮಸ್ಕರಿಸಿ ಸುಮಾರು ಐದು ನಿಮಿಷಕಾಲ ಅವರೆದುರು ಮೌನವಾಗಿ ಕುಳಿತು ಮನೆಗೆ ಹೋಗುವದು ಆತನ ದಿನಚರಿಯಾಯಿತು.

ಸಮುದ್ರಯಾನದ ಪರಿಣಾಮವಾಗಿ ಅನಾರೋಗ್ಯದಿಂದ ಬಳಲುತ್ತಿರುವ ಸಮಯ ಮುಖದಲ್ಲಿ ಕಾಂತಿಯಿರಲಿಲ್ಲ. ಗುರುತು ಪರಿಚಯವಿರಲಿಲ್ಲ; ಹೆಸರು ಗೊತ್ತಿರಲಿಲ್ಲ. ಭಾಷೆ ತಿಳಿದಿರಲಿಲ್ಲ. ಆದಾಗ್ಯೂ ಗಣೇಶನ ಅಂತರಂಗದಲ್ಲಿ ಗಣಪತಿಮುನಿಗಳ ಬಗೆಗೆ ಅದೇನೋ ಅವ್ಯಕ್ತ ಸೆಳೆತ, ಭಯ, ಭಕ್ತಿ, ಆರಾಧನಾಭಾವ. ಅವನಿಗೆ ಅರಿವಿಲ್ಲದಂತೆಯೇ ಅಂಕುರಿಸಿ ಬೆಳೆಯತೊಡಗಿತ್ತು.

ಏನೊಂದೂ ಮಾತಿಲ್ಲದೇ ದಿನವೂ ನಾಲ್ಕು ಸಲ ಬಂದು ಹೋಗುತ್ತಿದ್ದ ಹುಡುಗನನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರೂ ಗಣಪತಿಮುನಿಗಳಿಗೆ ಕನ್ನಡ ಬಾರದ ಕಾರಣ ಆತನೊಂದಿಗೆ ಮಾತನಾಡಲು ಸಾಧ್ಯವಾಗಿರಲಿಲ್ಲ. ಆದಾಗ್ಯೂ ಅದೊಂದು ದಿನ ಸನ್ನೆಯಿಂದ 'ದಿನಾಲು ನೀನು ನಾಲ್ಕು ಬಾರಿ ಏಕೆ ಬಂದು ಹೋಗುತ್ತಿರುವೆ ? ಎಂದು ಮೂಕಭಾಷೆಯಲ್ಲಿ ಕೇಳಿದರು. ಆಗ ಗಣೇಶನು 'ನಾನು ತಮ್ಮ ದರ್ಶನಾಪೇಕ್ಷೆಯಿಂದ ಬರುತ್ತಿದ್ದೇನೆ. ಇದರಿಂದ ತಮಗೆ ತೊಂದರೆಯಾಗುತ್ತಿದ್ದರೆ ಬರುವುದಿಲ್ಲ' ಎಂದು ಕನ್ನಡದಲ್ಲಿ ಹೇಳಿದನು. ಈಗಾಗಲೇ ಸ್ವಲ್ಪ ಮಟ್ಟಿಗೆ ಕನ್ನಡವನ್ನು ಅರಿತಿದ್ದ ಅವರು ತೆಲಗು ಮಿಶ್ರಿತ ಕನ್ನಡದಲ್ಲಿ 'ನೀನು ಬರುವದರಿಂದ ನನಗೆ ಏನೂ ತೊಂದರೆಯಿಲ್ಲ. ನೀನು ಯಾವಾಗ ಬೇಕಾದರೂ ಬಂದುಹೋಗಬಹುದು' ಎಂದು ಆದರದಿಂದ ನುಡಿದರು.

ಗಣಪತಿಮುನಿಗಳು ನಿತ್ಯನಸುಕಿನಲ್ಲಿ ಕೋಟಿತೀರ್ಥಸ್ನಾನಕ್ಕೆ ಹೋಗುತ್ತಿದ್ದರು. ಆಗ ಅವರ ವ್ಯಕ್ತಿತ್ವವರಿಯದ ಕೆಲವು ಹುಡುಗರು ಉಡಾಳತನದಿಂದ 'ಕಾಕಃ ಸ್ನಾನಾರ್ಥಂ ಆಗತಃ' ಎಂದು ಪರಿಹಾಸ್ಯ ಮಾಡುತ್ತಿದ್ದರು. ಆದರೆ ಅವರು ಏನೂ ತಿಳಿಯದವರಂತೆ ಸುಮ್ಮನೆ ಸ್ನಾನಮುಗಿಸಿ ಹೋಗುತ್ತಿದ್ದರು. ಹೀಗೆ ದಿನಗಳು ಕಳೆಯುತ್ತಿರಲು ಮೆಲ್ಲ ಮೆಲ್ಲನೆ ಅವರ ಪಾಂಡಿತ್ಯದ ಪ್ರತಿಭೆ ಬೆಳಕಿಗೆ ಬರತೊಡಗಿತು. ಊರಿನ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಗಣಪತಿಮುನಿಗಳೆಡೆಗೆ ಸಂಸ್ಕೃತ, ಜ್ಯೋತಿಷ, ಪಂಚಾಗ ಗಣನೆ ಇತ್ಯಾದಿ ಕಲಿಯಲು ಬರತೊಡಗಿದರು. ಆದಾಗ್ಯೂ ಕೆಲವು ಹುಡುಗರು ಅವರನ್ನು ಪರೀಕ್ಷಿಸುವ ಉದ್ಧಟತನದಿಂದ ಹಿಂದಿನ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಘಟಿಸಿದ ಸೂರ್ಯ ಮತ್ತು ಚಂದ್ರಗ್ರಹಣಗಳ ವಿವರಗಳನ್ನು ಪಂಚಾಂಗಗಳಿಂದ ಕಲೆಹಾಕಿ ಬಾಯಿಪಾಠಮಾಡಿಕೊಂಡು ಗಣಪತಿಮುನಿಗಳಲ್ಲಿಗೆ ಬಂದರು. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಜರುಗಿದ ಸೂರ್ಯ ಮತ್ತು ಚಂದ್ರ ಗ್ರಹಣಗಳ ಸಂವತ್ಸರ, ವಾರ, ಕಾಲಗಳ ವಿವರಗಳನ್ನು ವಿವರಿಸಬೇಕೆಂದು ಕೇಳಿದರು. ಗಣಪತಿಮುನಿಗಳಿಗೆ ಇವರು ತನ್ನನ್ನು ಪರೀಕ್ಷಿಸಲೆಂದೇ ಬಂದಿರುವರೆಂದು ತಿಳಿದಿದ್ದರೂ ಸ್ವಲ್ಪವೂ ಕೋಪಿಸಿಕೊಳ್ಳದೇ ಒಂದೆರಡು ಗಳಿಗೆಯೊಳಗೆ ಮನದಲ್ಲಿಯೇ ಗಣನೆಮಾಡಿ ಇಪ್ಪತ್ತುವರ್ಷಗಳ ಅವದಿಯಲ್ಲಿ ಜರುಗಿದ ಗ್ರಹಣಗಳ ವಿವರಗಳನ್ನು ವಿಸ್ತಾರವಾಗಿ ತಿಳಿಸಿದರು.

ಇದರಿಂದ ಅವರೆಲ್ಲರೂ ಗಣಪತಿಮುನಿಗಳ ಅದ್ಭುತ ಜ್ಞಾನಕ್ಕೆ ಬೆರಗಾಗಿ ತಮ್ಮ ಮೂರ್ಖತನಕ್ಕೆ ಪಶ್ಚಾತ್ತಾಪಪಟ್ಟು ಅವರಿಗೆ ನಮಸ್ಕರಿಸಿ ಕ್ಷಮೆಯಾಚಿಸಿದರು. ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಿ ವಿದ್ಯೆಕಲಿಸಬೇಕೆಂದು ಪ್ರಾರ್ಥಿಸಿದರು. ಆಗ ಗಣಪತಿಮುನಿಗಳು ನಗುತ್ತಾ 'ಕಾಗೆಯು ಏನುತಾನೆ ಕಲಿಸಬಲ್ಲುದಪ್ಪಾ?' ಎಂದು ಕೇಳಿದರು. ಆದಾಗ್ಯೂ ಬಹು ವಿಶಾಲ ಹೃದಯದವರಾದ ಅವರು ಆ ಉಡಾಳರ ಉದ್ಧಟತನವನ್ನು ಮನ್ನಿಸಿ ಮುಂದೆ ಅವರಿಗೆ ಸಂಸ್ಕೃತ, ವ್ಯಾಕರಣ, ತರ್ಕ, ಅಲಂಕಾರ ಶಾಸ್ತ್ರ ಜ್ಯೋತಿಷಶಾಸ್ತ್ರ ಮುಂತಾದವುಗಳನ್ನು ಕಲಿಸಿದರು.

ವಾಸಿಷ್ಠ ಗಣಪತಿಮುನಿಗಳ ದಿವ್ಯ ವ್ಯಕ್ತಿತ್ವದ ಪರಿಚಯವಾಗಲು ಗೋಕರ್ಣದ ಪ್ರಮುಖ ವ್ಯಕ್ತಿಗಳು ಶಿಷ್ಯರಾದರು. ಎಲ್ಲರೂ ಸೇರಿ ಸಮಾಲೋಚಿಸಿ ತಕ್ಷಣವೇ ಅವರ ಊಟ, ವಸತಿ, ಇತ್ಯಾದಿ ಬಗ್ಗೆ ಅನುಕೂಲಕರವಾದ ವ್ಯವಸ್ಥೆ ಮಾಡಿದರು. ಈ ಮೊದಲು ವಾಸಿಸುತ್ತಿದ್ದ ಸಣ್ಣ ಕೋಣೆಯಿಂದ ಅವರ ವಸತಿಯನ್ನು ಅದೇ ಓಣಿಯಲ್ಲಿರುವ ಸರಸೂಮನೆಗೆ ಬದಲಾಯಿಸಲಾಯಿತು. ಈ ವೇಳೆಗೆ ವೇದವನ್ನು ಅಧ್ಯಯನಮಾಡಿ ವೇದಾರ್ಥಜ್ಞಾನವನ್ನು ಪಡೆಯಲೆಂದೇ ಗೋಕರ್ಣಕ್ಕೆ ಬಂದಿದ್ದ ಗಣಪತಿಮುನಿಗಳು ಋಗ್ವೇದ ಪುಸ್ತಕವು ಯಾರಲ್ಲಿ ಸಿಗಬಹುದು ಎಂದು ವಿಚಾರಿಸಿದರು. ಅಂದಿನ ದಿನಗಳಲ್ಲಿ ಮುದ್ರಿತವಾದ ವೇದಪುಸ್ತಕಗಳು ದೊರೆಯುತ್ತಿರಲಿಲ್ಲ. ಕೆಲವರಲ್ಲಿ ಮಾತ್ರ ವಿರಳವಾಗಿ ಕೈಬರಹದ ಪುಸ್ತಕಗಳು ಇರುತ್ತಿದ್ದವು. ಅವರು ಅದನ್ನು ಬಹುಜೋಪಾನವಾಗಿ ಕಾದಿಡುತ್ತಿದ್ದು ಯಾರಿಗೂ ಅದನ್ನು ಹೊರಗೆ ಒಯ್ಯಲು ಕೊಡುತ್ತಿರಲಿಲ್ಲ. ಊರ ಪ್ರಮುಖರು ಗಣಪತಿಮುನಿಗಳಿಗಾಗಿ ವೇದಪುಸ್ತಕದ ಬಗೆಗೆ ವಿಚಾರಿಸಲು ಅನಂತ ಉಪಾಧ್ಯಾಯರೆಂಬವರು ತಮ್ಮ ಮನೆಗೆ ಬಂದು ಪುಸ್ತಕವನ್ನು ಓದಿಹೋಗಲು ಒಪ್ಪಿದರು. ಅಂತೆಯೇ ಗಣಪತಿಮುನಿಗಳು ಪ್ರತಿದಿನ ಅನಂತ ಉಪಾಧ್ಯಾಯರ ಮನೆಗೆ ಹೋಗಿ ಒಂದು ತಾಸು ಕುಳಿತು ಪುಸ್ತಕವನ್ನೋದಿ ಹಿಂದಿರುಗುತ್ತಿದ್ದರು. ಇದರಿಂದ ಚಕಿತರಾದ ಅನಂತ ಉಪಾಧ್ಯಾಯರು ಗಣಪತಿಮುನಿಗಳ ಶಿಷ್ಯರೊಡನೆ 'ಹುಚ್ಚು ಶಾಸ್ತ್ರಿ ! ವೇದಾಧ್ಯಯನ ಮಾಡಲು ನಾಲ್ಕೈದು ವರ್ಷಗಳೇ ಸಾಲುವುದಿಲ್ಲ. ದಿನಕ್ಕೊಂದು ತಾಸು ಪುಸ್ತಕದ ಪುಟ ತಿರುವಿದರೆ ಏನು ತಿಳಿಯುತ್ತದೆ?' ಎಂದು ಅಣಕವಾಡಿದರು. ('ಶಾಸ್ತ್ರಿ' ಎಂಬುದು ಮನೆತನದ ಹೆಸರು) ಹೀಗಿರುವಾಗ ಎಂಟನೇ ದಿವಸ ಋಗ್ವೇದ ಸಂಹಿತೆಯನ್ನು ಪೂರ್ತಿಯಾಗಿ ಓದಿ ಮುಗಿಸಿದ ಗಣಪತಿಮುನಿಗಳು ಅನಂತ ಉಪಾಧ್ಯಾಯರಿಗೆ ಪುಸ್ತಕವನ್ನೊಪ್ಪಿಸುತ್ತ ಓದಲು ಕೊಟ್ಟ ಬಗ್ಗೆ ತಮ್ಮ ಧನ್ಯವಾದವನ್ನು ಅರ್ಪಿಸಿದರು. ಆಗ ಅವರು 'ಅರೇ ! ಇಷ್ಟು ಬೇಗ ಇಡೀ ಋಗ್ವೇದವನ್ನು ಓದಿ ಮುಗಿಸಿದಿರಾ? ಎಂದು ಉದ್ಗರಿಸುತ್ತಾ 'ಎಲ್ಲಿ ಸ್ವಲ್ಪ ಹೇಳುತ್ತೀರಾ, ಕೇಳೋಣ !' ಎಂದಾಗ ಗಣಪತಿಮುನಿಗಳು ಶಾಂತಚಿತ್ತದಿಂದ 'ನನಗೆ ತಿಳಿದಷ್ಟು ಹೇಳುತ್ತೇನೆ' ಎನ್ನುತ್ತಾ ಪದ್ಮಾಸನದಲ್ಲಿ ಕುಳಿತು ವೇದವನ್ನು ಹೇಳಲು ಪ್ರಾರಂಭಿಸಿದರು. ಅದೇನು ವಿಸ್ಮಯ ! ಅವರ ಬಾಯಿಂದ ಅಸ್ಖಲಿತವಾದ ದಿವ್ಯವಾಣಿಯ ರೂಪದಿಂದ ವೇದಮಂತ್ರಗಳು ತಡೆಯಿಲ್ಲದೆ ಹರಿಯತೊಡಗಿದವು. ಆಗ ಅನಂತ ಉಪಾಧ್ಯಾಯರಿಗೆ ಗಣಪತಿಮುನಿಗಳ ಸರ್ವಜ್ಞಸ್ವರೂಪದ ದರ್ಶನವಾಯಿತು. ಅವರು ಸಾಷ್ಟಾಂಗ ಪ್ರಣಾಮಮಾಡಿ ತಮ್ಮ ಅವಿನಯವನ್ನು ಮನ್ನಿಸಬೇಕೆಂದು ಕೇಳಿಕೊಂಡರು.

ಸಾವಿರಾರು ವರ್ಷಗಳ ಹಿಂದೆ ಪುಸ್ತಕಗಳೇ ಇಲ್ಲದ ಕಾಲದಲ್ಲಿ ವೇದವು ಒಬ್ಬರಿಂದೊಬ್ಬರಿಗೆ ಕರ್ಣಪರಂಪರೆಯಿಂದ ಹರಿದುಬಂದ ಅತ್ಯಂತ ಪ್ರಾಚೀನವಾದ ಒಂದು ಮಹಾಗ್ರಂಥ, ಆದಾಗ್ಯೂ ಒಂದು ಅಕ್ಷರವೂ ಬದಲಾಗದೆ ಮೂಲರೂಪದಲ್ಲಿಯೇ ಪರಿಶುದ್ಧವಾಗಿ ಉಳಿದು ಬಂದಿರುವುದು ಇದರ ವಿಶೇಷವಾಗಿದೆ. ಅನಂತರ ಮುಂದಿನ ಶತಮಾನಗಳಲ್ಲಿ ತಾಳೆಗರಿಗಳ ಮೇಲೆ ಲಿಖಿತರೂಪದಲ್ಲಿ ಇದು ದಾಖಲಿಸಲ್ಪಟ್ಟಿತು. ವೇದವನ್ನು ಯಾರೊಬ್ಬರು ರಚಿಸುವುದಕ್ಕೆ ಸಾಧ್ಯವಿಲ್ಲ. ಋಷಿಗಳು ಸಮಾಧಿಸ್ಥಿತಿಯ ಸುಪ್ತಾವಸ್ಥೆಯಲ್ಲಿ ಉಸುರಿದ ಮಂತ್ರಗಳಿವು. ಅಂತೆಯೇ ಇದನ್ನು ತಿಳಿಯಬೇಕೆಂಬುದು ಗಣಪತಿ ಮುನಿಗಳ ಅಪೇಕ್ಷೆಯಾಗಿತ್ತು. 'ವೇದ' ಎಂದರೆ ಜ್ಞಾನ. ಈ ಜ್ಞಾನವನ್ನು ಪಡೆಯುವದಕ್ಕಾಗಿ ತಪಸ್ಸುಮಾಡಲು ಅವರು ನಿರ್ಧರಿಸಿದರು. ಅದಕ್ಕಾಗಿ ಉಮಾ–ಮಹೇಶ್ವರ ಉಪವನವನ್ನು ಅವರು ಆಯ್ಕೆಮಾಡಿದರು.

ಉಮಾ–ಮಹೇಶ್ವರ ಉಪವನವು ಸಮುದ್ರತೀರಕ್ಕೆ ಹೊಂದಿಕೊಂಡಿರುವ ಒಂದು ಸುಂದರ ತಾಣ. ಶತಶೃಂಗಗಳ ಸಾಲಿನಲ್ಲಿರುವ ಈ ಗಿರಿಯು ಸಂತರು,ಭಕ್ತರು, ತಪಸ್ವಿಗಳು, ನಿಸರ್ಗ ಸೌಂದರ್ಯದ ಆರಾಧಕರು ಇವರಿಗೆಲ್ಲ ಬಹು ಪವಿತ್ರಸ್ಥಾನ, ಗುಡ್ಡದ ಬುಡದಲ್ಲಿ ಮೈಮರೆತು ಮಲಗಿವೆಯೋ ಎಂಬಂತೆ ತೋರುವ ಶಿಲಾಬಂಡೆಗಳ ಸಮೂಹ. ಪಶ್ಚಿಮದೆಡೆಯಲ್ಲಿ ಅಪರಂಪಾರವಾಗಿ ಆವರಿಸಿನಿಂತ ಜಲರಾಶಿಯ ಸಾಗರ. ಹೀಗೆ ಉಮಾ–ಮಹೇಶ್ವರ ಉಪವನ ಬಳಿಬಂದವರ ಕಣ್ಮನಗಳನ್ನು ತಣಿಸುತ್ತದೆ. ಈ ಸ್ಥಳವು ಗಣಪತಿಮುನಿಗಳ ಮನಸೆಳೆಯಿತು. ಗುಡ್ಡದ ಮೇಲಿರುವ ಉಮಾ–ಮಹೇಶ್ವರ ದೇವರ ಲಿಂಗವು ಪ್ರಕೃತಿ–ಪುರುಷ ಸಂಕೇತವಾಗಿದ್ದು ಒಂದೇ ಲಿಂಗದಲ್ಲಿ ಸ್ತ್ರೀ ಮತ್ತು ಪುರುಷ ಸಮಾನತೆಯ ಪ್ರತಿಪಾದಿಸುವ ಅರ್ಧನಾರೀಶ್ವರ ತತ್ವವನ್ನು ನಿರ್ದೇಶಿಸುವದು ಇದರ ವೈಶಿಷ್ಟ್ಯವಾಗಿದೆ.

ಉಮಾಮಹೇಶ್ವರ ಉಪವನದಲ್ಲಿ ಗಣಪತಿಮುನಿಗಳು ತಪಸ್ಸು ಮಾಡಲು ನಿಶ್ಚಯಿಸಿರುವದನ್ನು ತಿಳಿದ ಗೋಕರ್ಣದ ಪ್ರಸಿದ್ಧ ಜ್ಯೋತಿಷಿಗಳಾದ ನಾರಾಯಣ ಪಂಡಿತರು ವೆಂಕಟರಮಣ ಪಂಡಿತರು ಹಾಗೂ ಊರಿನ ಇತರ ಗಣ್ಯವ್ಯಕ್ತಿಗಳು ಅವರಿಗೆ ಬೇಕಾದ ಆಹಾರ ಸಾಮಗ್ರಿಗಳು ಮತ್ತು ಇನ್ನಿತರ ವಸ್ತುಗಳನ್ನು ಒದಗಿಸುವ ವ್ಯವಸ್ಥೆ ಮಾಡಿದರು. ಸ್ವಲ್ಪ ದಿನಗಳಲ್ಲಿಯೇ ತೆಂಗಿನಗರಿಗಳಿಂದ ಹೊದೆಸಲ್ಪಟ್ಟ ಛಾವಣಿಯ ಒಂದು ಕುಟೀರ ನಿರ್ಮಾಣವಾಗಲು ಗಣಪತಿಮುನಿ ಆರ್ಷ ದಂಪತಿಗಳು ಅದರಲ್ಲಿ ವಾಸಮಾಡಿದರು. ದಿನಾಲು ಸಾಯಂಕಾಲ ಉಮಾಮಹೇಶ್ವರ ಉಪವನದಿಂದ ಗಣಪತಿಮುನಿಗಳು ಗೋಕರ್ಣಕ್ಕೆ ಬಂದು ಅಲ್ಲಿ ಕೋಟಿತೀರ್ಥದ ದಕ್ಷಿಣಕ್ಕಿರುವ ಕೃಷ್ಣಾಪುರ (ಶ್ರೀ ಕೃಷ್ಣ ಮಂದಿರ) ದಲ್ಲಿ ಆಚಾರ, ವಿಚಾರ, ಅಧ್ಯಾತ್ಮ, ಸಂಸ್ಕೃತಿ ಹೀಗೆ ಒಂದೊಂದು ದಿನ ಒಂದೊಂದು ವಿಷಯದ ಮೇಲೆ ವಿದ್ಯಾರ್ಥಿಗಳಿಗೆ ಪ್ರವಚನ ನೀಡುತ್ತಿದ್ದರು. ಆ ವೇಳೆಗೆ ಉಮಾಮಹೇಶ್ವರ ಉಪವನದಲ್ಲಿ ಅವರ ಪತ್ನಿ ವಿಶಾಲಾಕ್ಷಿ ಅಮ್ಮನವರು ಒಂಟಿಯಾಗಿರುವುದರಿಂದ ಅವರ ಜತೆಗೆ ಉಳಿಯಲು ಮತ್ತು ಅಡಿಗೆ ಮಾಡಲು ಒಬ್ಬ ಹೆಂಗಸಿನ ಅವಶ್ಯಕತೆಯಿತ್ತು. ಆದ ಕಾರಣ ನಾರಾಯಣ ಪಂಡಿತರು ತಮಗೆ ತಿಳಿದಿರುವ ಕೆಲವು ಹೆಂಗಸರಲ್ಲಿ ವಿಚಾರಿಸಿದಾಗ 'ಅವರು ಗುರುತು ಪರಿಚಯವಿಲ್ಲದ ಯಾವುದೋ ಅಪರಿಚಿತರು. ಅವರ ಭಾಷೆ ಕೂಡ ತಿಳಿಯದು. ಅವರಿರುವ ಸ್ಥಳವೂ ಊರಿಂದ ದೂರವಾದ ನಿರ್ಜನ ಪ್ರದೇಶ. ಆದ್ದರಿಂದ ಅಲ್ಲಿಗೆ ಹೋಗಲು ಸಾಧ್ಯವಿಲ್ಲ' ಎಂದರು. ಹೀಗಿರುವಾಗ ಅಲ್ಲಿಗೆ ಹೋಗಿ ಉಳಿಯುವದಕ್ಕೆ ಯಾರೊಬ್ಬರೂ ಒಪ್ಪಿಕೊಳ್ಳಲಿಲ್ಲ.

ವಿಶಾಲಾಕ್ಷಿ ಅಮ್ಮನವರು

ವಿಶಾಲಾಕ್ಷಿ ಅಮ್ಮನವರು ಸಿರಿವಂತ ಮನೆತನದ ಕುಟುಂಬದಲ್ಲಿ ಜನಿಸಿದವರಾಗಿದ್ದು ಅವರ ತಾಯಿ–ತಂದೆಯರು ಮಗಳನ್ನು ಬಹಳ ಮುದ್ದಿನಿಂದ ಬೆಳೆಸಿದ್ದರು. ಅಕ್ಕರೆಯ ಅರಮನೆಯಲ್ಲಿ ಕಷ್ಟ ನಿಷ್ಠುರಗಳ ಅರಿವಿಲ್ಲದೆ ಸುಕುಮಾರಿಯಾಗಿ ಬೆಳೆದ ಅವರು ಮೃದು ಮನಸ್ಸಿನ ಅಮಾಯಕ ವ್ಯಕ್ತಿತ್ವದವರಾಗಿದ್ದು ಅವರಿಗೆ ಅಡಿಗೆ ಮಾಡುವುದು ತಿಳಿದಿರಲಿಲ್ಲ. ಗಣಪತಿಮುನಿಗಳು ಸದಾ ಪುಣ್ಯಕ್ಷೇತ್ರಗಳನ್ನು ಸಂಚರಿಸುತ್ತಿದ್ದು ಒಂದೇ ಕಡೆ ನೆಲೆನಿಲ್ಲುತ್ತಿರಲಿಲ್ಲ. ಇದರಿಂದ ವಿಶಾಲಾಕ್ಷಿ ಅಮ್ಮನವರಿಗೆ ಹೊಸದಾದ ಊರು ಅಪರಿಚಿತ ಭಾಷೆ ಎಂತಹುದೋ ವಾತಾವರಣ ಇವುಗಳಿಗೆಲ್ಲ ಹೊಂದಿ ನಡೆಯುವುದು ಬಹುಕಷ್ಟವಾಯಿತು. ಆದಾಗ್ಯೂ ಸಾತ್ವಿಕ ಮನೋಭಾವದವರಾದ ಅವರು ತಾಳ್ಮೆಯಿಂದ ಸಾಮರಸ್ಯದಿಂದ ಆಯಾ ಸಂದರ್ಭಗಳಿಗೆ ಅನುವಾಗಿ ಹೊಂದಿ ನಡೆಯುತ್ತಿದ್ದರು.

ವಾಸಿಷ್ಠ ಗಣಪತಿ ಮುನಿಗಳ ರೂಪದಲ್ಲಿ ಒಲಿದುಬಂದ ಇಷ್ಟದೈವ

ಅಂದು ಸಾಯಂಕಾಲ ಗಣೇಶನು ಪಾಠಶಾಲೆಯಿಂದ ಮನೆಗೆ ಹಿಂದಿರುಗುತ್ತಿದ್ದನು. ಆಗ ಶ್ರೀ ಮಹಾಗಣಪತಿ ದೇವಸ್ಥಾನದ ಸಮೀಪ ಗಾಯತ್ರಿ ಓಣಿಯ ಎಡೆಯಲ್ಲಿ ಉಮಾಮಹೇಶ್ವರ ಉಪವನಕ್ಕೆ ಹೋಗುವ ದಾರಿಯಲ್ಲಿ ಗಣಪತಿಮುನಿಗಳು ಯಾವುದೋ ಯೋಚನೆಯಲ್ಲಿ ಅನ್ಯಮನಸ್ಕರಾಗಿ ನಿಂತಿದ್ದರು. ಮುಸ್ಸಂಜೆಯ ಆ ಸಮಯದಲ್ಲಿ ಅವರನ್ನು ಅಲ್ಲಿ ಕಂಡ ಗಣೇಶನು 'ಇಷ್ಟು ಹೊತ್ತಿನಲ್ಲಿ ಇವರೇಕೆ ಹೀಗೆ ಇಲ್ಲಿ ನಿಂತುಕೊಂಡಿದ್ದಾರೆ' ಎಂದು ಯೋಚಿಸುತ್ತ ಅವರ ಹತ್ತಿರಕ್ಕೆ ಹೋಗಿ 'ಹೀಗೇಕೆ ನೀವು ಇಲ್ಲಿ ನಿಂತುಕೊಂಡಿದ್ದೀರಿ?' ಎಂದು ಕೇಳಿದ. ಅದಕ್ಕೆ ಗಣಪತಿಮುನಿಗಳು ತಮ್ಮ ತೊಂದರೆಯನ್ನು ವಿವರಿಸಿದರು. ಗೋಕರ್ಣಕ್ಕೆ ಬಂದ ಕೆಲವೇ ದಿನಗಳಲ್ಲಿ ಗಣಪತಿಮುನಿಗಳು ಕನ್ನಡವನ್ನು ಈಗ ಚೆನ್ನಾಗಿ ಮಾತನಾಡಬಲ್ಲವರಾಗಿದ್ದರು. ಇದನ್ನು ಕೇಳಿದ ಗಣೇಶನು ಮುಗ್ಧಭಾವದಿಂದ 'ಓ ! ಇದಕ್ಕಾಗಿ ನೀವಿಷ್ಟು ಚಿಂತಿಸುವದೇ? ನನಗೆ ತಿಳಿಸಿದ್ದರೆ ನಾನೇ ಬರುತ್ತಿದ್ದನಲ್ಲ! ಎಂದು ಹೇಳಿದ. ಇದನ್ನು ಕೇಳಿ ಚಕಿತರಾದ ಗಣಪತಿಮುನಿಗಳು ಏನು, ನೀನು ಬರುತ್ತಿದ್ದೆಯಾ ? ನೀನಿನ್ನೂ ಎಳೆಯ ಹುಡುಗ' ಎನ್ನುತ್ತಿರುವಂತೆಯೇ ಗಣೇಶನು "ಹಾಗೇನೂ ಇಲ್ಲ. ನಿಮ್ಮಂತವರ ಸಂಗಡ ಬರುವದಕ್ಕೆ ನಾನು ಸ್ವತಂತ್ರನಿದ್ದೇನೆ. ಮನೆಯಲ್ಲಿ ಪಾಲಕರು ತಮ್ಮ ಯಾವುದೇ ಕೆಲಸಕ್ಕೆ ಅಪೇಕ್ಷೆಪಟ್ಟರೆ ಅದನ್ನು ನೆರವೇರಿಸಲು ಸದಾ ನಾನು ಸಿದ್ಧನಿದ್ದೇನೆ. ಆದರೆ ಇಂತಹ ಸತ್ಕಾರ್ಯವನ್ನು ಮಾಡುವಾಗ ಅದು ಬೇಡವೆಂದು ಶಾಸನ ಮಾಡುವವರು ನನಗೆ ಯಾರೂ ಇಲ್ಲ. ಆದ್ದರಿಂದ ನಾನು ನಿಮ್ಮ ಜತೆ ಬರುವದಕ್ಕೆ ಸ್ವತಂತ್ರನಿದ್ದೇನೆ. ದಯಮಾಡಿ ನೀವು ನನ್ನನ್ನು ಅನುಗ್ರಹಿಸಿ ತಮ್ಮ ಸೇವೆಗಾಗಿ ಸ್ವೀಕರಿಸಿದರೆ ಅದು ನನ್ನ ಸೌಭಾಗ್ಯವೆಂದು ತಿಳಿಯುತ್ತೇನೆ'. ಎಂದು ನಮ್ರವಾಗಿ ನುಡಿದನು. ಆಗ ಇನ್ನೂ ಗಣಪತಿಮುನಿಗಳು ಅನುಮಾನಿಸುತ್ತಿರುವದನ್ನು ನೋಡಿ 'ಈಗಾಗಲೇ ನಾನು ಸುಮಾರು ಎರಡು ವರ್ಷಗಳ ಕಾಲ ರಾಮದಾಸ ಸ್ವಾಮಿಯವರ ಸಂಗಡ ಉತ್ತರಭಾರತದಲ್ಲಿ ಸಂಚರಿಸಿ ಹಲವು ಬಗೆಯ ಅಡಿಗೆ ವಿಧಾನಗಳನ್ನು ಕಲಿತುಕೊಂಡಿದ್ದೇನೆ.' ಎಂದು ತನ್ನ ಅರ್ಹತೆಯನ್ನು ದಿಟ್ಟತನದಿಂದ ಪ್ರತಿಪಾದಿಸಿಕೊಂಡನು. ಇದನ್ನು ಕೇಳಿ ವಿಸ್ಮಿತರಾದ ಗಣಪತಿಮುನಿಗಳು ಗಣೇಶನ ಅಭಿಲಾಷೆಗೆ ತಮ್ಮ ಸಮ್ಮತಿಸೂಚಿಸಿದರು.ಆ ಕ್ಷಣದಲ್ಲಿ ಅವರಿಗೆ ಅರಿಯದಂತೆಯೇ ಆತನ

ಮೇಲೆ ಅವ್ಯಕ್ತಪ್ರೀತಿ ಉಂಟಾಯಿತು. ಅದಾವುದೋ ಶಕ್ತಿ ಅವರಿಬ್ಬರನ್ನೂ ಹತ್ತಿರಕ್ಕೆ ತಂದಿತ್ತು. ಗಣೇಶನ ಆನಂದಕ್ಕೆ ಪಾರವೇ ಇರಲಿಲ್ಲ. ಅದೇ ಕ್ಷಣದಲ್ಲಿ ಆತ ಅವರನ್ನು ಹಿಂಬಾಲಿಸಿ ಹೊರಟುಬಿಟ್ಟನು. ಕತ್ತಲಾಗುತ್ತಿರುವದರಿಂದ ಗಣಪತಿಮುನಿಗಳು ವೇಗವಾಗಿ ಹೆಜ್ಜೆಹಾಕುತ್ತ ಮುಂದೆ ಸಾಗುತ್ತಿರಲು ಅವರು ಧರಿಸಿದ್ದ ಕಾಲಿನ ಕಡಾವುಗಳಿಂದ 'ಖಟ್ ಫಟ್ ಖಟ್..ಫಟ್' ಎಂಬ ಸದ್ದು ಕೇಳಿಬರುತ್ತಿತ್ತು. ಹೀಗೆ ಅವರು ಗಾಯತ್ರಿಗುಡ್ಡದ ಹಾದಿಯಲ್ಲಿ ಏರಿಳಿಯುತ್ತಾ ಸಾಗಿ ಕೂಡ್ಲೆ ಸಮುದ್ರತೀರದ ಮೂಲಕವಾಗಿ ಉಮಾ–ಮಹೇಶ್ವರ ತಪೋವನದಲ್ಲಿರುವ ಆಶ್ರಮ ತಲುಪಿದರು.

ಗಣೇಶ ದೈವರಾತನಾದ

ಆಶ್ರಮದ ಹೊರಬಾಗಿಲಿನ ಚಿಟ್ಟೆಯಮೇಲೆ ವಿಶಾಲಾಕ್ಷಿ ಅಮ್ಮನವರು ಚಿಕ್ಕಬಾಲಕನಾಗಿರುವ ತಮ್ಮ ಮಗನೊಂದಿಗೆ ಕುಳಿತು ಪತಿಯ ಆಗಮನದ ನಿರೀಕ್ಷೆಯಲ್ಲಿದ್ದರು. ಅಪರಿಚಿತ ನಿರ್ಜನ ಪ್ರದೇಶದಲ್ಲಿ ಮೌನವಾಗಿ ಕುಳಿತಿರುವ ಅಮ್ಮನವರನ್ನು ಕಂಡು ಗಣೇಶನಿಗೆ ತುಂಬಾ ವಿಷಾದವೆನಿಸಿತು. ಆಶ್ರಮದ ಮುಂದುಗಡೆ ಸಣ್ಣಝುರಿಯೊಂದು ಜುಳು ಜುಳು ಹರಿಯುತ್ತಿತ್ತು. ಗಣಪತಿಮುನಿಗಳು ಅದರಲ್ಲಿ ಕೈ–ಕಾಲು ಮುಖತೊಳೆದು ಪಶ್ಚಿಮಾಭಿಮುಖವಾಗಿರುವ ಆಶ್ರಮದ ಚಿಟ್ಟೆಯ ಮೇಲೆ ಗಾಳಿಗೆ ತನುವೊಡ್ಡಿ ಹಾಯಾಗಿ ಕುಳಿತು ನಡೆದುಬಂದ ದಾರಿಯ ದಣಿವನ್ನು ತಣಿಸುತ್ತಿರಲು ಗಣೇಶನೂ ಕೈ–ಕಾಲು ಮುಖತೊಳೆದು ಆರ್ಷದಂಪತಿಗಳಿಗೆ ತನ್ನ ಗೋತ್ರ ಪ್ರವರಗಳೊಂದಿಗೆ ಅಭಿವಾದನ ಮಾಡಿದನು. ಅದನ್ನು ಕೇಳಿ ಪ್ರಭಾವಿತರಾದ ಗಣಪತಿಮುನಿಗಳು 'ವಿಶ್ವಾಮಿತ್ರ ದೈವರಾತ, ಔದಲ' ಈ ಮೂರು ಪ್ರವರಗಳ ಪರಂಪರೆಯಲ್ಲಿ ಜನಿಸಿ ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿರುವ ಆತನ ಮುಖಕಾಂತಿಯನ್ನು ಕಂಡು ಆತನಿಗೆ 'ದೈವರಾತ' ಎಂದು ನಾಮಕರಣ ಮಾಡಿದರು.

ಗೋಕರ್ಣದ ನಾಗಬೀದಿಯ ಮನೆಯಲ್ಲಿ ವಾಸಿಸುತ್ತಿರುವಾಗ ದಿನಾಲು ನಾಲ್ಕು ಬಾರಿ ಬಂದುಹೋಗುತ್ತಿದ್ದ ಹುಡುಗನು ಪತಿಯ ಜತೆ ಬಂದಿರುವುದನ್ನು ಕಂಡು ವಿಶಾಲಾಕ್ಷಿ ಅಮ್ಮನವರಿಗೆ ಅಚ್ಚರಿಯಾಯಿತು. ಅಂತೆಯೇ ಅವರು 'ಈ ಹುಡುಗನನ್ನೇಕೆ ಕರೆತಂದಿರುವಿರಿ?' ಎಂದು ಕೇಳಿದರು. ಅದಕ್ಕೆ ಗಣಪತಿಮುನಿಗಳು 'ನಾನೇನೂ ಈತನನ್ನು ಕರೆತಂದಿಲ್ಲ.....' ಎಂದು ನಡೆದ ವಿಷಯವನ್ನು ವಿವರಿಸುತ್ತ ಈತ ಒಬ್ಬ ಸಾಮಾನ್ಯ ಹುಡುಗನಲ್ಲ. ಇವನಲ್ಲಿ ಆರ್ಷವ್ಯಕ್ತಿತ್ವವು ಸುಪ್ತವಾಗಿದೆ. ಋಷಿಜೀವನದ ಸಂಸ್ಕಾರವೇ ಇವನ ಅಂತರಂಗದ ಅಭಿಲಾಷೆಯಾಗಿದೆ.' ಎಂದು ಹೇಳಿದರು. ಇದನ್ನು ಕೇಳಿ ವಿಶಾಲಾಕ್ಷಿ ಅಮ್ಮನವರಿಗೆ ಸಮಾಧಾನವಾಯಿತು.

ಈಗಾಗಲೇ ಗಣಪತಿಮುನಿಗಳಲ್ಲಿಗೆ ಅನೇಕ ವಿದ್ಯಾರ್ಥಿಗಳು ಶಿಷ್ಯರಾಗಿದ್ದು ಪ್ರತಿಯೊಬ್ಬರಿಗೂ ತಾನೊಬ್ಬ ಮಹಾವಿದ್ವಾಂಸನಾಗಬೇಕು, ದೊಡ್ಡ ಪಂಡಿತನಾಗಬೇಕು, ಖ್ಯಾತ ಜ್ಯೋತಿಷಿಯಾಗಬೇಕು; ಇವೇ ಮುಂತಾದ ಉನ್ನತ ಆಸೆಗಳಿದ್ದವು. ಆದರೆ ದೈವರಾತನು ಮಾತ್ರ ನಿರಪೇಕ್ಷಿತನಾಗಿ ಪ್ರಾಂಜಲ ಭಕ್ತಿಯ ಅಯಾಚಿತ ಭಾವದಲ್ಲಿ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತ ಗುರು ಶುಶ್ರೂಷೆಗೆ ಸೇವಕನಾಗಿ ಸ್ವೀಕರಿಸಬೇಕೆಂದು ಕೇಳಿಕೊಂಡಾಗ ಈ ಆತ್ಮನಿವೇದನೆ ಗಣಪತಿಮುನಿಗಳ ಹೃದಯ ಸ್ಪರ್ಶಿಸಿ ಮನಕರಗುವಂತೆ ಮಾಡಿತು. 'ಸದಾ ಸದ್ಗುರುವಿನ ಅಂತೇವಾಸಿಯಾಗುವದಕ್ಕಾಗಿ ಅವರ ಸತ್ಸಂಗಕ್ಕಾಗಿ ಹಾತೊರೆಯುವ

ಇವನೇ ನನಗೆ ತಕ್ಕ ತಪಃಶಿಷ್ಯ' ಎಂದು ಅವರ ಅಂತರಾತ್ಮ ನುಡಿಯಿತು. ಹೀಗೆ ದೈವರಾತನಲ್ಲಿ ಅನನ್ಯವಾಗಿರುವ ಸತ್ಸಂಕಲ್ಪ ಅದು ಭಗವತ್‌ಸಂಕಲ್ಪವಾಯಿತು.

ಸಾವಿರಾರು ವರ್ಷಗಳ ನಂತರ ಈಗ ಮತ್ತೋಮ್ಮೆ ಆರ್ಷಪರಿಸರ ನಿರ್ಮಾಣವಾಗುತ್ತಲಿತ್ತು. ಎರಡು ಮಹಾಚೇತನಗಳು ಇದಕ್ಕೆ ಪೂರ್ವಭಾವಿಯಾಗಿ ಅನುವಾಗುತ್ತಲಿದ್ದವು. ಅಂತಹಕಾಲ ಒದಗಿ ಬಂದಿತ್ತು. ವಾಸಿಷ್ಠ ಗಣಪತಿಮುನಿಗಳು ದೈವರಾತನಿಗೆ ಋಷಿಜೀವನದ ಬಾಗಿಲು ತೆರೆದರು. ತನಗೆ ತಾನೆ ಗುರುವನರಸುತ್ತ ಗುರುಸೇವೆಗೆ ಸರ್ವಸಮರ್ಪಣಭಾವದಿಂದ ಆತ್ಮ ನಿವೇದನೆ ಮಾಡಿಕೊಂಡು ಮನೆಮಾರು–ಊರು– ತೊರೆದು ತನ್ನೆಲ್ಲ ಈಷಣೆಯನ್ನು ತ್ಯಜಿಸಿ ಗುರುವಿನ ಹಿಂದೆ ಗುಲಾಮನಾಗಿ ಹೋಗುವುದೊಂದೇ ಆತನ ಗುರಿಯಾಗಿತ್ತು. ಜ್ಞಾನದ ದಾಹ ಅಧ್ಯಾತ್ಮಿಕ ಹಸಿವು ಆತನನ್ನು ಗಣಪತಿಮುನಿಗಳ ಪರಿಚರ್ಯಗೆ ಪ್ರೇರೇಪಿಸಿತು. ಅವನ ಬಾಳ ಪಲ್ಲವಿಗೆ ಅಂದೇ ಶ್ರುತಿ ಸಿಕ್ಕಿತು. ಮುತ್ತಿನ ಸಿಂಪು ಸೋಮ ಬಿಂದುವಿಗಾಗಿ ಬಾಯ್ದೆರೆದು ಹಂಬಲಿಸಿ ನಿಂತಿತ್ತು; ಸ್ವಾತಿಮಳೆಗರೆಯಿತು. ಗಣೇಶನ ಪರಮದೈವವೇ ಗಣಪತಿಮುನಿಗಳ ರೂಪದಿಂದ ತನ್ನ ಶಿಷ್ಯನನ್ನಾಗಿ ಅವನನ್ನು ಸ್ವೀಕರಿಸಿತು. ಗಣೇಶನು ಅಂದೇ ದೈವರಾತನಾದನು. ವಾಸಿಷ್ಠರ ಅಂತೇವಾಸಿಯಾಗಿ ಧನ್ಯನಾದನು.

ವಿಶಾಲಾಕ್ಷಿ ಅಮ್ಮನವರು ನಿತ್ಯವೂ ಸಂಧ್ಯಾ ಸಮಯ ಸಮೀಪಿಸುತ್ತಿರುವಂತೆ ಮಣ್ಣಿನ ಹಣತೆಯಲ್ಲಿ ದೀಪವನ್ನು ಬೆಳಗಿ ಸ್ವಲ್ಪಹೊತ್ತು ಮೌನವಾಗಿ ಕುಳಿತು ಸಂಧ್ಯಾಕಾಲದ ವಂದನೆಯನ್ನು ಗೈಯುತ್ತಿದ್ದರು. ಅಂದು ಗೋಕರ್ಣದಲ್ಲಿ ಹೊನ್ನೆಎಣ್ಣೆಯಿಂದ ದೀಪಬೆಳಗುವ ಪದ್ಧತಿ ರೂಢಿಯಲ್ಲಿತ್ತು. ದೀಪವು ನಿಧಾನವಾಗಿ ಉರಿಯುವದೂ ಮತ್ತು ಹೊನ್ನೆ ಎಣ್ಣೆಯು ಧೊಡ್ಡಪ್ರಮಾಣದಲ್ಲಿ ಲಭ್ಯತೆಯಿರುವುದೂ ಇದಕ್ಕೆ ಕಾರಣವಾಗಿತ್ತು. ಅಂತೆಯೇ ಅಮ್ಮನವರೂ ಹೊನ್ನೆಎಣ್ಣೆಯಿಂದಲೇ ದೀಪವನ್ನು ಬೆಳಗುತ್ತಿದ್ದರು. ದೈವರಾತನು ಅಮ್ಮನವರ ಸಂಧ್ಯಾ ಸಮಯದ ವಂದನೆಯು ಮುಗಿಯುತ್ತಿರುವಂತೆ 'ಇಂದು ಏನು ಅಡಿಗೆ ಮಾಡಲಿ ?' ಎಂದು ಕೇಳಲು ಅವರು 'ಅನ್ನ, ಸಾರು ಮಾತ್ರ ಮಾಡಿದರೆ ಸಾಕು; ಬೇರೆನೂ ಬೇಡ ; ಎಂದರು. ಅಡಿಗೆ ಪ್ರಾರಂಭಿಸಿ ಮುಕ್ಕಾಲು ಗಂಟೆಯಲ್ಲಿ ಅನ್ನ, ಸಾರು ಸಿದ್ಧಪಡಿಸಿದ ದೈವರಾತನು ಎಲೆಹಾಕಿ ಗುರುದಂಪತಿಗಳನ್ನು ಊಟಕ್ಕೆ ಕರೆದನು. 'ಅಮ್ಮನವರು ಅಚ್ಚರಿಯಿಂದ' ಇಷ್ಟು ಬೇಗ ಅಡಿಗೆ ಆಯಿತಾ?' ಎಂದರು. ಗಣಪತಿಮುನಿಗಳು ಸಾರನ್ನು ಬಡಿಸುವಾಗ ಸ್ವಲ್ಪ ಅಂಗೈಯಲ್ಲಿ ಹಿಡಿದು ರುಚಿನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಥಮ ಬಾರಿಗೇ ದೈವರಾತನ ಅಡಿಗೆಯ ಕೌಶಲ್ಯವು ಗುರುದಂಪತಿಗಳ ಮೆಚ್ಚುಗೆಗೆ ಪಾತ್ರವಾಯಿತು. ಊಟದ ನಂತರ ಮೂವರು ಅಂಗಳದಲ್ಲಿ ಕುಳಿತು ಸ್ವಲ್ಪ ಹೊತ್ತು ಹಾಯಾಗಿ ಮಾತನಾಡಿ ನಂತರ ಮಲಗಿಕೊಂಡರು.

ಮರುದಿನ ಮುಂಜಾನೆ ದೈವರಾತನು ಇನ್ನೂ ನಸುಕು ಹರಿಯುತ್ತಿರುವಂತೆಯೇ ಎದ್ದು ಮುಖಮಾರ್ಜನ ಮುಗಿಸಿ ಆಶ್ರಮದ ಮುಂದಿನಂಗಳವ ಗುಡಿಸಿ ಸಾರಣೆಮಾಡಿ ಅಂದವಾಗಿ ರಂಗವಲ್ಲಿ ಬರೆದು ಸ್ನಾನಕ್ಕೆ ಹೋದನು. ಅಮ್ಮನವರು ಎದ್ದು ಹೊರಗೆ ಬರುತ್ತಿರುವಂತೆ ಅಂಗಳದಲ್ಲಿ ಸುಂದರವಾದ ರಂಗವಲ್ಲಿಯನ್ನು ಕಂಡು ಅಚ್ಚರಿಯಿಂದ 'ಅರೇ ! ಎಷ್ಟು ಚಂದವಾಗಿ ರಂಗವಲ್ಲಿ ಹಾಕಿದ್ದಾನೆ !' ಎಂದು ಉದ್ಗರಿಸುತ್ತಾ ಪತಿಯನ್ನು ಕರೆತಂದು ಅದನ್ನು ತೋರಿಸಿದರು. ಅವರೂ ಅದನ್ನು ಕಂಡು ಬಹಳ ಸಂತೋಷ ಪಟ್ಟರು. ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿಬಂದ ದೈವರಾತನು ಗುರುದಂಪತಿಗಳಿಗೆ

ನಮಸ್ಕರಿಸಿ 'ಈಗ ಮೊದಲು ಏನು ಮಾಡಲಿ?' ಎಂದು ಕೇಳಿದನು. ಅವರು ದಿನಾಲು ಬೆಳಿಗ್ಗೆ ಕಾಫಿ ತಯಾರಿಸು; ಆಮೇಲೆ ಮಧ್ಯಾಹ್ನದ ಊಟಕ್ಕೆ ಅನ್ನ, ಸಾರು, ತೋವೆ ಮತ್ತು ಚಟ್ನಿ ಮಾಡು' ಎಂದರು. ಅವರು ತಿಳಿಸಿದಂತೆ ಅಡಿಗೆ ತಯಾರಿಸಿ ಮಧ್ಯಾಹ್ನದ ವೇಳೆಗೆ ಗುರುದಂಪತಿಗಳಿಗೆ ಊಟ ಬಡಿಸಿದಾಗ ಅವರು ಅಡಿಗೆ ತುಂಬಾ ಚೆನ್ನಾಗಿರುವದಾಗಿ ಹೇಳಿದರು. ಆದರೆ ಅನಂತರ ದೈವರಾತನು ಊಟಮಾಡಲು ಅಡಿಗೆಯು ಅಷ್ಟೊಂದು ರುಚಿಯಾಗಿರಲಿಲ್ಲ. ಕಾರಣ ಅಲ್ಲಿ ರುಚಿರುಚಿಯಾಗಿ ಅಡಿಗೆ ತಯಾರಿಸುವುದಕ್ಕೆ ಬೇಕಾದ ಮಸಾಲೆ ಪದಾರ್ಥಗಳಾಗಲಿ ತರಕಾರಿಗಳಾಗಲಿ ಇರಲಿಲ್ಲ. ತರುವಾಯ ನಿರ್ವಾಹಕರು ಅವೆಲ್ಲವನ್ನು ಒದಗಿಸಿಕೊಡಲು ಗುರುದಂಪತಿಗಳ ಅಭಿರುಚಿಗನುಸಾರವಾಗಿ ಆಡಿಗೆಮಾಡುವುದನ್ನು ಕಲಿತುಕೊಂಡನು.

ಅಂತರಂಗದ ಅರಿವಿಗೆ ಜ್ಞಾನದ ಬೆಳಕು

ಜಗವೆಲ್ಲವೂ ನೀರವದಲ್ಲಿ ಅದ್ದಿದಂತೆ ಮೌನವಾಗಿತ್ತು. ಸಮುದ್ರದ ಅಲೆಗಳು ನೀರವವ ಭೇದಿಸುತ್ತ ಲಯಬದ್ಧವಾಗಿ ಅನುರಣಿಸುತ್ತಿದ್ದವು. ಎಲ್ಲೆಲ್ಲೂ ಬೆಳದಿಂಗಳ ಧವಲಕಿರಣ ಸಾರಣವಾಗಿತ್ತು. ಗಣಪತಿಮುನಿಗಳು ದೈವರಾತನನ್ನು ಸಮುದ್ರತೀರಕ್ಕೆ ಕರೆದೊಯ್ದು ಅಲ್ಲಿ ದೊಡ್ಡದಾದ ಒಂದು ಬಂಡೆಗಲ್ಲಿನ ಮೇಲೆ ಆತನೊಂದಿಗೆ ಆಸೀನರಾಗಿ ಆಧ್ಯಾತ್ಮಿಕ ಜ್ಞಾನವನ್ನು ಬೋಧಿಸತೊಡಗಿದರು. ಸಮಯ ಜಾರುತ್ತಿರುವ ಪರಿವೆ ಅವರಿಗೆ ಇರಲಿಲ್ಲ. ಅದೆಷ್ಟೋ ಹೊತ್ತಿನ ನಂತರ ಇಬ್ಬರೂ ಆಶ್ರಮಕ್ಕೆ ಹೋಗಿ ಮಲಗಿಕೊಂಡರು. ಹೀಗೆ ಪ್ರತಿದಿನ ಬೆಳದಿಂಗಳ ರಾತ್ರಿಯಲ್ಲಿ ವಿಶಾಲಾಕ್ಷಿ ಅಮ್ಮನವರು ಮಲಗಿ ನಿದ್ರಿಸಿದ ಬಳಿಕ ದೈವರಾತನಿಗೆ ಗಣಪತಿಮುನಿಗಳು ಆತನ ಮನಸ್ಸಿನ ಗ್ರಹಣಶಕ್ತಿಗನುಸಾರವಾಗಿ ಮುಖ್ಯಪ್ರಾಣೋಪಾಸನ, ದಹರೋಪಾಸನ, ವೈಶ್ವಾನರ ವಿದ್ಯಾ ಮುಂತಾದವುಗಳನ್ನು ರಾಜಯೋಗ ಪದ್ಧತಿಯಿಂದ ಬೋಧಿಸುತ್ತಿದ್ದರು. ಅಯಾಚಿತ ಭಾವದಲ್ಲಿ ಗುರುಶುಶ್ರೂಷಯೇ ತನ್ನ ಆದ್ಯಕರ್ತವ್ಯವೆಂದು ತಿಳಿದ ದೈವರಾತನಿಗೆ ಅಮೌಲಿಕ ಜ್ಞಾನಸಂಪತ್ತು ಅಧ್ಯಯನಮಾಡದೆ ಕೇವಲಗುರುವಿನ ದಿವ್ಯಬೋಧರಿಂದ ಸಂಪನ್ನನವಾಗುತ್ತಲಿತ್ತು.

ವ್ಯಾಸಂಗ ಗೋಷ್ಠಿ

ಪ್ರತಿಪಕ್ಷದ ಪ್ರತಿಪದೆಯ ದಿನ ಮಧ್ಯಾಹ್ನದ ನಂತರ ಇಳಿಹೊತ್ತಿನಲ್ಲಿ ಗಣಪತಿಮುನಿಗಳು ಗೋಕರ್ಣಕ್ಕೆ ಬಂದು ಕೋಟಿತೀರ್ಥದ ದಕ್ಷಿಣ ದಿಕ್ಕಿನಲ್ಲಿರುವ ಕೃಷ್ಣಾಪುರ (ಶ್ರೀ ಕೃಷ್ಣ ಮಂದಿರ) ದಲ್ಲಿ ವಿದ್ಯಾರ್ಥಿಗಳಿಗಾಗಿ ವ್ಯಾಸಂಗ ಗೋಷ್ಠಿ ನಡೆಸುತ್ತಿದ್ದರು. ಇದರಲ್ಲಿ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಿದ್ಯಾರ್ಥಿಗಳು, ವಿದ್ವಾಂಸರು, ಸಾಮಾನ್ಯರು ಎಂಬ ಪರಿಭೇದವಿಲ್ಲದೆ ಮುಕ್ತವಾಗಿ ಚರ್ಚಿಸುವ ಅವಕಾಶವಿತ್ತು. ಇದು ಕೇವಲ ವ್ಯಾಸಂಗ ಗೋಷ್ಠಿಯಾಗಿರದೆ ಮಾನವ ಬದುಕಿಗೆ ಸುಸಂಸ್ಕೃತ ಸಂಸ್ಕಾರ ನೀಡಿ ಸಾಕಾರಗೊಳಿಸುವ ಒಂದು ಪ್ರಯತ್ನವಾಗಿತ್ತು; ವಾಸ್ತವಿಕ ಪರಿಧಿಯಲ್ಲಿ ಜೀವನ ಶಿಕ್ಷಣವೀಯುವ ಪ್ರಾಯೋಗಿಕ ಪಾಠಶಾಲೆಯ ಆಯೋಜನೆದಾಗಿತ್ತು. ವಿದ್ಯಾರ್ಥಿಗಳು ತಮ್ಮ ಭಾವನೆಗೆ ತಕ್ಕಂತೆ ಲೇಖನಗಳನ್ನು ಸಿದ್ಧಪಡಿಸಿತಂದು ಸಭೆಯಲ್ಲಿ ಓದುತ್ತಿದ್ದರು. ಗೋಷ್ಠಿಯು ಮುಕ್ತಾಯವಾಗುವಾಗ ಮುಂದಿನ ಪ್ರತಿಪದೆಯಲ್ಲಿ ವಾಚಿಸುವ ವಿಷಯವನ್ನು ತಿಳಿಸಲಾಗುತ್ತಿತ್ತು. ಅಂದು ಮುಂದಿನ ಗೋಷ್ಠಿಗೆ 'ಬ್ರಾಹ್ಮಣಾಚಾರ' ಎಂಬ ವಿಷಯವನ್ನು ಕೊಡಲಾಯಿತು.

ಬ್ರಾಹ್ಮಣಾಚಾರ

ಪುನಃ ಪ್ರತಿಪದೆಯಲ್ಲಿ ಎಲ್ಲರೂ ಸೇರಿದಾಗ ವಿದ್ಯಾರ್ಥಿಗಳು ತಾವು ಬರೆದು ತಂದಿದ್ದ ಲೇಖನಗಳನ್ನು ಬಹು ಉತ್ಸಾಹದಿಂದ ಸಭೆಯಲ್ಲಿ ಮಂಡಿಸಿದರು. ದೈವರಾತನ ದೊಡ್ಡತಂದೆಯ ಮಗನಾದ ದೇವರು ಭಟ್ಟರು ಸ್ನಾನ, ಸಂಧ್ಯಾವಂದನ, ದೇವರಪೂಜೆ, ಅನುಷ್ಠಾನ ಇತ್ಯಾದಿ ನಿತ್ಯಕರ್ಮಗಳಿಂದ ಯುಕ್ತವಾದ 'ಬ್ರಾಹ್ಮಣಾಚಾರ'ವನ್ನು ವರ್ಣಿಸಿದರು. ಅನಂತರ ಇನ್ನೊಬ್ಬ ವೆಂಕಟರಮಣ ಪಂಡಿತರೆಂಬವರು ಜ್ಯೋತಿಷಿಗಳಾದ್ದರಿಂದ ಅವರು ಉಪನಯನ, ವಿವಾಹ ಇವೇ ಮೊದಲಾದ ಷೋಡಶ ಸಂಸ್ಕಾರಗಳು ಹೇಗೆ ಅತ್ಯಗತ್ಯ ಎಂಬುದನ್ನು ವ್ಯಾಖ್ಯಾನಿಸಿದರು. ಹೀಗೆ ಒಬ್ಬೊಬ್ಬರಾಗಿ ಅವರವರ ಅಭಿರುಚಿಗೆ ತಕ್ಕಂತೆ ಎಲ್ಲರೂ ಮಾತನಾಡಿ ಮುಗಿಸಿದಾಗ ದೈವರಾತನಿಗೆ ಆ ಕ್ಷಣದಲ್ಲಿ "ಬ್ರಾಹ್ಮಣಚಾರ' ವಿಷಯದ ಮೇಲೆ ತಾನೂ ಮಾತನಾಡಬೇಕು ಎಂಬ ಸ್ಫೂರ್ತಿಯುಂಟಾಯಿತು. ಆತ ಯಾವುದೇ ಗ್ರಂಥಗಳ ಅಧ್ಯಯನ ಮಾಡಿರಲಿಲ್ಲ. ವ್ಯಾಕರಣವೇ ಆದಿಯಾಗಿ ಭಾಷಾಶಾಸ್ತ್ರದ ಪರಿಣತನೂ ಆಗಿರಲಿಲ್ಲ. ಆದಾಗ್ಯೂ ಪ್ರಾಥಮಿಕವಾದ ಶಬ್ದಗಳ ಸ್ವರೂಪ,ಧಾತುಗಳ ಪರಿಚಯವಿತ್ತು. ಉಪನಿಷತ್ತುಗಳು ಬಾಲ್ಯದಲ್ಲಿಯೇ ಕರ್ಣಪರಂಪರೆಯಿಂದ ಕಂಠಸ್ಥವಾಗಿದ್ದವು. ಪುರಾಣ ಶಾಸ್ತ್ರ ಇತ್ಯಾದಿ ಗ್ರಂಥಗಳ ಬಗ್ಗೆ ಆತನಿಗೆ ಎಂದಿಗೂ ಆಸಕ್ತಿಯಿರಲಿಲ್ಲ. ಜ್ಞಾನವೇನಾದರೂ ಆರ್ಜನೆಯಾಗುವದಿದ್ದರೆ ಅದು ಗುರುವಿನ ಅನುಗ್ರಹದಿಂದ ಆಗಬೇಕು; ಇಲ್ಲವೇ ತಪಸ್ಸಿನಿಂದ ಆಗಬೇಕು ಎಂಬುದೇ ಆತನ ನಂಬಿಗೆಯಾಗಿತ್ತು. ಇಂತಿರುವಾಗ ಸ್ವಯಂ ಪ್ರೇರಣೆಯಿಂದ ಆತ ಸಭೆಯಲ್ಲಿ ಎದ್ದು ನಿಂತು ವ್ಯಾಖ್ಯಾನ ಪ್ರಾರಂಭಿಸಿದನು. 'ಬ್ರಾಹ್ಮಣಾಚಾರ' ಎಂಬ ಶಬ್ದವನ್ನು ಸಂಸ್ಕೃತ ವ್ಯಾಕರಣಕ್ಕೆ ಅನುಗುಣವಾಗಿ ಎರಡು ರೀತಿಯಿಂದ ವಿಂಗಡಿಸಬಹುದು. 'ಬ್ರಾಹ್ಮಣಸ್ಯ ಆಚಾರ' ಅಂದರೆ 'ಬ್ರಾಹ್ಮಣನ ಆಚಾರ' ಎಂಬ ಈ ಪ್ರಯೋಗವು ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತದಾಗಿದ್ದು ಅಂದಿನ ಗೋಷ್ಠಿಯಲ್ಲಿ ಎಲ್ಲರೂ ಅದಕ್ಕೆ ಅನುಗುಣವಾಗಿ ಬ್ರಾಹ್ಮಣನು ಪಾಲಿಸಬೇಕಾದ ಶಾಸ್ತ್ರವಿಹಿತ ಕರ್ಮಗಳನ್ನು, ಆಚಾರ ಸಂಹಿತೆಯನ್ನು ಕುರಿತಾಗಿ ತಮ್ಮ ವಿಷಯ ಮಂಡನೆ ಮಾಡಿದ್ದರು.ಆದರೆ ದೈವರಾತನು ಇದಕ್ಕೆ ಬದಲಾಗಿ 'ಬ್ರಾಹ್ಮಣಾಯ ಆಚಾರ:' ಆರ್ಥಾತ್ 'ಬ್ರಾಹ್ಮಣನಿಗಾಗಿ' ಅಥವಾ 'ಬ್ರಾಹ್ಮಣ ಪ್ರಾಪ್ತಿಗಾಗಿ' ಎಂದು ಇನ್ನೊಂದು ವಿಧವಾಗಿ ಬೇರ್ಪಡಿಸಿ 'ತಾದಾರ್ಥ್ಯೇ ಚತುರ್ಥೀ ವಾಚ್ಯಾ' ಎಂಬ ವ್ಯಾಕರಣ ವಚನವನ್ನು ಪ್ರಮಾಣವಾಗಿರಿಸಿ (ಚತರ್ಥಿ ವಿಭಕ್ತ್ಯಂತವಾಗಿ ವಿಂಗಡಿಸಿ) ವ್ಯಾಖ್ಯಾನಿಸಿದನು.

ಬ್ರಾಹ್ಮಣ ಎಂದರೆ ಆ ಪರಬ್ರಹ್ಮವಸ್ತುವನ್ನು ತತ್ವತಃ ತಿಳಿದವನು. ಆ ಬ್ರಹ್ಮವನ್ನು ತಿಳಿದವನಾಗುವದಕ್ಕಾಗಿ ಅನುಸರಿಸಬೇಕಾದ ಈ ಆಚಾರವು ಅದಕ್ಕೊಂದು ಸಾಧನ. ಈ ಸಾಧನವೇ ತಪಸ್ಸು. ಶೂದ್ರಯೋನಿಯಲ್ಲಿ ಜನ್ಮತಾಳಿದವನೂ ತಪಸ್ಸಿಗೆ ಅಧಿಕಾರಿಯೇ ಆಗಿರುತ್ತಾನೆ; ಮತ್ತು ತಪೋರೂಪವಾದ ಸಾಧನದಿಂದ 'ಶೂದ್ರಗಂಧ' ನಿವಾರಣೆಯಾಗಿ ಬ್ರಹ್ಮತ್ವ ಪ್ರಾಪ್ತಿಗೆ ಅರ್ಹನಾಗುತ್ತಾನೆ. ಇದಕ್ಕೊಂದು ಉದಾಹರಣೆ : ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದರೂ ತಪಸ್ಸಿನಿಂದ ಬ್ರಾಹ್ಮಣನಾದನು.

ಯಸ್ಯಾಚರಣಾದ್ ಬ್ರಹ್ಮ ದುರ್ಜ್ಞೇಯಮಪಿ ತತ್ವತಃ
ಸತಾಂ ಭವತಿ ಸುಜ್ಞೇಯಂ ವಾಚ್ಯನ್ ತತ್ ಪರಮಂ ತಪಾಃ ॥

ಆ ಪರಬ್ರಹ್ಮವಸ್ತು ದುರ್ಜ್ಞೇಯವಾದರೂ ಯಾವದರ ಆಚರಣೆಯಿಂದ ಸಜ್ಜನರಿಗೆ ಸುಜ್ಞೇಯವಾಗುವದೋ ಅದನ್ನೇ ತಪಸ್ಸು ಎಂದು ಹೇಳಲಾಗುವದು.

'ತಪಸಾ ಬ್ರಹ್ಮ ಜಿಜ್ಞಾಸಸ್ವ' ತೈತ್ತಿರೀಯ ಉಪನಿಷದ್.
ಋತಂ ತಪಃ ಸತ್ಯಂ ತಪಃ ಶಾಂತಂ ತಪೋ ದಮಸ್ತಪಃ ಶಮಸ್ತಪೋದಾನಂ ತಪೋ ಯಜ್ಞಃತಪೋ ಭೂರ್ಭುವಸ್ಸುವರ್ಬ್ರಹ್ಮೈ ತದುಪಾಸ್ವೈ ತತ್ತಪಃ ॥
ಮಹಾನಾರಾಯಣ ಉಪನಿಷತ್.

ಇತ್ಯಾದಿ ಉಪನಿಷದ್ ವಾಕ್ಯಗಳ ಆಧಾರವನ್ನು ತಪಸ್ಸಿನ ಬಗೆಗೆ ಉದಾಹರಿಸಿದನು.

ಋಷಿಹೃದಯದ ದೈವರಾತನು ತನ್ನ ಅನುಭಾವದ ಅನಿಸಿಕೆಗಳ ಅಭಿವ್ಯಕ್ತಿಯಲ್ಲಿ ತಪಸ್ಸಿನ ಸ್ವರೂಪದ ಬಗೆಗೆ ತನ್ನದೇ ಆದ ಸ್ವಂತಿಕೆಯ ಶೈಲಿಯಲ್ಲಿ ಇನ್ನಷ್ಟು ಸೂಕ್ಷ್ಮ ಸಂಗತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದನು.

ಸಪ್ತಮರ್ಯಾದಾ ಸದ್ವಿದ್ಯಾ ಮತ್ತು ತಪಸ್ಸಿನ ಸ್ವರೂಪ

ಈ ಪ್ರಪಂಚ ಪಾಠಶಾಲೆಯಲ್ಲಿ ಹುಟ್ಟಿನಿಂದಲೇ ಪ್ರಾರಂಭವಾಗುವ ಸಪ್ತಮರ್ಯಾದಾ ಸದ್ವಿದ್ಯಾ ಸಂಸ್ಕಾರವು ಸಾಕ್ಷಾತ್ಕಾರದಲ್ಲಿ ಪೂರ್ಣಗೊಳ್ಳುವುದು.

ಆಹಾರ–ವಿಹಾರ,ಆಚಾರ–ವಿಚಾರ,ಉಚ್ಚಾರ–ಪ್ರಚಾರ, ಸಾಕ್ಷಾತ್ಕಾರ. ಇವು ಮಾನವ ಜೀವನದಲ್ಲಿ ಸತ್ಸಂಕಲ್ಪದಿಂದ ರೂಪಿಸಲ್ಪಡಬೇಕಾಗಿರುವ ಸಪ್ತಮರ್ಯಾದೆಗಳು. ಇವುಗಳ ಸ್ವರೂಪವು ಈ ರೀತಿಯಾಗಿವೆ. 1) ಆಹಾರ–ಸಾತ್ವಿಕ ಆಹಾರ 2) ವಿಹಾರ–ಆಧ್ಯಾತ್ಮಿಕ ಮನೋಮಯ ವ್ಯಾಪಾರ 3) ಆಚಾರ–ಅಹಿಂಸೆಯಿಂದ ಕೂಡಿದ ಸದಾಚಾರ 4) ವಿಚಾರ– ದೈವಚಿಂತನ 5) ಉಚ್ಚಾರ–ಸತ್ಯನುಡಿಯುವುದು ಗೇಯಭಾವದಲ್ಲಿ ಭಕ್ತಿಯಿಂದ ಗೀತಿಸುವುದು ಅಥವಾ ಪ್ರಣವನಾದವಾದ ಓಂಕಾರ ಜಪಿಸುವುದು. 6) ಪ್ರಚಾರ– ಸುಜ್ಞಾನದ ಅರಿವು ಎಲ್ಲರಿಗೂ ಆಗುವಂತೆ ಮಾಡುವುದು 7) ಸಾಕ್ಷಾತ್ಕಾರ–ಆತ್ಮ ಸಾಕ್ಷತ್ಕಾರ ಅಂದರೆ ಬ್ರಹ್ಮಜ್ಞಾನ ಪಡೆಯುವುದು.

ಇವೇ ಮಾನವ ಬದುಕಿನಲ್ಲಿ ಸಾಕಾರಗೊಳ್ಳಬೇಕಾದ ಸಪ್ತಮರ್ಯಾದೆಗಳು. ಇದನ್ನು ಪಾಲಿಸುವುದೇ ಬ್ರಾಹ್ಮಣಾಚಾರ ಎಂದು ಹೇಳುತ್ತ ತನ್ನ ವ್ಯಾಖ್ಯಾನವನ್ನು ಸಮಾಪ್ತಿಗೊಳಿಸಿದನು.

ಅನಿರೀಕ್ಷಿತವಾಗಿ ದೈವರಾತನ ಪ್ರತಿಭೆ ಪ್ರಕಟವಾದುದನ್ನು ಕಂಡು ಗಣಪತಿಮುನಿಗಳು ಬೆರಗಾಗಿ ಆಶ್ಚರ್ಯಚಕಿತರಾದರು. ತನ್ನಷ್ಟಕ್ಕೆ ತಾನು ಅಂತರ್ಮುಖಿಯಾಗಿಯೂ ಮಿತಭಾಷಿಯೂ ಆಗಿರುವ ಈ ಹುಡಗನು ಹೀಗೊಂದು ವ್ಯಾಖ್ಯಾನವನ್ನು ಮಾಡಿಯಾನು ಎಂಬ ಕಲ್ಪನೆಯೂ ಅವರಿಗಿರಲಿಲ್ಲ. ದೈವರಾತನ ವ್ಯಾಖ್ಯಾನದಿಂದ ಅಲ್ಲಿ ಸೇರಿದ ಸಭಿಕರಲ್ಲಿ ಗೊಂದಲವುಂಟಾಯಿತು. ಸಾಂಪ್ರದಾಯಿಕ ಸೀಮಿತ ಆವಾರದಲ್ಲಿ ಬಂಧಿಸಲ್ಪಟ್ಟ ವ್ಯಕ್ತಿತ್ವದ ಅವರು ಇಂತಹ ವಿಚಾರಗಳನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಅಂತೆಯೇ ಅವರಲ್ಲಿ ಗುಸು ಗುಸು ಪಿಸುಮಾತು ಪ್ರಾರಂಭವಾಯಿತು. ಆಗ ನಾರಾಯಣಪಂಡಿತರು ಎದ್ದು ನಿಂತು ಏರುದನಿಯಿಂದ "ಇದನ್ನು ಗಣೇಶನಿಗೆ ಗಣಪತಿ ಮುನಿಗಳೇ ಹೇಳಿಕೊಟ್ಟಿರಬೇಕು''. ಎಂದರು. ಆಗ ಗಣಪತಿ ಮುನಿಗಳು" ನಾನೇನೂ ಅವನಿಗೆ ಈ ರೀತಿ ಮಾತನಾಡಲು ಹೇಳಿಕೊಟ್ಟಿಲ್ಲ. ಈ ದಿನ ಅವನು ಮಾತನಾಡಬಹುದೆಂಬ ಕಲ್ಪನೆಯೂ ನನಗಿರಲಿಲ್ಲ". ಎಂದು ಹೇಳಿದರು. ಕೊನೆಯಲ್ಲಿ ಅವರು

ತಮ್ಮ ಅಧ್ಯಕ್ಷ ಭಾಷಣದಲ್ಲಿ "ವಿಶ್ವಾಮಿತ್ರನ ದೃಷ್ಟಾಂತವು ಇಲ್ಲಿ ಸರಿಯಲ್ಲ: ಅವನು ಕ್ಷತ್ರಿಯನಾದರೂ ಬ್ರಹ್ಮತೇಜಸ್ಸಿನಿಂದ ಅಭಿಮಂತ್ರಿತವಾದ ಚರುವಿನಿಂದ ಜನಿಸಿದ್ದಾನೆ". ಎಂದು ಮುಂತಾಗಿ ಎಲ್ಲ ಬ್ರಾಹ್ಮಣರಿಗೆ ಸಮಾಧಾನವಾಗುವಂತೆ ಮಾತುಗಳನ್ನಾಡಿ, ಸಭಾವಿಸರ್ಜನೆಗೈದು ಉಮಾಮಹೇಶ್ವರ ತಪೋವನಕ್ಕೆ ತೆರಳಿದರು.

ಅದಾಗಲೇ ದೈವರಾತನು ವ್ಯಾಖ್ಯಾನವನ್ನು ಮುಗಿಸಿ ಆಶ್ರಮ ತಲುಪಿದ್ದನು. ಅಂದು ರಾತ್ರಿಯ ಉಪಹಾರಕ್ಕೆ ಅವನು ದೋಸೆಮಾಡುವ ಹವಣಿಕೆಯಲ್ಲಿದ್ದನು. ಅವನು ದೋಸೆಮಾಡುವದರಲ್ಲಿಯೂ ಒಂದು ವಿಶೇಷತೆಯಿತ್ತು. ಆದಿನ ಆತ ಮೂರು ವಿಧವಾದ ದೋಸೆ ತಯಾರಿಸಲು ಸಿದ್ಧತೆ ಮಾಡಿದ್ದ ಮೊದಲ ವಿಧಾನದಲ್ಲಿ ದಾಸವಾಳ ಸೊಪ್ಪು ಮತ್ತು ಅಕ್ಕಿಯ ಮಿಶ್ರಣವೂ ಎರಡನೆಯದರಲ್ಲಿ ನುಣ್ಣಗೆ ರುಬ್ಬಿದ ಅಕ್ಕಿ ಹಿಟ್ಟಿಗೆ ಅಗ್ನಿಮಂಥದ ಎಲೆಗಳನ್ನು ಸಣ್ಣದಾಗಿ ಹೆಚ್ಚಿಹಾಕಿರುವದೂ ಮೂರನೆಯದರಲ್ಲಿ ಅಕ್ಕಿ, ಉದ್ದು, ಮೆಂತೆ ಇವುಗಳ ಮಿಶ್ರಣದ ವೈವಿಧ್ಯತೆಯಿತ್ತು. ದೋಸೆಗೆ ನಂಜಿಕೊಳ್ಳಲು ಒಂದೆಲಗ, ಭೃಂಗರಾಜ ಎಲೆಗಳ ಚಟ್ನಿ ಮತ್ತು ಹೊನಗನ್ನೆ ಸಸ್ಯದ ಸಾಂಬಾರ ತಯಾರಿಸಿದ್ದನು. ಜತೆಗೆ ದಾಸವಾಳದ ಹೂಗಳನ್ನು ತುಪ್ಪದಲ್ಲಿ ಹುರಿದು ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿದ ವ್ಯಂಜನವೂ ಇತ್ತು. ಗುರುದಂಪತಿಗಳಿಗೆ ಎಲೆ ಹಾಕಿ ಉಪಹಾರ ಬಡಿಸಿದನು. ಬಿಸಿ ಬಿಸಿ ದೋಸೆಗೆ ಹಸುವಿನ ತಾಜಾ ಬೆಣ್ಣೆ ಹಾಕಿದನು. ಗಣಪತಿ ಮುನಿಗಳಿಗೆ ಇದು ತೀರಾ ಹೊಸ ಬಗೆ ಎನಿಸಿತು.ಅವರು ಕುತೂಹಲದಿಂದ ಮೂರು ವಿಧದ ದೋಸೆಯ ಒಂದೊಂದು ಚೂರನ್ನು ಬಾಯಿಗೆ ಹಾಕಿ ರುಚಿನೋಡಿ ಖುಷಿಪಟ್ಟರು. ಆಗ ದೈವರಾತನು ಅಮ್ಮನವರಿಗೆ ದೋಸೆಯನ್ನು ಬಡಿಸುತ್ತ ಗೋಷ್ಠಿಯಲ್ಲಿ ನಡೆದ ವಿಷಯವನ್ನು ವಿವರಿಸಿ "ಸಭೆಯಲ್ಲಿ ನಾನು ಗುರುಗಳ ಮಾತನ್ನು ಖಂಡಿಸಬಾರದೆಂದು ಸುಮ್ಮನಾಗಿದ್ದೆ. ಆದರೆ ಈಗ ನಿಮ್ಮ ಸಮ್ಮುಖದಲ್ಲಿ ಪುನಃ ನನ್ನ ಮಾತನ್ನು ಸಮರ್ಥಿಸುತ್ತೇನೆ." ಎಂದನು. ಅದಕ್ಕೆ ಗಣಪತಿಮುನಿಗಳು "ನಿನ್ನ ಮಾತೇನೋ ಸರಿಯಾಗಿತ್ತು; ಸತ್ಯವೂ ಆಗಿತ್ತು. ಆದರೆ ಅಲ್ಲಿ ಅವರೆಲ್ಲರ ವಿರುದ್ಧ ಅದನ್ನು ಸಮರ್ಥಿಸುವದು. ಉಚಿತವಲ್ಲವೆಂದು ಅವರಿಗೆ ಸಮಾಧಾನವಾಗುವಂತೆ ವ್ಯಾಖ್ಯಾನ ಮಾಡಬೇಕಾಯಿತು. ಹಾಗೊಮ್ಮೆ ನಿನ್ನ ಮಾತನ್ನು ಸಮರ್ಥಿಸಿದುದೇ ಆದರೆ ಅದರಿಂದ ದೊಡ್ಡ ಗಲಭೆಯೇ ಉಂಟಾಗುತ್ತಿತ್ತು. ಸತ್ಯವು ಕೆಲವೊಮ್ಮೆ ಅಪ್ರಿಯವೂ ನಿಷ್ಠುರವೂ ಆಗಿರುತ್ತದೆ. ಅದು ಯಾರಿಗೂ ಇಷ್ಟವಾಗುವದಿಲ್ಲ. ಸತ್ಯವನ್ನು ಮುಚ್ಚಿರುವ ಮಿಥ್ಯೆಯಿಂದ ಕೂಡಿರುವ ಆಡಂಬರದ ಲೇಪವೇ ಜನರಿಗೆ ಹೆಚ್ಚು ಪ್ರಿಯವಾಗುತ್ತದೆ. ಎಂದು ಸಮಜಾಯಿಸಿ ಹೇಳಿದರು.

ದೈವರಾತನ ಮೂಲಿಕಾ ಜ್ಞಾನ

ದಿನಾಲು ಉಪಹಾರದ ನಂತರ ದೈವರಾತನು ಗುರುದಂಪತಿಗಳಿಗೆ ಕುಡಿಯಲು ಮೂಲಿಕೆಗಳ ಕಷಾಯವನ್ನು ಕೊಡುತ್ತಿದ್ದನು. ನಿತ್ಯವೂ ಅದರಲ್ಲಿ ಏನಾದರೊಂದು ಬದಲಾವಣೆಯಿರುತ್ತಿತ್ತು. ಮಘೆಬೀಜ- ಏಲಕ್ಕಿ ಪುಡಿಯ ಪಾನಕ, ಬಕುಳ ಪುಷ್ಪದ ಕಷಾಯ, ಸೊಗದೇಬೇರಿನ ಕಷಾಯ ಹೀಗೆ ಅದು ವೈವಿಧ್ಯವಾಗಿ ಇರುತ್ತಿತ್ತು. ಸಾಮಾನ್ಯವಾಗಿ ಗಣಪತಿಮುನಿಗಳ ಆ ದಿನದ ಪ್ರಕೃತಿಯನ್ನು ಗಮನಿಸಿ ಆತ ಕಷಾಯ ತಯಾರಿಸುವದು ವಾಡಿಕೆಯಾಗಿತ್ತು. ಉದಾ-ಶೀತವಾಗಿದ್ದರೆ ಶುಂಠಿ,ಕಾಳಮೆಣಸು, ಕಂಟಕಾರಿ

ಬೇರಿನ ಕಷಾಯ, ಬಳಲಿಕೆಯಾಗಿದ್ದರೆ ಅಕ್ಷತೇಬಳ್ಳಿ, ಅಗ್ನಿಮಂಥ, ಶತಾವರಿ ಬೇರಿನ ಕಷಾಯ, ಮೈ ಬೆಚ್ಚಗಾಗಿ ಜ್ವರದ ಲಕ್ಷಣಗಳಿದ್ದರೆ ಸಹದೇವಿ ಇತ್ಯಾದಿ ಕಷಾಯ ಹೀಗೆ ಹಿತವಾದ ರೀತಿಯಲ್ಲಿ ಆಹಾರ-ಪಾನೀಯಗಳ ಅನುಪಾನವಿರುತ್ತಿತ್ತು. ಹೀಗಿರುವಾಗ ಅಂದು ಆತ ಬಕುಳ ವೃಕ್ಷದ ತೊಗಟೆಯಿಂದ ತಯಾರಿಸಿದ ಕಷಾಯಕ್ಕೆ ಹಾಲು ಸಕ್ಕರೆ ಸೇರಿಸಿ ಗುರುದಂಪತಿಗಳಿಗೆ ಕುಡಿಯಲು ಕೊಟ್ಟನು. ತಿಳಿಗೆಂಪು ಬಣ್ಣದ ಅದನ್ನು ಕಂಡಾಗ ಗಣಪತಿಮುನಿಗಳು ಕುಡಿಯಲೋ ಬೇಡವೋ ಎಂಬಂತೆ ನೋಡುತ್ತಿರುವುದನ್ನು ಕಂಡು ದೈವರಾತನು ತಾನೂ ಒಂದು ಲೋಟದಲ್ಲಿ ಕಷಾಯವನ್ನು ತಂದು ಅವರ ಮುಂದೆ ಆಸ್ವಾದಿಸಿ ಕುಡಿದು ತೋರಿಸಿದಾಗ ಅವರೂ ಸ್ವಲ್ಪ ಸ್ವಲ್ಪವಾಗಿ ಗುಟುಕರಿಸಿ ಕುಡಿಯಲು ನಿಜಕ್ಕೂ ಅದು ತುಂಬಾ ರುಚಿಯಾಗಿತ್ತು. ಆಗ ಅವರು ಪ್ರೀತಿಯಿಂದ "ನೀನು ಋಷಿಯಪ್ಪಾ! ಮೂಲಿಕೆಗಳ ಜ್ಞಾನ ನಿನಗೆ ಪ್ರಕೃತಿದತ್ತವಾಗಿ ಬಂದಿದೆ" ಎಂದು ಉದ್ಗರಿಸಿದರು.

ಮುಂದಿನ ದಿನಗಳಲ್ಲಿ ಅಹಂಕಾರ, ಕೋಪ, ಉಪಾಸನಾ ಮುಂತಾದ ವಿಷಯಗಳ ಮೇಲೆ ವ್ಯಾಖ್ಯಾನ ನಡೆಯಿತು. ಹೀಗಿರುವಾಗ ಒಂದು ದಿನ ಶ್ರೀ ಮಹಾಬಲೇಶ್ವರ ದೇವಸ್ಥಾನದ ಚಂದ್ರಶಾಲೆಯ ಮಹಡಿಯ ಮೇಲೆ ಒಂದು ಸಭೆ ನಡೆಯಿತು. ಆ ವೇಳೆಗೆ ಆಂಧ್ರಪ್ರದೇಶದ ಪ್ರಸಿದ್ಧ ವಿದ್ವಾಂಸರಾದ ಅನಂತಶಾಸ್ತ್ರಿಗಳು ಗೋಕರ್ಣಕ್ಕೆ ಬಂದಿದ್ದು ಅವರು "ಶಿವೋತ್ಕರ್ಷ" ಎಂಬ ವಿಷಯದ ಮೇಲೆ ಕನ್ನಡದಲ್ಲಿ ಪಾಂಡಿತ್ಯಪೂರ್ಣವಾಗಿ ಪ್ರವಚನವನ್ನಿತ್ತರು. ಅನಂತರ ಗಣಪತಿಮುನಿಗಳು ವ್ಯಾಖ್ಯಾನ ಪ್ರಾರಂಭಿಸಿ ವೇದ ವಾಙ್ಮಯದ ಅಕ್ಷಯ ಭಂಡಾರದಿಂದ ಉದಾಹರಣೆಗಳನ್ನು ನೀಡುತ್ತ ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ತಮ್ಮ ದಿವ್ಯವಾಣಿಯಲ್ಲಿ ಜ್ಞಾನಸುಧೆಯ ಹರಿಸಿದರು. ಇದರಿಂದ ಗೋಕರ್ಣದ ವಿದ್ವಜ್ಜನರಿಗೆ ಗಣಪತಿಮುನಿಗಳ ಅಲೌಕಿಕಜ್ಞಾನದ ಪರಿಚಯವಾಯಿತು. ಗುರುವರ್ಯರು ವೇದಮಂತ್ರಗಳ ಅರ್ಥವನ್ನು ವಿವರಿಸುತ್ತಿದ್ದ ಸಮಯದಲ್ಲಿ ದೈವರಾತನು ಅದರ ಅರ್ಥವನ್ನು ಅರಗಿಸಿಕೊಳ್ಳುವದರಲ್ಲಿ ತನ್ಮಯನಾಗುತ್ತಿದ್ದ. ವೇದಾರ್ಥಜ್ಞಾನದ ದಿವ್ಯಾನುಭೂತಿ ಆತನನ್ನು ಪುಲಕಿತಗೊಳಿಸುತ್ತಿತ್ತು.

ನಾಲ್ಕು ತಿಂಗಳಕಾಲ ಉಮಾಮಹೇಶ್ವರ ಉಪವನದಲ್ಲಿ ವಾಸವಾಗಿದ್ದು ಗುಡ್ಡದ ಏರು-ತಗ್ಗಿನ ದಾರಿಯಲ್ಲಿ ದಿನಾಲು ಗೋಕರ್ಣಕ್ಕೆ ಹೋಗಿ-ಬರುತ್ತಿದ್ದ ಕಾರಣ ಸೂಕ್ಷ್ಮ ಪ್ರಕೃತಿಯ ಗಣಪತಿಮುನಿಗಳಿಗೆ ದೈಹಿಕವಾಗಿ ನೋವು ಮತ್ತು ಬಳಲಿಕೆ ಕಂಡುಬಂದಿತು. ಇದನ್ನು ತಿಳಿದ ದೈವರಾತನು ಪರಂಪರಾಗತವಾಗಿ ಗೋಕರ್ಣದಲ್ಲಿ ಪ್ರಚಲಿತವಾಗಿರುವ ಚಿಕಿತ್ಸಾಪದ್ಧತಿಯಂತೆ ಕೆಲವು ದಿನಗಳ ಕಾಲ ಬಿಳಿ ಕವರಿ ಸಸ್ಯದ ಬೇರುತಂದು ಚೆನ್ನಾಗಿ ತೊಳೆದು ತೊಗಟೆ ಬೇರ್ಪಡಿಸಿ ಸಣ್ಣದಾಗಿ ಕೊಚ್ಚಿ ನೀರು ಸೇರಿಸಿ ನುಣ್ಣಗೆ ಅರೆದುಸೋಸಿ ನೆನೆಯಿರಿಸಿದ ಅಕ್ಕಿಯೊಂದಿಗೆ ರುಬ್ಬಿ ದೋಸೆತಯಾರಿಸಿ ಬೆಳಗಿನ ಉಪಹಾರಕ್ಕೆ ಬಡಿಸುತ್ತಿದ್ದ. ಜತೆಗೆ ಕುಡಿಯಲು ಅಕ್ಷತೇಬಳ್ಳಿಯ ತೊಗಟೆಯ ಕಷಾಯವನ್ನು ಹಾಲು ಸಕ್ಕರೆ ಸೇರಿಸಿ ಕೊಡುತ್ತಿದ್ದ. ಇದರಿಂದ ಗಣಪತಿ ಮುನಿಗಳ ದೈಹಿಕ ತೊಂದರೆಗಳು ದೂರವಾದವು. ಇಂತಿರುವಾಗ ಅವರ ಶಿಷ್ಯರು ಹಾಗೂ ಊರ ಪ್ರಮುಖರು ಗುರುವರ್ಯರ ಆರೋಗ್ಯದ ಕುರಿತು ಗಂಭೀರವಾಗಿ ಚಿಂತಿಸಿ ಅವರು ದೂರದ ಗುಡ್ಡದ ಹಾದಿಯಲ್ಲಿ ಓಡಾಡುವ ಶ್ರಮವನ್ನು ತಪ್ಪಿಸುವುದಕ್ಕಾಗಿ ಗೋಕರ್ಣದ ಸಮುದ್ರತೀರದಲ್ಲಿರುವ ಸಣ್ಣಬೇಲೆ ಎಂಬಲ್ಲಿ ಒಂದು ಆಶ್ರಮ ನಿರ್ಮಿಸಿದರು.

ಸಣ್ಣಬೇಲೆಯು ಅಗ್ನಿ ಉಪಾಸಕರಾದ ಉಪಾಧ್ಯಾಯ ಮನೆತನದವರಿಂದ ಯಜ್ಞ-ಯಾಗಾದಿಗಳು ನಡೆಯುತ್ತಿದ್ದ ಸ್ಥಳವಾಗಿತ್ತು. ಅಲ್ಲಿ ಒಂದು ಯಜ್ಞಶಾಲೆಯಿತ್ತು. ಅಂತಲೇ ಗಣಪತಿಮುನಿಗಳು ವಾಸಿಸುವುದಕ್ಕೆ ಅದು ಯೋಗ್ಯ ಸ್ಥಳವೆಂದು ಆಯ್ಕೆ ಮಾಡಲಾಯಿತು. ಊರಜನರ ಅಪೇಕ್ಷೆಯಂತೆ ಗುರುವರ್ಯರು ಉಮಾಮಹೇಶ್ವರ ತಪೋವನದಿಂದ ಸಣ್ಣಬೇಲೆಯ ಆಶ್ರಮಕ್ಕೆ ಬಂದು ನೆಲೆಸಿದರು. ಇದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಿ ಅವರು ದಿನಾಲೂ ಬೆಳಿಗ್ಗೆ ಮತ್ತು ಮಧ್ಯಾಹ್ನ ಅಲ್ಲಿಗೆ ಬಂದು ಕಾವ್ಯ, ನಾಟಕ, ಅಲಂಕಾರಶಾಸ್ತ್ರ, ಜ್ಯೋತಿಷ ಮತ್ತು ವೇದಭಾಷ್ಯ ಇತ್ಯಾದಿ ಕಲಿಯುತ್ತಿದ್ದರು.

ಗಣಪತಿಮುನಿಗಳು ಸಣ್ಣಬೇಲೆಯ ಆಶ್ರಮದಲ್ಲಿ ವಾಸವಾಗಿರುವಾಗ ತಂದೆ ನರಸಿಂಹಶಾಸ್ತ್ರಿಗಳು ತುಂಬಾ ಅಸ್ವಸ್ಥರಾಗಿರುವ ಸಮಾಚಾರ ತಿಳಿದು ಮಡದಿ ಮತ್ತು ಮಗುವನ್ನು ಗೋಕರ್ಣದಲ್ಲಿಯೇ ಬಿಟ್ಟು ತಮ್ಮ ಹುಟ್ಟೂರಾದ ಕಲವರಾಯಿಗೆ ಹೋದರು. ತಂದೆಯವರು ಸ್ವರ್ಗಸ್ಥರಾಗಿರುವದರಿಂದ ಅವರ ಅಂತ್ಯಸಂಸ್ಕಾರಗಳನ್ನು ಪೂರೈಸಿ ಮರಳಿ ಗೋಕರ್ಣಕ್ಕೆ ಬಂದರು. ಅವರು ಗೋಕರ್ಣಕ್ಕೆ ಮರಳಿದ ಕೆಲವೇ ದಿನಗಳಲ್ಲಿ ಉಪ್ಪುಂದ ಉಪಾಧ್ಯಾಯರೆಂಬ ಅಗ್ನಿಉಪಾಸಕರಿಂದ 'ಜ್ಯೋತಿಷ್ಟೋಮ' (ಸೋಮಯಾಗ) ಪ್ರಾರಂಭವಾಯಿತು. ಆಗ ಗುರುವರ್ಯರನ್ನು ವೈದಿಕ ಸಂಘಟನೆಯು ಅಲ್ಲಿಗೆ ಆಮಂತ್ರಿಸಿದಾಗ ಸಭೆಯಲ್ಲಿ ಅವರು ಅಧ್ಯಕ್ಷಪೀಠವನ್ನು ಅಲಂಕರಿಸಿ ಯಜ್ಞ ನಡೆಯುತ್ತಿರುವ ಅಷ್ಟೂ ದಿನಗಳು ವೈದಿಕ ತತ್ವವನ್ನು ಕುರಿತು ಸುಂದರವಾಗಿ ವ್ಯಾಖ್ಯಾನ ಮಾಡಿದರು.

ಜೀವನೀಯ ದ್ರವ್ಯಗಳ ನಾಶ ಮಾಡುವುದು ಪಾಪ

ಋಗ್ವೇದ ಕಾಲದಲ್ಲಿ ಯಜ್ಞ, ಯಾಗಾದಿ ಆಚರಣೆಗಳೆಲ್ಲ ಸರಳವಾಗಿದ್ದವು. ಅನಂತರ ಯಜುರ್ವೇದ ಮತ್ತು ಪೌರಾಣಿಕ ಕಾಲದಲ್ಲಿ ಇವುಗಳ ವೈಭವೀಕರಣ ಆರಂಭವಾಯಿತು. ಅಂದಿನ ಋಗ್ವೈದಿಕ ಋಷಿಗಳು ಯಜ್ಞವನ್ನು ವಿವಿಧ ಬಗೆಯ ಸಮಿತ್ತುಗಳ ಜತೆಗೆ ಜೀವನೀಯ ದ್ರವ್ಯಗಳಾದ ಹಾಲು, ತುಪ್ಪ, ಅನ್ನ, ಪರಮಾನ್ನ ಮುಂತಾದವುಗಳನ್ನು ಹವಿಸ್ಸುಗಳಾಗಿ ಅಗ್ನಿಗೆ ಅರ್ಪಿಸುತ್ತಿದ್ದರಾದರೂ ಎಲ್ಲವನ್ನೂ ಪೂರ್ಣವಾಗಿ ಅಗ್ನಿಗೆ ಹಾಕದೆ ಸಾಂಕೇತಿಕವಾಗಿ ಸ್ವಲ್ಪಭಾಗವನ್ನು ಮಾತ್ರವೇ ಹವಿಸ್ಸಾಗಿ ಅರ್ಪಿಸಿ ಉಳಿದ ಭಾಗವನ್ನು ಪ್ರಸಾದರೂಪದಲ್ಲಿ ಸ್ವೀಕರಿಸುತ್ತಿದ್ದರು. ಹೀಗಿರುವಾಗ ರಾಜ, ಮಹರಾಜರು ಯಜ್ಞ, ಯಾಗಾದಿಗಳನ್ನು ಮಾಡುವದಕ್ಕೆ ಆರಂಭಿಸಿದಾಗ ಮೊದಲಿನ ಸರಳ ವಿಧಾನಗಳಿಗೆ ಬದಲಾಗಿ ಅಧ್ವರ್ಯುಗಳು ತಮ್ಮ ಅನುಕೂಲಕ್ಕಾಗಿ ಅದನ್ನು ವೈಭವೀಕರಿಸಿದರು.

ಈ ಜೀವ ಸೃಷ್ಟಿಗೆ ಪೂರ್ವದಲ್ಲಿಯೇ ಅನ್ನದ ಸೃಷ್ಟಿಯಾಯಿತು. ಅನ್ನವು ಜೀವದ ಉಗಮಕ್ಕೆ ಕಾರಣವಾಗಿದೆ. ಅನ್ನವೂ, ಅನ್ನಾದವೂ ನಾನೇ ಆಗಿದ್ದೇನೆ. ಇತ್ಯಾದಿ ವರ್ಣನೆಯು ವೇದೋಪನಿಷತ್ತುಗಳಲ್ಲಿವೆ. ಅನ್ನವು ಜೀವದ ರೂಪವೇ ಆಗಿರುವುದರಿಂದ ಅದನ್ನು ನಾಶಮಾಡುವ ಅಧಿಕಾರ ಯಾರಿಗೂ ಇಲ್ಲ. ದೇವರು ಅನ್ನವನ್ನು ಸ್ವೀಕರಿಸುವದಿಲ್ಲ. ಏಕೆಂದರೆ ಜೀವ ಸಹಜವಾದ ಹಸಿವು, ಬಾಯರಿಕೆ ಮತ್ತು ಯಾವದೇ ರೀತಿಯ ಆಸೆ-ಆಕಾಂಕ್ಷೆಗಳು ದೇವರಿಗಿಲ್ಲ. ಇದು ಕೇವಲ ನಮ್ಮ ಸಂತೋಷಕ್ಕಾಗಿ ಪ್ರಕೃತಿ-ಪುರುಷರಿಂದ ಯುಕ್ತವಾದ ಪಂಚಭೂತಗಳ ಋಣವನ್ನು ನೆನೆಯುವದಕ್ಕಾಗಿ ಮಾಡುವ ಆಚರಣೆಯಾಗಿದೆ.

ಅಹಿಂಸೆಗೆ ಮಿಗಿಲಾದ ಧರ್ಮವಿಲ್ಲ

"ಪರಮ ಕಾರುಣ್ಯದಿಂದ ಯುಕ್ತವಾದ ಸಾತ್ವಿಕ ವ್ಯಕ್ತಿತ್ವದ, ಅಹಿಂಸಾಭಾವದ ಶಿಷ್ಟ ಸಂವೇದನೆಯ ಆರ್ಷತತ್ವಗಳನ್ನು ಕಡೆಗಣಿಸಿ, ಅಂಧಾಚರಣೆಯನ್ನು ಅನುಸರಿಸುತ್ತ ಸಾಗುವುದರಲ್ಲಿ ಯಾವುದೇ ಔಚಿತ್ಯವಿಲ್ಲ. ಅಹಿಂಸೆಯೇ ಋಷಿಜೀವನದ ಪರಮಗುರಿ. ಪವಿತ್ರವಾದ ಆರಾಧನೆಯ ಸಮ್ಮುಖದಲ್ಲಿ ಒಂದು ಮುಗ್ಧ ಜೀವಿಯನ್ನು ಗುದ್ದಿ ಗುದ್ದಿ, ಉಸಿರುಗಟ್ಟಿಸಿ, ಚಿತ್ರಹಿಂಸೆಯಿಂದ ದಾರುಣವಾಗಿ ಹತ್ಯೆಗೈದು ಹೋಮಕ್ಕೆ ಹವಿಸ್ಸಾಗಿ ಅರ್ಪಿಸಿ, ಅದನ್ನು ಪ್ರಸಾದವೆಂದು ಸ್ವೀಕರಿಸುವ ಅಮಾನುಷ ಕೃತ್ಯದಿಂದ ಯಾವ ಪುಣ್ಯ ದೊರೆಯುತ್ತದೆ? ಯಜ್ಞದಲ್ಲಿ ಪಶುಬಲಿಯನ್ನು ಅರ್ಪಿಸುವುದು ಪುರಾಣಕಾಳಕ್ಕೆ ಪ್ರಚಲಿತವಾಗಿ ಬೆಳೆದುಬಂದ ಪದ್ಧತಿಯಾಗಿದೆ. ಯಜ್ಞಸಂಬಂಧವಾದ ವಿಷಯಗಳು ಬ್ರಾಹ್ಮಣಗ್ರಂಥದಲ್ಲಿ ಉಕ್ತವಾಗಿದ್ದು ಋಗ್ವೇದದಲ್ಲಿ ಅದನ್ನು ಎಲ್ಲಿಯೂ ಹೇಳಿಲ್ಲ. ಜೀವನೀಯ ದ್ರವ್ಯಗಳ ಹಾಗೂ ಪಶುವನ್ನು ವಧಿಸಿ ಹೋಮ ಮಾಡುವುದು ಋಗ್ವೇದ ಕಾಲಾನಂತರ ಬಂದ ಆಚರಣೆಯಾಗಿದೆ." ಹೀಗೆ ಅಹಿಂಸಾ ತತ್ವ ಪ್ರತಿಪಾದಕ ಋಷಿಚೇತನ ಗಣಪತಿಮುನಿಗಳು ಸಂತಾಪದಿಂದ ನುಡಿದರು.

"ದೇವರನ್ನು ನೆನೆದು ಪ್ರಾಂಜಲಭಾವದಿಂದ ಆಹಾರಸೇವನೆ ಮಾಡಿದರೆ ಅದೂ ಒಂದು ಯಜ್ಞವೇ ಆಗುತ್ತದೆ. ಏಕೆಂದರೆ ಆ ವಿಶ್ವಚೈತನ್ಯವು ನಮ್ಮೊಳಗೇ ಇದೆ. ಅಂತೆಯೇ ಊಟ ಮಾಡುವ ಮೊದಲು 'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ಸಮಾನಾಯ ಸ್ವಾಹಾ, ಉದಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ, ಬ್ರಹ್ಮಣೇ ಸ್ವಾಹಾ' ಎಂದು ಆಹಾರವನ್ನು ಹವಿಸ್ಸುಗಳಾಗಿ ಸ್ವೀಕರಿಸುತ್ತೇವೆ. ಇಂತಹ ಪವಿತ್ರ ಭಾವದ ಪರಿಕಲ್ಪನೆಯನ್ನು ಸಾಕಾರಗೊಳಿಸಿ ಮಾನವನನ್ನು ದೇವ ಮಾನವ ಜೀವನದತ್ತ ಒಯ್ಯುವದೇ ನಮ್ಮ ಆರ್ಷ ಸಂಕುಲದ ಗುರಿಯಾಗಿತ್ತು; ಪ್ರಾಮಾಣಿಕ ಪ್ರಾಯೋಗಿಕ ಪ್ರಯತ್ನವಾಗಿತ್ತು" ಎಂದು ಮುಂತಾಗಿ ಯಜ್ಞದ ಬಗೆಗೆ ತಮ್ಮ ಕೊನೆಯ ದಿನದ ಉಪಸಂಹಾರ ಭಾಷಣದಲ್ಲಿ ಗಣಪತಿಮುನಿಗಳು ವಿವರಿಸಿದರು. ಇದರಿಂದಾಗಿ ದೈವರಾತನಿಗೆ ಗುರುವರ್ಯರ ಸಾನ್ನಿಧ್ಯದಲ್ಲಿ ಹಂತ–ಹಂತವಾಗಿ ಆರ್ಷತತ್ವದ ಅಂತರಂಗದ ಸತ್ಯದರ್ಶನವಾಯಿತು.

ಹೀಗಿರುವಾಗ ಮತ್ತೆ ಕೆಲವು ದಿನಗಳಲ್ಲಿ ಸಣ್ಣಬೇಲೆಯ ಸಣ್ಣ ಕುಟೀರದಿಂದ ಗಣಪತಿಮುನಿಗಳು ಪುನಃ ನಾಗಬೀದಿಯಲ್ಲಿ ಹಿಂದೆ ವಾಸವಾಗಿದ್ದ ಸರಸೂ ಮನೆಗೆ ಬಂದು ನೆಲೆಸಿದರು. ಈ ಅವಧಿಯಲ್ಲಿ ಅವರಿಂದ ದಿನಾಲೂ ರಾತ್ರಿ ರಥಬೀದಿಯ ಮಧ್ಯಭಾಗದಲ್ಲಿರುವ ನಾರಾಯಣಪಂಡಿತರ ಮನೆಯ ಮಹಡಿಯ ಮೇಲೆ ಪುರಾಣಕಥಾಪ್ರವಚನ ನಡೆಯುತ್ತಿತ್ತು. ಜನಸ್ಥಾನ, ಪೂರ್ಣಾ ಇತ್ಯಾದಿ ಕಾವ್ಯ, ಕಾದಂಬರಿಗಳು ಈ ವೇಳೆಗೆ ಅವರ ಕಲ್ಪನೆಯ ಕುಸುಮವಾಗಿ ಮೂಡಿಬಂದವು. ಆದರೆ ಪುರಾಣಕಥಾ ಪ್ರವಚನದ ಸಂದರ್ಭದಲ್ಲಿ ದೈವರಾತನು ಮಾತ್ರ ಅಲ್ಲಿ ಉಪಸ್ಥಿತನಿರುತ್ತಿದ್ದಿಲ್ಲ. ಆತನಿಗೆ ಪುರಾಣಕಥೆಗಳ ಬಗೆಗೆ ಆಸಕ್ತಿಯಿರಲಿಲ್ಲ. ತಮ್ಮ ಅಂತೇವಾಸೀ ದೈವರಾತನು ಸದಾ ತಮ್ಮ ಹಿಂದೆಯೇ ಅನುಸರಿಸಕೊಂಡಿದ್ದವನು ಪುರಾಣಕಥಾ ಸಮಯದಲ್ಲಿ ಇಲ್ಲದಿರುವ ಕಾರಣ ಒಂದು ದಿನ ಗಣಪತಿಮುನಿಗಳು "ನೀನು ಯಾಕೆ ಪುರಾಣಕಥಾ ಪ್ರವಚನಕ್ಕೆ ಬರುವದಿಲ್ಲ?" ಎಂದು ಕೇಳಿದರು. ಅದಕ್ಕೆ ದೈವರಾತನು "ಪುರಾಣ ಕಥೆಗಳನ್ನು ಕೇಳಲು ನಾನು ಬರುವದಿಲ್ಲ. ಅವು ಹಲವು ವಿರೋಧಗಳಿಂದ ಕೂಡಿರುತ್ತವೆ. ಉದಾ : ಶಿವಪುರಾಣದಲ್ಲಿ ಶಿವನೇ ಸರ್ವಶ್ರೇಷ್ಠನೆಂದೂ ಇತರ ದೇವತೆಗಳೆಲ್ಲ ಆತನನ್ನು

ಸ್ತುತಿಸುತ್ತ ಕನಿಷ್ಠರೆಂಬಂತೆ ಚಿತ್ರಿತವಾಗಿದ್ದರೆ, ಭಾಗವತದಲ್ಲಿ ಹರಿಯೇ ಸರ್ವೋತ್ತಮನೆಂದೂ, ದೇವಿಪುರಾಣದಲ್ಲಿ ದೇವಿಯೇ ಸರ್ವಶ್ರೇಷ್ಠಳೆಂದೂ ಚಿತ್ರಿಸಲ್ಪಟ್ಟಿದೆ. ಹೀಗೆ ಅನೇಕ ಮತಗಳು ಹುಟ್ಟಿಕೊಂಡು ಏಕತೆಯು ಒಡೆದು ಇತಿಹಾಸದುದ್ದಕ್ಕೂ ಸಾಕಷ್ಟು ಅನಾಹುತಗಳು ಆಗಿವೆ. ಪುರಾಣಗಳ ಕೆಲವು ಕಾಮ ಪ್ರಚೋದಕ ರಾಗರಂಜಿತ ಕಥೆಗಳಿಂದ ಜನರು ಅವುಗಳ ಕಡೆಗೆ ಆಕರ್ಷಿತರಾಗಿ ಸುಜ್ಞಾನ-ವಿಜ್ಞಾನ ಸಂಪನ್ನವಾದ ವೇದದಿಂದ ಮತ್ತು ಅದರಲ್ಲಿ ಉಕ್ತವಾದ ಸರಳ ಆತ್ಮಸಾಕ್ಷಾತ್ಕಾರ ಮಾರ್ಗದಿಂದ ದೂರ ಸರಿಯುವಂತಾದ ಅದನ್ನು ಕೇಳಲು ನಾನು ಇಚ್ಛಿಸುವುದಿಲ್ಲ" ಎಂದು ದಿಟ್ಟತನದಿಂದ ಉತ್ತರಿಸಿದನು. ಇದನ್ನು ಕೇಳಿ ಗಣಪತಿ ಮುನಿಗಳು ಮುಂದೆ ಪುರಾಣಕಥಾ ಪ್ರವಚನ ನಿಲ್ಲಿಸಿ ವೇದಕಥಾ ವ್ಯಾಖ್ಯಾನವನ್ನು ಪ್ರಾರಂಭಿಸಿದರು.

ಜ್ಯೋತಿಷ ಕಲಿಯುವ ವಿದ್ಯಾರ್ಥಿಗಳಿಗೆ ಪರಾಶರ ಸಂಹಿತೆಯು ಅತಿ ವಿಸ್ತಾರವಾಗಿರುವದರಿಂದಲೂ ಹಾಗೂ ಮತಭೇದಗಳ ಪ್ರಸ್ತಾಪಗಳಿಂದ ಕಷ್ಟವೂ ಸಂದಿಗ್ಧತೆಯೂ ಉಂಟಾದಾಗ ಗಣಪತಿಮುನಿಗಳು ಅದನ್ನು ಸಂಕ್ಷಿಪ್ತಗೊಳಿಸಿ ಸರಳವಾಗಿಸಿ ಕೇವಲ ಎಂಬತ್ತೆರಡು ಶ್ಲೋಕಗಳಲ್ಲಿ "ನಿರ್ಣಯ ಸಂಗ್ರಹ" ಎಂಬ ಗ್ರಂಥವನ್ನು ರಚಿಸಿ ವಿದ್ಯಾರ್ಥಿಗಳಿಗೂ ಆಸಕ್ತ ವಿದ್ವಾಂಸರಿಗೂ ಸುಲಭವೇದ್ಯವಾಗುವಂತೆ ಮಾಡಿದರು. ನೂರಾರು ವರ್ಷಗಳಷ್ಟು ಹಿಂದೆ ಘಟಿಸಿದ ಹಾಗೆಯೇ ಮುಂದೆ ಘಟಿಸಲಿರುವ ಸೂರ್ಯ, ಗ್ರಹಣ, ಚಂದ್ರಗ್ರಹಣಗಳ ಲೆಕ್ಕಾಚಾರವನ್ನು ಕೇವಲ ಗಳಿಗೆಯಲ್ಲಿ ಮನದಲ್ಲಿಯೇ ಗಣಿಸಿ ಹೇಳಬಲ್ಲ ಗಣಪತಿ ಮುನಿಗಳಂತ ಮಹಾಮೇಧಾವಿಗಳು ಗುರುಗಳಾಗಿ ಸಿಕ್ಕಿದ್ದು ಈ ವಿದ್ಯಾರ್ಥಿಗಳ ಸುದೈವವಾಗಿತ್ತು.

ಹಿಂದೆ ಮಧ್ಯಪ್ರದೇಶದಿಂದ ಬಂದ ರಾಜಪುರೋಹಿತ ಶ್ರೀ ಜಯರಾಮ ಭಟ್ಟ ಸಪ್ರೆಯವರು ವಿದ್ಯಾರ್ಥಿಗಳಿಗೆ ಋಗ್ವೇದವೇ ಮೊದಲಾಗಿ ದಶಗ್ರಂಥಗಳ ಅಧ್ಯಾಪನೆ ಮಾಡಿ, ವೇದವಿದ್ಯೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಅಂತೆಯೇ ಈಗ ಗಣಪತಿಮುನಿಗಳು ಸಂಸ್ಕೃತ, ವ್ಯಾಕರಣ, ಕಾವ್ಯ, ಜ್ಯೋತಿಷ, ವೇದಬಾಷ್ಯ ಇತ್ಯಾದಿ ಅಧ್ಯಾಪನೆ ಮಾಡಿ ಗೋಕರ್ಣದಲ್ಲಿ ಈ ಎಲ್ಲ ವಿದ್ಯೆಗಳ ಪುನಃಶ್ಚೇತನಕ್ಕೆ ಕಾರಣರಾದರು.

ಗಣಪತಿಮುನಿಗಳು ಹೀಗೆ ಗೋಕರ್ಣದಲ್ಲಿ ಆದರ್ಶವಾದ ಜೀವನ ನಡೆಸುತ್ತಿರುವಾಗ ಅವರು ಸಿಕಂದರಬಾದಿಗೆ ಹೋಗಬೇಕಾದ ಪ್ರಸಂಗವು ಬಂದಿತು. ಆಗ ಊರಿನ ಪ್ರಮುಖರಾದ ಕೃಷ್ಣಭಟ್ಟ ಪ್ರಸಾದರು ಮತ್ತು ಹೊಸಬ ವೈದ್ಯರು ಅವರಿಗೆ ಕುಮಟಾದಿಂದ ಹಡಗಿನ ಮೂಲಕ ಮುಂಬಯಿ ತಲುಪಿ ಅಲ್ಲಿಂದ ಮುಂದೆ ಸಿಕಂದರಬಾದಿಗೆ ಹೋಗುವದು ಒಳ್ಳೆಯದು ಎಂದು ತಮ್ಮ ಸಲಹೆ ನೀಡಿದರು. ಅದಕ್ಕೆ ಅವರು ಒಪ್ಪಿದಾಗ ತಾವೇ ಸ್ವತಃ ಅವರನ್ನು ಪತ್ನಿ, ಪುತ್ರರೊಂದಿಗೆ ಕುಮಟಾಕ್ಕೆ ಕರೆದುಕೊಂಡು ಹೋಗಿ ಅವರಿಗೆ ಮುಂದಕ್ಕೆ ಪ್ರಯಾಣಿಸುವವರೆಗೆ ತಂಗುವದಕ್ಕೆ ಸೀತಾರಾಮ ಭಾಗವತರ ಮನೆಯಲ್ಲಿ ವ್ಯವಸ್ಥೆ ಮಾಡಿದರು. ಅವರ ಅಂತೇವಾಸಿ ದೈವರಾತನೂ ಜತೆಗೆ ಬಂದಿದ್ದು ಆತ ಅಲ್ಲಿಯ ಸಮೀಪದ ಬಾಬಾಜಿ ದೇವಸ್ಥಾನದಲ್ಲಿ ಉಳಿದುಕೊಂಡನು. ಗಣಪತಿಮುನಿಗಳು ಸೀತಾರಾಮ ಭಾಗವತರ ಮನೆಯಲ್ಲಿ ಉಳಿದುಕೊಂಡಿರುವ ವಿಷಯವನ್ನು ತಿಳಿದು ಅಲ್ಲಿಯ ಗಿಬ್‌ಹಾಯ್‌ಸ್ಕೂಲಿನ ಮುಖ್ಯ ಪ್ರಾಧ್ಯಾಪಕರಾದ ಕಾಮತರು ಹಾಗೂ ಪ್ರಧಾನ ಸಂಚಾಲಕರಾದ ಎಮ್.ಎಮ್. ಶಾನಭಾಗ ಇವರು ಗಿಬ್ ಹಾಯ್‌ಸ್ಕೂಲಿಗೆ ಗಣಪತಿಮುನಿಗಳನ್ನು ಆಮಂತ್ರಿಸಿದರು. ಗಣಪತಿಮುನಿಗಳು ಪ್ರಯಾಣಿಸುವದಕ್ಕೆ ಇನ್ನೂ ಎರಡು ದಿನ ಕಾಲಾವಕಾಶವಿರುವದರಿಂದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಸಭೆಯಲ್ಲಿ ಭಾಗವಹಿಸಿ

ಬಹು ಸುಂದರವಾಗಿ "ಜ್ಞಾನ ಮತ್ತು ಜೀವನ" ಎಂಬ ವಿಷಯದೊಂದಿಗೆ ಸರಳವಾಗಿ ವ್ಯಾಖ್ಯಾನ ಮಾಡಿದರು. ಅದು ಕೇವಲ ವ್ಯಾಖ್ಯಾನವಾಗಿರದೆ ಜ್ಞಾನ ವಿಕಾಸಕ್ಕೆ ಅನುರೂಪವಾದ ಸಂವಹನ ಕಾರ್ಯಕ್ರಮವಾಗಿತ್ತು. ಅವರು ವಿದ್ಯಾರ್ಥಿಗಳ ಜತೆಗೆ ಸರಸವಾಗಿ ಕಲೆತು ಸಂಭಾಷಣೆ ನಡೆಸಿ ಎಲ್ಲರನ್ನು ಸಂತೋಷಪಡಿಸಿದರು. ಅನಂತರ ಅವರು ಸಂದರ್ಶಕರ ಪುಸ್ತಕದಲ್ಲಿ ವಿದ್ಯಾಲಯದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ಅಭಿಪ್ರಾಯದೊಂದಿಗೆ ಅಂಕಿತ ಮಾಡಿದರು. ಈ ವೇಳೆಗೆ ಗಣಪತಿಮುನಿಗಳಿಂದ ಪ್ರಭಾವಿತರಾಗಿ ಅವರ ಹಸ್ತಾಕ್ಷರ ಪಡೆಯುವದಕ್ಕಾಗಿ ಕಾದಿದ್ದ ಅದೇ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಾದ ಸುಂದರರಾವ್ ಪಂಡಿತ, ವಿಶ್ವಾಮಿತ್ರ ಮುಂತಾದವರಿಗೆ ತಮ್ಮ ಸದಾಶಯದ ಸಂದೇಶ ಬರೆದು ಹಸ್ತಾಕ್ಷರ ನೀಡಿದರು. ತರುವಾಯ ಗೋಕರ್ಣದಿಂದ ಬಂದ ಕೃಷ್ಣಭಟ್ಟ ಪ್ರಸಾದರು, ಹೊಸಬ ವೈದ್ಯರು ಗಣಪತಿಮುನಿಗಳನ್ನು ಮತ್ತು ದೈವರಾತನನ್ನು ಹಡಗಿನವರೆಗೆ ಹೋಗಿ ಬೀಳ್ಕೊಟ್ಟು ಊರಿಗೆ ಹಿಂದಿರುಗಿದರು.

ಸಮುದ್ರಯಾನದ ಮೂಲಕ ಗುರುದಂಪತಿಗಳು ಮತ್ತು ದೈವರಾತನು ಮುಂಬಯಿ ತಲುಪಿದಾಗ ಜಯರಾಮ ಶೆಟ್ಟಿ ಎಂಬವರು ಗಣಪತಿ ಮುನಿಗಳನ್ನು ಕರೆದೊಯ್ಯಲು ಬಂದರು. ಅವರು ಗುರುವರ್ಯರ ಕುಟುಂಬ ಹಾಗೂ ದೈವರಾತನ ವಸತಿ ಸೌಕರ್ಯಕ್ಕಾಗಿ ಭಾಟಿಯಾರವರಿಗೆ ತಿಳಿಸಿದರು. ಭಾಟಿಯಾರವರ ಮನೆಯಲ್ಲಿ ಗಣಪತಿಮುನಿಗಳು ಮೂರು ದಿನ ಅವರ ಆತಿಥ್ಯ ಸ್ವೀಕರಿಸಿ ಸಿಕಂದರಬಾದಿಗೆ ಹೊರಟರು. ದೈವರಾತನು ಗಣಪತಿಮುನಿಗಳನ್ನು ಮತ್ತು ಅಮ್ಮನವರನ್ನು ವಂದಿಸಿ ಅವರ ಪ್ರಯಾಣಕ್ಕೆ ಶುಭ ಹಾರೈಸಿದನು.

ಶ್ರೀ ವಾಸುದೇವಾನಂದರ ಪುನಃ ಸಮಾಗಮ.

ಗಣಪತಿ ಮುನಿಗಳು ಸಿಕಂದರಬಾದಿಗೆ ಹೊರಟ ನಂತರ ದೈವರಾತನು ಪುನಃ ವಾಸುದೇವಾನಂದ ಸ್ವಾಮಿಯವರನ್ನು ಅನ್ವೇಷಿಸುತ್ತ ಉಜ್ಜಯನಿ ತಲುಪಿದ. ಅಂದು ಆತ ಅಲ್ಲಿಯ ರಾಮಮಂದಿರದಲ್ಲಿ ಉಳಿಯಲು ನಿರ್ಧರಿಸಿದನು. ಹಿಂದೆ ರಾಮದಾಸ ಸ್ವಾಮಿಯವರನ್ನು ಅರಸುತ್ತ ಬಂದಾಗ ಉಜ್ಜಯನಿಯ ರಾಮಮಂದಿರಲ್ಲಿ ಕೆಲವು ದಿನ ವಾಸವಾಗಿದ್ದು ಅದು ಅವನಿಗೆ ಪರಿಚಿತ ಸ್ಥಳವಾಗಿತ್ತು, ಅಂತಲೇ ಆತ ರಾಮಮಂದಿರದತ್ತ ನಡೆದಾಗ ಅವನ ಸುಕೃತವೋ ಎಂಬಂತೆ ಅಲ್ಲಿ ವಾಸುದೇವಾನಂದ ಸ್ವಾಮಿಗಳ ಶಿಷ್ಯರಾದ ಮಾರ್ಕಾಂಡೇಯ ಮತ್ತು ಅವರ ತಾಯಿ ಇದ್ದರು. ಅವರು ಗುರುವರ್ಯರು ನರ್ಮದಾನದಿ ತೀರದಲ್ಲಿರುವ ಗರುಡೇಶ್ವರ ಕ್ಷೇತ್ರದಲ್ಲಿ ಚಾತುರ್ಮಾಸ ವ್ರತಾಚರಣೆಯ ನಿಮಿತ್ತ ವಾಸವಾಗಿರುವದಾಗಿ ತಿಳಿಸಿದರು. ಪ್ರಸ್ತುತ ವಾಸುದೇವಾನಂದರು ತಂಗಿರುವ ಸ್ಥಳದ ಮಾಹಿತಿ ಪಡೆದ ದೈವರಾತನು ಅಂದು ಅಲ್ಲಿಯೇ ಉಳಿದು ಮರುದಿನ ಬೆಳಿಗ್ಗೆ ಅಲ್ಲಿಂದ ಭಾಣೋದ ಕರ್ನಾಲಿಗೆ ಹೋಗಿ ಮುಂದೆ ಟಿಳಕವಾಡಾ ಮಾರ್ಗವಾಗಿ ಗರುಡೇಶ್ವರ ತಲುಪಿದನು. ದೈವರಾತನು ಅಲ್ಲಿಗೆ ತಲುಪುವದಕ್ಕೆ ಕೆಲವು ದಿನಗಳ ಹಿಂದೆ ಒಂದು ದಿನ ವಾಸುದೇವಾನಂದರು ನರ್ಮದಾನದಿಯ ದಡದಲ್ಲಿರುವ ಒಂದು ಬೇವಿನಮರದ ಅಡಿಯಲ್ಲಿ ಕುಳಿತು ಚಾತುರ್ಮಾಸವನ್ನು ಯಾವ ಸ್ಥಳದಲ್ಲಿ ಆಚರಿಸಲಿ ಎಂದು ಯೋಚಿಸುತ್ತಿದ್ದರು. ಅಲ್ಲಿಂದ ಸ್ವಲ್ಪ ದೂರದಲ್ಲಿ ಭಿಲ್ಲ ಜನಾಂಗದ ಸುಮಾರು ಮೂವತ್ತು ಕುಟುಂಬಗಳು ವಾಸಿಸುತ್ತಿದ್ದು, ಅವರು

ಬೇವಿನಮರದಡಿಯಲ್ಲಿ ಕುಳಿತ ವಾಸುದೇವಾನಂದರನ್ನು ನೋಡಿದರು. ಕೂಡಲೇ ಅವರೆಲ್ಲ ಭಕ್ತಿಯಿಂದ ಕೆಲವೇ ಗಳಿಗೆಯಲ್ಲಿ ತಾಳವೃಕ್ಷಗಳ ಗರಿಗಳಿಂದ ಒಂದು ಪರ್ಣಕುಟಿಯನ್ನು ನಿರ್ಮಿಸಿದರು. ನಂತರ ಎಲ್ಲರೂ ಸೇರಿ ವಾಸುದೇವಾನಂದರ ಬಳಿಗೆ ತೆರಳಿ ಅವರಿಗೆ ವಂದಿಸುತ್ತ ಅವರಿಗಾಗಿ ಪರ್ಣಕುಟಿಯನ್ನು ನಿರ್ಮಿಸಿರುವದಾಗಿಯೂ ಅದರಲ್ಲಿ ವಾಸಿಸುವಂತೆಯೂ ಪ್ರಾಂಜಲಭಾವದಿಂದ ಪ್ರಾರ್ಥಿಸಿದರು. ಭಿಲ್ಲ ಜನಾಂಗದವರ ಈ ಕೃತಿಯಿಂದ ಸಂತುಷ್ಟರಾದ ವಾಸುದೇವಾನಂದರು ಚಾತುರ್ಮಾಸ್ಯವನ್ನು ಅಲ್ಲಿಯೇ ಆಚರಿಸುವುದಾಗಿ ಅವರಿಗೆ ಆಶ್ವಾಸನೆ ನೀಡಿದಾಗ ಅವರೆಲ್ಲರೂ ಬಹಳ ಸಂತೋಷದಿಂದ ತಮ್ಮಿಂದ ಸಾಧ್ಯವಾದ ಎಲ್ಲ ರೀತಿಯ ಸೇವೆಯನ್ನು ನೀಡುವದಕ್ಕೆ ಸಿದ್ಧವಿರುವುದಾಗಿ ನಮ್ರತೆಯಿಂದ ತಿಳಿಸಿದರು. ವಾಸುದೇವಾನಂದರು ನರ್ಮದಾನದಿತೀರದ ಸ್ವಲ್ಪ ದೂರದಲ್ಲಿ ಭಿಲ್ಲ ಜನಾಂಗದವರು ನಿರ್ಮಿಸಿಕೊಟ್ಟ ಕುಟೀರದಲ್ಲಿ ವಾಸಿಸುತ್ತಿರುವಾಗ ದೈವರಾತನು ಅಲ್ಲಿಗೆ ಬಂದು ಅವರಿಗೆ ನಮಸ್ಕರಿಸಿ ಕೈ ಮುಗಿದು ನಿಂತು ಕೊಂಡನು. ಆಗ ವಾಸುದೇವಾನಂದರು ಗೋಕರ್ಣದ ಅಹಲ್ಯಾಬಾಯಿ ಛತ್ರದ ವ್ಯವಸ್ಥಾಪಕರಾದ ಬಳವಂತರಾವ್ ಭಾಗವತರು ಸನ್ಯಾಸವನ್ನು ಸ್ವೀಕರಿಸಿ ಅವರ ಗುರು ಬ್ರಹ್ಮಾನಂದರೊಂದಿಗೆ ಇಲ್ಲಿಯೇ ಸಮೀಪ ನದಿಯ ದಡದ ಮೇಲ್ಭಾಗದಲ್ಲಿರುವ ಕುಟೀರವೊಂದರಲ್ಲಿ ವಾಸವಾಗಿದ್ದಾರೆ. ಅವರು ಸನ್ಯಾಸಾಶ್ರಮ ಸ್ವೀಕರಿಸಿದ ನಂತರ ಅವರಿಗೆ 'ಪ್ರದ್ಯುಮ್ನಾನಂದ' ಎಂಬ ಹೆಸರಿನ ಯೋಗಪಟ್ಟವನ್ನು ನೀಡಲಾಗಿದೆ. ಎಂದು ತಿಳಿಸಿ ಅವರನ್ನು ಕಾಣುವಂತೆ ಆದೇಶಿಸಿದರು.

ದೈವರಾತನು ಅದರಂತೆ ಪ್ರದ್ಯುಮ್ನಾನಂದರ ಹಾಗೂ ಅವರ ಗುರುಗಳಾದ ಬ್ರಹ್ಮಾನಂದರನ್ನೂ ಸಂದರ್ಶಿಸಿದನು. ಅವರು ದೈವರಾತನನ್ನು ಕಂಡು ಸಂತೋಷಗೊಂಡು ಚಾತುರ್ಮಾಸ್ಯದ ಮುಕ್ತಾಯದವರೆಗೂ ತಮ್ಮ ಕುಟೀರದಲ್ಲಿಯೇ ಉಳಿದುಕೊಳ್ಳುವಂತೆ ಅಪ್ಪಣೆ ನೀಡಿದರು. ನಿತ್ಯವೂ ವಾಸುದೇವಾನಂದರು ನಸುಕಿನಲ್ಲಿಯೇ ಗರುಡೇಶ್ವರದಿಂದ ಇನ್ನೂ ತಗ್ಗಿನ ಪ್ರದೇಶದಲ್ಲಿರುವ ನಾರದೇಶ್ವರದತ್ತ ನಡೆದು ಅಲ್ಲಿ ಹರಿಯುತ್ತಿರುವ ನರ್ಮದಾ ನದಿಯಲ್ಲಿ ಸ್ನಾನ ಮಾಡಿ ಅದರ ತಟದಲ್ಲಿ ಆಹ್ನಿಕವನ್ನು ಮುಗಿಸುತ್ತಿದ್ದರು. ಆಗ ಸುಮಾರು ಎಂಟು ಗಂಟೆಯ ವೇಳೆಗೆ ಬಹಳಷ್ಟು ಜನರು ಅಲ್ಲಿ ಸೇರುತ್ತಿದ್ದು ಹತ್ತು ಗಂಟೆಯವರೆಗೆ ಅವರಿಗೆ ವಾಸುದೇವಾನಂದರು ಉಪನಿಷದ್ ಭಾಷ್ಯದ ಉಪನ್ಯಾಸ ಮಾಡುತ್ತಿದ್ದರು. ದೈವರಾತನು ವಾಸುದೇವಾನಂದರ ಸನ್ನಿಧಿಯಲ್ಲಿ ಇರುವಾಗ ದಿನಾಲು ಅಲ್ಲಿ ಅಡಿಗೆ ಕೆಲಸ ನಿರ್ವಹಿಸುತ್ತಿದ್ದನು. ಅವರ ಪರ್ಣಕುಟಿಯಿಂದ ಅಡಿಗೆ ಮನೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿತ್ತು. ನರ್ಮದಾನದಿಯ ಎರಡೂ ಕಡೆ ತೀರವು ಎತ್ತರವಾಗಿದ್ದು ಅಲ್ಲಿ ಎಲ್ಲಿಯೂ ಬಾವಿಯಿರಲಿಲ್ಲ. ಆದ್ದರಿಂದ ಕೆಳಗಡೆ ನದಿಗೆ ಹೋಗಿಯೇ ಅಡಿಗೆಗೆ ಮತ್ತು ಪಾತ್ರೆ ತೊಳೆಯುವದಕ್ಕೆ ಇತ್ಯಾದಿ ಉಪಯೋಗಕ್ಕೆ ನೀರು ತರಬೇಕಾಗಿತ್ತು. ಅದು ತುಂಬಾ ಪ್ರಯಾಸದ ಕೆಲಸವಾಗಿತ್ತು. ಇದನ್ನು ತಿಳಿದ ವಾಸುದೇವಾನಂದರು ಅಡಿಗೆ ಮನೆಯ ಸಮೀಪ ಒಂದು ಬಾವಿ ತೆಗೆಯುವದಕ್ಕೆ ಆದೇಶಿಸಿದರು. ಬಾವಿಯಲ್ಲಿ ಧಾರಾಳ ನೀರು ದೊರೆತು ನೀರಿನ ಸಮಸ್ಯೆ ಪರಿಹಾರವಾಯಿತು. ಪ್ರತಿದಿನ ನಾರದೇಶ್ವರದಲ್ಲಿ ವಾಸುದೇವಾನಂದರ ವ್ಯಾಖ್ಯಾನ ಕೇಳಲು ಬಂದ ಜನರು ನಂತರ ಗರುಡೇಶ್ವರಕ್ಕೆ ಬಂದು ಸಂಜೆಯ ತನಕವೂ ಇದ್ದು ಹೋಗುತ್ತಿದ್ದರು. ವಾಸುದೇವಾನಂದರು ಹತ್ತು ಗಂಟೆಯ ವೇಳೆಗೆ ವ್ಯಾಖ್ಯಾನ ಮುಗಿಸಿ ಬಂದಾಗ ದೈವರಾತನು "ಇಂದು ಎಷ್ಟು ಜನರಿಗೆ ಅಡಿಗೆ ತಯಾರಿಸಲಿ" ಎಂದು ಕೇಳಿದರೆ ಒಂದು ದಿನ ಇನ್ನೂರು ಜನರಿಗೆ ಮಾಡು, ಮತ್ತೊಂದು ದಿನ ಮುನ್ನೂರು ಜನರಿಗೆ ಮಾಡು, ಇನ್ನೊಂದು ದಿನ ಸಾವಿರ ಜನರಿಗೆ ಮಾಡು ಹೀಗೆ

ಆದೇಶಿಸುತ್ತಿದ್ದರು. ಆದರೆ ಆ ಸಮಯಕ್ಕೆ ಕೇವಲ ನೂರಾರು ಜನರು ಮಾತ್ರ ಇರುತ್ತಿದ್ದರು. ಚಾತುರ್ಮಾಸ್ಯದ ಆ ವೇಳೆಯಲ್ಲಿ ವಾಸುದೇವಾನಂದರ ಶಿಷ್ಯವರ್ಗದವರು ಮತ್ತು ಭಕ್ತ ಜನರು ಗರುಡೇಶ್ವರಕ್ಕೆ ಬಂದು ಅಲ್ಲಲ್ಲಿ ಹಲವು ಕುಟೀರಗಳಲ್ಲಿ ಬೀಡು ಬಿಟ್ಟಿದ್ದು ಅವರಿಗೆಲ್ಲಾ ಅಡಿಗೆ ತಯಾರಿಸುವ ಉಸ್ತುವಾರಿ ದೈವರಾತನದಾಗಿತ್ತು. ಆದ್ದರಿಂದ ವಾಸುದೇವಾನಂದರು ನಾರದೇಶ್ವರದಿಂದ ಉಪನ್ಯಾಸ ಮುಗಿಸಿ ನೇರವಾಗಿ ದೈವರಾತನ ಬಳಿಗೆ ಬಂದು ಇಂದು ಅಲ್ಲಿ ಇಷ್ಟು ಜನರಿದ್ದರು ಮತ್ತು ಮಧ್ಯಾಹ್ನದ ಭೋಜನಕ್ಕೆ ಎಷ್ಟು ಜನರಾಗಬಹುದು ಎಂದು ತಿಳಿಸುತ್ತಿದ್ದರು. ಅಲ್ಲಿ ಎಲ್ಲವೂ ಸರಳ. ಅಡಿಗೆ ಮನೆಯಲ್ಲಿ ಬೇಳೆ, ಕಾಳು, ಅಕ್ಕಿ ಮುಂತಾದವುಗಳನ್ನು ಅಳೆಯುವುದಕ್ಕೆ ಸುಮಾರು ಹದಿನೈದು ಲೀಟರ್ ಹಿಡಿಯುವ ಖಾಲಿ ಎಣ್ಣೆ ಡಬ್ಬವನ್ನು ಮಾಪಕವಾಗಿ ಉಪಯೋಗಿಸಲಾಗುತ್ತಿತ್ತು. ಶಿರಾ, ಲಾಡು, ಜಿಲೇಬಿ ಮುಂತಾದ ಸಿಹಿ ಕಜ್ಜಾಯಗಳಿಗೆ ಸಕ್ಕರೆಗೆ ಬದಲಾಗಿ ಬೆಲ್ಲವನ್ನು ಬಳಸಲಾಗುತ್ತಿತ್ತು. ಈ ಪ್ರದೇಶವು ಊರಿನಿಂದ ಹೊರಗಡೆ ದೂರದಲ್ಲಿದ್ದರೂ ಇಲ್ಲಿ ನಡೆಯುವ ಊಟ, ಉಪಹಾರಾದಿ ಎಲ್ಲ ಕಾರ್ಯಕ್ರಮಗಳಿಗೆ ದವಸ, ಧಾನ್ಯಾದಿ ಆಹಾರ ವಸ್ತುಗಳು ಧಾರಾಳವಾಗಿ ದಾನಿಗಳಿಂದ ಹರಿದುಬರುತ್ತಿದ್ದವು. ಮುಂಬಯಿಯ ಪರ್ಸುಭಾಯಿ ಎಂಬ ಗುಜರಾಥಿಯವರು ಹಾಗೂ ಶೇಣವಿ, ಸಬನೀಸ್ ಈ ಮೂವರು ಮಹನೀಯರು ಚಾತುರ್ಮಾಸ್ಯದ ಎಲ್ಲ ವ್ಯವಸ್ಥೆಯನ್ನು ವಹಿಸಿಕೊಂಡಿದ್ದರು. ಭಕ್ತಜನರು ದಿನಾಲು ಕಾಣಿಕೆ ರೂಪದಲ್ಲಿ ಸಲ್ಲಿಸುತ್ತಿದ್ದ ಹಣವು ವಾಸುದೇವಾನಂದರ ಮುಂದೆ ಬಹಳಷ್ಟು ಸಂಗ್ರಹವಾಗುತ್ತಿದ್ದವು. ಆದರೆ ಅವುಗಳನ್ನೆಲ್ಲ ಅವರು ಬಡಜನರಿಗೆ ಆಗಿಂದಾಗಲೆ ಸ್ಥಳದಲ್ಲಿಯೇ ವಿತರಿಸುವಂತೆ ಆದೇಶ ಮಾಡುತ್ತಿದ್ದರು.

ವಾಸುದೇವಾನಂದರ ಸನ್ನಿಧಾನವೆಂದರೆ ಅದೊಂದು ಮುಕ್ತವಲಯದ ಬಯಲು ಆಲಯ. ಅಲ್ಲಿ ಎಷ್ಟೇ ಜನಸಮೂಹವಿದ್ದರೂ ನೂಕು ನುಗ್ಗಲುಗಳಿರುತ್ತಿದ್ದಿಲ್ಲ. ಎಲ್ಲವೂ ಶಿಸ್ತುಬದ್ಧ; ಎಲ್ಲೆಲ್ಲೂ ಮೌನ. ಗುಜುಗುಜು ಮಾತುಗಳಾಗಲಿ ಧಾವಂತವಾಗಲಿ ಇರಲಿಲ್ಲ. ಎಲ್ಲರೂ ಅವರಷ್ಟಕ್ಕೆ ಅವರು ಶಾಂತವಾಗಿ ತಮ್ಮ ತಮ್ಮ ಕೆಲಸವರಿತು ಕರ್ತವ್ಯ ನಿರ್ವಹಿಸುತ್ತಿದ್ದರು. ಯಾರನ್ನೂ ಯಾರೂ ಹೀಗೆ ಮಾಡು ಎಂದು ನಿರ್ದೇಶಿಸುತ್ತಿರಲಿಲ್ಲ. ಆದರೂ ಎಲ್ಲವೂ ಅಚ್ಚುಕಟ್ಟಾಗಿ ನಡೆಯುತ್ತಿದ್ದವು. ಆಡಂಬರ ವೈಭವಗಳಿಗೆ ಅಲ್ಲಿ ಎಡೆಯಿರಲಿಲ್ಲ. ಬಂದವರಿಗೆಲ್ಲ ಮಧ್ಯಾಹ್ನ ಮಾತ್ರ ಊಟದ ವ್ಯವಸ್ಥೆಯಿತ್ತು. ಸಾಯಂಕಾಲ ಭಜನೆ ಮುಗಿದ ನಂತರ ರಾತ್ರಿ ಸುಮಾರು ಹನ್ನೊಂದು ಗಂಟೆಯ ವೇಳೆಗೆ ಪ್ರಸಾದರೂಪದಲ್ಲಿ ಉಪಹಾರ ಕೊಡಲಾಗುತ್ತಿತ್ತು. ಅದರಲ್ಲಿ ಏನಾದರೊಂದು ಬಗೆಯ ಪಕ್ವಾನ್ನ ಇರುತ್ತಿತ್ತು. ಊಟ, ಉಪಹಾರಗಳಲ್ಲಿ ಎಲ್ಲರೂ ತಮಗೆ ಎಷ್ಟು ಬೇಕೋ ಅಷ್ಟು ಮಾತ್ರ ಕೇಳಿ ಹಾಕಿಸಿಕೊಳ್ಳುತ್ತಿದ್ದರು. ಯಾರೂ ಎಲೆಯಲ್ಲಿ ಯಾವುದೇ ಪದಾರ್ಥವನ್ನು ಬಿಡುತ್ತಿರಲಿಲ್ಲ. ಹೆಚ್ಚಾದ ಅಡಿಗೆಯನ್ನು ಬೇಕಾಬಿಟ್ಟಿಯಾಗಿ ಬಿಸಾಕಿ ಹಾಳುಮಾಡುವುದನ್ನು ವಾಸುದೇವಾನಂದರು ಎಂದಿಗೂ ಸಹಿಸುತ್ತಿರಲಿಲ್ಲ. ಅದನ್ನು ಭಿಲ್ಲರ ಕುಟುಂಬಗಳಿಗೆ ಪ್ರಸಾದರೂಪದಲ್ಲಿ ಕೊಡಲಾಗುತ್ತಿತ್ತು. ಅವರು ಆಗಾಗ ಹೇಳುತ್ತಿದ್ದರು. ಋಷಿ, ಮುನಿಗಳು ಅನ್ನವನ್ನು ಪೂಜನೀಯ ಭಾವದಿಂದ 'ಹೇ! ಪೂರ್ಣಬ್ರಹ್ಮ! ಎಂದು ಸ್ತುತಿಸಿದ್ದಾರೆ. ಅದೊಂದು ಪವಿತ್ರವಾದ ಹವಿಸ್ಸು. ಅದನ್ನು ನಿಕೃಷ್ಟವಾಗಿ ಕಾಣಬಾರದು! ಆದ್ದರಿಂದ ಅಡಿಗೆ ತಯಾರಿ ಮಾಡುವಾಗ ಪ್ರತಿದಿನ ಅಂದು ಎಷ್ಟು ತಯಾರಿಸಬೇಕು ಎಂದು ಅವರು ನಿಖರವಾಗಿ ನಿರ್ದೇಶನ ನೀಡುತ್ತಿದ್ದರು. ದೈವರಾತನು ದಿನಾಲು ಮಧ್ಯಾಹ್ನ ಅಡಿಗೆ ಕೆಲಸ ಮುಗಿಯುತ್ತಲೆ ವಾಸುದೇವಾನಂದರ ಮುಂದೆ ಕುಳಿತು ಋಗ್ವೇದ ಸಂಹಿತೆಯ ಒಂದೆರಡು ಅಧ್ಯಾಯವನ್ನು ಭೋಜನದವರೆಗೆ ಪಠನ ಮಾಡುತ್ತಿದ್ದನು.

ಅವನ ಬಾಯಿಂದ ಅಸ್ಖಲಿತವಾಣಿಯಲ್ಲಿ ಶೃತಿಬದ್ಧವಾಗಿ ಉಚ್ಚರಿಸಲ್ಪಡುತ್ತಿದ್ದ ವೇದಮಂತ್ರಗಳನ್ನು ಕೇಳುವದು ವಾಸುದೇವಾನಂದರಿಗೆ ಬಹು ಆನಂದವುಂಟುಮಾಡುತ್ತಿತ್ತು. ಪದ್ಮಾಸನದಲ್ಲಿ ಕುಳಿತ ಅವರು ಅಷ್ಟು ಹೊತ್ತು ನಿಶ್ಚಲ ಮೌನದಲ್ಲಿ ಧ್ಯಾನಮಗ್ನರಾಗಿರುತ್ತಿದ್ದರು. ಭೋಜನಾನಂತರ ಸುಮಾರು ಮೂರು ಗಂಟೆಯ ವೇಳೆಗೆ ಭಗವದ್ಗೀತೆಯ ಸಂಸ್ಕೃತ ಭಾಷ್ಯವನ್ನು ಆತ ಓದುತ್ತಿದ್ದು ಆಗ ವಾಸುದೇವಾನಂದರು ಅದರ ಅರ್ಥವನ್ನು ಮರಾಠಿಯಲ್ಲಿ ಜನರಿಗೆ ವಿವರಿಸುತ್ತಿದ್ದರು. ಈ ಮಧ್ಯೆ ಸಮಯಾವಕಾಶ ದೊರೆತಾಗ ಅವರು ದೈವರಾತನಿಗೆ ಹಠಯೋಗದ ಕ್ರಿಯೆಗಳನ್ನು ಕಲಿಸುತ್ತಿದ್ದರು. ಗುರುವಾಸುದೇವಾನಂದರ ಸನ್ನಿಧಿಯಲ್ಲಿ ನಡೆಯುವ ಎಲ್ಲ ಕೆಲಸಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಆತ ಆಗಾಗ ಅಲ್ಲಿ ನಡೆಯುವ ಹೋಮ, ಹವನಗಳಲ್ಲಿಯೂ ಭಾಗವಹಿಸುತ್ತಿದ್ದನು. ಋಗ್ವೇದವೇ ಅಲ್ಲದೇ ಯಜ್ಞ ಯಾಗಾದಿಗಳಿಗೆ ಪ್ರಧಾನವಾದ ಯಜುರ್ವೇದವನ್ನು ಈಗಾಗಲೇ ಅಧ್ಯಯನ ಮಾಡಿರುವ ಅವನಿಗೆ ಯಾಜ್ಞಿಕ ಸಂಬಂಧವಾದ ಜ್ಞಾನವು ಸಹಜವಾಗಿಯೇ ಆರ್ಜಿತವಾಗಿತ್ತು. ಕೆಲವು ದಿನ ಹತ್ತು ಗಂಟೆಯ ನಂತರ ಮಧ್ಯಾಹ್ನದವರೆಗೂ ಜನರು ಬರುತ್ತಲೇ ಇರುತ್ತಿದ್ದರು. ಅಂತಹ ದಿನಗಳಲ್ಲಿ ವಾಸುದೇವಾನಂದರು ಏನಾದರೊಂದು ವಿಶೇಷವಾದ ಪಕ್ವಾನ್ನ ಮಾಡಲು ಹೇಳುತ್ತಿದ್ದರು. ಆಗ ಅದೆಷ್ಟೇ ಜನರಿರಲಿ ಅವರಿಗೆ ದೈವರಾತನು ಕೂಡಲೇ ಅದನ್ನು ಮಾಡಿಬಡಿಸುತ್ತಿದ್ದನು. ಹೀಗೆ ತುರ್ತಾಗಿ ತಯಾರಿಸಿದ್ದರೂ ಆ ಪಕ್ವಾನ್ನದ ರುಚಿಯಲ್ಲಿ ಏನೂ ಲೋಪವಿರುತ್ತಿದ್ದಿಲ್ಲ.

ಈ ರೀತಿ ಬಹುದಕ್ಷನೂ ಪಾಕವಿದ್ಯಾಪ್ರವೀಣನೂ ಆಗಿರುವ ಅವನನ್ನು ವಾಸುದೇವಾನಂದರು ಪ್ರೀತಿಯಿಂದ 'ಗಜಾತಾಯಿ' ಎಂದು ಕರೆಯುತ್ತಿದ್ದರು. ವಾಸುದೇವಾನಂದರು ಎಂದೂ ತಮ್ಮ ಭಂಡಾರದ ಪಾಕಶಾಲೆಯಲ್ಲಿ ಮಾಡಿದ ಅಡಿಗೆಯನ್ನು ಭಿಕ್ಷೆಯಾಗಿ ಸ್ವೀಕರಿಸುತ್ತಿದ್ದಿಲ್ಲ. ಅವರು ಮಧುಕರಿಯಿಂದಲೇ ದಿನಾಲು ಮಧ್ಯಾಹ್ನ ಊಟಮಾಡುತ್ತಿದ್ದರು. ಅದೊಂದು ದಿನ ವಾಸುದೇವಾನಂದರು ಭಿಕ್ಷೆಗೆ ಹೋಗುತ್ತಿದ್ದ ಮನೆಯ ಗೃಹಿಣಿಯೊಬ್ಬಳು ರಜಸ್ವಲೆಯಾದ ಕಾರಣ ದೈವರಾತನಿಂದ ಮೂರು ರೊಟ್ಟಿಗಳನ್ನು ಮಾಡಿಸಿ ಅವರು ಭಿಕ್ಷೆಗೆ ಬಂದಾಗ ಬೇರೆಯವರಿಂದ ಅದನ್ನು ಹಾಕಿಸಿದ್ದಳು. ಅಂದು ಭೋಜನಾನಂತರ ವಾಸುದೇವಾನಂದರು ತಮ್ಮ ಜತೆಗಿದ್ದವರೊಂದಿಗೆ "ಇಂದು ಭಿಕ್ಷೆಯಲ್ಲಿ ಬಂದ ರೊಟ್ಟಿಯು ದಿನಾಲು ಮಾಡುವವರು ಮಾಡಿದ್ದಲ್ಲ; ಅದನ್ನು ಬೇರೆ ಯಾರೋ ಮಾಡಿದ್ದಾರೆ. ಬಹುಶಃ ಗಜಾತಾಯಿಯೇ ಮಾಡಿರಬೇಕು.!" ಎಂದರು. ಅದನ್ನು ಕೇಳಿದ ಸಮೀಪವರ್ತಿಗಳು "ಹೌದು ಅವನೇ ಮಾಡಿದ್ದಾನೆ" ಎಂದು ಹೇಳಿದರು. ವಾಸುದೇವಾನಂದರು ಅಷ್ಟು ಸೂಕ್ಷ್ಮಮತಿಗಳಾಗಿದ್ದು ವಿಷಯವನ್ನು ಕೂಡಲೇ ಗ್ರಹಿಸಬಲ್ಲವರಾಗಿದ್ದರು. ಪ್ರತಿದಿನ ಪ್ರಾತಃಕಾಲ ವಾಸುದೇವಾನಂದರ ಸನ್ನಿಧಾನದಲ್ಲಿ ಅವರ ಆರಾಧ್ಯದೈವ ದತ್ತಾತ್ರೇಯಮೂರ್ತಿಯ ಮುಂದುಗಡೆ ಅಂಗಳದಲ್ಲಿ ದೈವರಾತನು ಕಲಾತ್ಮಕವಾದ ರಂಗವಲ್ಲಿಯನ್ನು ಬರೆದು ಅದನ್ನು ಅರಿಷಿಣ, ಕುಂಕುಮಗಳಿಂದ ಸುಂದರವಾಗಿ ಹೊಳಹು ಹಾಕಿ ಅಲಂಕರಿಸುತ್ತಿದ್ದನು. ಒಂದು ದಿನ ಬರೆದಿರುವದನ್ನು ಪುನಃ ಬರೆಯುತ್ತಿದ್ದಿಲ್ಲ. ಅದನ್ನು ನೋಡಿ ಪ್ರಭಾವಿತರಾದ ವಾಸುದೇವಾನಂದರು ಮುಂದೆ ರಂಗವಲ್ಲಿಯನ್ನು ದಿನಾಲು ಸಾರಣೆಯಿಂದ ಅಳಿಸಿಹಾಕದಂತೆ ತಿಳಿಸಿ ಮೂರು ದಿನಗಳವರೆಗೆ ಅದನ್ನು ಹಾಗೆಯೇ ಉಳಿಸಿಕೊಳ್ಳುತ್ತಿದ್ದು ಹೆಣ್ಣುಮಕ್ಕಳು ಅಲ್ಲಿಗೆ ಬಂದಾಗ "ಇದು ಗಜಾತಾಯಿ ಬರೆದ ರಂಗೋಲಿ; ಮತ್ತೆ ನೋಡಲು ಸಿಗುವುದಿಲ್ಲ ನೀವೂ ಕಲಿತುಕೊಳ್ಳಿರಿ"

ಎಂದು ಹೇಳುತ್ತಿದ್ದರು. ಗೋಕರ್ಣದಲ್ಲಿ ಗೃಹಿಣಿಯರು ಅಂದು ದಿನಾಲೂ ಸೂರ್ಯೋದಯಕ್ಕೆ ಮುನ್ನ ನಸುಕಿನಲ್ಲಿಯೇ ತಮ್ಮ ಮನೆಗಳ ಮುಂದೆ ಸ್ವಚ್ಛಗೊಳಿಸಿ ಸಾರಣೆಮಾಡಿ ರಂಗೋಲಿಯಿಡುತ್ತಿದ್ದರು. ಮಳೆಗಾಲವನ್ನು ಬಿಟ್ಟು ವರ್ಷದ ಉಳಿದೆಲ್ಲ ದಿನಗಳಲ್ಲಿ ಪ್ರಾತಃಕಾಲ ಮತ್ತು ಸಾಯಂಕಾಲ ಹೆಣ್ಣುಮಕ್ಕಳು ಸ್ಪರ್ಧಾತ್ಮಕವಾಗಿ ರಂಗೋಲಿಯ ಚಿತ್ತಾರದಲ್ಲಿ ತೊಡಗಿರುವುದರಿಂದ ಅಲ್ಲಿ ಉತ್ಸವದ ವಾತಾವರಣ ಕಂಡುಬರುತ್ತಿತ್ತು. ಅಂತಲೇ ಎಲ್ಲರಿಗೂ ರಂಗೋಲಿ ಹಾಕುವ ಕಲೆ ಸಹಜವಾಗಿಯೇ ಕರಗತವಾಗಿರುತ್ತಿತ್ತು. ಇಂತಹ ವಾತಾವರಣದಲ್ಲಿ ಬೆಳೆದ ದೈವರಾತನಿಗೆ ಚಿಕ್ಕಂದಿನಲ್ಲಿಯೇ ಸ್ವಾಭಾವಿಕವಾಗಿ ರಂಗೋಲಿಯ ಕಲೆ ಕೈಗೂಡಿಬಂದಿತ್ತು.

ಭಗವಾನ್ ಶ್ರೀ ದತ್ತಾತ್ರೇಯ ಜಯಂತಿ ಉತ್ಸವ

ಅಂದು ಮಾರ್ಗಶಿರ ಪೌರ್ಣಮಿ ದತ್ತಜಯಂತಿ ದಿನ. ದೊಡ್ಡ ಚಪ್ಪರ ಹಾಕಿ ದತ್ತ ಮಹೋತ್ಸವದ ಸಿದ್ಧತೆ ನಡೆದಿತ್ತು. ದೈವರಾತನು ದತ್ತದೇವರ ಮುಂದೆ ದೊಡ್ಡದಾದ ಒಂದು ರಂಗವಲ್ಲಿಯ ಬರೆದು ಆ ದಿನದ ಪ್ರಸಾದಭಕ್ಷ್ಯ ತಯಾರಿಸಲು ಪಾಕಶಾಲೆಗೆ ಹೋದನು. ಅದು ಸಂಧ್ಯಾ ಸಮಯ, ದೊಡ್ಡ ಸಂಖ್ಯೆಯಲ್ಲಿ ಭಕ್ತಜನರು ನೆರೆದಿದ್ದರು. ವಾಸುದೇವಾನಂದರು ದೇವರ ಎದುರು ಮೌನವಾಗಿ ಕುಳಿತಿದ್ದು ಅವರಿಂದ ಸ್ವಲ್ಪ ದೂರದಲ್ಲಿ ಬ್ರಹ್ಮಾನಂದಸ್ವಾಮಿಯವರು ಮತ್ತು ಪ್ರದ್ಯುಮ್ನಾನಂದಸ್ವಾಮಿಯವರು ಕುಳಿತಿದ್ದರು. ರಾತ್ರಿ ಏರುತ್ತಿರುವಂತೆ ಆರಂಭದ ಉತ್ಸಾಹ ಕಡಿಮೆಯಾಗುತ್ತ ಕೆಲವರು ಆಕಳಿಸತೊಡಗಿದ್ದರು. ನಿದ್ರೆಯ ಮಂಪರು ಆವರಿಸುತ್ತಿರಲು ಭಜನೆ ನೀರಸವಾಗಿತ್ತು. ಆಗ ವಾಸುದೇವಾನಂದರು "ಗಜಾನನನ ಕರೆಯಿರಿ" ಎನ್ನಲು ಹತ್ತಿರದಲ್ಲಿದ್ದವರು ಎದ್ದುಹೋಗಿ ದೈವರಾತನಿಗೆ ವಿಷಯ ತಿಳಿಸಿದರು. ಪ್ರಸಾದ ಭಕ್ಷದ ತಯಾರಿಕೆಯಲ್ಲಿ ನಿರತನಾಗಿದ್ದ ಆತ ಅದನ್ನು ಅಷ್ಟಕ್ಕೆಬಿಟ್ಟು ತಕ್ಷಣ ಸಭಾಂಗಣಕ್ಕೆ ಬಂದು ಗುರುವರ್ಯರ ಮನದಿಂಗಿತವನ್ನು ಅರಿತು, ಕಾಲಿಗೆ ಗೆಜ್ಜೆಕಟ್ಟಿ ವಾಸುದೇವಾನಂದರಿಗೆ ನಮಸ್ಕರಿಸಿ "ದಿಗಂಬರ ದಿಗಂಬರ ಶ್ರೀಪಾದ ವಲ್ಲಭ ದಿಗಂಬರ" ಎಂಬ ಭಜನೆಯೊಂದಿಗೆ ನೃತ್ಯ ಪ್ರಾರಂಭಿಸಿದ. ವಾಸುದೇವಾನಂದರಿಗೆ ಬಹಳ ಸಂತೋಷವಾಯಿತು. ಗುರುಚರಣ ಸೇವಕ ದತ್ತಭಕ್ತನ ಭಕ್ತ ದೈವರಾತ ನರ್ತಿಸುತ್ತ ಭಜನೆ ಪ್ರಾರಂಭಿಸಿದಾಗ ಎಲ್ಲರಲ್ಲಿ ವಿದ್ಯುತ್‌ಸಂಚಾರವಾಯಿತು. ಆತನ ನೃತ್ಯಗತಿಯ ಗೆಜ್ಜೆಯನಾದಕ್ಕೆ ಅಲ್ಲಿ ನೆರೆದಿದ್ದ ಭಕ್ತವೃಂದದ ನಿದ್ರೆಯ ಮಂಪರು ಹರಿದುಹೋಯಿತು. ಕಂಚಿನ ಕಂಠದಿಂದ ಭಜನೆಯ ಹಾಡು ಸಭೆಯಲ್ಲಿ ಮೊಳಗಿತು. ರಾತ್ರಿ ಹನ್ನೆರಡು ಗಂಟೆಯಾದಾಗ ವಾಸುದೇವಾನಂದರು ಉಪಹಾರ ಸೇವನೆಯ ನಿಮಿತ್ತ ಒಂದು ತಾಸು ವಿರಾಮಮಾಡಲು ಹೇಳಿದರು. ಉಪಹಾರ ಮುಕ್ತಾಯವಾಗುತ್ತಲೇ ಮತ್ತೆ ಭಜನೆಯೊಂದಿಗೆ ನೃತ್ಯ ಪ್ರಾರಂಭಿಸಿದ ದೈವರಾತ ಸುತ್ತಲಿನ ಪ್ರಪಂಚದ ಅರಿವೇ ಇಲ್ಲದೇ ಭಕ್ತಿಯ ಮೋದದಲ್ಲಿ ಮೈಮರೆತಿದ್ದ. ನಿಧಾನವಾಗಿ ರಾತ್ರಿ ಕರಗುತ್ತಲಿತ್ತು. ಎಲ್ಲರೂ ಆತನ ರಸೋನ್ಮಾದದ ಅಭಿವ್ಯಕ್ತಿಯ ಮೋಡಿಗೆ ಪರವಶರಾಗಿದ್ದರು. ಬೆಳಗಾದರೂ ದೈವರಾತನಲ್ಲಿ ಭಜನೆಯ ಹಾಡುಗಳು ಬರಿದಾಗಲಿಲ್ಲ; ನೃತ್ಯದ ಉತ್ಸಾಹ ಕುಗ್ಗಲಿಲ್ಲ. ಇನ್ನೇನು ನಸುಕು ಹರಿಯುತ್ತದೆ ಎನ್ನುವಾಗ ವಾಸುದೇವಾನಂದರು ಅಂದಿನ ಕಾರ್ಯಕ್ರಮವನ್ನು ಮಂಗಲಗೊಳಿಸಿ ದೈವರಾತನನ್ನು ತುಂಬುಹೃದಯದಿಂದ ಹರಸಿದರು.

ದಿವ್ಯಾನುಭೂತಿಯ ಮಹಾಶಿವರಾತ್ರಿ

ನರ್ಮದಾನದಿ ತೀರದ ಪವಿತ್ರ ವಾತಾವರಣ ವಾಸುದೇವಾನಂದರಿಗೆ ತುಂಬಾ ಇಷ್ಟವಾಗಿತ್ತು. ಅಂತಲೇ ಅವರು ಅಲ್ಲಿಯೇ ಜಪ, ತಪ, ಅನುಷ್ಠಾನವನ್ನು ಗೈಯುತ್ತ ವಾಸವಾಗಿದ್ದರು. ಹೀಗಿರುವಾಗ ದತ್ತಜಯಂತಿಯ ದಿನದಂತೆಯೇ ಇನ್ನೊಂದು ಘಟನೆಯು ನಡೆಯಿತು. ಅಂದು ಮಾಘ ಬಹುಳ ಶಿವರಾತ್ರಿ. ರಾತ್ರಿ ಸುಮಾರು ಒಂಭತ್ತು ಘಂಟೆಯ ಸಮಯ. ವಾಸುದೇವಾನಂದರು ಪರ್ಣಕುಟಿಯ ಹೊರಗೆ ಅಂಗಳದ ಪೂರ್ವಭಾಗದಲ್ಲಿ ನರ್ಮದಾ ನದಿಗೆ ಮುಖಮಾಡಿ ಕುಳಿತಿದ್ದರು. ಅಂದು ರಾತ್ರಿಯೆಲ್ಲ ಜಾಗರಣದಿಂದ ಇದ್ದು ಶಿವರಾತ್ರಿ ಆಚರಿಸುವ ಉದ್ದೇಶ ಅವರದಿತ್ತು. ಅವರ ಸುತ್ತ ಭಕ್ತಜನರು ಭಜನೆ ಮಾಡುತ್ತಿದ್ದರು. ಮಧ್ಯ ರಾತ್ರಿಯಾಗುತ್ತಿರುವಂತೆ ಕೆಲವರು ಆಕಳಿಸುತ್ತಿದ್ದರೆ ಮತ್ತೆ ಕೆಲವರು ತೂಕಡಿಸತೊಡಗಿದರು. ಬೆಳಗಿನಿಂದ ಎಲ್ಲರೂ ಉಪವಾಸವಿರುವ ಕಾರಣ ಭಜನೆಯಲ್ಲಿ ಉತ್ಸಾಹವಿರಲಿಲ್ಲ. ಆಗ ವಾಸುದೇವಾನಂದರು "ಭಜನೆಗೆ ಗಜಾತಾಯಿಯನ್ನು ಕರೆಯಿರಿ" ಎಂದರು. ಅದಕ್ಕೆ ಅಲ್ಲಿದ್ದವರು "ಆತ ರುದ್ರಾಭಿಷೇಕದಲ್ಲಿ ನಿರತನಾಗಿದ್ದಾನೆ." ಎನ್ನಲು ವಾಸುದೇವಾನಂದರು "ರುದ್ರಾಭಿಷೇಕವನ್ನು ಬೇರೆ ಯಾರಾದರೂ ಮಾಡಲಿ" ಎಂದು ಆದೇಶಿಸಿದರು. ತಕ್ಷಣ ಅವರಲ್ಲೊಬ್ಬರು ಎದ್ದು ಹೋಗಿ ದೈವರಾತನಿಗೆ ವಿಷಯ ತಿಳಿಸಿದರು. ಕೂಡಲೇ ಆತ ಕಾಲಿಗೆ ಗೆಜ್ಜೆಕಟ್ಟಿ ಅನುವಾಗಿ ಭಜನೆ ನಡೆಯುತ್ತಿರುವ ಸ್ಥಳಕ್ಕೆ ಬಂದ. ಅಂದು ಮಹಾಶಿವರಾತ್ರಿಯಾದ ಕಾರಣ "ಶಿವ ಹರ ಶಂಕರ ಗೌರೀಶಂ ವಂದೇ ಗಂಗಾಧರಮೀಶಂ" ಎಂಬ ಭಜನೆಯ ಹಾಡಿನೊಂದಿಗೆ ನರ್ತನವನ್ನು ಪ್ರಾರಂಭಿಸಿದ. ಈ ಹಾಡು ಮುಗಿಯುತ್ತಿರುವಂತೆ ಆತನಿಗೆ ಅದೇನೋ ದಿವ್ಯಸ್ಫೂರ್ತಿಯುಂಟಾಯಿತು. ಆಗ ತಾನೆ ರುದ್ರಾಭಿಷೇಕ ಮಾಡುತ್ತಿದ್ದ ಅವನು ಅದನ್ನು ಅರ್ಧಕ್ಕೆ ಬಿಟ್ಟು ಬಂದಿದ್ದು ಅವನ ಮನಸ್ಸಿನಲ್ಲಿ ರುದ್ರಾಧ್ಯಾಯದ ಮಂತ್ರಗಳು ಇನ್ನೂ ಧ್ವನಿಸುತ್ತಿದ್ದವು. ಅದೇ ಗುಂಗಿನಲ್ಲಿ ಆತ ರುದ್ರಾಧ್ಯಾಯದ ತತ್ವಗಳನ್ನು ಆಶುಕವಿತ್ವದಿಂದ ಹಾಡಾಗಿ ರಚಿಸುತ್ತ ಭಜನೆ ಪ್ರಾರಂಭಿಸಿದನು. ಅದರ ಧ್ರುವಪದವು ಈ ರೀತಿಯಾಗಿತ್ತು.

ಭಗವನ್ ಭರ್ಗ ಸಮಗ್ರ ವಿಭೂತೇ ।
ಭಾವಿತ ಭದ್ರದ ರುದ್ರ ನಮಸ್ತೇ ॥

ದೈವರಾತನ ನೃತ್ಯದಿಂದ ಭಾವಪರವಶರಾದ ವಾಸುದೇವಾನಂದರು "ರುದ್ರನ ತಾಂಡವನೃತ್ಯದ ಹಾಗೇ ಕಾಣುತ್ತಿದೆ" ಎಂದು ಉದ್ಗರಿಸಿದರು. ಸಂಸ್ಕೃತ ಅಧ್ಯಯನ ಮಾಡದಿರುವ ಈತನ ಬಾಯಿಂದ ವ್ಯಾಕರಣಬದ್ಧವಾದ ಶ್ಲೋಕ ಮತ್ತು ಹಾಡು ಅದು ಹೇಗೆ ಬಂದವೆಂದು ಅಚ್ಚರಿಪಟ್ಟರು. ದೈವರಾತನು ಭಜನೆಯೊಂದಿಗೆ ನೃತ್ಯವನ್ನು ಮುಗಿಸುತ್ತಿರುವಂತೆ ಎಲ್ಲರಿಗೂ ಬೆಳಗಿನ ಜಾವದ ಅರಿವಾಯಿತು. ಎಲ್ಲರೂ ಸ್ನಾನಾದಿ ನಿತ್ಯಕರ್ಮಗಳಿಗೆ ತೆರಳಿದರು. ಒಂದು ದಿನ ವಾಸುದೇವಾನಂದರು ಪ್ರವಚನ ನೀಡುತ್ತಿರುವಾಗ ಒಬ್ಬ ಮಹಿಳೆ ಓಡಿ ಬಂದು "ಒಂದು ಸರ್ಪ ನಮ್ಮ ಗುಡಿಸಲಿಗೆ ಬಂದಿದೆ; ಒಳಗೆ ಮಗುವಿದೆ. ರಕ್ಷಿಸಿ!" ಎಂದು ಅಳತೊಡಗಿದಳು. ಆಗ ವಾಸುದೇವಾನಂದರು ಅವಳ ಗುಡಿಸಲಿನತ್ತ ನಡೆದರು. ದೈವರಾತನು ಅವರನ್ನು ಹಿಂಬಾಲಿಸಿ ಹೋದಾಗ ಗುಡಿಸಲಿನ ಒಂದು ಮೂಲೆಯಲ್ಲಿ ಕಾಳಿಂಗ ಸರ್ಪವೊಂದು ಹರಿದು ಹೋಗುತ್ತಿತ್ತು. ಕೂಡಲೇ ವಾಸುದೇವಾನಂದರು ದೈವರಾತನನ್ನು ನೋಡುತ್ತ 'ಹಿಡಿ ಅದನ್ನು' ಎಂದರು. ತಕ್ಷಣ ಆತ ಒಂದು ಕೈಯಿಂದ ಕಾಳಿಂಗ ಸರ್ಪದ ಬಾಲವನ್ನು ಹಿಡಿದೆಳೆಯುತ್ತ ಇನ್ನೊಂದು

ಕೈಯಿಂದ ಅದರ ಕುತ್ತಿಗೆಯನ್ನು ಹಿಡಿದು ಗುರುಗಳ ಮುಂದಿನ ಆದೇಶಕ್ಕಾಗಿ ಅವರ ಕಡೆಗೆ ನೋಡಿದನು. ತಕ್ಷಣ ವಾಸುದೇವಾನಂದರು ಅಡಿಗೆ ಮನೆಯ ಭಂಡಾರದಿಂದ ಖಾಲಿಯಾದ ಎಣ್ಣೆ ಡಬ್ಬವನ್ನು ತರಿಸಿ ಅದರ ರಂಧ್ರದಲ್ಲಿ ಹಾವನ್ನು ಬಿಡಲು ತಿಳಿಸಿದರು. ದೈವರಾತನು ಅದೇ ರೀತಿಮಾಡಲು ರಂಧ್ರವನ್ನು ಒಂದು ಬಟ್ಟೆಯಿಂದ ಗಾಳಿಯಾಡುವಂತೆ ಮುಚ್ಚಿ ಸರ್ಪವು ಹೊರಬರದಂತೆ ಮಾಡಲಾಯಿತು. ಕೂಡಲೇ ಅದನ್ನು ಅಲ್ಲಿ ನೆರೆದವರ ಹತ್ತಿರ ನರ್ಮದಾ ನದಿಯ ಆಚೆ ದಡದಲ್ಲಿ ಬಿಟ್ಟು ಬರುವಂತೆ ತಿಳಿಸಿದರು.

ವಾಸುದೇವಾನಂದರು ತಮ್ಮ ಬಿಡುವಿನ ವೇಳೆಯಲ್ಲಿ ದೈವರಾತನಿಗೆ ಹಠಯೋಗದ ಆಸನ, ನವಲಿ, ಧೌತಿ, ಬಸ್ತಿ, ನೇತಿ ಹಾಗೂ ಖೇಚರಿ ಮುದ್ರಾ ಇವೇ ಮೊದಲಾದ ಕ್ರಿಯೆಗಳನ್ನು ಕಲಿಸಿದರು. ಮಹಾತಪಸ್ವಿ ವಾಸುದೇವಾನಂದಸರಸ್ವತಿ ಸ್ವಾಮಿಯಂತಹ ಶ್ರೇಷ್ಠ ಆಚಾರ್ಯರು ದೈವರಾತನಿಗೆ ದೊರಕಿದ್ದು ಆತನ ಅದೃಷ್ಟವೇ ಆಗಿತ್ತು. ಶಿವರಾತ್ರಿಯ ನಂತರ ಒಂದು ದಿನ ವಾಸುದೇವಾನಂದರು ದೈವರಾತನಿಗೆ "ನೀನು ವೇದಾಧ್ಯಯನ ಸಂಪನ್ನನಾಗಿರುವೆ; ಆದ್ದರಿಂದ ವೇದಭಾಷ್ಯವನ್ನು ಅಧ್ಯಯನ ಮಾಡಿ ಅದರ ಅರ್ಥವನ್ನು ತಿಳಿಯಬೇಕು. ಅರ್ಥವನ್ನು ತಿಳಿಯಬೇಕಾದರೆ ವ್ಯಾಕರಣ ಗ್ರಂಥಗಳ ಅಧ್ಯಯನ ಮಾಡಬೇಕು. ನೀನು ನನ್ನ ಸಂಗಡ ಇದ್ದರೆ ಅಡಿಗೆ ಮಾಡುವದು ಭಜನೆ ಮಾಡವದು ಮುಂತಾದವುಗಳಲ್ಲಿ ನಿನ್ನ ಅಮೂಲ್ಯ ಸಮಯ ಕಳೆದುಹೋಗುತ್ತದೆ. ನೀನು ಕಾಶಿಗೆ ಹೋಗು. ಅಲ್ಲಿ ನನಗೆ ಪರಿಚಿತರಾದ ಬಾಬಾ ಸಾಹೇಬ ಜಮಖಂಡಿಕರ ಎಂಬ ವೈಯಾಕರಣಿಗಳಿದ್ದಾರೆ. ಅವರಲ್ಲಿಗೆ ಹೋಗಿ ನೀನು ಅಧ್ಯಯನ ಮಾಡಬೇಕು." ಎಂದು ಆಜ್ಞಾಪಿಸಿದರು. ಅದೇ ವೇಳೆಗೆ ಮುಂದೆ ಸಕಾಲದಲ್ಲಿ ಗೃಹಸ್ಥಾಶ್ರಮ ಸ್ವೀಕರಿಸುವಂತೆ ದೈವರಾತನಿಂದ ವಚನ ಪಡೆದರು. ವಾಸುದೇವಾನಂದರದು ಅತ್ಯಂತ ಶಿಸ್ತುಬದ್ಧ ಜೀವನ. ಅವರು ಎಂದಿಗೂ ಅವಶ್ಯಕತೆ ಮೀರಿ ಒಂದು ಮಾತನ್ನೂ ಆಡುವವರಲ್ಲ. ಕರಾರುವಾಕ್ಕಾಗಿ ಖಚಿತವಾಗಿ ದೂರದರ್ಶಿತ್ವದಿಂದ ಯುಕ್ತವಾಗಿರುವ ಅವರ ಮಾತುಗಳು ವಾಸ್ತವತೆಯ ತೆರೆಯುತ್ತ ಬೆಳಕನ್ನು ತೋರುತ್ತಿದ್ದವು. "ನಿಸರ್ಗ ನಿಯಮಕ್ಕೆ ಅನುಸಾರವಾಗಿ ಮರ್ಯಾದೆಯ ಎಲ್ಲೆಯಲ್ಲಿ ಯಾರಿಗೂ ನೋವಾಗದಂತೆ ಶಾಂತಿಯಿಂದ ಸರಳ ರೀತಿಯಲ್ಲಿ ತಪಸ್ವಿಯಾಗಿ ಬದುಕುವದೇ ಋಷಿ ಜೀವನ. ತನಗೆ ತಿಳಿದಿರುವ ವಿದ್ಯೆಯನ್ನು ಮುಚ್ಚಿಡದೆ ಆಸಕ್ತ ವಿದ್ಯಾರ್ಥಿಗಳಿಗೆ ಯಾವ ಅಪೇಕ್ಷೆಯಿಲ್ಲದೆ ದಾನಮಾಡುವದು ಗುರುವಿನ ಕರ್ತವ್ಯ. ಈ ರೀತಿಯಾಗಿ ಸಾಗುತ್ತ ನಿನ್ನ ಬದುಕು ಅನ್ಯರಿಗೆ ಬೆಳಕು ತೋರುವ ಋಷಿಜೀವನವಾಗಲಿ " ಎಂದು ವಾಸುದೇವಾನಂದರು ದೈವರಾತನನ್ನು ತುಂಬು ಹೃದಯದಿಂದ ಹರಸಿದರು. ಇದು ದೈವರಾತನಿಗೆ ವಾಸುದೇವಾನಂದರು ನೀಡಿದ ಕೊನೆಯ ಸಂದೇಶ. ಗುರು–ಶಿಷ್ಯರ ಅಗಲುವಿಕೆಯ ಆ ಕ್ಷಣ ಹೃದಯಸ್ಪರ್ಶಿಯಾಗಿತ್ತು. ಈಗಾಗಲೇ ನಿಶ್ಚಯಿಸಿರುವಂತೆ ಅವರು ಪ್ರದ್ಯುಮ್ನಾನಂದರ ಜತೆಗೆ ದೈವರಾತನನ್ನು ವಾರಣಾಸಿಯ ಜಮಖಂಡಿಕರ ಅವರ ಬಳಿಗೆ ಕಳಿಸಿದರು.

ವಾರಣಾಸಿಗೆ ದೈವರಾತನ ಆಗಮನ

ಶ್ರೀ ವಾಸುದೇವಾನಂದ ಟೇಂಬೆ ಸ್ವಾಮಿಯವರ ಆದೇಶದಂತೆ ಪ್ರದ್ಯುಮ್ನಾನಂದರು ದೈವರಾತನನ್ನು ಕರೆದುಕೊಂಡು ವಾರಣಾಸಿಗೆ ಬಂದರು. ಅವರಿಬ್ಬರೂ ಅಂದು ತಾರಕಮಠದಲ್ಲಿ ಉಳಿದು ಮರುದಿನ ಅಲ್ಲಿಂದ ಹೊರಟು ಬಿಂದುಮಾಧವ ಘಾಟಿಗೆ ಬಂದರು. ಇಲ್ಲಿ ಒಂದು ಔದುಂಬರ ವೃಕ್ಷದಡಿ ಶ್ರೀ

ವಾಸುದೇವಾನಂದ ಸ್ವಾಮಿಯವರು ಈ ಹಿಂದೆ ತಪಸ್ಸನ್ನಾಚರಿಸುತ್ತ ಅಲ್ಲಿಯೇ ಸಮೀಪ ಒಂದು ಕುಟೀರದಲ್ಲಿ ವಾಸವಾಗಿದ್ದರು. ಅಂದು ಅವರು ವಾಸವಾಗಿದ್ದ ಆ ಪವಿತ್ರ ಕುಟೀರವನ್ನು ಕೆಲವು ಭಕ್ತರು ಯಥಾಸ್ಥಿತಿಯಲ್ಲಿ ರಕ್ಷಿಸಿಕೊಂಡು ಬಂದಿದ್ದು ಈಗ ಅದರಲ್ಲಿ ಯಾರೂ ವಾಸಿಸುತ್ತಿರಲಿಲ್ಲ. ಅಂತೆಯೇ ವಾಸುದೇವಾನಂದರು ದೈವರಾತನಿಗೆ ಅದರಲ್ಲಿ ಉಳಿಯಲು ಸೂಚಿಸಿದರು. ಮಹಾಯೋಗಿವರ್ಯರೊಬ್ಬರು ತಪೋನಿರತರಾಗಿ ವಾಸಮಾಡಿದ ಜಾಗದಲ್ಲಿ ಉಳಿದುಕೊಳ್ಳುವ ಯೋಗವು ದೈವರಾತನಿಗೆ ಒದಗಿಬಂದಿತ್ತು. ಆ ಸ್ಥಳದ ಸ್ಪರ್ಶಮಾತ್ರದಿಂದಲೇ ಭಾವುಕನಾದ ಆತ "ನಾನು ಇಲ್ಲಿಯೇ ವಾಸಿಸುತ್ತೇನೆ" ಎಂದನು.

ದೈವರಾತನ ವಾಸ್ತವ್ಯದ ವ್ಯವಸ್ಥೆಯು ಪೂರ್ಣಗೊಳ್ಳುತ್ತಲೆ ಪ್ರದ್ಯುಮ್ನಾನಂದರು ಆತನನ್ನು ಬಾಬಾ ಸಾಹೇಬ ಜಮುಖಂಡಿಕರರ ಬಳಿಗೆ ಕರೆದೊಯ್ದು ವಾಸುದೇವಾನಂದ ಟೇಂಬೆ ಸ್ವಾಮಿಯವರ ಸಂದೇಶವನ್ನು ಅವರಿಗೆ ಅರುಹಿದರು. ಅದನ್ನು ಕೇಳಿ ಬಹು ಸಂತೋಷದಿಂದ ಅವರು ವಿನೀತರಾಗಿ "ಇದು ಆ ಪರಮ ಪೂಜ್ಯರು ನನಗೆ ಕರುಣಿಸಿದ ಭಾಗ್ಯವೆಂದು ತಿಳಿಯುತ್ತೇನೆ'' ಎಂದರು. ಅನಂತರ ಪ್ರದ್ಯುಮ್ನಾನಂದರು ದೈವರಾತನೊಂದಿಗೆ ಅದೇ ವಾಡೆಯಲ್ಲಿರುವ ಇನ್ನೋರ್ವ ಮಹಾನ್ ವಿದ್ವಾಂಸರಾದ ದ್ರಾವಿಡ ಸುಬ್ರಹ್ಮಣ್ಯ ಶಾಸ್ತ್ರಿ ಎಂಬವರಲ್ಲಿಗೆ ಹೋದರು. ಅವರು ವೈದಿಕರೂ ಅಗ್ನಿಹೋತ್ರಿಗಳೂ ಆಗಿದ್ದರಲ್ಲದೇ ನ್ಯಾಯ ಹಾಗೂ ವೇದಾಂತ ಶಾಸ್ತ್ರದ ಅಧ್ಯಾಪಕರಾಗಿದ್ದರು. ಮೂಲತಃ ಇವರು ಮದ್ರಾಸಿನವರಾಗಿದ್ದು ಇವರಿಗೆ "ಭಾಮತಿ ಸುಬ್ರಹ್ಮಣ್ಯ ಶಾಸ್ತ್ರಿಗಳು" ಎಂಬ ಬಿರುದಿತ್ತು. ವಾಸುದೇವಾನಂದರ ಸಂದೇಶವನ್ನು ತಿಳಿಸಿದಾಗ ಇವರು ಕೂಡ "ಆ ಮಹಾಪುರುಷರ ಮಾತನ್ನು ನಾನು ಶಿರದಮೇಲೆ ಹೊತ್ತು ಪಾಲಿಸುತ್ತೇನೆ. ಯಾರೊಂದಿಗೂ ಏನನ್ನೂ ಬಯಸದ ನಿರಪೇಕ್ಷರಾದ ಆ ಮಹಾನ್ ಯೋಗಿವರ್ಯರ ದಯೆ ಈ ರೀತಿಯಾಗಿ ನನ್ನ ಮೇಲಾಗಿರುವದಕ್ಕೆ ನಾನಿಂದು ಧನ್ಯನಾದೆನು'' ಎಂದು ಭಾವಪರವಶರಾಗಿ ಉದ್ಗರಿಸಿದರು. ಆದರೆ ವಯೋವೃದ್ಧರಾದ ಕಾರಣ ಅವರಲ್ಲಿ ಪಾಠ ಪ್ರವಚನಗಳು ನಡೆಯುತ್ತಿರಲಿಲ್ಲ. ಹೀಗೆ ತಾನು ಬಂದ ಕಾರ್ಯ ಮುಗಿಸಿದ ಪ್ರದ್ಯುಮ್ನಾನಂದರು ಎರಡು ದಿನ ತಾರಕಮಠದಲ್ಲಿ ಉಳಿದು ನಂತರ ಬ್ರಹ್ಮಾವರ್ತಕ್ಕೆ ಹೋದರು.

ಪ್ರತಿ ದಿನ ಪ್ರಾತಃಕಾಲ ದೈವರಾತನು ಗಂಗಾನದಿಯಲ್ಲಿ ಸ್ನಾನಮಾಡಿ ನಿತ್ಯ ನೈಮಿತ್ತಿಕ ಜಪ, ತಪ, ಧ್ಯಾನ, ಅನುಷ್ಠಾನ ಮುಗಿಸಿ ಬಾಬಾ ಸಾಹೇಬ ಜಮುಖಂಡಿಕರರ ಬಳಿಗೆ ಹೋಗಿ ಅಲ್ಲಿ ನಡೆಯುವ ಪಾಣಿನಿ ಸಂಸ್ಕೃತ ವ್ಯಾಕರಣದ ಕೌಮುದಿ ಪಾಠವನ್ನು ಆಲಿಸಿ ಕುಟೀರಕ್ಕೆ ಮರಳುತ್ತಿದ್ದನು. ಮಧ್ಯಾಹ್ನ ಮಧುಕರಿಮಾಡಿ ತಂದ ಅನ್ನವನ್ನು ಗಂಗಾತೀರದ ಒಂದಕಡೆ ಸಮತಟ್ಟಾದ ಶಿಲೆಯನ್ನು ತೊಳೆದು ಅದರ ಮೇಲಿಟ್ಟು ಸ್ವಲ್ಪ ಭಾಗವನ್ನು ಮೀನಗಳಿಗೂ ಮತ್ತೆ ಸ್ವಲ್ಪ ಭಾಗವನ್ನು ಅಲ್ಲಿ ಸಂಚರಿಸುವ ಗೋವುಗಳಿಗೂ ನೀಡಿ ಉಳಿದ ಭಾಗವನ್ನು ತಾನು ಸೇವಿಸುತ್ತಿದ್ದನು. ಸಂಧ್ಯಾಕಾಲ ರಾಮಘಾಟಿನ ಚೌಂಡೇಸ್ವಾಮಿ ಮಹಾರಾಜರ ಬಾಲಕರಾಮ ಮಂದಿರಕ್ಕೆ ಹೋಗಿ ಭಜನೆಯನ್ನು ಮಾಡುತ್ತಿದ್ದನು. ಆ ಸಮಯಕ್ಕೆ ಅಲ್ಲಿ ಚೌಂಡೇ ಸ್ವಾಮಿಯವರ ಶಿಷ್ಯರಾದ ಗೋಪಾಳ ಬುವಾ ಬ್ರಹ್ಮಚಾರಿ ಮತ್ತು ಇತರರು ಇರುತ್ತಿದ್ದರು. ಈ ರೀತಿಯಾಗಿ ದೈವರಾತನ ದಿನಚರಿ ಸಾಗುತ್ತಿರುವಾಗ ಕಾಶಿಯ ಸುಪ್ರಸಿದ್ಧ ವ್ಯಾಕರಣಾಚಾರ್ಯರಾದ ಮಹಾ ಮಹೋಪಾಧ್ಯಾಯ ಪಂಡಿತ ಕೇಶವ ಶಾಸ್ತ್ರಿ ಮರಾಠೆಯವರು ದಿನಾಲು ಮುಂಜಾನೆ ಪಂಚಗಂಗಾ ಘಾಟದಲ್ಲಿ ಗಂಗಾಸ್ನಾನ ಮಾಡಿ ದೈವರಾತನ ಕುಟೀರದ ಮುಂದುಗಡೆ ಸ್ವಲ್ಪ ದೂರದಲ್ಲಿ ಸುಮಾರು ಮೂರು ಗಂಟೆಗಳ ಕಾಲ, ಜಪ, ತಪ, ಅನುಷ್ಠಾನ ಗೈದು ನಂತರ

ಬ್ರಹ್ಮಘಾಟದಲ್ಲಿರುವ ತಮ್ಮ ಮನೆಗೆ ತೆರಳುತ್ತಿದ್ದರು. ಪ್ರತಿದಿನ ಪ್ರಾತಃಕಾಲ ಪಂಡಿತ ಕೇಶವಶಾಸ್ತ್ರಿಗಳು ಸ್ನಾನಮಾಡಿ ಅನುಷ್ಠಾನಕ್ಕೆ ಬರುವ ಮುನ್ನವೇ ಔದುಂಬರ ವೃಕ್ಷದ ಕೆಳಗೆ ಕುಳಿತು ಧ್ಯಾನಮಗ್ನನಾಗಿರುತ್ತಿದ್ದ ದೈವರಾತನನ್ನು ಕಂಡ ಅವರು "ಗೋಕರ್ಣೇಶ್ವರ" ಎಂದು ಆತನನ್ನು ಕರೆಯುತ್ತಿದ್ದರು.

ದುರ್ಗಾಘಾಟಿನ ತಾರಕಮಠದ ಸಮೀಪ ಪಡಣೀಸ್‌ವಾಡಾದಲ್ಲಿ ನಿತ್ಯಾನಂದ ಪಂಡಿತರೆಂಬ ಖ್ಯಾತವಿದ್ವಾಂಸರಿದ್ದರು. ವ್ಯಾಕರಣವೇ ಅಲ್ಲದೇ ಅನೇಕ ಶಾಸ್ತ್ರಗಳ ಅಧ್ಯಾಪನೆ ಮಾಡುತ್ತಿದ್ದ ಇವರು ನೇಪಾಳ ಗಡಿಭಾಗದ ದಾರ್ಜಿಲಿಂಗ ಸಮೀಪದ ಅಲಮೋಡಾ ಎಂಬ ಗ್ರಾಮದ ಕುಮಾವೂ ಬ್ರಾಹ್ಮಣರಾಗಿದ್ದರು. ದೈವರಾತನು ಆಗಾಗ ಇವರಲ್ಲಿಗೆ ಹೋಗಿ ಪಾಠ ನಡೆಯುತ್ತಿರುವಾಗ ಸ್ವಲ್ಪ ಹೊತ್ತು ಅಲ್ಲಿ ಕುಳಿತು ಮೌನವಾಗಿ ಆಲಿಸಿ ಬರುತ್ತಿದ್ದನು. ಇದೇ ರೀತಿ ದ್ರಾವಿಡ ಲಕ್ಷ್ಮಣ ಶಾಸ್ತ್ರಿ ಎಂಬ ಶ್ರೇಷ್ಠ ವಿದ್ವಾಂಸರು ನ್ಯಾಯ ಮತ್ತು ವೇದಾಂತದ ಅಧ್ಯಾಪನೆ ಮಾಡುತ್ತಿದ್ದು ಅವರಲ್ಲಿಗೂ ಹೋಗಿ ಸುಮ್ಮನೆ ಕೇಳಿಬರುವುದು ವಾಡಿಕೆಯಾಗಿತ್ತು. ಪಾಠಶಾಲೆಗಳಿಗೆ ಹೋಗುತ್ತಿದ್ದರೂ ಶಿಷ್ಯವೃತ್ತಿಯಿಂದ ಅಧ್ಯಯನ ಮಾಡದೇ ಕೇವಲ ಶ್ರವಣಮಾತ್ರದಿಂದ ವಿಷಯ ಗ್ರಹಣ ಮಾಡುತ್ತ ಸ್ವಲ್ಪ ಕಾಲ ವಾರಣಾಸಿಯಲ್ಲಿ ದೈವರಾತನ ದಿನಚರಿ ಸಾಗಿತು. ಸಂಸ್ಕೃತ ವ್ಯಾಕರಣ ಜತೆಯಲ್ಲಿ ನ್ಯಾಯ, ತರ್ಕ, ವೇದಾಂತ ಹಾಗೂ ಇನ್ನಿತರ ಶಾಸ್ತ್ರಗಳ ಸಾಮಾನ್ಯ ಪರಿಚಯವೂ ಆಯಿತು.

ಶಾಸ್ತ್ರ, ಪುರಾಣ ಇತ್ಯಾದಿ ಗ್ರಂಥಗಳ ಅವಲೋಕಿಸಿದಾಗ ಅವುಗಳಲ್ಲಿ ಹಲವು ವೈರುಧ್ಯಗಳು ಕಂಡುಬಂದವು. ದೇವರನ್ನು ಆಸೆ, ಆಮಿಷ, ಅಸೂಯೆಗಳಿಂದ ಕೂಡಿದ ಮಾನವನಂತೆಯೂ ಮಾನವರನ್ನು ದೇವರಂತೆ ಸ್ತುತಿಸಿ ಪೂಜಿಸುವ ಅತಿರೇಕವೂ ದೈವರಾತನಿಗೆ ಗೊಂದಲವುಂಟುಮಾಡಿದವು. ಇದರಿಂದಾಗಿ ಆತನಿಗೆ ನಿಜವಾದ ಜ್ಞಾನವನ್ನು ಗ್ರಂಥಗಳಿಂದ ಪಡೆಯಲು ಸಾಧ್ಯವಿಲ್ಲ. ಅದನ್ನು ಕೇವಲ ತಪಸ್ಸಿನಿಂದ ಮಾತ್ರ ಪಡೆಯಲು ಸಾಧ್ಯ ಎಂಬ ಸತ್ಯದ ಅರಿವಾಯಿತು. ಆದ್ದರಿಂದ ಆತ ನೇರವಾಗಿ ಗಂಗಾ ನದಿಗೆ ಹೋಗಿ ಬೊಗಸೆಯಲ್ಲಿ ಗಂಗಾಜಲವನ್ನು ಹಿಡಿದು "ಇನ್ನು ಮುಂದೆ ನಾನು ಯಾವ ಶಾಸ್ತ್ರಗ್ರಂಥವನ್ನೂ ಓದುವದಿಲ್ಲ; ತಪಸ್ಸಿನ ಮೂಲಕವೇ ಜ್ಞಾನವನ್ನು ಪಡೆಯುತ್ತೇನೆ" ಎಂದು ಶಪಥ ಮಾಡಿದನು.

ವೇದಗಳಲ್ಲೇ ಅತ್ಯಂತ ಪ್ರಾಚೀನವಾದ ಋಗ್ವೇದ ಕಾಲದಲ್ಲಿ ಅಮೂರ್ತ, ನಿರ್ಗುಣ, ನಿರಾಕಾರದ ಚೈತನ್ಯ ಶಕ್ತಿಯನ್ನು ಗ್ರಹಿಸಲು ದುಸ್ತರವಾದ ಕಾರಣ ಮೂರ್ತ ದೇವತೆಗಳ ನಾನಾ ರೂಪಗಳನ್ನು ಕಲ್ಪಿಸಲಾಯಿತು. ಆದಾಗ್ಯೂ ವಾಸ್ತವಿಕವಾಗಿ ಋಗ್ವೇದದಲ್ಲಿ "ಸೃಷ್ಟಿಯ ಪೂರ್ವದಲ್ಲಿ 'ಸತ್' ಒಂದೇ ಇತ್ತು. ಜಗತ್ ಸೃಷ್ಟಿಯ ನಂತರ ದೇವತೆಗಳು ಮತ್ತು ಇನ್ನಿತರ ಸೃಷ್ಟಿಯಾಯಿತು. ಎಂದು ಹೇಳಲಾಗಿದೆ. ಆರ್ಷ ಸಂಸ್ಕೃತಿಯ ಋಗ್ವೇದ ಕಾಲದ ಆ ದಿನಗಳಲ್ಲಿ ಜಾತಿ, ಮತ, ಪಂಥಗಳ ಪರಿಭೇದವಿರಲಿಲ್ಲ. ಮೂರ್ತಿ ಪೂಜೆಯಿರಲಿಲ್ಲ ಪಂಚಭೂತಗಳ ಸರಳ ಆರಾಧನೆಯಿತ್ತು. ಅಂದರೆ ಗಾಳಿ, ಬೆಳಕು, ನೀರು, ಭೂಮಿ, ಆಕಾಶ, ಗಿಡಮರಗಳು, ಹೀಗೆ ಎಲ್ಲವನ್ನು ಪೂಜನೀಯ ಭಾವದಲ್ಲಿ ದೇವರೆಂದು ಆರಾಧಿಸಿದರು. ಆದರೆ ಈ ಎಲ್ಲವುಗಳಲ್ಲಿ ಒಂದು ಶಕ್ತಿಯಿದೆ. ವಿಶ್ವಚೈತನ್ಯವಾಗಿ ಎಲ್ಲಡೆಯುಲ್ಲಿಯೂ ಅದು ತುಂಬಿರುವುದರಿಂದ ಅದನ್ನು 'ಬ್ರಹ್ಮ' ಎಂದು ಕರೆದರು. ಹೀಗೆ ಇತ್ಯಾದಿ ವಿಚಾರಗಳನ್ನು ಸಾರುವ ಆದರ್ಶ ಸಂಸ್ಕೃತಿಯ ತತ್ವಗಳು ಹಲವು ದೇವರುಗಳ ಶ್ರೇಷ್ಠ–ಕನಿಷ್ಠವೆಂಬ ತಾರ–ತಮ್ಯಗಳ ಕಲ್ಪನೆಯಲ್ಲಿ ಮುಸುಕಾಗಿ ಹೋದವು.

ಆರ್ಷ ಪರಂಪರೆಯಲ್ಲಿ ಬ್ರಾಹ್ಮಣನೂ ಋಷಿಯಾಗುತ್ತಾನೆ; ಬೇಡನೂ ಋಷಿಯಾಗುತ್ತಾನೆ. ಅಹಿಂಸಾ ತತ್ವದಿಂದ ಕೂಡಿದ ಆಹಾರ–ವಿಹಾರ, ಆಚಾರ– ವಿಚಾರ, ಸಾಕ್ಷಾತ್ಕಾರ ಇವು ಐದು ಜೀವನದ ಪಂಚ ಪಾರಮ್ಯಗಳು. ತನ್ನ ಮೂಲ ಸ್ವರೂಪವನ್ನು ಅರಿತು ಅದರಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ವಿಶ್ವ ಚೈತನ್ಯದಲ್ಲಿ ಲೀನವಾಗುವದೇ ತಪಸ್ಸು. ಅದೇ ಆತ್ಮ ಸಾಕ್ಷಾತ್ಕಾರ. ಈ ರೀತಿಯಾಗಿ ವೈದಿಕ ತತ್ವಗಳನ್ನು ವಾಸಿಷ್ಠ ಗಣಪತಿಮುನಿಗಳು ಹಿಂದೆ ಉಮಾಮಹೇಶ್ವರ ತಪೋವನದಲ್ಲಿರುವಾಗ ಒಂದು ದಿನ ಬೆಳದಿಂಗಳ ಇರುಳಿನಲ್ಲಿ ಸಮುದ್ರತೀರದ ಬಂಡೆಯ ಮೇಲೆ ಕುಳಿತು ಭೋಧಿಸುತ್ತಿದ್ದ ಆ ಮಾತುಗಳು ಈಗ ದೈವರಾತನ ಅಂತರಂಗದಲ್ಲಿ ಮಾರ್ದನಿಸತೊಡಗಿತು. ಅಂತೆಯೇ ಆರ್ಷ ಸಂಸ್ಕೃತಿಯ ಪುನರುತ್ಥಾನವೇ ತನ್ನ ಪರಮಗುರಿ ಎಂದು ಆತ ಭಾವಿಸಿದ. ನಾಗರಿಕ ನೆಲೆಯಾಗಿರುವ ವಾರಣಾಸಿಯನ್ನು ತೊರೆದು ವನವಾಸಿಯಾಗುವ ಹಂಬಲವನ್ನು ಹೊತ್ತು ಅಲ್ಲಿಂದ ಹೊರಟು ಗುಜರಾತಕ್ಕೆ ಬಂದು ನರ್ಮದಾ ನದಿ ತೀರದ ಗರುಡೇಶ್ವರ ತಲುಪಿದ.

ದೈವರಾತನು ಗರುಡೇಶ್ವರ ತಲುಪುವಷ್ಟರಲ್ಲಿ ಟೇಂಬೆ ಮಹರಾಜರು ಬಹುಧಾನ್ಯ ಸಂವತ್ಸರ ಆಷಾಢ ಶುದ್ಧ ಪ್ರತಿಪದೆಯ ದಿನ 23 ಜೂನ್ 1914 ಇಹಲೋಕಯಾತ್ರೆ ಮುಗಿಸಿದ್ದರು. ಅವರು ತಪೋನಿರತರಾಗಿದ್ದ ಪರ್ಣಕುಟಿಯಲ್ಲಿಯೇ ಸಮಾಧಿಯನ್ನು ಮಾಡಿದ್ದರು. ಆ ಸಮಯಕ್ಕೆ ದೈವರಾತನು ಅಲ್ಲಿಗೆ ತಲುಪಿದಾಗ ಪರಸೂಭಾಯಿಯವರು ಮತ್ತು ಸಬನೀಸ್ ಮುಂತಾದವರಿಗೆ ತುಂಬಾ ಸಂತೋಷವಾಯಿತು. ಮೂರು ದಿನಗಳ ಕಾಲ ಉತ್ಸವದಂತೆ ಸಮಾರಂಭ ನಡೆದು ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಸಮಾಧಿ ಸಮಾರಂಭ ಮುಗಿಯತ್ತಲೇ ದೈವರಾತನು ಗರುಡೇಶ್ವರದಿಂದ ಮಾತೃಗಯಾ – ಸಿದ್ಧಪುರ ಕ್ಷೇತ್ರಕ್ಕೆ ತೆರಳಿದನು.

ಸಿದ್ಧಪುರದಲ್ಲಿ ಸರಸ್ವತೀ ನದೀತೀರದಲ್ಲಿದ್ದ ಹಾಟಕೇಶ್ವರ ದೇವಾಲಯದ ಚಂದ್ರಶಾಲೆಯ ಸಂಕೀರ್ಣದಲ್ಲಿ ದೈವರಾತನು ವಾಸ್ತವ್ಯ ಮಾಡಿದನು. ಅಲ್ಲಿಯೇ ಪಕ್ಕದ ಇನ್ನೊಂದು ಕೊಠಡಿಯಲ್ಲಿ ಆತ್ಮಾನಂದ ಸರಸ್ವತಿ ಎಂಬ ಸಾಧಕರೊಬ್ಬರು ಉಳಿದುಕೊಂಡಿದ್ದರು. ಈ ಸಮಯಕ್ಕೆ ಅಲ್ಲಿ ಒಂದು ವೇದಸಭೆಯು ನಡೆಯಿತು. ಆಗ ಬಡೋದೆಯ ಸಂಸ್ಕೃತ ವಿದ್ಯಾಲಯದ ಅಧ್ಯಾಪಕರಾದ ಬದರೀನಾಥ ಶಾಸ್ತ್ರಿಯವರು ಮತ್ತು ವ್ಯಾಕರಣಾಚಾರ್ಯರಾದ ಮಾಣಿಕಲಾಲ ಶಾಸ್ತ್ರಿಯವರು ಹಾಗೂ ಕೆಲವು ವೈದಿಕ ವಿದ್ವಾಂಸರ ಪರಿಚಯವಾಯಿತು.

ಸಿದ್ಧಪುರದಿಂದ ಮುಂದೆ ಅಬೂಬೆಟ್ಟಕ್ಕೆ ಹೋಗಬೇಕೆಂದು ದೈವರಾತನು ಯೋಚಿಸುತ್ತ ಪ್ರಾತಃಕಾಲ ಸರಸ್ವತೀ ನದಿಯಲ್ಲಿ ಸ್ನಾನಮಾಡುತ್ತಿರುವಾಗ ಮಾಣಿಕಲಾಲ ಶಾಸ್ತ್ರಿಯವರು ಅಲ್ಲಿಗೆ ಬಂದರು. ದಯವಿಟ್ಟು ತಾವು ಚಾತುರ್ಮಾಸದ ಈ ಅವಧಿಯಲ್ಲಿ ಇಲ್ಲಿಯೇ ವಾಸ್ತವ್ಯ ಮಾಡಿ ನಮಗೆ ಬ್ರಹ್ಮಸೂತ್ರ ಭಾಷ್ಯದ ಪ್ರವಚನ ನೀಡಬೇಕೆಂದು ವಿನಂತಿಸಿದರು. ಅದಕ್ಕೆ ದೈವರಾತನು "ನಾನು ಸಣ್ಣವನು; ವಯಸ್ಸಿನಿಂದಲೂ ವಿದ್ಯೆಯಿಂದಲೂ ತಾವು ದೊಡ್ಡವರು. ನಾನು ಹೇಗೆ ತಾನೆ ನಿಮಗೆ ಪ್ರವಚನ ನೀಡಲು ಸಾಧ್ಯ?" ಎಂದನು. ಅದಕ್ಕೆ ಅವರು "ತಾವು ಟೇಂಬೆ ಮಹರಾಜರ ಶಿಷ್ಯರು. ಅವರಿಂದ ವೇದ, ವೇದಾಂತ, ಉಪನಿಷತ್‌ಗಳ ಶಿಕ್ಷಣವನ್ನು ಪಡೆದವರು. ಜ್ಞಾನಕ್ಕೆ ಹಿರಿಯರು, ಕಿರಿಯರು ಎಂಬ ಭೇದವಿಲ್ಲ. ನೀವು ವಯಸ್ಸಿನಿಂದ ಕಿರಿಯರಾಗಿದ್ದರೂ ಜ್ಞಾನದಿಂದ ನಮಗಿಂತ ಹಿರಿಯರು. ಆದ್ದರಿಂದ ದಯಮಾಡಿ ನಮ್ಮ

ಈ ಕೋರಿಕೆಯನ್ನು ನಿರಾಕರಿಸಬಾರದು" ಎನ್ನಲು ಅದಕ್ಕೆ ಒಪ್ಪಿದ ದೈವರಾತನು "ಬ್ರಹ್ಮಸೂತ್ರ ಶಂಕರಭಾಷ್ಯ ಅಧ್ಯಾಪನೆಯನ್ನು ನಾನು ಮಾಡುತ್ತೇನೆ. ಅದರಲ್ಲಿ ಏನಾದರೂ ಲೋಪ-ದೋಷಗಳು ಉಂಟಾಗಿದ್ದರೆ ಅದನ್ನು ತಾವು ತಿದ್ದಿಕೊಳ್ಳಬೇಕು." ಎಂದನು. ಅದಕ್ಕೆ ಒಪ್ಪಿದ ಅವರು "ಈ ನಾಲ್ಕು ತಿಂಗಳು ತಮ್ಮ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಎಲ್ಲ ವ್ಯವಸ್ಥೆಗಳನ್ನು ನಾವು ಮಾಡುತ್ತೇವೆ. ಆದ್ದರಿಂದ ತಮಗೆ ಬೇಕಾಗುವ ಪರಿಕರ ದ್ರವ್ಯಗಳ ಬಗೆಗೆ ತಿಳಿಸಬೇಕು. ಎಂದು ನುಡಿದರು. ಅದಕ್ಕೆ ದೈವರಾತನು "ನಾನು ಈ ಚಾತುರ್ಮಾಸ್ಯ ವ್ರತವನ್ನು ಕೇವಲ ಪಂಚಗವ್ಯ, ಬೇವಿನ ತೊಪ್ಪಲು ಮತ್ತು ಗೋಕ್ಷೀರ ಸೇವನೆಯಿಂದ ಆಚರಿಸಲು ನಿರ್ಧರಿಸಿದ್ದೇನೆ" ಎನ್ನಲು ತಮಗೆ ಬೇಕಾದ ಎಲ್ಲ ಪರಿಕರಗಳನ್ನು ನಾವು ಒದಗಿಸುತ್ತೇವೆ. ಎಂದ ಮಾಣಿಕಲಾಲರು ತಮ್ಮ ಪರಿಚಯದ ಸಿರಿವಂತರಾದ ಸದ್‍ಗೃಹಸ್ಥ ಮಘನಲಾಲ ಎಂಬವರಲ್ಲಿ ವಿಷಯ ತಿಳಿಸಿದಾಗ ಅವರು ದೈವರಾತನು ಆಚರಿಸುವ ಪಂಚಗವ್ಯ ವ್ರತಾಚರಣೆಗೆ ಬೇಕಾದ ಹಾಲು, ತುಪ್ಪ ಇತ್ಯಾದಿ ಪರಿಕರಗಳನ್ನು ಒದಗಿಸುವ ಏರ್ಪಾಡು ಮಾಡಿದರು.

ಆಷಾಢ ಶುದ್ಧ ಏಕಾದಶಿಯಂದು ಮುಂಜಾನೆ ದೈವರಾತನು ಪಂಚಗವ್ಯ ತಯಾರಿಸುತ್ತಿರುವಾಗ ಮಾತೃಗಯಾ-ಸಿದ್ಧಪುರದ ಸುತ್ತಮುತ್ತಲಿನ ಊರ ಪ್ರಮುಖರ ನಿಯೋಗವೊಂದು ಅಲ್ಲಿಗೆ ಬಂದಿತು. ಕಾರಣ, ಈಗಾಗಲೇ ದೈವರಾತನು ಚಾತುರ್ಮಾಸ ವ್ರತಾಚರಣೆಯನ್ನು ಕೈಗೊಳ್ಳುತ್ತಿರುವ ವಿಷಯ ಅಲ್ಲೆಲ್ಲ ಪ್ರಸಾರವಾಗಿತ್ತು. ಅಂತೆಯೇ ತಮ್ಮ ಕಷ್ಟಗಳನ್ನು ನಿವೇದಿಸಿ ಪರಿಹಾರ ಕಂಡುಕೊಳ್ಳಲು ಅವರು ಬಂದಿದ್ದು ದೈವರಾತನಿಗೆ ಕೈಮುಗಿದು "ನಮ್ಮಲ್ಲಿ ಮಳೆಯಿಲ್ಲದೆ ಹಾಹಾಕಾರವಾಗುತ್ತಿದೆ; ಆದ್ದರಿಂದ ಮಳೆಯಾಗುವಂತೆ ಏನಾದರೂ ಮಾರ್ಗೋಪಾಯ ಸೂಚಿಸಿ ಅನುಗ್ರಹಿಸಬೇಕೆಂದು ಕೇಳಿಕೊಂಡರು. ಅದಕ್ಕೆ ದೈವರಾತನು "ನಾನು ನಿಮಗೊಂದು ಮಾರ್ಗಸೂಚಿಸುತ್ತೇನೆ. ನಿಮ್ಮಲ್ಲಿಯ ಕೆಲವು ವೈದಿಕರು ನನ್ನಲ್ಲಿಗೆ ಬಂದರೆ ನಾನು ಅವರಿಗೆ ಒಂದು ವೇದಮಂತ್ರವನ್ನು ಉಪದೇಶಿಸುತ್ತೇನೆ. ಅಥವಾ ಬರೆದುಕೊಡುತ್ತೇನೆ. ಅದನ್ನು ಅವರು ನಿಷ್ಠೆಯಿಂದ ಜಪಿಸಿದರೆ ಮಳೆಯಾಗುವದು" ಎಂದಾಗ ಅದನ್ನು ಕೇಳಿ ಬಂದವರು ಏನೂ ಮಾತನಾಡದೆ ಸುಮ್ಮನೆ ಹೊರಟುಹೋದರು. ಆಗ ದೈವರಾತನು ತಾನೇ ಸ್ವತಃ ಅಲ್ಲಿಂದ ಹೊರಟು ಸರಸ್ವತೀ ನದಿಯಲ್ಲಿ ನಿಂತು ಇಪ್ಪತ್ನಾಲ್ಕು ತಾಸುಗಳಕಾಲ ಮಳೆಗಾಗಿ ಧ್ಯಾನಿಸುವ ಸಂಕಲ್ಪದೊಂದಿಗೆ,

ದಿವ್ಯಂ ಸುಪರ್ಣಂ ವಾಯಸಂ ಬೃಹಂತಂ
ಸರಸ್ವತಂ ಅವಸೇ ಜ್ಯೋಹವೀಮಿ ॥
ದೀರ್ಘತಮಾ ಮಾಮತೇಯಃ ಔಚಥ್ಯಃ ಋಷಿಃ । (ಋಗ್ವೇದ-1-164-52)

ಎಂಬ ಈ ಮಂತ್ರವನ್ನು ಮನಸ್ಸಿನಲ್ಲಿ ಜಪಿಸುತ್ತ ತಪೋನಿರತನಾದನು. ಸುತ್ತಲಿನ ಪರಿವೆಯಿಲ್ಲದೆ ಏಕಾಗ್ರಚಿತ್ತದಿಂದ ಹಸಿವೆ ನೀರಡಿಕೆಗಳನ್ನು ಮರೆತು ಧ್ಯಾನದಲ್ಲಿ ತಲ್ಲೀನನಾಗಿರಲು ಹಗಲು ಮಾಸುತ್ತ ಇರುಳ ಛಾಯೆ ಎಲ್ಲೆಲ್ಲು ಕವಿಯತೊಡಗಿತ್ತು. ಆದರೆ ದೈವರಾತನು ವಿಚಲಿತನಾಗಲಿಲ್ಲ. ಆತನ ಆರ್ಷಮನದ ನಿಷ್ಠೆ ಬದಲಾಗಲಿಲ್ಲ. ತಪಸ್ಸು ಇನ್ನೂ ತೀವ್ರವಾಗತೊಡಗಿತು. ಮಧ್ಯರಾತ್ರಿಯ ಎರಡನೇ ಯಾಮ ಸನ್ನಿಹಿತವಾಗುತ್ತಿತ್ತು. ಆಗ ಜೋರಾಗಿ ಮಳೆ ಸುರಿಯಲು ಪ್ರಾರಂಭವಾಯಿತು. ಈಗಾಗಲೇ ದೈವರಾತನ ತಪಸ್ಸಿನಿಂದ ಪ್ರಭಾವಿತರಾಗಿದ್ದ ಜನರು ನದಿಯ ದಡದಮೇಲೆ ನೂರಾರು ಸಂಖ್ಯೆಯಲ್ಲಿ ಬಂದು ಸೇರಿದ್ದರು.

ನೀವು ಕೂಡಲೇ ನದಿಯ ದಡಕ್ಕೆ ಬರಬೇಕು. ಇಲ್ಲವಾದರೆ ನದಿಯು ರಭಸದಿಂದ ತುಂಬಿಹರಿಯುತ್ತ ನಿಮ್ಮನ್ನು ಸೆಳೆದೊಯ್ಯುವದು." ಎಂದು ಕೂಗಿ ಹೇಳುತ್ತಿದ್ದರು. ಆದರೆ ಅದಾಗಲೇ ಪ್ರಾರಂಭದಲ್ಲಿ ಇಪ್ಪತ್ನಾಲ್ಕು ತಾಸುಗಳ ಕಾಲ ನದಿಯಲ್ಲಿ ನಿಂತು ನಿರಂತರವಾಗಿ ಅನುಷ್ಠಾನಗೈಯುವ ದೃಢ ಸಂಕಲ್ಪ ಮಾಡಿಯಾಗಿತ್ತು. ಆದ್ದರಿಂದ ಜನರ ಯಾವ ಕೂಗಿಗೂ ಕಿವಿಗೊಡದೇ ಧೋ ಧೋ ಎಂದು ಎಡೆ ಬಿಡದೆ ಸುರಿಯುತ್ತಿರುವ ಮಳೆಯನ್ನು ಲೆಕ್ಕಿಸದೆ ನಿರ್ಭಯದಿಂದ ಮರುದಿನ ಸೂರ್ಯೋದಯದ ವರೆಗೆ ಜಪವನ್ನು ಮುಂದುವರಿಸಿ ಅನ್ನುಷ್ಠಾನ ಪೂರ್ಣಗೊಳಿಸಿದನು. ಊರಿನ ಜನರೆಲ್ಲ ಬಂದು ದೈವರಾತನನ್ನು ಅಭಿನಂದಿಸಿದರು. ಇದರಿಂದಾಗಿ ಅಲ್ಲಿಯ ಭೂಮಿಗೆ ಅವಶ್ಯವಿರುವಷ್ಟು ಮಳೆಯು ದಿನಾಲು ಸುರಿಯುವದಕ್ಕೆ ಪ್ರಾರಂಭವಾಯಿತು. ಹೀಗೆ ವರ್ಷಾಗಮನದ ಹರ್ಷಧ್ವಾನದೊಂದಿಗೆ ಚಾತುರ್ಮಾಸ್ಯದ ಪಂಚಗವ್ಯ ವ್ರತವು ಅಂದಿನಿಂದಲೇ ಪ್ರಾರಂಭವಾಯಿತು.

ಚಾತುರ್ಮಾಸವು ನಿಯಮಿತವಾಗಿ ಸಾಗುತ್ತಿರಲು ಮಾಣಿಕಲಾಲ ಶಾಸ್ತ್ರಿಯವರು ಈ ಮೊದಲು ಅಪೇಕ್ಷಿಸಿದಂತೆ ದೈವರಾತನು ಅವರಿಗೆ ಬ್ರಹ್ಮಸೂತ್ರ ಭಾಷ್ಯವನ್ನು ಪ್ರತಿದಿನ ಬೋಧಿಸುತ್ತಿದ್ದನು. ಹೀಗಿರುವಾಗ ಅಲ್ಲಿಯೇ ಸಮೀಪವಿರುವ ಸಾರಸ್ವತೇಶ್ವರ ದೇವಾಲಯದ ಪೂಜಾರಿಯಾದ ಮಹರಾಷ್ಟ್ರದ ಮೂಲದ ಅಮೃತಲಾಲ ಭಟ್ಟರು ಬಂದು ತನಗೆ ಶುಕ್ಲ ಯಜುರ್ವೇದ ಭಾಷ್ಯವನ್ನು ಕಲಿಸಬೇಕೆಂದು ವಿನಂತಿಸಿದರು.ಇವರು ಶುಕ್ಲ ಯಜುರ್ವೇದವನ್ನು ಚೆನ್ನಾಗಿ ಕಂಠಪಾಠ ಮಾಡಿದವರಾಗಿದ್ದು ಹಸ್ತ-ಸ್ವರ ಸಹಿತ ಅದನ್ನು ಪಠನಮಾಡುತ್ತಿದ್ದರು. ಅವರ ಕೋರಿಕೆಯಂತೆ ಶುಕ್ಲ ಯಜುರ್ವೇದ ಭಾಷ್ಯದ ಪಾಠವನ್ನು ಮಾಡುತ್ತ ಪ್ರತಿಯಾಗಿ ಅವರಿಂದ ಹಸ್ತ-ಸ್ವರಯುಕ್ತವಾಗಿ ಪಠನಮಾಡುವ ಕ್ರಮವನ್ನು ತಿಳಿದುಕೊಂಡರು. ಇದೇ ಸಮಯಕ್ಕೆ ಅಲ್ಲಿಯ ಸಂಸ್ಕೃತ ಕಾಲೇಜಿನ ಅಧ್ಯಾಪಕರಾಗಿದ್ದ ಭಾಷಾಲಾಲರಿಗೆ ಅವರ ಅಪೇಕ್ಷೆಯಂತೆ ಯೋಗಾಸನದ ಪ್ರಕ್ರಿಯೆಗಳನ್ನು ಕಲಿಸುತ್ತಿದ್ದನು.

ಅದೊಂದು ದಿನ ದೈವರಾತನು ಮುಂಜಾನೆ ಮಾಣಿಕಲಾಲ ಶಾಸ್ತ್ರಿಯವರಿಗೆ ಬ್ರಹ್ಮಸೂತ್ರ ಭಾಷ್ಯದ ಪಾಠಮಾಡುತ್ತಿದ್ದನು. ಆಗ ಪ್ರತಿದಿನ ನಿಯಮಿತವಾಗಿ ಪಂಚಗವ್ಯ ತಯಾರಿಸುವದಕ್ಕೆ ಹಾಲುತಂದುಕೊಡುತ್ತಿದ್ದ ವ್ಯಕ್ತಿಯು ಬಂದು ಅಲ್ಲಿಯೇ ಸಮೀಪ ದೈವರಾತನು ಹಾಲಿಗೆಂದು ಇರಿಸಿದ್ದ ಪಾತ್ರೆಯಲ್ಲಿ ಹಾಲು ಸುರಿದು ಹೊರಡುವಷ್ಟರಲ್ಲಿ ದೂರದಿಂದ ಅದನ್ನು ಗಮನಿಸಿದ ದೈವರಾತನಿಗೆ ಅಂದಿನ ಹಾಲು ಪರಿಶುದ್ಧವಾಗಿಲ್ಲ ಅನಿಸಿತು. ಅಂತೆಯೇ ಆತ ಹಾಲಿನವನಿಗೆ "ಈ ದಿನ ತಂದ ಹಾಲನ್ನು ನೀನು ಹಿಂದಕ್ಕೆ ಒಯ್ಯಬಹುದು." ಎಂದಾಗ ಆ ವ್ಯಕ್ತಿಯು "ಏಕೆ?" ಎಂದು ಕೇಳಲು "ಅದು ಶುದ್ಧ ಆಕಳ ಹಾಲಲ್ಲ; ಆದ್ದರಿಂದ ಪಂಚಗವ್ಯವನ್ನು ಅದರಿಂದ ತಯಾರಿಸುವುದು ಸಾಧ್ಯವಿಲ್ಲ." ಎನ್ನಲು ಆತ ಅದು ಶುದ್ಧ ಆಕಳ ಹಾಲು ಎಂತಲೇ ವಾದಿಸಿದ. ಆಗ ಮಾಣಿಕಲಾಲ ಶಾಸ್ತ್ರಿಗಳೂ ಅವನ ಪ್ರಾಮಾಣಿಕತೆಯನ್ನು ಪ್ರಶಂಸಿಸುತ್ತಾ ಆತ ಹಾಗೆ ಮಾಡಲಾರ ಎಂದು ಆ ವ್ಯಕ್ತಿಯನ್ನು ಸಮರ್ಥಿಸಿದರು. ಈಗ ದೈವರಾತನು ಹಾಲಿನವನ ಕಡೆಗೆ ದಿಟ್ಟಿಸಿ ನೋಡುತ್ತ "ನಾನೇನೋ ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ಹಾಲನ್ನು ಪಂಚಗವ್ಯಕ್ಕೆ ಉಪಯೋಗಿಸಿದರೆ ನಿನಗೂ ಒಳ್ಳೆಯದಾಗುವದಿಲ್ಲ." ಎಂದು ತಿಳಿಸಿ ಹೇಳಿದಾಗ ಆತ ತನ್ನ ತಪ್ಪನ್ನು ಒಪ್ಪಿಕೊಂಡು "ಇಂದು ಆಕಳ ಹಾಲು ಸ್ವಲ್ಪ ಕಡಿಮೆಯಿದ್ದ ಕಾರಣ ನನ್ನ ತಾಯಿಯು ಕುರಿಯ ಹಾಲನ್ನು ಸೇರಿಸಿದ್ದಾಳೆ. ತಪ್ಪಾಯಿತು ಕ್ಷಮಿಸಬೇಕು" ಎಂದು ಆ ಹಾಲನ್ನು

ಒಯ್ದು ಬೇರೆ ಶುದ್ಧ ಆಕಳ ಹಾಲನ್ನು ತಂದುಕೊಟ್ಟನು.

ಅರಬಲೇಶ್ವರದಲ್ಲಿ ತಪಶ್ಚರಣೆ

ಹೀಗೆ ಸಿದ್ಧಪುರದಲ್ಲಿ ಪಂಚಗವ್ಯ ವ್ರತಾನುಷ್ಠಾನ, ಅಧ್ಯಯನ, ಅಧ್ಯಾಪನಗಳಲ್ಲಿ ಎರಡು ಮಾಸಗಳು ಗತಿಸಿರಲು ದೈವರಾತನು ಜನವಾಸದಿಂದ ದೂರವಾಗಿ ಊರ ಹೊರಗೆ ಏಕಾಂತವಾಗಿ ಇರಲು ಯೋಚಿಸಿದನು. ಇದಕ್ಕಾಗಿ ಇಂಗಲಾಜಿ ಎಂಬ ದೇವಿಯ ಆವಾರದ ಮಾರ್ಗದಲ್ಲಿ ಸುಮಾರು ಎರಡು ಮೈಲಿ ದೂರವಿರುವ ಅರಬಳೇಶ್ವರ ಈಶ್ವರಧಾಮಕ್ಕೆ ತೆರಳಿದನು. ನೀರವದಲ್ಲಿ ಅದ್ದಿದಂತಿರುವ ಪ್ರಶಾಂತ ವಾತವರಣದ ಈ ಸ್ಥಳವು ಪ್ರಾಚೀ ಸರಸ್ವತಿಯ ದಕ್ಷಿಣ ದಿಕ್ಕಿನ ದಂಡೆಯ ಮೇಲೆ ಇದೆ. ನದಿಯಿಂದ ಸುಮಾರು ಆರು ಅಡಿಗಳಷ್ಟು ಎತ್ತರದಲ್ಲಿರುವ ಈ ಪ್ರದೇಶವು ಒಂದು ವಿಶಾಲವಾದ ಮರಳಿನ ದಿಬ್ಬವಾಗಿ ರೂಪಗೊಂಡಿದೆ. ಇಲ್ಲಿ ಅರಬಳೇಶ್ವರನ ಸಣ್ಣಗುಡಿಯಿದ್ದು ಅದರ ಮುಖ ಮಂಟಪ ಸುಮಾರು ಎರಡು ಅಂಕಣದಷ್ಟಿದ್ದು ಅದರಲ್ಲಿ ನಂದಿಯ ವಿಗ್ರಹವಿದೆ. ಹಾಗೂ ಗರ್ಭಗೃಹವು ಒಂದು ಅಂಕಣದಷ್ಟು ದೊಡ್ಡದಾಗಿದೆ. ಇಲ್ಲಿರುವ ಅರಬಳೇಶ್ವರ ಲಿಂಗವು ಶಿಲ್ಪಿಗಳು ಕಡೆದು ತಯಾರಿಸಿದಂತೆ ಕಾಣುವುದಿಲ್ಲ.ಈ ದೇವಾಲಯದ ಸುತ್ತಲಿನ ಸ್ಥಳವು ತಪವನ್ನು ಆಚರಿಸುವುದಕ್ಕೆ ಪ್ರಶಸ್ತವಾಗಿತ್ತು.

ದೈವರಾತನು ಮುಂದೆ ಎರಡು ತಿಂಗಳ ಕಾಲ ಅರಬಳೇಶ್ವರದಲ್ಲಿ ತಪಸ್ಸು ಗೈಯಲು ನಿರ್ಧರಿಸಿರುವದನ್ನು ತಿಳಿದ ಸಿದ್ಧಪುರದ ಜನರು ಅರಬಳೇಶ್ವರ ಮಂದಿರದ ಎಡಭಾಗದಲ್ಲಿ ಒಂದು ಪರ್ಣಕುಟಿಯನ್ನು ನಿರ್ಮಿಸಿಕೊಟ್ಟರು. ಆದರೆ ಪಂಚಗವ್ಯ ತಯಾರಿಸಲು ಬೇಕಾದ ಹಾಲನ್ನು ನಸುಕಿನಲ್ಲಿ ಅಲ್ಲಿಗೆ ತರುವದು ಕಷ್ಟವಾಗಿತ್ತು. ಇದನ್ನು ತಿಳಿದ ಸದ್‌ಗೃಹಸ್ಥರೊಬ್ಬರು ದೈವರಾತನ ಪಂಚಗವ್ಯ ವ್ರತಕ್ಕೆ ತೊಂದರೆಯಾಗದಂತೆ ಒಂದು ಸವತ್ಸಗೋವನ್ನು ಅರಬಲೇಶ್ವರಕ್ಕೆ ತಂದು ಸದಾ ಸೇವೆಗೆ ಸ್ವತಃ ಕಟಬದ್ಧರಾದರು. ಇದನ್ನು ತಿಳಿದ ಸಿದ್ಧಪುರದ ಕೆಲವು ಧನಿಕರು ಗೋವಿಗೆ ಬೇಕಾದ ಆಹಾರವನ್ನು ಪೂರೈಸುವ ವ್ಯವಸ್ಥೆ ಮಾಡಿದರು. ಮಾಣಿಕಲಾಲ ಶಾಸ್ತ್ರಿಗಳು ದಿನಾಲು ಪ್ರಾತಃಕಾಲ ಅರಬಲೇಶ್ವರಕ್ಕೆ ಬಂದು ಸ್ನಾನ, ಆಹ್ನಿಕಗಳನ್ನು ಮುಗಿಸಿ ಎರಡು ತಾಸುಗಳ ಪರ್ಯಂತ ಶುಕ್ಲ ಯಜುರ್ವೇದವನ್ನು ಪಠನಮಾಡುತ್ತಿದ್ದರು. ಅನಂತರ ತಾವೇ ಸ್ವಲ್ಪ ಅಡಿಗೆಮಡಿ ಮಧ್ಯಾಹ್ನದ ಊಟ ಮುಗಿಸಿ ಸಾಯಂಕಾಲದ ಸ್ನಾನ, ಸಂಧ್ಯಾದಿ ಆಹ್ನಿಕ ಮುಗಿಸಿ ಮಾತೃಗಯೆಗೆ ಮರಳುತ್ತಿದ್ದರು.

ಅರಬಲೇಶ್ವರಕ್ಕೆ ಬಂದ ನಂತರ ದೈವರಾತನಿಗೆ ತಪ್ಪಸ್ಸು ಆಚರಿಸುವದಕ್ಕೆ ಹೆಚ್ಚಿನ ಕಾಲಾವಕಾಶ ಲಭ್ಯವಾಯಿತು. ದಿನಾಲು ಬ್ರಾಹ್ಮೀ ಮಹೂರ್ತದಲ್ಲಿ ಎದ್ದು ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿ ಶುಚಿರ್ಭೂತನಾಗಿ ಸರಸ್ವತೀ ನದಿಯಲ್ಲಿ ಪೂರ್ವಾಭಿಮುಖವಾಗಿ ನಿಂತು ಸೂರ್ಯದೇವನಿಗೆ ಅರ್ಘ್ಯಪ್ರಧಾನ ಮಾಡಿ ಪರ್ಣಕುಟಿಗೆ ಬರುತ್ತಿದ್ದನು. ಅಲ್ಲಿ ವಿಧಿವತ್ತಾಗಿ ಪ್ರಮಾಣಬದ್ಧವಾಗಿ ಪಂಚಗವ್ಯ ತಯಾರಿಸಿ ಹವನಮಾಡಿ ಬಳಿಕ ಪಂಚಗವ್ಯ ಸೇವಿಸಿ ಋಗ್ವೇದ ಎರಡು ಅಧ್ಯಾಯ ಪಠನಮಾಡುತ್ತಿದ್ದನು.

ನಿರ್ಜನ ಪ್ರದೇಶವಾದ ಅರಬಲೇಶ್ವರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರುತ್ತಿದ್ದಿಲ್ಲ. ಸಿದ್ಧಪುರದ ವೈದಿಕರಾದ ಹರಗೋವಿಂದ ಘನಪಾಠಿಯವರು ಸೋಮವಾರದಂದು ಬೆಳಿಗ್ಗೆ ಪಾರದಲ್ಲಿ ಒಂದು ದಿನ ಮಾತ್ರ ಬಂದು ರುದ್ರಾಭಿಷೇಕ ಮಾಡಿ ಅನಂತರ ದೈವರಾತನನ್ನು ಸಂದರ್ಶಿಸಿ ಹೋಗುತ್ತಿದ್ದರು.

ಅರಬಲೇಶ್ವರ ಶಾಂತವಾತಾವರಣದ ಮೌನಮಡಿಲಿನಲ್ಲಿ ನಿರಾತಂಕವಾಗಿ ದೈವರಾತನ ತಪಸ್ಸು ಸಾಗುತ್ತಿತ್ತು. ಹೀಗಿರುವಾಗ ಅದೇ ಸ್ವಲ್ಪ ದಿನಗಳಲ್ಲಿ ದೈವರಾತನಿಗೆ ವೇದಕಾಲದಲ್ಲಿ ಋಷಿಗಳಿಂದ ವಿಶೇಷವಾಗಿ ಸ್ತುತಿಸಲ್ಪಟ್ಟ ವಾಗ್ದೇವಿಯು ಕುರಿತಾದ ಸರಸ್ವತೀ ಮಂತ್ರ "ಚತ್ವಾರಿ ವಾಕ್ ಪರಿಮಿತಾ ಪದಾನಿ" ಎಂಬ ಸೂಕ್ತದ ಮೇಲೆ ಸಂಸ್ಕೃತ ಭಾಷೆಯಲ್ಲಿ ಭಾಷ್ಯ ರಚಿಸಬೇಕೆಂಬ ಪ್ರೇರಣೆಯುಂಟಾಯಿತು. ಅಂತೆಯೇ ಬಹು ವಿಸ್ತೃತವಾಗಿ ಆಳವಾದ ತಾತ್ವಿಕ ಅರ್ಥವನ್ನೊಳಗೊಂಡ ಗ್ರಂಥವನ್ನು ರಚಿಸಲು ಪ್ರಾರಂಭಿಸಿದನು.

ದೈವರಾತನ ಅಲೌಕಿಕ ವ್ಯಕ್ತಿತ್ವನ್ನು ಅರಿತ ಹರಗೋವಿಂದ ಘನಪಾಠಿಯವರು ತನಗೆ ಅತ್ಯಂತ ಪರಿಚಿತರಾಗಿದ್ದ ಸೇಠಮಘನಲಾಲ ಎಂಬ ಮುಂಬಯಿಯ ವ್ಯಾಪಾರಿಗಳೊಬ್ಬರನ್ನು ಅವನಲ್ಲಿಗೆ ಕರೆತಂದರು. ಸಜ್ಜನ ವ್ಯಕ್ತಿತ್ವದವರೂ ದೈವಭಕ್ತರೂ ಆದ ಸೇಠಮಘನಲಾಲರು ದೈವರಾತನಿಗೆ ನಮಸ್ಕರಿಸಿ "ನಾನೊಬ್ಬ ಸಣ್ಣ ತಾಮ್ರದ ವ್ಯಾಪಾರಿ. ನನ್ನ ವ್ಯಾಪಾರದಲ್ಲಿ ಅಭಿವೃದ್ಧಿಯಾಗುವಂತೆ ಅನುಗ್ರಹಿಸಬೇಕು". ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನು ಮನ್ನಿಸಿ ದೈವರಾತನು ಅಶ್ವಿನಮಾಸದ ಕೃಷ್ಣ ಚತುರ್ದಶಿಯಂದು ಒಂದು ಯಂತ್ರವನ್ನು ಬರೆದು ಆ ವ್ಯಾಪಾರಿಗೆ ಕೊಟ್ಟು ಪ್ರಾಮಾಣಿಕತೆಯಿಂದ ವ್ಯಾಪಾರ ಮಾಡುವಂತೆ ಆದೇಶಿಸಿದನು. ಮುಂದೆ ಹಂತ ಹಂತವಾಗಿ ಬೇಗನೆ ಆತನ ವ್ಯಾಪಾರದಲ್ಲಿ ಅಭಿವೃದ್ಧಿಯುಂಟಾಯಿತು.

ಪ್ರಕೃತಿ ನಿಯಮಗಳಿಗೆ ಅನುರೂಪವಾದ ಋಷಿಜೀವನದ ಹಂಬಲ

ದೈವರಾತನು ಅರಬಲೇಶ್ವರದಲ್ಲಿ ವಾಸಿಸುತ್ತಿರುವಾಗ ಶಾರದಾಪೀಠವೆಂದು ಪ್ರಸಿದ್ಧವಾಗಿರುವ ದ್ವಾರಕಾಪೀಠದಲ್ಲಿ ಪೀಠಾಧಿಪತಿಗಳು ಇರಲಿಲ್ಲ. ಆದ್ದರಿಂದ ಬಡೋದೆಯ ರಾಜಸತ್ತೆಯ ಸಯ್ಯಾಜಿರಾವ್ ಮಹಾರಾಜರು ದ್ವಾರಕಾಪೀಠಕ್ಕೆ ಉತ್ತರಾಧಿಕಾರಿಯಾಗುವಂತೆ ದೈವರಾತನನ್ನು ಕೇಳಲು ಶಿವಶಂಕರ ಭಾಷಾಲಾಲರನ್ನು ಕಳುಹಿಸಿಕೊಟ್ಟಿದ್ದರು.

ದೈವರಾತನಲ್ಲಿ ಸ್ವಲ್ಪಕಾಲ ಯೋಗಾಭ್ಯಾಸ ಮಾಡಿದ್ದ ಶಿವಶಂಕರ ಭಾಷಾಲಾಲರಿಗೆ ಆತನ ವ್ಯಕ್ತಿತ್ವ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಅವರು ದ್ವಾರಕಾಪೀಠವನ್ನು ಅಲಂಕರಿಸಲು ದೈವರಾತನೇ ಯೋಗ್ಯ ವ್ಯಕ್ತಿ ಎಂದು ಮಹಾರಾಜರಿಗೆ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರು. ಅಲ್ಲದೇ ಅಂದಿನ ದಿನಗಳಲ್ಲಿ ಅತಿದೊಡ್ಡ ಸಂಸ್ಕೃತ ಗ್ರಂಥಾಲಯದ ಉನ್ನತಾಧಿಕಾರಿಗಳಾದ ವಿನತೋಷ ಭಟ್ಟಾಚಾರ್ಯರೆಂಬ ಮಹನೀಯರಿಂದ ದೈವರಾತನ ಆಧ್ಯಾತ್ಮಿಕ ಹಾಗೂ ವಿದ್ವತ್ಪೂರ್ಣ ವ್ಯಕ್ತಿತ್ವನ್ನು ಅರಿತು ಆತನನ್ನೇ ದ್ವಾರಕಾಪೀಠಾಧಿಪತಿಗಳನ್ನಾಗಿ ಮಾಡಲು ನಿರ್ಣಯಿಸಿದರು. ಈ ಮಧ್ಯೆ ಬಡೋದೆಯ ಮಹರಾಜರಿಗೂ ಗುಜರಾತದ ಜನತೆಗೂ ದ್ವಾರಕಾಪೀಠದ ವಿಷಯದಲ್ಲಿ ಪರಸ್ಪರ ಭಿನ್ನಾಭಿಪ್ರಾಯವಿತ್ತು.

ಶಿವಶಂಕರ ಭಾಷಾಲಾಲರು ದೈವರಾತನಿಗೆ ನಮಸ್ಕರಿಸುತ್ತ "ನಾನು ಒಂದು ವಿಶೇಷವಾದ ಕಾರ್ಯನಿಮಿತ್ತವಾಗಿ ತಮ್ಮ ಸನ್ನಿಧಿಗೆ ಬಂದಿದ್ದೇನೆ. ನನ್ನನ್ನು ಬಡೋದೆಯ ಸಯ್ಯಾಜಿರಾವ್ ಮಹರಾಜರು ಕಳಿಸಿದ್ದಾರೆ." ಎಂದು ತಾವು ಬಂದ ಉದ್ದೇಶವನ್ನು ವಿವರಿಸಿದರು. ಇದನ್ನು ಕೇಳಿದ ದೈವರಾತನು

"ಮಹರಾಜರ ಈ ಪ್ರೇಮಾಗ್ರಹದ ವಿನಂತಿಯನ್ನು ಕೇಳಿ ನನಗೆ ಸಂತೋಷವಾಯಿತು. ಸನ್ಯಾಸವು ಎಲ್ಲಕ್ಕೂ ಒಂದು ಉಚ್ಚವಾದ ಸ್ಥಾನವು, ಅದು ತ್ಯಾಗದಿಂದ ತಾನಾಗಿ ಉದಿಸುವ ಒಂದು ಅಲೌಕಿಕವಾದ

ಬ್ರಹ್ಮಾತ್ಮ ನಿಷ್ಠೆಯು, ಅದು ಕೃತಿಸಾಧ್ಯವಲ್ಲ. ಆ ವೈರಾಗ್ಯದೇವತೆಯು ನನ್ನನ್ನು ಅನುಗ್ರಹಿಸುವದಾದರೆ ಅದಕ್ಕೆ ನನ್ನ ಶರೀರವನ್ನು ನನ್ನ ಆತ್ಮವನ್ನು ಸಮರ್ಪಿಸುತ್ತೇನೆ. ಈಗಲೇ ಬಂದು ಅನುಗ್ರಹಿಸಲಿ! ಹಾಗೆ ಅನುಗ್ರಹಿಸಿದರೆ ನಾನು ಕೃಷ್ಣಾಜಿನದ ಮೇಲೆ ಕುಳಿತ ಈ ಶಿಲಾತಲವೇ ಜಗದ್ಗುರು ಪೀಠವಾಗುವದು. ಆಗ ನನ್ನ ಸ್ವತಂತ್ರವಾದ ಈ ಜಗದ್ಗುರು ಪೀಠಕ್ಕಿಂತ ಪರತಂತ್ರವಾದ ದ್ವಾರಕಾಪೀಠವು ಹೆಚ್ಚಿನದಾಗಲಾರದು. ಹಾಗೆ ವೈರಾಗ್ಯದೇವತೆಯ ಅನುಗ್ರಹವಿಲ್ಲದೇ ನಾನು ಏರಿದ ಆ ಪೀಠವು ನನ್ನ ಅಧೋಗತಿಗೆ ಕಾರಣವಾಗಬಹುದು. ಸನ್ಯಾಸಿಯಾಗಿ ವೈಭವದಿಂದ ಪೀಠಾರೋಹಣ ಮಾಡುವದು, ಪಟ್ಟಾಭಿಷಿಕ್ತನಾಗಿ ಕಿರೀಟಧಾರಣೆ ಮಾಡುವದು, ಬಹುಪರಾಕಿನ ಜಯಕಾರ ಮಾಡಿಸಿಕೊಳ್ಳುವದು, ಚಿನ್ನದ ತಾಟುಗಳಲ್ಲಿ, ಬೆಳ್ಳಿಯ ಬಟ್ಟಲುಗಳಲ್ಲಿ ಭೋಜನ ಮಾಡುವುದು ಇವೆಲ್ಲ ನನ್ನ ವ್ಯಕ್ತಿತ್ವಕ್ಕೆ ವಿರುದ್ಧವಾದ ಆಚರಣೆಗಳಾಗಿವೆ. ಆದ್ದರಿಂದ ನಾನೆಂದಿಗೂ ಮಠಾಧೀಶನಾಗಲಾರೆ, ಧರ್ಮ, ಜಾತಿ, ಮತ, ಪಂಥಗಳ ತಾರ–ತಮ್ಯವಿಲ್ಲದ ನಿರಾಡಂಬರ ಸರಳ ಋಷಿ ಜೀವನವು ಮಾತ್ರವೇ ನನಗೆ ಆದರ್ಶವಾಗಿದೆ. ಹಕ್ಕಿ–ಪಕ್ಷಿಗಳ ಚಿಲಿಪಿಲಿನಾದದ ಹರ್ಷಧ್ವನಿಯೇ ಮಂಗಳಘೋಷ; ಅದೇ ಜಯಕಾರ, ಮಣ್ಣಿನ ನೆಲವೇ ದಿವ್ಯಪೀಠ, ಕರಟವೇ ಸುವರ್ಣಪಾತ್ರೆ ದರ್ಭಾದಿ ಹುಲ್ಲುಗರಿಗಳಿಂದ ತಯಾರಿಸಿದ ಆಸನ, ಚಾಪೆಗಳೇ ಸುಖಾಸನ, ಸುಖಶಯ್ಯೆಗಳು, ನಿಜವಾದ ವಿರಕ್ತಿಯಿಂದ ಸ್ವೀಕರಿಸಿದ ಸನ್ಯಾಸವು ಮಾತ್ರವೇ ಸಾರ್ಥವೆನಿಸುವುದು. ಹಾಗಲ್ಲವಾದರೆ ಅದು ಆತ್ಮವಂಚನೆಯಲ್ಲದೇ ಬೇರೇನೂ ಅಲ್ಲ" ಎಂದು ಸ್ಪಷ್ಟವಾಗಿ ತಿಳಿಸಿದನು. ಶಿವಶಂಕರಭಾಷಾಲಾಲರು ಇಷ್ಟಕ್ಕೆ ಸುಮ್ಮನಾಗದೇ "ನಾವು ನಿಮ್ಮ ತಂದೆಯವರಿಂದಲೇ ಅನುಮತಿಯನ್ನು ತರುತ್ತೇವೆ." ಎಂದು ನುಡಿದರು. ಅದಕ್ಕೆ ದೈವರಾತನು "ನೀವು ಕೇವಲ ಮಾತಿನಿಂದ ದಾನಪಡೆದು ಬರಬಹುದು; ಆದರೆ ನಾನು ಎಂದೋ ತಂದೆಯಿಂದ ಸ್ವತಂತ್ರನಾಗಿ ಮುಕ್ತ ಬಯಲಿಗೆ ಬಂದಿದ್ದೇನೆ." ಎಂದು ನಿಷ್ಠುರನಾಗಿ ನುಡಿದನು. ಇದನ್ನು ಕೇಳಿದ ನಂತರ ಭಾಷಾಲಾಲರು ನಿರಾಸೆಯಿಂದ ಬಡೋದೆಗೆ ತೆರಳಿದರು.

ದೈವರಾತನ ಆಸೆ ಆಕಾಂಕ್ಷೆಗಳು ಕೃತಕ ಸಂಕೀರ್ಣಗಳಾಗಿರಲಿಲ್ಲ. ಅವು ಪ್ರಾಚೀನ ಋಷಿಕುಲದ ಹಂಬಲಗಳ ಹೊತ್ತು ಸಮುದ್ಧರಣ ಪಥದತ್ತ ಸಾಗುವ ಆರ್ಷ ಸಂಸ್ಕೃತಿಯ ಪ್ರತೀಕಗಳಾಗಿದ್ದವು. ಸದಾ ಅವನ ಅಂತರಂಗದಲ್ಲಿ ಶುಷ್ಕ ಆಡಂಬರ ಬೆಡಗು ಬಿನ್ನಾಣಗಳು ಸೋಕದ ಸಹಜ ಸೌಂದರ್ಯದ ಆರಾಧನಾಭಾವವಿತ್ತು.

ಕಾರ್ತಿಕ ಪೌರ್ಣಿಮಿಯ ದಿವಸ ಪಂಚಗವ್ಯ ವ್ರತವನ್ನು ಮಂಗಳ ಮುಕ್ತಾಯದೊಂದಿಗೆ ಸಂಪನ್ನಗೊಳಿಸುವ ಕಾಲ ಸನ್ನಿಹಿತವಾಗಿತ್ತು. ಆ ದಿವಸ ಅರಬಲೇಶ್ವರದಲ್ಲಿ ಮಾಣಿಕಲಾಲಶಾಸ್ತ್ರಿಗಳು. ಹರಗೋವಿಂದ ಘನಪಾಠಿಗಳು, ಸೇಠ ಮಘನಲಾಲರು ಹಾಗೂ ಹಲವು ಜನ ವೈದಿಕ ವಿದ್ವಾಂಸರು ಉಪಸ್ಥಿತರಿದ್ದರು. ಪ್ರಾತಃಕಾಲ ರುದ್ರಾಭಿಷೇಕ ಪೂಜೆಯನ್ನು ಮಾಡಿ ಮಧ್ಯಾಹ್ನ ಪ್ರಸಾದ ಭೋಜನದೊಂದಿಗೆ ವ್ರತವನ್ನು ಸಾಂಗವಾಗಿ ಪೂರ್ಣಗೊಳಿಸಲಾಯಿತು. ಅನಂತರ ಎಲ್ಲರೂ ದೇವಸ್ಥಾನದ ಮುಂದಿನ ಅಂಗಳದಲ್ಲಿ ಕುಳಿತುಕೊಂಡರು.ಆಗ ಮಘನಲಾಲರು ದೈವರಾತನನ್ನು ಕುರಿತು "ತಾವು ನಮಗೆಲ್ಲ ಹಿತೋಪದೇಶದ ಮಾತುಗಳನ್ನಾಡಿ ಆಶೀರ್ವದಿಸಿ ತಮ್ಮ ಮುಂದಿನ ಧ್ಯೆಯ ಮತ್ತು ಉದ್ದೇಶಗಳನ್ನು ತಿಳಿಸಿದರೆ ನಾನು ಅದನ್ನು ನೆರವೇರಿಸಲು ಸನ್ನದ್ಧನಾಗಿದ್ದೇನೆ" ಎಂದರು. ಅಗ ದೈವರಾತನು ತನ್ನ ಮುಂದಿನ ಧ್ಯೇಯವನ್ನು ಈ ರೀತಿಯಾಗಿ ವಿವರಿಸಿದನು. "ಆರ್ಷ ಸಂಸ್ಕೃತಿಯ ಪುನರುಜ್ಜೀವನವೇ

ನನ್ನ ಜೀವನದ ಮುಖ್ಯ ಧ್ಯೇಯವಾಗಿದೆ. ಅದಕ್ಕಾಗಿ ಪ್ರಾಚೀನ ಋಷಿಕುಲದ ಶಿಕ್ಷಣ ಪದ್ಧತಿಯಂತೆ ಆಶ್ರಮ ನಿರ್ಮಿಸಿ ಅನುರೂಪವಾದ ವಿಧ್ಯಾಭ್ಯಾಸ ಕ್ರಮವನ್ನು ಸಾಕಾರಗೊಳಿಸುವ ಸಂಕಲ್ಪವನ್ನು ಈ ಅರಬಲೇಶ್ವರ ದಿವ್ಯ ಸನ್ನಿಧಾನದಲ್ಲಿ ಮಾಡುತ್ತೇನೆ. ಅದಕ್ಕೆ ಅಲ್ಲಿ ಸೇರಿದ್ದ ಜನರು ಅಂತಹ ಆಶ್ರಮದ ಸ್ಥಾಪನೆ ಇಲ್ಲಿಯೇ ಆಗಲಿ; ನಾವೆಲ್ಲರೂ ನಿಮ್ಮನ್ನು ಅನುಸರಿಸುತ್ತೇವೆ." ಎಂದರು. ಅದಕ್ಕೆ ದೈವರಾತನು "ಯೋಗಾಯೋಗದಿಂದ ಆಶ್ರಮವನ್ನು ಸ್ಥಾಪಿಸುವ ಅವಕಾಶವು ಎಲ್ಲಿ ಹೇಗೆ ಬರುವದೋ ಬರಲಿ; ನಾನು ಇಲ್ಲೇ ಈಗಲೇ ಸ್ಥಾಪಿಸುತ್ತೇನೆ ಎಂದು ನಿಶ್ಚಿತವಾಗಿ ಹೇಳಲಾರೆನು." ಎಂದನು.

ಅನಂತರ ಮಘನಲಾಲರು "ತಮಗೆ ಇಲ್ಲಿಂದ ಮುಂದೆ ಎಲ್ಲಿಗೆ ಹೋಗಬೇಕಾಗಿದೆ" ಎಂದು ವಿಚಾರಿಸಿದರು. "ನನ್ನ ಗುರುಗಳಾದ ವಾಸಿಷ್ಠ ಗಣಪತಿಮುನಿಗಳ ಸನ್ನಿಧಿಗೆ ಹೋಗಬೇಕೆಂದು ನಿಶ್ಚಯಿಸಿದ್ದೇನೆ." ದೈವರಾತನು ಮಾರ್ನುಡಿದನು. ಆಗ ಮಘನಲಾಲರು ಮುಂಬಯಿಗೆ ಬಂದು ತಮ್ಮ ಮನೆಯಲ್ಲಿ ಉಳಿದು ಆತಿಥ್ಯ ಸ್ವೀಕರಿಸಿ ಹೋಗಬೇಕೆಂದು ಆಗ್ರಹ ಪೂರ್ವಕವಾಗಿ ಆಮಂತ್ರಿಸಿದರು. ಅದಕ್ಕೆ ಸಮ್ಮತಿಸಿದ ದೈವರಾತನು ಮುಂಬಯಿಗೆ ಹೊರಡುವದಕ್ಕೆ ಅನುವಾದನು.

ಅರಬಲೇಶ್ವರದಲ್ಲಿ ಪಂಚಗವ್ಯ ವ್ರತಾಚರಣೆಯನ್ನು ಮುಗಿಸಿದ ದೈವರಾತನು ಸಿದ್ಧಪುರಕ್ಕೆ ಬಂದು ಅಲ್ಲಿ ಮೂರು ದಿನ ಉಳಿದು ನಾಲ್ಕನೇ ದಿವಸ ಸಿದ್ಧಪುರದಿಂದ ಹೊರಟು ಬಡೋದೆ ತಲುಪಿದನು. ಅಲ್ಲಿ ವಿನಿತೋಷ ಭಟ್ಟಾಚಾರ್ಯರನ್ನು ಭೇಟಿಯಾಗಿ ಮುಂಬಯಿಗೆ ಹೊರಟನು. ಮಾಣಿಕಲಾಲ ಶಾಸ್ತ್ರಿಯವರು ಮತ್ತು ಹರಗೋವಿಂದ ಘನಪಾಠಿಯವರು ಕೂಡ ದೈವರಾತನನ್ನು ಅನುಸರಿಸಿ ಮುಂಬಯಿಗೆ ಬಂದರು. ಮಘನಲಾಲರ ಮನೆ ವಿಶಾಲವಾಗಿತ್ತು. ದೈವರಾತನಿಂದ ಉಪಕೃತರಾಗಿದ್ದ ಮಘನಲಾಲರು ಅತ್ಯಂತ ಭಕ್ತಿಯಿಂದಲೂ ಆದರದಿಂದಲೂ ಅವರನ್ನ ಸತ್ಕರಿಸಿದರು.

ಮಘನಲಾಲರ ಮನೆಯ ನೆರೆಯಲ್ಲಿರುವ ಅತಿಥಿಗೃಹದಲ್ಲಿ ನೇಪಾಳದ ರಾಜಪುರೋಹಿತರ ಪುತ್ರರಾದ ಭೋಗೇಂದ್ರರಾಜ ಪಂಡಿತರು ಮೂತ್ರಕೋಶದ ಸಂಬಂಧವಾದ ಕಾಯಿಲೆಗೆ ಚಿಕಿತ್ಸೆ ಪಡೆಯುವದಕ್ಕಾಗಿ ಪತ್ನೀ ಸಹಿತರಾಗಿ ಮುಂಬಯಿಗೆ ಬಂದು ವಾಸವಾಗಿದ್ದರು. ಅವರ ಸೇವೆಗೆ ಪರಿಚಾರಕ ಶೇಷಕಾಂತ ಎಂಬವರೂ ಜತೆಗೆ ಬಂದಿದ್ದರು. ಹೀಗಿರಲು ಆಕಸ್ಮಿಕವಾಗಿ ಮಘನಲಾಲರಿಗೆ ಭೋಗೇಂದ್ರರಾಜರ ಪರಿಚಯವಾಗಿ ಅದು ಸ್ನೇಹಕ್ಕೆ ತಿರುಗಿ ಆತ್ಮೀಯತೆ ಬೆಳೆಯಿತು. ಅಂತೆಯೇ ಮಘನಲಾಲರು ದೈವರಾತನ ಪರಿಚಯವನ್ನು ಭೋಗೇಂದ್ರರಾಜರಿಗೆ ಮಾಡಿಕೊಟ್ಟಾಗ ಅವರು ಬಹು ವಿನೀತರಾಗಿ ನಮಸ್ಕರಿಸಿ ತಮ್ಮ ಕಷ್ಟವನ್ನು ದೈವರಾತನಲ್ಲಿ ನಿವೇದಿಸಿ ಕಾಯಿಲೆ ವಾಸಿಯಾಗುವಂತೆ ಅನುಗ್ರಹಿಸಬೇಕೆಂದು ಕೇಳಿಕೊಂಡರು.ಈಗಾಗಲೇ ಭೋಗೇಂದ್ರರಾಜರು ಮುಂಬಯಿಯ ಖ್ಯಾತ ವೈದ್ಯರಲ್ಲಿ ಚಿಕಿತ್ಸೆ ಪಡೆದಿದ್ದು ಅವರು ಬದುಕಿ ಉಳಿಯುವದೇ ಕಷ್ಟ; ಬದುಕಿ ಉಳಿದರೂ ಮಕ್ಕಳಾಗುವ ಸಂಭವನೀಯತೆಯಿಲ್ಲ. ಎಂದು ತಿಳಿಸಿದ್ದರು. ಶೇಷಕಾಂತರು ರಾಜಗುರು ತರ್ಕರಾಜ ಪಂಡಿತರಿಗೆ ಇವರೊಬ್ಬರೇ ಮಗನಾಗಿದ್ದು ಇವರಿಗೆ ಸಂತಾನವಾಗದಿದ್ದರೆ ರಾಜಗುರು ಮನೆತನದ ಪರಂಪರೆಯು ಇಲ್ಲಿಗೇ ಕೊನೆಯಾಗುವದು. ಆದ್ದರಿಂದ ತಾವು ಇವರನ್ನು ಅನುಗ್ರಹಿಸಿ ಸಂತತಿಯು ಉಳಿಯುವಂತೆ ಮಾಡಬೇಕೆಂದು ಪ್ರಾರ್ಥಿಸಿದರು. ಇದರಿಂದ ಕನಿಕರಗೊಂಡ ದೈವರಾತನು ಅವರಿಗೆ ಮೂತ್ರಕೋಶದ ತೊಂದರೆಯನ್ನು ವಾಸಿಮಾಡುವಂತಹ ವಜ್ರೋಲಿ ಮುದ್ರೆಯ ಗೋಪ್ಯವಾದ ಸೂಕ್ಷ್ಮ ಪ್ರಕ್ರಿಯೆಗಳನ್ನು ಕಲಿಸಿ ಕಷಾಯರೂಪದ ಔಷಧವನ್ನು

ಜನನೇಂದ್ರಿಯದ ಮೂಲಕ ಒಳಗೆ ತೆಗೆದುಕೊಂಡು ಹೊರಬಿಡುವ ವಿಧಾನವನ್ನು ತಿಳಿಸಿಕೊಟ್ಟರು. ಅವರ ಪತ್ನಿಯೂ ದೈವರಾತನಿಗೆ ನಮಸ್ಕರಿಸಿ ತಮಗೆ ಒದಗಿದ ಈ ಕಷ್ಟವನ್ನು ಪರಿಹರಿಸಬೇಕೆಂದು ನಮ್ರವಾಗಿ ಪ್ರಾರ್ಥಿಸಿದಳು. ಇದರಿಂದ ಮನಕರಗಿದ ದೈವರಾತನು ಅವಳಿಗೆ ಸಾಂತ್ವನ ಹೇಳಿ ಬಿಳಿಶಂಖಪುಷ್ಪದ ಎಲೆಗಳ ರಸವನ್ನು ಆಕಳ ಹಾಲಿನಲ್ಲಿ ಮುಟ್ಟಾಗಿ ಮಿಂದ ನಾಲ್ಕನೇ ದಿನದಿಂದ ಮೂರು ದಿನಗಳ ವರೆಗೆ ಸೇವಿಸುವಂತೆಯೂ ಆ ಮೂರು ದಿನಗಳು ಉಪ್ಪು, ಹುಳಿ, ಖಾರ, ಸೇವಿಸಬಾರದು ಎಂದು ತಿಳಿಸಿದನು. ಇದರಿಂದಾಗಿ ನೇಪಾಳದ ಭೋಗೇಂದ್ರರಾಜರ ಪರಿವಾರದಲ್ಲಿ ಬದುಕಿನ ಆಸೆಯ ಹೊಸಬೆಳಕು ಮೂಡಿತು. ರಾಜಪರಿವಾರದೊಡನೆ ದೈವರಾತನ ಸ್ನೇಹ ನಿಕಟವಾಯಿತು.

ಗಣಪತಿಮುನಿಗಳ ದಿವ್ಯ ಸನ್ನಿಧಾನದ ಹಂಬಲ

ಮುಂಬಯಿಯಿಂದ ದೈವರಾತನು ಗಣಪತಿಮುನಿಗಳನ್ನರಸುತ್ತ ಸಿಕಂದರಬಾದಿಗೆ ಬಂದನು. ಮದ್ರಾಸಿನ ಸಮೀಪವಿರುವ ಅರುಣಾಚಲದ ರಮಣಾಶ್ರಮದಲ್ಲಿ ಗಣಪತಿ ಮುನಿಗಳು ಇರಬಹುದೆಂಬ ನಿರೀಕ್ಷೆ ಅವನದಾಗಿತ್ತು. ಮಘನಲಾಲರು ದೈವರಾತನ ಮಾರ್ಗವ್ಯಯಕ್ಕೆ ಬೇಕಾದ ಹಣವನ್ನು ನೀಡಿದ್ದರು. ಮೆಹಬೂಬ ನಗರದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಆಯಿಲ ಸುಬ್ರಹ್ಮಣ್ಯ ಶಾಸ್ತ್ರಿಗಳು ವಾಸಿಷ್ಠ ಗಣಪತಿ ಮುನಿಗಳಿಗೆ ಆಪ್ತರಾಗಿದ್ದು ಅವರು ಗೋಕರ್ಣದಲ್ಲಿ ವಾಸಿಸುತ್ತಿರುವಾಗ ಅವರ ಪುತ್ರ ಮಹಾದೇವ ಮತ್ತು ಪುತ್ರಿ ವಜ್ರೇಶ್ವರಿ ಇವರನ್ನು ಗಣಪತಿಮುನಿಗಳ ಬಳಿಗೆ ತಲುಪಿಸುವದಕ್ಕಾಗಿ ಗೋಕರ್ಣಕ್ಕೆ ಬಂದಿದ್ದರು. ಆಗ ದೈವರಾತನಿಗೆ ಅವರ ಪರಿಚಯವಾಗಿತ್ತು.

ದೈವರಾತನು ಸುಬ್ರಹ್ಮಣ್ಯಶಾಸ್ತ್ರಿಗಳನ್ನು ವಾಸಿಷ್ಠಗಣಪತಿಮುನಿಗಳು ಎಲ್ಲಿರುವರೆಂದು ವಿಚಾರಿಸಲು ಅವರು ಓರಿಸ್ಸಾ ಪ್ರಾಂತದ ಮಂದಸಾದಲ್ಲಿ ಇರುವದಾಗಿ ತಿಳಿಸಿದರು. ಆದ್ದರಿಂದ ಅರುಣಾಚಲಕ್ಕೆ ಹೋಗುವ ವಿಚಾರವನ್ನು ಬಿಟ್ಟು ದೈವರಾತನು ಓರಿಸ್ಸಾಪ್ರಾಂತದ ಕಡೆಗೆ ಹೊರಟು ಗಣಪತಿಮುನಿಗಳ ಸಾನ್ನಿಧ್ಯವನ್ನು ತಲುಪಿದನು. ಆ ಸಮಯಕ್ಕೆ ಅಲ್ಲಿ ಗಣಪತಿಮುನಿಗಳೊಂದಿಗೆ ವಿಶಾಲಾಕ್ಷಮ್ಮನವರು ಮತ್ತು ಪುತ್ರ ಮಹದೇವ ಪುತ್ರಿ ವಜ್ರೇಶ್ವರಿ ಹಾಗೂ ಅವರ ಪರಿಚಾರಕ ವೆಂಕಟರಮಣ ಇವರೆಲ್ಲ ಇದ್ದರು.

ಓರಿಸ್ಸಾ ಪ್ರಾಂತದಲ್ಲಿ ಮಂದಸಾ ಎಂಬುದು ಒಂದು ಸಂಸ್ಥಾನವಾಗಿದೆ. ಅಲ್ಲಿಯ ಮಹರಾಜರು ವಾಸಿಷ್ಠಗಣಪತಿಮುನಿಗಳ ಶಿಷ್ಯರಾಗಿದ್ದು ಅವರನ್ನು ಅತ್ಯಂತ ಭಕ್ತಿಯಿಂದ ಪೂಜನೀಯವಾಗಿ ಆದರಿಸಿ, ಮಹರಾಜರು ಅವರಿಗೆ ಪ್ರತ್ಯೇಕವಾಗಿ ಸುಸಜ್ಜಿತವಾದ ವಿಶೇಷ ವಾಸ್ತವ್ಯದ ವ್ಯವಸ್ಥೆಯನ್ನು ಏರ್ಪಡಿಸಿದ್ದರು.

ಗಣಪತಿಮುನಿಗಳು ದಿನಾಲು ತಾವು ವಾಸವಾಗಿರುವ ಅತಿಥಿಗೃಹದಿಂದ ಅರಮನೆಗೆ ತೆರಳಿ ಆಧ್ಯಾತ್ಮಿಕ ವಿಷಯಗಳ ಮೇಲೆ ತೆಲಗುಭಾಷೆಯಲ್ಲಿ ಉಪನ್ಯಾಸ ಮಾಡುತ್ತಿದ್ದರು. ಗುರುಗಳ ಅನುಸರಿಸಿ ದೈವರಾತನೂ ಅರಮನೆಗೆ ಹೋಗುತ್ತಿದ್ದು ಅವರು ಉಪನ್ಯಾಸ ಮಾಡುತ್ತಿರುವ ಸಮಯ ಅವರ ಹಿಂಭಾಗದಲ್ಲಿ ಕುಳಿತುಕೊಳ್ಳುತ್ತಿದ್ದ. ಹೀಗೆ ಮೂರು ದಿನಗಳು ಕಳೆದಾಗ ಮಹರಾಜರು ಗಣಪತಿ ಮುನಿಗಳಲ್ಲಿ ದೈವರಾತನ ಕುರಿತು ಕುತೂಹಲದಿಂದ ವಿಚಾರಿಸಿದರು. ಆಗ ಅವರು "ಇವನು ನನ್ನ ಅಂತೇವಾಸಿ; ತಪಃಶಿಷ್ಯ ದೈವರಾತ" ಎಂದು ಆತನ ಪರಿಚಯವನ್ನು ಮಹರಾಜರಿಗೆ ವಿವರಿಸಿದರು. ಆಗ ಮಹರಾಜರು "ಹಾಗಾದರೆ ನಾಳೆ ದ್ವಾದಶಿಯ ಪಾರಣೆಯಿದೆ. ಅವನನ್ನು ನಮ್ಮಲ್ಲಿಗೆ ಕಳುಹಿಸಬೇಕು" ಎಂದು ವಿನಂತಿಸಿದರು.

'ಪಾರಣೆ' ಎಂದರೆ ಏಕಾದಶಿ ಅಥವಾ ಯಾವುದೇ ವ್ರತೋಪವಾಸದ ನಂತರ ಕೈಗೊಳ್ಳುವ ಪ್ರಸಾದರೂಪದ ಸಂತರ್ಪಣೆ. ಉಪವಾಸ ವ್ರತದ ಆಚರಣೆಯನ್ನು ಪೂರ್ಣಗೊಳಿಸಿ ತೆಗೆದುಕೊಳ್ಳುವ ಆಹಾರ. ಇದಕ್ಕಾಗಿ ಮಹರಾಜರು ದೈವರಾತನಿಗೆ ವಿಶೇಷವಾದ ಆಮಂತ್ರಣ ನೀಡಿದರು.

ಮರುದಿನ ದ್ವಾದಶಿಯಂದು ಮಹರಾಜರು ಒಬ್ಬ ರಾಜಸೇವಕನನ್ನು ಗಣಪತಿಮುನಿಗಳು ತಂಗಿರುವ ಅತಿಥಿಗೃಹಕ್ಕೆ ದೈವರಾತನ ಕರೆತರುವುದಕ್ಕೆ ಕಳಿಸಿದರು. ಆಗ ಗಣಪತಿಮುನಿಗಳ ಆದೇಶದಂತೆ ದೈವರಾತನು ರಾಜಸೇವಕನ ಜತೆ ನಡೆನು. ಅರಮನೆಯ ಒಳಾಂಗಣವನ್ನು ಪ್ರವೇಶಿಸಿದಾಗ ಅಲ್ಲಿಯ ದೃಶ್ಯವು ಅವನಿಗೆ ಅಚ್ಚರಿಯುಂಟು ಮಾಡಿತು. ಪಂಜರದಂತಿರುವ ಕೆಲವು ಕೊಠಡಿಗಳಲ್ಲಿ ಹುಲಿಗಳೂ ಅದರ ಆಚೆಗೆ ಇನ್ನೊಂದು ಪ್ರತ್ಯೇಕವಾದ ಆವರಣದಲ್ಲಿ ಜಿಂಕೆ, ಸಾರಂಗ, ಮೊದಲಾದ ಪ್ರಾಣಿಗಳೂ ತಿರುಗಾಡಿಕೊಂಡಿದ್ದವು. ಆಗ ಅನಿರೀಕ್ಷಿತವಾಗಿ ಸಾರಂಗವೊಂದು ಓಡಿಬಂದು ದೈವರಾತನ ಹೊಟ್ಟೆಗೆ ಕೋಡಿನಿಂದ ಇರಿಯುವದಕ್ಕೆ ಮುಂದಾಯಿತು. ಆಗ ಆತ ಅದರ ಎರಡೂ ಕೊಂಬಗಳನ್ನು ಗಟ್ಟಿಯಾಗಿ ಹಿಡಿದು ಹಿಂದಕ್ಕೆ ತಳ್ಳಿದನು. ಇದರಿಂದ ಸಿಟ್ಟೆಗೆದ್ದ ಸಾರಂಗವು ಪುನಃ ದೈವರಾತನನ್ನು ನಾಲ್ಕೈದು ಅಡಿ ಹಿಂದಕ್ಕೆ ತಳ್ಳಿತು. ಹೀಗೆ ದೈವರಾತನಿಗೂ ಸಾರಂಗಕ್ಕೂ ನಡುವೆ ಒಂದು ಕದನವೇ ನಡೆಯಿತು. ಈಗ ಆತ ಸಾರಂಗದ ಕೊಂಬಗಳನ್ನು ಬಿಡದೆ ಹಿಡಿದುಕೊಂಡು ಗೋಡೆಯ ಮೂಲೆಗೆ ತಳ್ಳಿ ಒತ್ತಿ ಹಿಡಿದು ನಿಲ್ಲಿಸಿದನು. ಈ ಸೆಣಸಾಟದ ಗಲಭೆಯನ್ನರಿತ ಮಹರಾಜರು ಮಹಡಿಯಲ್ಲಿದ್ದವರು ಬಾಲ್ಕನಿಗೆ ಬಂದು ಕೆಳಗಿನ ದೃಶ್ಯ ಕಂಡು ಕೂಡಲೇ ಸಾರಂಗವನ್ನು ಸೇವಕರಿಂದ ಬಂಧಿಸಿ ದೈವರಾತನನ್ನು ಅಪಾಯದಿಂದ ಪಾರುಮಾಡಿದರು .ಅನಂತರ ಈ ಘಟನೆಗಾಗಿ ವಿಷಾದ ವ್ಯಕ್ತಪಡಿಸಿದ ಅವರು ದೈವರಾತನನ್ನು ಆದರದಿಂದ ಸ್ವಾಗತಿಸಿ ಉಚಿತ ವ್ಯಾಘ್ರಾಸನವಿತ್ತು ಕುಳ್ಳಿರಿಸಿ, ತಾವೂ ಒಂದು ವ್ಯಾಘ್ರಾಸನದ ಮೇಲೆ ಕುಳಿತು ಯೋಗಶಾಸ್ತ್ರಕ್ಕೆ ಸಂಬಂಧಪಟ್ಟ ಆಸನ, ಪ್ರಾಣಾಯಾಮ, ಸಮಾಧಿ, ಇವುಗಳಲ್ಲಿ ಕೆಲವು ವಿಶಿಷ್ಟ ಕ್ರಿಯೆಗಳೆನಿಸಿದ ಖೇಚರಿಮುದ್ರಾ, ವಜ್ರೋಲಿಮುದ್ರಾ ಮುಂತಾದವುಗಳ ಸೂಕ್ಷ್ಮ ಪರಿಣಾಮಗಳ ಕುರಿತು ಪ್ರಶ್ನಿಸಿ ತಮ್ಮ ಸಂದೇಹಗಳಿಗೆ ಸಮಾಧಾನಕರವಾದ ಉತ್ತರ ಪಡೆದು ಸಂತೋಷಪಟ್ಟರು. ಅನಂತರ ಮಹರಾಜರು ಕುತೂಹಲಕಾರಿಯಾದ ತಮ್ಮ ಬೇಟೆಯ ಅನುಭವಗಳನ್ನು ದೈವರಾತನಿಗೆ ಹೇಳಿದರು. ಹಾಗೆ ಬೇಟೆಯಾಡಿದ ದೊಡ್ಡ ಹುಲಿಯೊಂದರ ತೊಗಲನ್ನು ಇಡಿಯದಾಗಿ ತೆಗೆದು ಜೀವಂತ ಹುಲಿಯೋ ಎಂದು ತೋರುವಂತೆ ಸಿದ್ಧಪಡಿಸಿದ ಹುಲಿಯ ಪ್ರತಿಕೃತಿಯನ್ನು ತೋರಿಸಿದರು. ತಲೆ ಹಾಗೂ ನಾಲ್ಕು ಕಾಲುಗಳು ಉಗುರು ಸಹಿತವಾಗಿರುವ ಹುಲಿಯ ಚರ್ಮವೊಂದನ್ನು ದೈವರಾತನಿಗೆ ನೀಡಿ ಯಥೋಚಿತವಾಗಿ ಸತ್ಕರಿಸಿದರು.

ದೈವರಾತನು ಮಂದಸಾಕ್ಕೆ ಬರುತ್ತಿದ್ದಂತೆಯೇ ಗುರು ಶುಶ್ರೂಷೆ ಪರಿಚರ್ಯೆಗೆ ಅನುವಾಗಿ ದೈನಂದಿನ ಕಾಫೀ, ಉಪಹಾರ, ಊಟ, ಇತ್ಯಾದಿ ಅಡಿಗೆ ಕೆಲಸಗಳನ್ನು ನಿರ್ವಹಿಸುತ್ತ ಗುರುಸೇವೆಯಲ್ಲಿ ತತ್ಪರನಾದನು.

ಮಂದಸಾ ವಾಸ್ತವ್ಯದ ಸುಮಾರು ಎರಡೂವರೆ ಮಾಸ ಕಳೆದಿರಲು ಆಗ ಮಹಾಶಿವರಾತ್ರಿ ಸನ್ನಿಹಿತವಾಯಿತು. ಮಂದಾಸದಿಂದ ಹೆಚ್ಚು ಕಡಿಮೆ ಹತ್ತು ಮೈಲಿಗಳ ಅಂತರದಲ್ಲಿ ಸಮುದ್ರ ಮಟ್ಟದಿಂದ ಐದು ಸಾವಿರ ಅಡಿಗಳಷ್ಟು ಎತ್ತರದಲ್ಲಿ ಮಹೇಂದ್ರಗಿರಿ ಎಂಬ ಈಶ್ವರ ಸನ್ನಿಧಾನವೊಂದಿದೆ. ಅಲ್ಲಿ ಪ್ರತಿವರ್ಷ ಮಹಾಶಿವರಾತ್ರಿ ಜಾತ್ರೆಯು ನಡೆಯುತ್ತಿದ್ದು ಸುತ್ತಮುತ್ತಲಿನ ಹಳ್ಳಿಗಳಿಂದ ಜನರೆಲ್ಲ ಸೇರಿ ವರ್ಷಕ್ಕೊಂದಾವರ್ತಿ ಗಿರಿಯನೇರಿ ಈಶ್ವರನಿಗೆ ಪೂಜೆ ಸಲ್ಲಿಸುವುದು ಅಲ್ಲಿನ ಜನಪದರ ಸಂಪ್ರದಾಯವಾಗಿತ್ತು.

ಗೋಕರ್ಣೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾದ ಶಿವಪೂಜೆ ಅಹೋರಾತ್ರಿಗಳ ಪರ್ಯಂತವಾಗಿ ನಡೆಯುತ್ತಿತ್ತು.

ದೈವರಾತನಿಗೆ ಮಹಾಶಿವರಾತ್ರಿಯನ್ನು ಮಹೇಂದ್ರಗಿರಿಯಲ್ಲಿ ಆಚರಿಸುವ ಅಭಿಲಾಷೆಯು ಉಂಟಾಯಿತು. ಅದನ್ನು ಗುರುವರ್ಯ ಗಣಪತಿಮುನಿಗಳಿಗೆ ತಿಳಿಸಿದಾಗ ಅವರು ತಾನೂ ಬರುವದಾಗಿ ನುಡಿದು ಹೊರಡಲು ಸಿದ್ಧವಾದಾಗ ವಿಶಾಲಾಕ್ಷಮ್ಮನವರೂ ಅವರನ್ನು ಅನುಸರಿಸಿದರು. ಹೀಗೆ ಗಣಪತಿ ಮುನಿಗಳು ಪರಿವಾರ ಸಹಿತ ಮಹೇಂದ್ರ ಪರ್ವತಕ್ಕೆ ಹೊರಡುವ ಸುದ್ದಿ ತಿಳಿದ ಮಹರಾಜರು ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದರು. ಗಣಪತಿಮುನಿಗಳ ಪತ್ನಿ ವಿಶಾಲಾಕ್ಷಮ್ಮನವರಿಂದ ಅಷ್ಟು ಎತ್ತರದ ಗಿರಿಯನ್ನು ಚಾರಣ ಮಾಡಲು ಸಾಧ್ಯವಿಲ್ಲದ ಕಾರಣ ಅವರನ್ನು ಹೊತ್ತೊಯ್ಯಲು ಡೋಲಿವ್ಯವಸ್ಥೆಯನ್ನು ಮಾಡಲಾಯಿತು. ಸ್ವತಃ ಮಹರಾಜರ ಸಚಿವರೊಬ್ಬರು ಮಾರ್ಗದರ್ಶಿಯಾಗಿ ಜತೆಗೆ ಹೊರಟರು. ದೈವರಾತನು ಮುಂದಕ್ಕೆ ನಡೆದು ಸುಮಾರು ಮೂರು ಗಂಟೆಯ ವೇಳೆಗೆ ಗಿರಿಯ ಮೇಲಕ್ಕೆ ತಲುಪಿದನು. ಅದೇ ಸ್ವಲ್ಪ ಹೊತ್ತಿಗೆ ಕೆಳಗಡೆಯಿಂದ ಮೇಲಕ್ಕೆ ಬಂದ ಇಬ್ಬರು ಯಾತ್ರಿಕರು ದೈವರಾತನಿರುವಲ್ಲಿಗೆ ಬಂದು ಸುಮಾರು ನಾಲ್ಕು ಮೈಲಿಗಳ ಕೆಳಗೆ ಮೇಲಕ್ಕೆನಡೆದು ಬರುತ್ತಿರುವ ಗಣಪತಿಮುನಿಗಳು ಮತ್ತು ಸಚಿವರು ಮಾರ್ಗಾಯಾಸದಿಂದ ಬಾಯಾರಿ ಬಳಲಿ ಕುಳಿತಿರುವರೆಂದು ತಿಳಿಸಿದರು. ಅದನ್ನು ಕೇಳಿ ದೈವರಾತನು ತಕ್ಷಣ ಎರಡು ವಾಟರ ಬ್ಯಾಗಿನಲ್ಲಿ ನೀರು ತುಂಬಿಸಿಕೊಂಡು ಕೆಳಕ್ಕೆ ಬರುತ್ತಿರುವಾಗ ನೀರಡಿಕೆಯಿಂದ ಬಳಲುತ್ತಿದ್ದ ಕೆಲವು ಯಾತ್ರಿಕರು ದೈವರಾತನಲ್ಲಿರುವ ನೀರನ್ನು ಕಂಡು ಅದನ್ನು ಕೇಳಿ ಪಡೆದು ಬಾಯಾರಿಕೆ ತಣಿಸಿ ಮುಂದಕ್ಕೆ ಸಾಗುತ್ತಿದ್ದರು. ಗುರುವರ್ಯರ ಬಳಿ ಬರುವಷ್ಟರಲ್ಲಿ ಒಂದು ಚೀಲ ನೀರು ಮಾತ್ರ ಉಳಿದಿತ್ತು. ಅವರಿಗೆ ನೀರುಕೊಟ್ಟು ಉಪಚರಿಸಿ ಆಯಾಸ ಕಳೆಯುತ್ತಲೇ ಸಾವಕಾಶವಾಗಿ ಮೇಲಕ್ಕೆ ಹೊರಟರು. ಮಹೇಂದ್ರ ಪರ್ವತದ ಮೇಲಿರುವ ಯಾತ್ರಾ ಸ್ಥಳವನ್ನು ಅವರು ತಲುಪಿದಾಗ ಸಾಯಂಕಾಲ ಐದು ಗಂಟೆಯಾಗಿತ್ತು. ಆಗ ರಾಜಸೇವಕರ ಸಹಾಯದಿಂದ ದೈವರಾತನು ಇಡಿಯ ಪರಿವಾರದವರ ವಸತಿಗಾಗಿ ಒಂದು ದೊಡ್ಡ ಪರ್ಣಕುಟಿಯ ನಿರ್ಮಾಣ ಮಾಡಿದನು. ಗಣಪತಿ ಮುನಿಗಳು ತುಂಬಾ ದಣಿದಿರುವ ಕಾರಣ ಎಂಟು ಗಂಟೆಯ ನಂತರ ಉಪಹಾರ ಮತ್ತು ವಿಶ್ರಾಂತಿಯ ವ್ಯವಸ್ಥೆ ಮಾಡಲಾಯಿತು.

ಮಹೇಂದ್ರಗಿರಿಯ ಮೇಲಿರುವ ಗೋಕರ್ಣೇಶ್ವರ ಮಂದಿರವು ಪುರಾತನವಾಗಿದ್ದು ಕಪ್ಪು ಶಿಲೆಯಲ್ಲಿ ನಿರ್ಮಿಸಿದ್ದಾಗಿದೆ. ಅದಕ್ಕೆ ಬೀಗವಾಗಲಿ, ಬಾಗಿಲಾಗಲಿ ಇರಲಿಲ್ಲ. ಇಲ್ಲಿ ಇತರ ದೇವಾಲಯಗಳಲ್ಲಿರುವಂತೆ ಶಿಲೆಯಲ್ಲಿ ಕಡೆದ ಶಿವಲಿಂಗವಿಲ್ಲ. ಒಂದು ಹಸ್ತ ಪ್ರಮಾಣದ ಗೋಕರ್ಣಾಕೃತಿಯ ಭೂಮಿಯಲ್ಲಿರುವ ರಂಧ್ರವೇ ಅಲ್ಲಿ ಪೂಜಿಸಲ್ಪಡುವ ಈಶ್ವರ ಸನ್ನಿಧಾನವಾಗಿದೆ. ಪಂಚಾಮೃತ, ಹಾಲು, ಬಿಲ್ವಪತ್ರಿ ಇತ್ಯಾದಿ ಯಾವುದೇ ಪೂಜಾದ್ರವ್ಯಗಳನ್ನು ಇದರೊಳಗೆ ಹಾಕಿದರೂ ನೀರಿನ ಸೆಳವು ಅದನ್ನು ಕೊಚ್ಚಿಕೊಂಡು ಹೋಗಿ ಮರೆಯಾಗಿಸುತ್ತಿತ್ತು. ಇದನ್ನು ಕಂಡ ಗಣಪತಿಮುನಿಗಳು ಅದನ್ನು 'ದಹರ ಗೋಕರ್ಣೇಶ್ವರ' ಎಂದು ಹೆಸರಿಸಿದರು.

ಸೂರ್ಯಾಸ್ತವಾಗಲು ಬೆಟ್ಟದ ಮಡಿಲನ್ನು ತನ್ಮಯಗೊಳಿಸುತ್ತ ಕತ್ತಲೆ ಆವರಿಸತೊಡಗಿತು. ಶಿವರಾತ್ರಿಯ ಪುಣ್ಯಕಾಲ ಸನ್ನಿಹಿತವಾಗುತ್ತಿತ್ತು. ಸುತ್ತಲಿನ ಹಳ್ಳಿಗಳಿಂದ ಬಂದ ಜನಜಂಗುಳಿಯೆಲ್ಲ

ಗೋಕರ್ಣೇಶ್ವರ ಸುತ್ತ ನೆರೆಯುತ್ತ ಜನಜಾತ್ರೆ ಏರ್ಪಟ್ಟಿತ್ತು. ಜಾತ್ರೆಯ ನಿಮಿತ್ತ ಅಲ್ಲಲ್ಲಿ ಬಿಲ್ವಪತ್ರಿ, ಹೂವು, ಹಣ್ಣು ಮತ್ತು ಮಂಡಕ್ಕಿ, ಅವಲಕ್ಕಿ, ಮಿಠಾಯಿ ಅಂಗಡಿಗಳನ್ನು ತೆರೆಯಲಾಗಿತ್ತು. ರಾತ್ರಿ ಎಂಟುಗಂಟೆಯ ವೇಳೆಗೆ ಗಣಪತಿಮುನಿಗಳ ಪರಿವಾರದವರು ಮಿತವಾಗಿ ಉಪಹಾರ ಮಾಡಿ ಸ್ವಲ್ಪಕಾಲ ವಿಶ್ರಾಂತಿ ಪಡೆದು ಹನ್ನೊಂದು ಘಂಟೆಗೆ ಶಿವರಾತ್ರಿಯ ಪೂಜೆಗೆ ಅನುವಾದರು.

ರಾತ್ರಿ ಸುಮಾರು ಹನ್ನೊಂದು ಘಂಟೆಯ ಸಮಯಕ್ಕೆ ದೈವರಾತನು ಪೂಜೆಗೆ ನೀರನ್ನು ತರಲೆಂದು ಸಮೀಪದ ಬಾವಿಗೆ ಹೋಗಿ ನೀರು ಸೇದಿಕೊಂಡು ಬರುತ್ತಿರಲು ಪೂಜೆಗೆ ಹೊರಟ ಭಕ್ತ ಜನರು ನೀರಿಗಾಗಿ ತಮ್ಮ ತಂಬಿಗೆಯನ್ನು ಮುಂದಕ್ಕೆ ಮಾಡುತ್ತ ಆತ ತಂದ ನೀರನ್ನೆಲ್ಲ ಖಾಲಿ ಮಾಡಿದರು. ಆಗ ಮತ್ತೆ ಅವನು ಬಾವಿಗೆ ಹೋಗಿ ನೀರು ಸೇದಿಕೊಂಡು ಬರುವಷ್ಟರಲ್ಲಿ ಮತ್ತೆ ಜನರು ತಮ್ಮ ನೀರಿನ ಪಾತ್ರೆಯನ್ನು ದೈವರಾತನ ಮುಂದಕ್ಕೆ ಹಿಡಿಯುತ್ತಿದ್ದರು. ಹೀಗೆ ಮತ್ತೆ, ಮತ್ತೆ ನೀರನ್ನು ಎತ್ತಿತರುತ್ತಿದ್ದರೂ ಜನರು ಮತ್ತೆ ಮತ್ತೆ ನೀರಿಗಾಗಿ ಕಾದಿರುತ್ತಿದ್ದರು. ಪೂಜೆಮಾಡುವವರಿಗೆ ನೀರು ಕೊಡುವುದಿಲ್ಲ ಎನ್ನಲಾಗದೆ ನೀರಿಗಾಗಿ ತಮ್ಮ ಪಾತ್ರೆಯನ್ನು ಮುಂದೆ ಮಾಡುತ್ತಿರುವವರಿಗೆಲ್ಲ ನೀರು ಸುರಿಯುತ್ತಲೇ ಇರಲು ರಾತ್ರಿ ಕಳೆದು ಮಹಾಶಿವರಾತ್ರಿ ಮುಗಿದು ಹೋಯಿತು. ಆದರೆ ದೈವರಾತನಿಗೆ ಪೂಜೆಮಾಡಲಾಗಲಿಲ್ಲ.

ಎಲ್ಲರೂ ಶಿವನ ಪೂಜೆಗೈದು ಧನ್ಯರಾಗಿ ತೆರಳುತ್ತಿರಲು ತನಗೆ ಪೂಜೆಮಾಡಲು ಸಾಧ್ಯವಾಗಲಿಲ್ಲವೆಂದು ವಿಷಾದದಿಂದ ಗುರುವರ್ಯ ಗಣಪತಿಮುನಿಗಳ ಬಳಿ ಬಂದ ದೈವರಾತನು ದುಃಖದಿಂದ ನಡೆದ ಸಂಗತಿಯನ್ನು ಅವರಲ್ಲಿ ನಿವೇದಿಸಿಕೊಂಡನು. ಅದಕ್ಕೆ ಗಣಪತಿ ಮುನಿಗಳು ದೈವರಾತನನ್ನು ಸಾಂತ್ವನಪಡಿಸುತ್ತ "ನಿಜವಾಗಿ ಮಹಾಶಿವರಾತ್ರಿಯ ಪೂಜೆಯು ನಿನ್ನಿಂದ ಮಾತ್ರ ವಿಶೇಷವಾಗಿ ನೇರವೇರಿತು. ನೀನು ಕೊಟ್ಟ ನೀರಿನಿಂದ ಅದೆಷ್ಟೋ ಜನರು ಪೂಜೆ ಮಾಡಿದರು. ನೀನೊಬ್ಬನೇ ಪೂಜಿಸಿದ್ದರೆ ಇಷ್ಟು ದೊಡ್ಡಪೂಜೆಯಾಗುತ್ತಿರರಲಿಲ್ಲ." ಎಂದಾಗ ಅದಕ್ಕೆ ವಿಶಾಲಾಕ್ಷಿ ಅಮ್ಮನವರೂ ಹೌದೆಂದು ದನಿಗೂಡಿಸಿದರು. ಇದನ್ನು ಕೇಳಿದ ದೈವರಾತನಿಗೆ ತನ್ನ ಕಾಯಕ ಸಾರ್ಥಕವೆನಿಸಿತು.

ಮಹೇಂದ್ರಗಿರಿಯಲ್ಲಿ ತಪಸ್ಸನ್ನಾಚರಿಸುವ ಸಂಕಲ್ಪ

ಮಹಾಶಿವರಾತ್ರಿಯ ಪುಣ್ಯಕಾಲ ಮುಗಿಯುತ್ತ ಬೆಳಗಿನಯಾಮದಲ್ಲಿ ನೂತನ ದಿನವು ಆರಂಭವಾಗುತ್ತಿರಲು ಯಾತ್ರಿಕರೆಲ್ಲ ಭರಾಟೆಯಿಂದ ತಮ್ಮ ತಮ್ಮ ಊರುಗಳಿಗೆ ತೆರಳುತ್ತಿದ್ದರು. ಸುಮಾರು ಎಂಟುಗಂಟೆಗೆಲ್ಲ ಅಲ್ಲಿ ಯಾರೂ ಉಳಿದಿರಲಿಲ್ಲ. ಇಡೀ ಮಹೇಂದ್ರ ಪರ್ವತ ಸ್ತಬ್ದವಾಯಿತು. ಆಗ ಅಲ್ಲಿ ಕೇವಲ ಗಣಪತಿಮುನಿಗಳು ಮತ್ತು ಅವರ ಪರಿವಾರದವರು ಮಾತ್ರ ಉಳಿದಿದ್ದರು. ಗಣಪತಿಮುನಿಗಳು "ಇನ್ನು ನಾವು ಹೊರಡೋಣ" ಎಂದರು. ಇತ್ತ ದೈವರಾತನು ಶಿವರಾತ್ರಿಯೆಂದರೆ ಇಷ್ಟೇನೆ ! ಇಂತಹ ಒಂದು ಪರ್ವಕಾಲದ ಕಲ್ಪನೆಯ ರಾತ್ರಿಯಲ್ಲಿ ಏನನ್ನು ತಾನೆ ಸಾಧಿಸಬಹುದು ಇದೆಲ್ಲ ಕೇವಲ ಆಡಂಬರದ ಆಚರಣೆಯೇ ಹೊರತು ಸಾಧನೆಗೆ ಸಹಾಯಕವಲ್ಲ. ಎಂದು ಯೋಚಿಸುತ್ತಿದ್ದನು. ಅಂತೆಯೇ ಗುರುವರ್ಯರ ಮಾತನ್ನು ಕೇಳಿ ಆತ ತನ್ನ ಮನದಾಳದ ಇಂಗಿತವನ್ನು ಅವರಲ್ಲಿ ತೋಡಿಕೊಂಡನು. ಅದಕ್ಕೆ ಗಣಪತಿ ಮುನಿಗಳು "ತಪಸ್ಸನ್ನಾಚರಿಸುವದಕ್ಕೆ ಸಮಯಾಸಮಯಗಳ ಪರಿಭೇದವಿಲ್ಲ ಮನಸ್ಸು ಸಂಕಲ್ಪಗೊಂಡಾಗ

ದಿನವೂ ಅವನಿಗೆ ಮಹಾಶಿವರಾತ್ರಿಯೇ ಆಗುವದು" ಎಂದರು. ಆಗ ದೈವರಾತನು "ಈ ಸ್ಥಳವು ಬಹು ಪ್ರಶಾಂತವಾಗಿದ್ದು ತಪವನಾಚರಿಸಲು ಯೋಗ್ಯವಾಗಿದೆ. ಹಿಂದೆ ಪುರಾಣ ಕಾಲದಲ್ಲಿ ಕೂಡ ಮಹೇಂದ್ರ ಪರ್ವತವು ತಪಸ್ಸಿಗೆ ಪ್ರಶಸ್ತವಾದುದೆಂದು ತಿಳಿಯಲಾಗಿತ್ತು. ಏಕೆಂದರೆ ರಾಮಾಯಣದಲ್ಲಿ ಸೀತಾ ವಿವಾಹದ ನಂತರ ಅಯೋಧ್ಯೆಗೆ ಹೊರಟ ಶ್ರೀರಾಮನನ್ನು ಮಾರ್ಗಮಧ್ಯದಲ್ಲಿ ತಡೆದ ಪರಶುರಾಮನು ಆತನಿಂದ ಪರಾಜಿತನಾಗಿ ಮಹೇಂದ್ರಗಿರಿಗೆ ತಪವನ್ನಾಚರಿಸಲು ತೆರಳಿದನೆಂದು ಹೇಳಲಾಗಿದೆ. ಆದ್ದರಿಂದ ಒಂದು ತಿಂಗಳ ಕಾಲ ನಾನು ಇಲ್ಲಿ ತಪಸ್ಸನ್ನಾಚರಿಸಬೇಕೆಂದು ನಿರ್ಧರಿಸಿದ್ದೇನೆ". ಎಂದನು. ಇದನ್ನು ಕೇಳಿ ಗಣಪತಿ ಮುನಿಗಳು ತಾವೂ ಅಲ್ಲಿ ತಪಸ್ಸು ಗೈಯುವದಕ್ಕೆ ಆಲೋಚಿಸಿದರು. ಆದರೆ ವಿಶಾಲಾಕ್ಷಮ್ಮನವರು ಅಲ್ಲಿ ಇರುವಂತಿರಲಿಲ್ಲ. ಏಕೆಂದರೆ ಮಗ ಮಹಾದೇವ ಮತ್ತು ಮಗಳು ವಜ್ರೇಶ್ವರಿ ಹಾಗೂ ಪರಿಚಾರಕ ಅಧಾಮನ್ (ವೆಂಕಟರಮಣ) ಇವರು ಮಂದಸಾದಲ್ಲಿ ತಂದೆ-ತಾಯಿಯರ ಆಗಮನದ ನಿರೀಕ್ಷೆಯಲ್ಲಿದ್ದರು. ಅಂತೆಯೇ ವಿಶಾಲಾಕ್ಷಿ ಅಮ್ಮನವರನ್ನು ರಾಜಸೇವಕರ ಸಹಾಯದಿಂದ ಡೋಲಿಯಲ್ಲಿ ಮಂದಸಾಕ್ಕೆ ಕಳಿಸಿಕೊಡಲಾಯಿತು.

ದೈವರಾತನೂ, ಗಣಪತಿ ಮುನಿಗಳೂ ಮಹೇಂದ್ರ ಪರ್ವತದಲ್ಲಿ ಒಂದು ತಿಂಗಳ ಕಾಲ ತಪಸ್ಸನ್ನು ಆಚರಿಸಲಿರುವ ವಿಷಯವನ್ನು ತಿಳಿದ ಮಂದಸಾ ಮಹರಾಜರು ಅವರಿಗೆ ಆಹಾರದ ವ್ಯವಸ್ಥೆಯನ್ನು ಮಾಡಿದರು. ಮಹೇಂದ್ರಗಿರಿಯಿಂದ ಸುಮಾರು ನಾಲ್ಕು ಮೈಲಿ ದೂರದಲ್ಲಿರುವ ಹಳ್ಳಿಯೊಂದರ ಗ್ರಾಮಾಧಿಕಾರಿಗೆ ಗೋಧಿಹಿಟ್ಟು, ಬೆಲ್ಲ, ಹಾಲು ಹಾಗೂ ಇತರ ಆಹಾರ ಸಾಮಗ್ರಿಗಳನ್ನು ಒದಗಿಸುವಂತೆ ಆದೇಶಿಸಿದರು. ದಿನವೂ ಗಣಪತಿ ಮುನಿಗಳು ಮತ್ತು ದೈವರಾತನು ಸೇವಿಸುವ ಆಹಾರ ಮಿತವಾಗಿಯೂ ಸರಳವಾಗಿಯೂ ಇತ್ತು. ಮಧ್ಯಾಹ್ನ ಮತ್ತು ರಾತ್ರಿ ಇಬ್ಬರೂ ತಲಾ ಎರಡು ರೊಟ್ಟಿಗಳನ್ನು ಬೆಲ್ಲದೊಂದಿಗೆ ಸೇವಿಸಿ ಹಾಲು ಕುಡಿಯುತ್ತಿದ್ದರು.

ಗೋಕರ್ಣನಾಥೇಶ್ವರ ಮಂದಿರದ ಎದುರು ಶಿಥಿಲಾವಸ್ಥೆಯಲ್ಲಿರುವ ಒಂದು ನರ-ನಾರಾಯಣ ದೇವರ ಗುಡಿಯಿತ್ತು. ಅದಕ್ಕೆ ಛಾವಣಿಯಾಗಲಿ, ಬಾಗಿಲುಗಳಾಗಲಿ ಇರಲಿಲ್ಲ. ಆದಾಗ್ಯೂ ಅದರಲ್ಲಿಯೇ ವಾಸಿಸಲು ನಿರ್ಧರಿಸಿ ಹಗಲು ಬಿಸಿಲಿನಿಂದಲೂ ರಾತ್ರಿ ಸುರಿವ ಮಂಜಿನಿಂದಲೂ ರಕ್ಷಿಸಿಕೊಳ್ಳುವದಕ್ಕಾಗಿ ದೈವರಾತನು ಮರದ ಟೊಂಗೆಗಳಿಂದ ತುರ್ತಾಗಿ ಚಪ್ಪರ ನಿರ್ಮಿಸಿದನು. ನೆಲವು ತೇವಪೂರಿತವಾಗಿರುವದರಿಂದ ಒಣಹುಲ್ಲನ್ನು ತಂದು ಅದರ ಮೇಲೆ ಮೆತ್ತೆಯಂತೆ ಹಾಸಿ ಕುಳಿತುಕೊಳ್ಳುವುದಕ್ಕೆ ಮತ್ತು ಮಲಗುವುದಕ್ಕೆ ಯೋಗ್ಯವಾಗುವಂತೆ ಅನುವುಗೊಳಿಸಿದನು. ಮಹೇಂದ್ರಗಿರಿಯು ಎತ್ತರವಾದ ಪ್ರದೇಶವಾಗಿರುವದರಿಂದ ರಾತ್ರಿಯಲ್ಲಿ ಜೋರಾಗಿ ಮಂಜು ಸುರಿಯುತ್ತಿದ್ದು ಚಳಿಯು ವಿಪರೀತವಾಗಿತ್ತು. ಸುತ್ತಮುತ್ತಲಿನ ಪ್ರದೇಶವೆಲ್ಲ ದಟ್ಟ ಕಾಡಿನಿಂದ ಆವೃತವಾಗಿದ್ದು ಅಲ್ಲಿ ಹುಲಿ, ಚಿರತೆ ಮುಂತಾದ ಕ್ರೂರಪ್ರಾಣಿಗಳೂ ಇದ್ದವು. ಆದ ಕಾರಣ, ಗುಡಿಯ ಒಳಗೆ ಪ್ರವೇಶದ್ವಾರದ ಬಳಿ ಯಾವ ಪ್ರಾಣಿಯೂ ಒಳ ನುಸುಳದಂತೆ ಹಗಲಿನಲ್ಲಿ ಆಯ್ದು ತಂದ ಒಣಗಿದ ಕಟ್ಟಿಗೆ ಮತ್ತು ಪುರುಳೆಗಳಿಂದ ರಾತ್ರಿಯೆಲ್ಲ ಸದಾ ಬೆಂಕಿಯು ಉರಿಯುತ್ತಿರುವಂತೆ ಮಾಡಿ ಕ್ರೂರ ಪ್ರಾಣಿಗಳ ಭಯದಿಂದ ಮುಕ್ತರಾಗಿ ಗುರುವರ್ಯ ಗಣಪತಿಮುನಿಗಳು ಮತ್ತು ಅವರ ತಪಃ ಶಿಷ್ಯನಾದ ದೈವರಾತ ಇಬ್ಬರೂ ಧ್ಯಾನಾಸಕ್ತರಾಗುತ್ತಿದ್ದರು.

ಸಂಜೆಯಾಗುತ್ತಿರುವಂತೆ ಕಾಡುಪ್ರಾಣಿಗಳ ಸಂಚಾರ ಪ್ರಾರಂಭವಾಗಿಬಿಡುತ್ತಿತ್ತು. ಕೆಲವೊಮ್ಮೆ ಹತ್ತಿರದಲ್ಲಿಯೇ ಹುಲಿಯ ಗರ್ಜನೆ ಕೇಳಿಬರುತ್ತಿತ್ತು. ಬಾಗಿಲಿನ ಮುಂದುಗಡೆಯಿಂದಲೇ ಹಾದು ಹೋಗುತ್ತಿದ್ದರೂ ಬೆಂಕಿಯ ಭಯದಿಂದ ಒಳಗೆ ಬರುತ್ತಿದ್ದಿಲ್ಲ.

ದೈವರಾತನೂ ಶುದ್ಧ ಆರ್ಷಪರಂಪರೆ ಹೊಂದಿದವನಾಗಿದ್ದು ಆತ "ಜಾತವೇದಸೇ ಸುನವಾಮ ಸೋಮ ಮರಾತೀಯತೋ ನಿದಹಾತಿ ವೇದ:" ಎಂಬ ವೈದಿಕ ಮಂತ್ರವನ್ನು ಧ್ಯಾನಿಸುತ್ತಿದ್ದನು. ವಾಸಿಷ್ಠ ಗಣಪತಿಮುನಿಗಳು" ಕ್ಲೇಶನಾಶನ ಶೂಲಪಾಣೀ" ಎಂಬ ತಂತ್ರಶಾಸ್ತ್ರದ ಪರಂಪರೆಗೆ ಸೇರಿದ ನವಾಕ್ಷರೀ ಮಂತ್ರವನ್ನು ಜಪಿಸುತ್ತಿದ್ದರು. ಹೀಗೆ ಹೊರ ಜಗತ್ತಿನ ಪರಿವೆಯಿಲ್ಲದೆ ಏಕಾಂತವಾಗಿ ತಾಪಸಜೀವನ ಸಾಗುತ್ತಿರುವಾಗ ಮಹೇಂದ್ರಗಿರಿಯ ನೀರವ ಮಡಿಲಿನ ಪವಿತ್ರ ಪರಿಸರದಲ್ಲಿ ಗಣಪತಿಮುನಿಗಳು ಅದೊಂದು ದಿನ ತನ್ನ ಅಂತೇವಾಸಿಯಾದ ದೈವರಾತನಿಗೆ ಶ್ರೀವಿದ್ಯಾ ಉಪಾಸನೆಯ ಷೋಡಾಶಾಕ್ಷರೀ ಮಂತ್ರವನ್ನು ಉಪದೇಶಿಸಿದರು. ಅನಂತರ ಫಾಲ್ಗುಣಮಾಸದ ಪೌರ್ಣಮಿ ದಿವಸ ಅವರು ಅದೇ ದಿವ್ಯ ಷೋಡಶಾಕ್ಷರೀ ಮಂತ್ರದಿಂದ ದೈವರಾತನ ಶಿರಸ್ಸಿನ ಮೇಲೆ ಪೂರ್ಣಾಭಿಷೇಕವನ್ನು ಮಾಡಿದರು. ಆ ಮಂತ್ರವು ಈ ರೀತಿಯಾಗಿತ್ತು.

ಭಗವತೀ ಸಾಷ್ಟವಿಂಶತಿವರ್ಣಾ ತ್ವಂ ಬೀಜಾತ್ಮಾ ಷೋಡಶ ವರ್ಣಾ ।
ಷೋಡಶೀ ತವಮನುರಯಮಭಿಷಿಕ್ತೋ ಮಂತ್ರಗಣಾನಾಮಧಿಪತಿರಿಷ್ಟಃ ॥

ಹೀಗೆ ಗಣಪತಿ ಮುನಿಗಳು ದೈವರಾತನಿಗೆ ಋಷಿಕುಲ ಸಂಸ್ಕೃತಿಯ ಆಧ್ಯಾತ್ಮ ಜೀವನದ ದಿವ್ಯ ಸಂಸ್ಕಾರವನ್ನು ನೀಡಿ ಆತನ ಪುರೋಗಮನಕ್ಕೆ ನಾಂದಿಯಿಟ್ಟರು.

ಸಂಪ್ರದಾಯದ ಮಠಗಳಲ್ಲಿ ಸನ್ಯಾಸದೀಕ್ಷೆಯನ್ನು ನೀಡುವ ಸಂದರ್ಭದಲ್ಲಿ ಆಚಾರ್ಯರು ಶಿಷ್ಯನಿಗೆ ಈ ಮಂತ್ರದಿಂದ ಪೂರ್ಣಾಭಿಷೇಕವನ್ನು ಮಾಡುವ ಕ್ರಮವಿದೆ.

ವೈಭವೀಕರಿಸಿದ ಆಚರಣೆಗಿಂತ ಸರಳ ಆಚರಣೆ ಶ್ರೇಷ್ಠ

ಫಾಲ್ಗುಣ ಮಾಸ ಕೃಷ್ಣಪಕ್ಷ ಚತುರ್ಥಿಯಂದು ದೈವರಾತನ ತಾಯಿ ನಾಗವೇಣಿ ಅಮ್ಮನವರ ಪುಣ್ಯತಿಥಿ. ಅಂದು ಆತ ತಾಯಿಯ ಶ್ರಾದ್ಧ ಕರ್ಮವನ್ನು ನೆರವೇರಿಸಬೇಕಾಗಿತ್ತು. ಆದರೆ ಮಹೇಂದ್ರ ಪರ್ವತದ ಆ ನಿರ್ಜನ ಪ್ರದೇಶದಲ್ಲಿ ಅದನ್ನು ನೆರವೇರಿಸುವ ಬಗೆ ಹೇಗೆಂದು ಚಿಂತಾಕುಲನಾದ ದೈವರಾತ ಗಣಪತಿಮುನಿಗಳಲ್ಲಿ ಅದನ್ನು ನಿವೇದಿಸಿಕೊಂಡನು. ಅದಕ್ಕೆ ಅವರು ಗಂಭೀರವಾಗಿ ನಾವು ಇಂದು ಆಚರಿಸುತ್ತಿರುವ ಈ ಶ್ರಾದ್ಧ ಕರ್ಮವು ವೇದೋಕ್ತವಾದುದಲ್ಲ. ವೇದದಲ್ಲಿ ಎಲ್ಲಿಯೂ ಇದರ ಬಗೆಗೆ ಆಧಾರ ಸಿಗುವುದಿಲ್ಲ. ಇದು ವೇದಕಾಲೀನ ನಂತರ ಅರ್ವಾಚೀನವಾಗಿ ಬೆಳೆದು ಬಂದ ಸಂಪ್ರದಾಯವಾಗಿದೆ.

ಸರಳವಾದ ಆಚರಣೆ ವೈಭವೀಕರಣಗೊಂಡಾಗ ಸಂಕೀರ್ಣವಾಗುತ್ತದೆ. ಶ್ರದ್ಧೆ, ಭಕ್ತಿ, ಪಾವಿತ್ರ್ಯಗಳ ನೈಜತೆ ಹೊರಟುಹೋಗುತ್ತದೆ. ಸದಾ ನಾವು ಆಚರಿಸುವ ಆಚರಣೆಗಳು ಸರಳವಾಗಿ ಸುಲಭವಾಗಿರಬೇಕು.ಅದು ಎಂದಿಗೂ ಆಚರಿಸಲು ಕಷ್ಟವಾಗಿರಬಾರದು. ಆಗ ಮಾತ್ರ ಅದರ ಪಾವಿತ್ರ್ಯ

ಉಳಿಯುವದು. ಋಗ್ವೇದ ಕಾಲದ ಆಚರಣೆಗಳೆಲ್ಲ ಸರಳವಾಗಿದ್ದವು. ಅನಂತರ ಯಜುರ್ವೇದ ಕಾಲದಿಂದಲೇ ಅವು ಸಾವಕಾಶವಾಗಿ ವೈಭವೀಕರಣಗೊಳ್ಳುತ್ತ ಸಂಕೀರ್ಣಗೊಳ್ಳುತ್ತ ನಡೆದಿರುವದನ್ನು ಕಾಣಬಹುದು. ಅನಂತರ ಪುರಾಣಕಾಲಕ್ಕೆ ರಾಜಮಹರಾಜರು ಹಾಗೂ ಶ್ರೀಮಂತರು ಪ್ರತಿಷ್ಠೆಗಾಗಿ ಉಪನಯನ, ವಿವಾಹ ಮುಂತಾದ ಎಲ್ಲ ಆಚರಣೆಗಳನ್ನು ಆಡಂಬರಯುಕ್ತವಾಗಿ ಆಚರಿಸತೊಡಗಿದರು. ಬೆಳಗಿನ ಬಂಗಾರದ ಬಣ್ಣದ ಸೌಮ್ಯವಾದ ಬಿಸಿಲು ನಮಗೆ ಹಿತವನ್ನು ನೀಡುತ್ತದೆ. ಅದೇ ಹೊತ್ತು ಏರುತ್ತ ಹೋದಂತೆ ಬಿಸಿಲಿನ ತೀವ್ರತೆ ಹೆಚ್ಚಾದಂತೆ ಅದನ್ನು ಸಹಿಸುವುದು ಕಷ್ಟವಾಗುತ್ತದೆ. ಇದೇ ರೀತಿ ನಮ್ಮ ಚರಿತ, ಚರ್ಯೆ, ಆಚರಣೆಗಳು ಕೂಡ.

ಆದಾಗ್ಯೂ ಗತಿಸಿದ ತಾಯಿ-ತಂದೆಯರ ಋಣ ಸಂದಾಯಕ್ಕಾಗಿ ಮಾಡುವ ಶ್ರಾದ್ಧಕರ್ಮದ ಆಚರಣೆಯು ಮಹತ್ವದ್ದಾಗಿದೆ. ಬ್ರಾಹ್ಮಣರನ್ನು ಕರೆದು ಅವರ ಸಮ್ಮುಖದಲ್ಲಿಯೇ ಶ್ರಾದ್ಧಕರ್ಮವನ್ನು ನೆರವೇರಿಸಬೇಕೆಂದೇನೂ ನಿಯಮವಿಲ್ಲ. ಗೋವು, ಮೀನ, ಕಾಗೆ ಮುಂತಾದ ಯಾವೊಂದು ಜೀವಿಗೆ ಅಂದು ಆಹಾರವಿತ್ತು ಸಂತೃಪ್ತಗೊಳಿಸಿದರೆ ಅದೇ ಶ್ರಾದ್ಧಕರ್ಮವಾಗುವದು. ಅಂದರೆ, ನಾವು ಉಣ್ಣುವ ಅನ್ನವನ್ನು ಆ ದಿನ ಇತರೊಂದಿಗೆ ಹಂಚಿಕೊಂಡು ಸಂತೋಷದಿಂದ ಊಟಮಾಡಿದಾಗ ಅದು ಸಂತರ್ಪಣೆ ಎನಿಸುವದು. ಆರ್ಥಿಕವಾಗಿ ದುರ್ಬಲರೆನಿಸಿದ ಏನನ್ನೂ ಮಾಡಲಾಗದ ದೀನಾವಸ್ಥೆಯ ಬಡವರು ದಕ್ಷಿಣದಿಸೆಯತ್ತ ಮುಖವಾಡಿ ಬೊಗಸೆಯಲ್ಲಿ ನೀರು ಹಿಡಿದು ಗತಿಸಿದ ತಂದೆ-ತಾಯಿಯರ ನೆನೆಯುತ್ತ ಅರ್ಪಿಸಿದರೆ ಅದೇ ನಿಜವಾದ ಶ್ರಾದ್ಧವಾಗುವದು. ಹೀಗೆ ಇತ್ಯಾದಿ ವಿವರವಾಗಿ ಶ್ರಾದ್ಧ ಕರ್ಮದ ಬಗೆಗೆ ವ್ಯಾಖ್ಯಾನಿಸಿದಾಗ ದೈವರಾತನಿಗೆ ಸಮಾಧಾನವಾಯಿತು. ಆಗ ದೈವರಾತನು ಗಣಪತಿ ಮುನಿಗಳನ್ನೇ ಬ್ರಾಹ್ಮಣರ ಸ್ಥಾನದಲ್ಲಿ ಕಲ್ಪಿಸಿಕೊಳ್ಳುತ್ತ ಶ್ರಾದ್ಧಕರ್ಮದ ಆಚರಣೆಯನ್ನು ಸಾಂಗಗೊಳಿಸಿದನು.

ಈ ಸಮಯದಲ್ಲಿ ಮಂದಸಾ ಮಹರಾಜರು ತಮ್ಮ ಆಪ್ತ ಸಮಾಲೋಚನೆಗಾಗಿ ಗಣಪತಿಮುನಿಗಳನ್ನು ತಮ್ಮಲ್ಲಿಗೆ ಕರೆಸಿಕೊಂಡ ಕಾರಣ ದೈವರಾತನು ಒಂಟಿಯಾಗಿ ತಪಸ್ಸನ್ನು ಮುಂದುವರಿಸಿದನು. ಗುರುವರ್ಯ ಗಣಪತಿಮುನಿಗಳು ಜತೆಯಲ್ಲಿ ಇರುವಾಗ ದಿನಕ್ಕೆರಡು ಗೋಧಿರೊಟ್ಟಿ ತಿನ್ನುತ್ತಿದ್ದ ದೈವರಾತ ಈಗ ಅದನ್ನೂ ಪರಿತ್ಯಜಿಸಿ ಬೆಟ್ಟದ ಮೇಲೆ ಸಿಗುತ್ತಿದ್ದ ನೆಲ್ಲಿಕಾಯಿಗಳನ್ನು ತಂದು ಬೆಂಕಿಯಲ್ಲಿ ಹದವಾಗಿ ಬೇಯುವಂತೆ ಸುಟ್ಟು ಅದನ್ನು ತಿಂದು ನೀರು ಕುಡಿದು ಇನ್ನೇನೂ ತಿನ್ನದೇ ಹಾಗೆಯೇ ಇರತೊಡಗಿದನು. ಹೀಗೆ ಮೂರು ದಿನ ಕಳೆದಾಗ ಕಾಡಿನಲ್ಲಿ ದೊರೆತ ಗಡ್ಡೆಯೊಂದನ್ನು ತಂದು ಬಾಯಿಗೆ ಹಾಕಿ ಜಗಿದಾಗ ಕೂಡಲೇ ಬಾಯಿಯಲ್ಲಿ ಕೆಂಡವಿಟ್ಟಂತಾಗಿ ಬಾಯಿ, ತುಟಿ, ನಾಲಿಗೆ ಮತ್ತು ಮುಖವೆಲ್ಲ ವಿಕಾರವಾಗಿ ಊದಿಕೊಂಡವು. ನಿರ್ಜನವಾದ ಆ ಬೆಟ್ಟದ ಮೇಲೆ ರಾತ್ರಿಹೊತ್ತಿನಲ್ಲಿ ಉಂಟಾದ ಸ್ಥಿತಿಗೆ ಏನುಮಾಡಬೇಕೆಂದು ತೋಚದೇ ಹಸಿ ನೆಲ್ಲಿಕಾಯಿಯನ್ನು ಕಲ್ಲಿನಿಂದ ಚೆನ್ನಾಗಿ ಜಜ್ಜಿ ಬಾಯಿಯಲ್ಲಿ ಇಟ್ಟುಕೊಂಡನು. ಆಗ ಬಾಯಿಂದ ಲಾಲಾರಸ ಒಸರಲು ಪ್ರಾರಂಭವಾಗಿ ಗಡ್ಡೆಯ ನಂಜಿನ ಅಂಶವು ಸಾವಕಾಶವಾಗಿ ಹೊರಹಾಕಲ್ಪಡುತ್ತ ಹರಿದುಬರತೊಡಗಿತು. ರಾತ್ರಿಯೆಲ್ಲ ನಿದ್ರೆ ಮಾಡದೇ ಅದೇ ಸ್ಥಿತಿಯಲ್ಲಿ ಕಳೆದು ಬೆಳಗಾಗುತ್ತಿರುವಂತೆ ಉರಿಯೂ ಊತವೂ ನಿಧಾನವಾಗಿ ಕಡಿಮೆಯಾಗುತ್ತ ಮುಖವು ಮೊದಲಿನಂತಾಯಿತು.


ಮಂದಸಾಕ್ಕೆ ತೆರಳಿದ ಗಣಪತಿಮುನಿಗಳು ಐದು ದಿನಗಳಲ್ಲಿ ಮಹೇಂದ್ರಗಿರಿಗೆ ಮರಳಿ ಬಂದರು. ಈಗಾಗಲೇ ಒಂದು ತಿಂಗಳಿಗೂ ಅಧಿಕಕಾಲ ಗಿರಿಯ ಮೇಲಿನ ತಪ್ಪಲಲ್ಲಿ ಗುರು-ಶಿಷ್ಯರಿಬ್ಬರೂ ತಪಸ್ಸು

ಗೈದಿದ್ದು ಮುಂದೇನು ಮಾಡಬೇಕು ಎಂಬ ಬಗೆಗೆ ಅವರು ವಿಚಾರ ವಿನಮಯ ನಡೆಸಿದರು. ಮುಂದಿನ ಬದಲಾವಣೆಯನ್ನು ಈ ಮೊದಲೇ ನಿರೀಕ್ಷಿಸಿದ್ದ ಗಣಪತಿ ಮುನಿಗಳು ಮರುದಿನ ಅಲ್ಲಿಂದ ಪ್ರಯಾಣಿಸಲು ಅದಾಗಲೇ ರಾಜಸೇವಕರನ್ನು ಅಲ್ಲಿಯೇ ಉಳಿಸಿಕೊಂಡಿದ್ದರು. ದೈವರಾತನು ಅಲ್ಲಿಂದ, ಮುಂದೆ ಅರುಣಾಚಲಕ್ಕೆ ಹೋಗಲು ತೀರ್ಮಾನಿಸಿದ್ದನು. ಅದನ್ನು ತಿಳಿದ ಗಣಪತಿ ಮುನಿಗಳು ತಾವೂ ಅಲ್ಲಿಗೆ ಹೋಗಲು ನಿಶ್ಚಯಿಸಿದರು. ಅಂತೆಯೇ ಮರುದಿನ ಪ್ರಾತಃಕಾಲ ದೈವರಾತನು ಬೇಗನೆ ನಿತ್ಯವಿಧಿಗಳನ್ನು ಪೂರೈಸಿ ಬರುವಷ್ಟರಲ್ಲಿ ವಾಡಿಕೆಯಂತೆ ಗಣಪತಿಮುನಿಗಳೂ ಮುಂಚಿತವಾಗಿಯೇ ಹೊರಟು ಹೋಗಿದ್ದರು. ದೈವರಾತನು ನರ-ನಾರಾಯಣ ಮಂದಿರದ ಅಂಕಣದಲ್ಲಿ ಹಾಸಿದ್ದ ಚಾಪೆ, ಕಂಬಳಿ ಇತರ ಸಾಮಗ್ರಿ ಸರಂಜಾಮುವನ್ನು ಹೊರಕ್ಕೆ ತಂದು ಓರಣವಾಗಿ ಕಟ್ಟಿ ಅಣಿಗೊಳಿಸಿದನು. ತರುವಾಯ ಅಂಕಣದಲ್ಲಿ ಹಾಸಿದ್ದ ಹುಲ್ಲನ್ನು ತೆಗೆದು ಸ್ವಚ್ಛಗೊಳಿಸಿ ಹೊರ ಹಾಕಲೆಂದು ಅದನ್ನು ತೆಗೆಯುತ್ತಿರುವಾಗ ಹುಲ್ಲಿನ ಅಡಿಯಲ್ಲಿ ಬೆಚ್ಚಗೆ ಮಲಗಿದ್ದ ಹಾವೊಂದು ಮೆಲ್ಲಗೆ ಹರಿದು ಹೊರಗೆ ಹೋಯಿತು. ದೈವರಾತನು ಮೂಕನಾಗಿ ಹಾವು ಹರಿದು ಹೋದ ದಿಕ್ಕನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡುತ್ತಾ ಅದರಿಂದ ಏನೊಂದೂ ಅಪಾಯ ಸಂಭವಿಸದಿರುವದಕ್ಕಾಗಿ ಸಮಾಧಾನಪಟ್ಟುಕೊಂಡನು. ಆದರೆ ಗಣಪತಿ ಮುನಿಗಳಿಗೆ ಈ ವಿಷಯ ಹೇಳಲಿಲ್ಲ. ಗಣಪತಿ ಮುನಿಗಳು ತಮ್ಮ ನಿತ್ಯಕರ್ಮಗಳನ್ನು ಮುಗಿಸಿ ಬರುತ್ತಿರುವಂತೆ ಈ ಮೊದಲೆ ಸಿದ್ಧಪಡಿಸಿ ಇಟ್ಟಿದ್ದ ಉಪಹಾರ ಸೇವಿಸಿ ಎಲ್ಲರೂ ಮಂದಸಾಕ್ಕೆ ಮರಳಿದರು.

ಮಹೇಂದ್ರ ಪರ್ವತದಿಂದ ಚೈತ್ರ ಶುಕ್ಲ ಪ್ರತಿಪದೆಯ ದಿನ ಮಂದಸಾಕ್ಕೆ ಬಂದ ಗುರು-ಶಿಷ್ಯರು ಪಂಚಮಿಯ ವರೆಗೆ ಅಲ್ಲಿ ಉಳಿದರು. ಅನಂತರ ಗಣಪತಿಮುನಿಗಳ ಸಂತ ಪರಿವಾರಕ್ಕೆ ಸಕಲ ರೀತಿಯ ಸಹಾಯ ಮತ್ತು ಅನುಕೂಲವನ್ನು ಒದಗಿಸಿಕೊಟ್ಟಿರುವದಕ್ಕಾಗಿ ಮಂದಸಾ ಮಹರಾಜರನ್ನು ಅಭಿನಂದಿಸಿ ಶುಭಾಶೀರ್ವಾದಗಳೊಂದಿಗೆ ಹರಸಿ ಮದ್ರಾಸಪ್ರಾಂತದ ಕಡೆಗೆ ಪ್ರಯಾಣಮಾಡಿದರು.

ಆಂಧ್ರಪ್ರದೇಶದ ಕಾಕಿನಾಡಾ ಎಂಬ ನಗರದಲ್ಲಿ ಚೈತ್ರ ಶುಕ್ಲ ದಶಮಿಯಂದು ತೆಲುಗುಭಾಷೆಯಲ್ಲಿ ನಡೆಯಲಿರುವ ಸಮ್ಮೇಳನದ ಅಧ್ಯಕ್ಷರಾಗಿ ಭಾಗವಹಿಸುವದಕ್ಕೆ ಈ ಮೊದಲೇ ಆಹ್ವಾನಿತರಾಗಿದ್ದ ಕಾರಣ ಗಣಪತಿಮುನಿಗಳು ವೆಂಕಟರಮಣ ಅವರೊಂದಿಗೆ ಕಾಕಿನಾಡದಲ್ಲಿ ಪ್ರಯಾಣ ಮಧ್ಯೆ ಇಳಿದುಕೊಂಡರು.ವಿಶಾಲಾಕ್ಷಮ್ಮನವರು ಮತ್ತು ಮಕ್ಕಳು ಹಾಗೂ ದೈವರಾತ ಇವರು ಮದ್ರಾಸಿಗೆ ಹೋದರು. ಅಲ್ಲಿ ಅವರು ಗಣಪತಿಮುನಿಗಳಿಗೆ ಪರಿಚಿತರಾದ ದೊರೈಸ್ವಾಮಿ ಎಂಬವರ ಮನೆಯಲ್ಲಿ ತಂಗಿದರು.

ಆ ಸಮಯಕ್ಕೆ ದೊರೈ ಸ್ವಾಮಿಯವರ ಮನೆಯಿಂದ ಸುಮಾರು ಐದು ಮೈಲಿಗಳ ಅಂತರದಲ್ಲಿರುವ ಒಂದು ಚಿಕ್ಕ ಗ್ರಾಮದಲ್ಲಿರುವ ಕಾಮಕ್ಷಿ ದೇವಾಲಯದ ಸಮೀಪದಲ್ಲಿ ಯಾವುದೋ ಕಾರ್ಯನಿಮಿತ್ತ ಕಪಾಲಿಶಾಸ್ತ್ರಿಗಳು ಉಳಿದುಕೊಂಡಿದ್ದರು. ಗಣಪತಿಮುನಿಗಳ ಪ್ರಧಾನ ಶಿಷ್ಯರಲ್ಲೊಬ್ಬರಾದ ಇವರು ಗುರುಪತ್ನಿ ವಿಶಾಲಾಕ್ಷಿ ಅಮ್ಮನವರು ದೊರೈಸ್ವಾಮಿಗಳ ಮನೆಯಲ್ಲಿ ಉಳಿದುಕೊಂಡಿರುವ ವಿಷಯ ತಿಳಿದು ಅವರ ದರ್ಶನಕ್ಕಾಗಿ ಅಲ್ಲಿಗೆ ಬಂದಾಗ ದೈವರಾತನಿಗೆ ಕಪಾಲಿ ಶಾಸ್ತ್ರಿಗಳ ಪರಿಚಯವಾಯಿತು. ಈಗಾಗಲೇ ಗುರುವರ್ಯರಿಂದ ಕಪಾಲಿಶಾಸ್ತ್ರಿಗಳಿಗೆ ದೈವರಾತನ ಪರಿಚಯವಾಗಿದ್ದರೂ ಮುಖತಃ ಸಂದರ್ಶಿಸಿರಲಿಲ್ಲ. ಆದ್ದರಿಂದ ಈಗ ಸಾಂದರ್ಭಿಕವಾಗಿ ಇಬ್ಬರೂ ಪರಸ್ಪರ ಭೇಟಿಯಾದಾಗ ಆಧ್ಯಾತ್ಮಿಕ ಕುರಿತಾದ



ಭಗವಾನ್ ಶ್ರೀ ರಮಣ ಮಹರ್ಷಿಗಳು

ಯೋಗಪ್ರಕ್ರಿಯೆಗಳು, ಅನುಷ್ಠಾನ, ತಪಸ್ಸು ಇವೇ ಇತ್ಯಾದಿ ವಿಷಯಗಳ ಬಗೆಗೆ ಸಂವಾದ ಮತ್ತು ಚರ್ಚೆಗಳು ನಡೆದವು. ಹೀಗಿರುವಾಗ ಗಣಪತಿಮುನಿಗಳು ಇನ್ನೂ ಅಲ್ಲಿಗೆ ಆಗಮಿಸಿರಲಿಲ್ಲ. ದೈವರಾತನಿಗೆ ರಮಣಮಹರ್ಷಿಗಳನ್ನು ಕಾಣುವ ತವಕ ಹೆಚ್ಚುತ್ತಲಿತ್ತು. ಆದ್ದರಿಂದ ಆತನೊಬ್ಬನೇ ಅರುಣಾಚಲದ ಕಡೆಗೆ ಹೊರಟನು.

ಶ್ರೀ ರಮಣಮಹರ್ಷಿಗಳ ಜೀವನ ದರ್ಶನ

ಆರ್ಷಭೂಮಿ ಭಾರತದಲ್ಲಿ ಋಷಿ-ಮುನಿಗಳ, ಆತ್ಮಜ್ಞಾನಿಗಳ ಆಧ್ಯಾತ್ಮಿಕ ಪರಂಪರೆ ನಿರಂತರವಾಗಿ ಸಾಗಿಬಂದಿದೆ. ಅಂತಹ ಪರಂಪರೆಯಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳೂ ಒಬ್ಬರಾಗಿದ್ದಾರೆ ವೇದ ಕಾಲದ ಋಷಿಗಳಂತೆ ಇವರು ತಪಸ್ಸಿನಿಂದ ನೇರವಾಗಿ ಆತ್ಮದ ಅರಿವನ್ನು ಅದರ ಸಹಜ ಸತ್ಯದ ಸಾಕ್ಷಾತ್ಕಾರವನ್ನು ಪಡೆದವರು. ಶಾಸ್ತ್ರಾಧ್ಯಯನದಿಂದಾಗಲಿ, ಅನುಮಾನ, ತರ್ಕಗಳಿಂದಾಗಲಿ ಇವರು ಏನನ್ನೂ ಬೋಧಿಸಲಿಲ್ಲ. ತಪಸ್ಸಿನಿಂದ ಏನನ್ನು ಅನುಭವಿಸಿದರೋ ತಮ್ಮ ಅಂತರಂಗದ ಒಳಗಣ್ಣಿನಿಂದ ಯಾವ ಸತ್ಯವನ್ನು ಕಂಡರೋ ಅದನ್ನೇ ಸರಳವಾಗಿ ತಮ್ಮಲ್ಲಿಗೆ ಸತ್ಯವನ್ನು ಅರಸಿಬಂದ ಅನ್ವೇಷಕರಿಗೆ ವೇದಿಸಿದರು.

ತಮಿಳುನಾಡಿನ ಮಧುರೆಯ ಸಮೀಪ ತಿರುಚುಳಿ (ತಿರುಚ್ಚುಳಿ) ಎಂಬ ಚಿಕ್ಕ ಹಳ್ಳಿಯಿದೆ. ಇದು ಆವರ್ತಪುರ ಎಂದು ಪ್ರಸಿದ್ಧವಾಗಿದೆ. ಇಲ್ಲಿ ಸುಂದರಂ ಅಯ್ಯರ ಮತ್ತು ಅಲಗಮ್ಮ (ಅಲಗಮಾಳ) ಎಂಬ ದಂಪತಿಗಳು ವಾಸವಾಗಿದ್ದರು. ಸುಂದರಂ ಅಯ್ಯರರು ಮೊದಲು ಒಬ್ಬ ಕರಣಿಕ (ಅಕೌಂಟೆಂಟ್) ರ ಬಳಿ ಗುಮಾಸ್ತರಾಗಿದ್ದು ಈ ವೃತ್ತಿಯಿಂದ ಬರುವ ಹಣದಲ್ಲಿ ಜೀವನ ನಿರ್ವಹಿಸುತ್ತಿದ್ದರು. ಅನಂತರ ಸ್ವತಂತ್ರ ಕರಣಿಕರಾಗಿ ಕೆಲಸ ಮಾಡುತ್ತ ಮುಂದೆ ಪ್ರಮಾಣಪತ್ರವಿಲ್ಲದ ನ್ಯಾಯವಾದಿಗಳಾಗಿ (ವಕೀಲರಾಗಿ) ವೃತ್ತಿ ಮಾಡಲು ಅನುಮತಿ ಪಡೆದರು. ತಮ್ಮ ಉದ್ಯೋಗದಲ್ಲಿ ಅಭಿವೃದ್ಧಿ ಹೊಂದಿದ ಇವರು ತಮ್ಮ ವಾಸಕ್ಕೆ ತಕ್ಕಷ್ಟು ಅನುಕೂಲವಾದ ಮನೆಯನ್ನು ಕಟ್ಟಿಸಿಕೊಂಡರು. ಈ ಮನೆಯಲ್ಲಿ ಹೊರಗಿನಿಂದ ಬಂದ ಅತಿಥಿಗಳಿಗಾಗಿಯೇ ಒಂದು ಭಾಗವನ್ನು ಕಾಯ್ದಿರಿಸಿದ್ದರು. ಸುಂದರಂ ಅಯ್ಯರರು ಉದಾರ ಮನೋಭಾವದವರಾಗಿದ್ದು ತಮ್ಮಲ್ಲಿಗೆ ಬಂದ ಅತಿಥಿ ಅಭ್ಯಾಗತರಿಗೆ ಆದರದಿಂದ ಉಪಚರಿಸುತ್ತಿದ್ದರು. ಇದರಿಂದ ಅವರ ಜನಪ್ರಿಯತೆ ಹೆಚ್ಚುತ್ತ ಅವರಿಗೆ ಊರಿನಲ್ಲಿ ಗಣ್ಯ ಸ್ಥಾನವು ದೊರಕಿತ್ತು.

ಸುಂದರಂ ಅಯ್ಯರ ಮತ್ತು ಅಳಗಮ್ಮ ಇವರ ಮಗನಾಗಿ 1879 ಡಿಸೆಂಬರ 29 ನಡುರಾತ್ರಿ. ಅಂದು ಆರ್ದ್ರಾ ದರ್ಶನ ಮಂಗಳ ಮಹೋತ್ಸವ. ಶ್ರೀ ಭೂಮಿನಾಥೇಶ್ವರ ದೇವರು ನಗರ ಪ್ರದಕ್ಷಿಣೆ ಮುಗಿಸಿ ಒಂದು ಗಂಟೆಗೆ ಮಂದಿರ ಪ್ರವೇಶಿಸುವ ಸಮಯದಲ್ಲಿ ರಮಣರು ಜನ್ಮ ತಾಳಿದರು. ಭಾರತೀಯ ಪಂಚಾಂಗದಂತೆ ಪ್ರಮಾಧಿ ಸಂವತ್ಸರ ಧನುರ್ಮಾಸ ಪುನರ್ವಸು ನಕ್ಷತ್ರ. ತಂದೆ ತಾಯಿಯರು ಈ ಮಗುವಿಗೆ ವೆಂಕಟರಮಣ ಎಂದು ನಾಮಕರಣ ಮಾಡಿದರು. ಇವರಿಗೆ ಅಣ್ಣ ನಾಗಸ್ವಾಮಿ ತಮ್ಮ ನಾಗಸುಂದರಂ ಮತ್ತು ಅಲಮೇಲು ಎಂಬ ಒಬ್ಬ ತಂಗಿ ಒಟ್ಟು ನಾಲ್ವರು ಮಕ್ಕಳಿದ್ದರು. ಹೀಗೆ ಸುಂದರಂ ಕುಟುಂಬ ಸಂತೋಷವಾಗಿತ್ತು.

ಆರ್ದ್ರಾ ದರ್ಶನದ ದಿನ ಅಂದು ವಿಶ್ವಸೃಷ್ಟಿ ಮತ್ತು ಲಯದ ತಾಂಡವ ನೃತ್ಯದಲ್ಲಿ ಶಿವನು ನಟರಾಜನ ರೂಪದಿಂದ ಭಕ್ತರಿಗೆ ದರ್ಶನವಿತ್ತ ಸ್ಮರಣಾರ್ಥವಾಗಿ ಶೈವರು ಭಕ್ತಿಯಿಂದ ಸಂಭ್ರಮಿಸುವ

ದಿನ. ಭಾರತೀಯ ಪದ್ಧತಿಯಂತೆ ಬೆಳಗಿನ ಜಾವದಿಂದ ಮುಂದಿನ ಬೆಳಗಿನ ಜಾವದವರೆಗೆ ದಿನಮಾನವನ್ನು ಎಣಿಸುವ ಕ್ರಮವೂ ಇರುವುದರಿಂದ ಆ ವರ್ಷ ಆರ್ದ್ರಾ ದರ್ಶನವು 29 ನೇ ದಿನಾಂಕದಂದೇ ಬಂದಿತ್ತು.

ವೆಂಕಟರಮಣನು ಹನ್ನೊಂದನೇ ವಯಸ್ಸಿಗೆ ದಿಂಡಿಗಲ್ಲಿನ ಶಾಲೆಗೆ ಹೋಗತೊಡಗಿದನು. ಆತನಿಗೆ ಹನ್ನೆರಡು ವರ್ಷವಾಗುತ್ತಿರುವಾಗ ಸುಂದರಂ ಅಯ್ಯರರು ನಿಧನರಾದರು. ಸಂತೋಷದಿಂದಿರುವ ಆ ಕುಟುಂಬಕ್ಕೆ ದುಃಖದ ಬರಸಿಡಿಲು ಬಂದೆರಗಿತು. ಒಂದಾಗಿದ್ದ ಕುಟುಂಬ ಚೆಲ್ಲಾಪಿಲ್ಲಿಯಾಯಿತು. ಆಗ ತಂದೆಯ ಸೋದರ ಸುಬ್ಬಅಯ್ಯರರು ಮಧುರೈನಲ್ಲಿ ವಾಸಮಾಡುತ್ತಿದ್ದು ಮಕ್ಕಳು ಅವರಲ್ಲಿ ಆಶ್ರಯ ಪಡೆದರು. ವೆಂಕಟರಮಣನ ಮುಂದಿನ ವಿದ್ಯಾಭ್ಯಾಸ ಸ್ಕೇಟ್ಸ್ ಮಿಡ್ಲ ಸ್ಕೂಲಿನಲ್ಲಿಯೂ ನಂತರ ಅಮೇರಿಕನ್ ಮಿಷನ್ ಹೈಸ್ಕೂಲಿನಲ್ಲಿಯೂ ನಡೆಯಿತು. ಅವನಲ್ಲಿ ವಿಶೇಷ ಬುದ್ಧಿವಂತಿಕೆ ಕಂಡು ಬರದಿದ್ದರೂ ಆತನಲ್ಲಿಯ ಅಸಾಧಾರಣ ನೆನಪಿನ ಶಕ್ತಿ ಅವನ ಕಲಿಕೆಗೆ ಸಹಾಯಕವಾಗಿತ್ತು. ಒಂದು ಸಲ ಪಾಠವನ್ನು ಕೇಳಿದರೆ ಸಾಕು ಮತ್ತೆ ಅದನ್ನು ಓದುವ ಅಗತ್ಯವಿರಲಿಲ್ಲ. ಆದರೆ ಆತನಿಗೆ ಇದಾವುದರಲ್ಲಿಯೂ ಆಸಕ್ತಿಯಿರಲಿಲ್ಲ. ಅಸ್ವಾಭಾವಿಕ ನಿದ್ದೆ ಮಾಡುವ ಗುಣವೇ ಆತನ ವಿಶೇಷತೆಯಾಗಿತ್ತು.

ಅಂದು ದಿಂಡಿಗಲ್ಲಿನಲ್ಲಿ ನಡೆದ ಘಟನೆ ಇದಕ್ಕೊಂದು ಒಳ್ಳೆಯ ಉದಾಹರಣೆ. ಮನೆಯಲ್ಲಿ ಯಾವುದೋ ಒಂದು ಸಮಾರಂಭ ನಡೆದಿತ್ತು. ಅದನ್ನು ಮುಗಿಸಿ ಮನೆಯವರೆಲ್ಲ ರಾತ್ರಿ ದೇವಾಲಯಕ್ಕೆ ಹೋದಾಗ ಮುಂದಿನ ಕೋಣೆಯಲ್ಲಿ ಪುಸ್ತಕ ಓದುತ್ತ ಕುಳಿತಿದ್ದ ವೆಂಕಟರಮಣನು ಮನೆಯ ಬಾಗಿಲು ಕಿಡಕಿಗಳ ಕದಮುಚ್ಚಿ ಅಗಳಿ ಹಾಕಿ ನಿದ್ದೆ ಹೋದನು. ದೇವಾಲಯದಿಂದ ಹಿಂದಿರುಗಿದ ಮನೆಯವರು ಬಾಗಿಲು ಕಿಡಕಿಗಳ ಜೋರಾಗಿ ಬಡಿದರು. ಕೂಗಿ ಕರೆದರು. ಆದರೂ ಎಚ್ಚರವಾಗದಿರಲು ಅಂತೂ ಹೇಗೋ ಬಾಗಿಲು ತೆರೆದು ಒಳಗೆ ಹೋದರು. ಒಳಗೆ ಜಗತ್ತಿನ ಯಾವ ಪರಿವೆಯಿಲ್ಲದೆ ಗಾಢ ನಿದ್ದೆಯಲ್ಲಿ ಮಲಗಿದ್ದ ವೆಂಕಟರಮಣನ ಮನೆಯವರೆಲ್ಲ ಎಚ್ಚರಿಸಲು ಹೊಡೆದು ಬಡಿದು ಏನೆಲ್ಲ ಮಾಡಿದರೂ ಯಾರಿಂದಲೂ ಸಾಧ್ಯವಾಗಲಿಲ್ಲ. ಮರುದಿನ ಬೆಳಿಗ್ಗೆ ಎಚ್ಚರವಾದಾಗಲೇ ಮನೆಯವರಿಂದ ಅವನಿಗೆ ವಿಷಯ ತಿಳಿದಿದ್ದು. ಇದೇ ರೀತಿಯ ಘಟನೆ ಮಧುರೈನಲ್ಲಿಯೂ ನಡೆಯಿತು. ವೆಂಕಟರಮಣನು ಚೆಂಡಾಟ, ಕಾಲ್ಚೆಂಡಿನಾಟ, ಕುಸ್ತಿ. ಈಜಾಟ ಎಲ್ಲದರಲ್ಲಿ ಮೇಲುಗೈ ಸಾಧಿಸುತ್ತಿರಲು ಸಿಟ್ಟಾದ ಹುಡುಗರು ಆತ ನಿದ್ರಿಸುತ್ತಿರುವಾಗ ಆತನನ್ನು ಎತ್ತಿಕೊಂಡು ಬೇಕಾದ ಕಡೆ ಒಯ್ದು ಮನ ಬಂದಂತೆ ಬಡಿದು ಪುನಃ ಆತನನ್ನು ಮೊದಲಿನಂತೆಯೇ ಹಾಸಿಗೆಯ ಮೇಲೆ ಮಲಗಿಸಿ ಹೋದರು. ಮರುದಿನ ಅವರಾಗಿಯೇ ಇದನ್ನು ಹೇಳುವವರೆಗೂ ಅದಾವುದೂ ಆತನಿಗೆ ತಿಳಿದಿರಲಿಲ್ಲ.

ಆಕಸ್ಮಿಕವೋ ಅಥವಾ ಪರಿಸ್ಥಿತಿಯ ಪರಿಣಾಮವೋ, ದಿವ್ಯಾನುಭೂತಿಯ ಸೆಳೆತವೋ ಸುಂದರಂ ಅಯ್ಯರರ ಮನೆತನದ ಪರಂಪರೆಯಲ್ಲಿ ಆಗಾಗ ಯಾರಲ್ಲಾದರೂ ವೈರಾಗ್ಯಭಾವವು ಕಾಣಿಸಿಕೊಳ್ಳುತ್ತಿದ್ದುದಂತೂ ಸತ್ಯವಾಗಿತ್ತು. ಸುಂದರಂ ಅಯ್ಯರರ ಚಿಕ್ಕಪ್ಪನು ದಂಡ ಕಮಂಡಲ ಹಿಡಿದು ದೇಶಾಂತರ ಹೋಗಿದ್ದನು. ಅವರ ಅಣ್ಣ ಸಮೀಪದ ಊರಿಗೆ ಹೋಗಿಬರುವುದಾಗಿ ತಿಳಿಸಿ ತೆರಳಿದವನು ಮತ್ತೆ ಮನೆಗೆ ಮರಳದೆ ಸನ್ಯಾಸಿಯಾಗಿ ಎತ್ತಲೋ ಕಣ್ಮರೆಯಾಗಿದ್ದನು.

ಮರಣ ಭಯದಲ್ಲಿ ಅಮೃತತ್ವದ ಅನುಭವ

ಅದೊಂದು ದಿನ ಮಧುರೈನಲ್ಲಿ ತನ್ನ ಚಿಕ್ಕಪ್ಪನ ಮನೆಯ ಮಾಳಿಗೆಯ ಮೇಲೆ ಬಾಲಕ ರಮಣ ಹಾಯಾಗಿ ಮಲಗಿದ್ದ. ಮನೆಯಲ್ಲಿ ಯಾರೂ ಇರಲಿಲ್ಲ. ಅವನೊಬ್ಬನೇ ಇದ್ದ. ಅದೇಕೋ ಇದ್ದಕ್ಕಿದ್ದ ಹಾಗೆ ಅವನಲ್ಲಿ ತಂತಾನೆ ಮರಣಭಯ ಬಂದು ಬಿಟ್ಟಿತು. 'ನಾನು ಸಾಯುತ್ತಿದ್ದೇನೆ' ಎಂಬ ಭಾವನೆ ತೀವ್ರವಾಯಿತು. ಸಾವಿನ ಕಲ್ಪನೆಯಲ್ಲಿ ದೇಹದಿಂದ ಆಚೆಗೆ ಮನಸ್ಸನ್ನು ಕೇಂದ್ರೀಕರಿಸಿ ದೂರದಲ್ಲಿ ಬೇರಾಗಿ ನಿಂತು ನಿಶ್ಚಲವಾಗಿ ಬಿದ್ದಿರುವ ದೇಹವನ್ನು ಕಲ್ಪಿಸಿಕೊಂಡ. ಈ ದೇಹ ಈಗ ಸತ್ತು ಹೋಗಿದೆ. ಇದನ್ನು ಸ್ಮಶಾನಕ್ಕೆ ಒಯ್ದು ಸುಟ್ಟು ಬೂದಿಮಾಡುತ್ತಾರೆ. ಆಗ ನಾನು ಏನಾಗುತ್ತೇನೆ. ಅಂದು ನಾನು ನಿದ್ದೆಯಲ್ಲಿರುವಾಗ ಕೆಲವು ಹುಡುಗರು ಎತ್ತಿಕೊಂಡು ಹೋಗಿ ಮನಬಂದಂತೆ ಬಡಿದರು. ಆದಾಗ್ಯೂ ನನಗೆ ನೋವಿನ ಯಾವ ಅನುಭವವೂ ಆಗಲೇ ಇಲ್ಲ. ಆಗ ನಾನು ಏನಾಗಿದ್ದೆ ಅದೆಂತಹ ಸ್ಥಿತಿಯಲ್ಲಿ ಇದ್ದೆ. ಜೀವಭಾವದ ಮನಸ್ಸಿನ ಅರಿವು ಮರೆಯಾಗಿ ಅವ್ಯಕ್ತ ಸುಪ್ತ ಸ್ಥಿತಿಯಲ್ಲಿ ಇದ್ದೆನೆ? ಹಾಗಾದರೆ, ಈಗ ಇರುವುದಕ್ಕಿಂತ ಭಿನ್ನವಾದ ಬೇರೊಂದು ಸ್ಥಿತಿಯಿದೆ! ಅದೇ ನಿಜವಾದುದು! ಅದೇ ಸಹಜವಾದುದು! ಹೀಗೆ ಆತನಲ್ಲಿ ಮರಣಭಯದಿಂದ ಅಮೃತತ್ವದ ಅನುಭವ ಮೂಡಿಬಂತು.

ಕೆಲವೊಮ್ಮೆ ರಾತ್ರಿ ಇತ್ತ ಎಚ್ಚರವೂ ಅಲ್ಲದ ಅತ್ತ ನಿದ್ರೆಯೂ ಅಲ್ಲದ ಸುಪ್ತ ಸ್ಥಿತಿಯಲ್ಲಿ ಮಲಗಿರುತ್ತಿದ್ದನು. ಬಾಹ್ಯಮನಸ್ಸಿನ ವಿಚಾರಗಳ ಆಚೆ ಸಾಕ್ಷಿಭಾವದಲ್ಲಿ ಲೀನವಾಗಿ ಇರುವುದು ಅವನಿಗೆ ಸಹಜವಾಗತೊಡಗಿತು. ಅವನಲ್ಲಿ ಆತ್ಮಜಾಗ್ರತಿಯ ಅರಿವು ಪ್ರಕಾಶಿಸತೊಡಗಿತ್ತು.

ತಿರುಚ್ಚುಳಿಯಲ್ಲಿ ಇರುವಾಗ ಒಂದು ದಿನ ನಡೆದ ಘಟನೆಯಿದು. ವೃದ್ಧರಾದ ಅಪರಿಚಿತ ಸಂಬಂಧಿಕರೊಬ್ಬರು ಭೇಟಿಯಾದಾಗ ವೆಂಕಟರಮಣನು ಸಹಜವಾಗಿ ಅವರನ್ನು ತಾವು ಎಲ್ಲಿಂದ ಬಂದಿರೆಂದು ಕೇಳಿದನು. ಅದಕ್ಕೆ ಆ ವೃದ್ಧರು 'ಅರುಣಾಚಲದಿಂದ' ಎಂದರು. ಇದರಿಂದ ಭಾವುಕನಾದ ಬಾಲಕ ವೆಂಕಟರಮಣನು 'ಏನು, ಅರುಣಾಚಲವೇ? ಅದೆಲ್ಲಿದೆ?' ಎಂದು ಕೇಳಲು ಅರುಣಾಚಲವು ತಿರುವಣ್ಣಾಮಲೈನಲ್ಲಿ ಇರುವದೆಂದು ಆ ವೃದ್ಧರು ವಿವರಿಸಿದರು.

ವೆಂಕಟರಮಣನು ತಿರುಚ್ಚುಳಿಯಿಂದ ಮಧುರೈಗೆ ಬಂದು ವಾಸಿಸುತ್ತಿರುವಾಗ ನವೆಂಬರ 1895 ರಲ್ಲಿ ಚಿಕ್ಕಪ್ಪನು ಯಾರಿಂದಲೋ ಎರವಲು ತಂದ ಶಿವಭಕ್ತರ ಕುರಿತಾದ 'ಪೆರಿಯ ಪುರಾಣ' ಎಂಬ ಪುಸ್ತಕವನ್ನು ಓದಿ ಅದರಿಂದ ಪ್ರಭಾವಿತನಾದನು. ಅದರಲ್ಲಿ ತ್ಯಾಗ ಜೀವನದಿಂದ ಪರಮಾತ್ಮನಲ್ಲಿ ಒಂದಾಗುವ ವಿಷಯದ ಬಗ್ಗೆ ಸಾರಿ ಹೇಳಲಾಗಿತ್ತು.

ಅನುಭವವೇದ್ಯ ದಿವ್ಯ ಅರಿವಿನ ಪ್ರವಾಹ

ಅನುಭವ ವೇದ್ಯ ದಿವ್ಯ ಅರಿವಿನ ಪ್ರವಾಹವೊಂದು ಆತನ ಸುಪ್ತ ಮನಸ್ಸಿನಲ್ಲಿ ಹರಿಯಲು ಪ್ರಾರಂಭಿಸಿತ್ತು. ಕರ್ತೃ ಮತ್ತು ವಸ್ತುಗಳ ದ್ವೈತಭಾವನೆಗೆ ಅತೀತವಾದ ಈ ಪ್ರಜ್ಞೆಯು ಯಾವುದೇ ಒಂದು ವ್ಯಕ್ತಿ ಅಥವಾ ವಸ್ತುವಿನ ಕುರಿತಾಗಿ ಆಗಿರುವದಲ್ಲ. ಭೌತಿಕ ಮತ್ತು ಮಾನಸಿಕ ಎಲ್ಲೆಯನ್ನು ದಾಟಿದ ಅವಸ್ಥೆ ಇದಾಗಿದ್ದರೂ ಭೌತಿಕ ಹಾಗೂ ಮಾನಸಿಕ ಕ್ರಿಯೆಗಳು ನಿರಾಬಾಧಿತವಾಗಿ ಸರಿಯಾಗಿ ನಡೆಯುವುದಕ್ಕೆ ಏನೂ ಆತಂಕವಿರಲಿಲ್ಲ.

ಆಧ್ಯಾತ್ಮಿಕ ಬೆಳಗಿನ ಮುಂಜಾವಿನಲ್ಲಿ ಮುನ್ನಡೆಯುತ್ತಿದ್ದ ವೆಂಕಟರಮಣನಲ್ಲಿ ಈಗ ಆಹಾರ – ವಿಹಾರ, ಆಟ – ಪಾಟ, ಓದು – ಬರಹಗಳ ಪ್ರಾಪಂಚಿಕ ವ್ಯವಹಾರಗಳ ಬಗೆಗೆ ಯಾವ ಆಸಕ್ತಿಯೂ ಇರಲಿಲ್ಲ. ಅವನ ಈ ಉದಾಸೀನ ಭಾವದಿಂದಾಗಿ ಚಿಕ್ಕಪ್ಪ ಮತ್ತು ಅಣ್ಣನ ಕೋಪ ತಾಪಗಳು ಸಹಜವಾಗಿಯೇ ರಮಣನ ಬಗೆಗೆ ಉಂಟಾದವು. ಹೀಗಿರುವಾಗ ಅಂದು ಶಾಲೆಯಲ್ಲಿ ಇಂಗ್ಲಿಷ್ ವ್ಯಾಕರಣದ ಪ್ರಶ್ನೆಗೆ ಸರಿಯಾಗಿ ಉತ್ತರಿಸಲಿಲ್ಲ ಎಂಬ ಕಾರಣಕ್ಕೆ ಮನೆಯಿಂದ ಬರುವಾಗ ಸರಿಯಾದ ಉತ್ತರವನ್ನು ಮೂರು ಬಾರಿ ಬರೆದು ತರುವ ಶಿಕ್ಷೆಯನ್ನು ಉಪಾಧ್ಯಾಯರು ನೀಡಿದರು. ಆದರೆ ರಮಣನಿಗೆ ಒಂದು ಸಲ ಬರೆಯಲು ಪ್ರಾರಂಭಿಸುತ್ತಿದ್ದಂತೆಯೇ 'ಇದೆಲ್ಲ ಯಾಕೆ' ಎನಿಸಿತು. ಬರೆಯುವುದನ್ನು ಬಿಟ್ಟು ಧ್ಯಾನದಲ್ಲಿ ಮಗ್ನನಾದನು. ಇದನ್ನು ಕಂಡ ಅಣ್ಣ ನಾಗಸ್ವಾಮಿಗೆ ಕೋಪ ಬಂದು "ನಿನ್ನಂಥವನಿಗೆ ಈ ಓದು – ಬರಹ ವಿದ್ಯಾಭ್ಯಾಸವೆಲ್ಲ ಯಾಕೆ? ಎಂದು ಕಟುಕಿ ಆಡಿದಾಗ ಹದಿನಾರರ ಹರೆಯದ ರಮಣನಿಗೆ ಏನೂ ಕೋಪವೇ ಬರಲಿಲ್ಲ.. ಬದಲಿಗೆ "ಹೌದು, ನನ್ನಂಥವನಿಗೆ ಇದೆಲ್ಲ ಯಾಕೆ?" ಎನಿಸಿತು. ಅಂತೆಯೇ ಆತನೀಗ ಒಂದು ಖಚಿತ ನಿರ್ಧಾರಕ್ಕೆ ಬಂದು 'ನಾನು ಶಾಲೆಗೆ ಹೋಗುತ್ತೇನೆ' ಎಂದು ಎದ್ದು ನಿಂತಾಗ 'ಹಾಗಾದರೆ, ಕೆಳಗೆ ಪೆಟ್ಟಿಗೆಯಲ್ಲಿ ಐದು ರೂಪಾಯಿ ಇದೆ. ನಿನ್ನ ಶಾಲೆಯ ಸಮೀಪವೇ ನನ್ನ ಕಾಲೇಜು ಇದೆ. ನನ್ನ ಕಾಲೇಜು ಶುಲ್ಕವನ್ನು ಕಟ್ಟಿ ಬಿಡು.' ಎಂದು ಅಣ್ಣ ನಾಗಸ್ವಾಮಿ ಹೇಳಿದನು. ಆಗ ರಮಣನು 'ಓ! ಇದೂ ಸಹ ದೈವ ಸಂಕಲ್ಪವೇ ಇರಬೇಕು' ಎಂದು ಮನದಲ್ಲಿಯೇ ಅಂದುಕೊಳ್ಳುತ್ತ ತವಕದಿಂದ ಊಟ ಮುಗಿಸಿದ. ಆತ್ಮಾನುಭವದ ಸಹಜ ಸ್ಥಿತಿಯನ್ನು ಅರಿಯುವುದಕ್ಕಾಗಿ ಆತ ಅರುಣಾಚಲವನ್ನು ಸೇರಿ ತಪಸನ್ನಾಚರಿಸುವ ಸಂಕಲ್ಪದಲ್ಲಿದ್ದ. ಆ ಸಮಯಕ್ಕೆ ಆತನಲ್ಲಿ ಹದಿಹರೆಯದ ಭಾವಾವೇಶವಾಗಲಿ, ಆತುರದ ತೀರ್ಮಾನವಾಗಲಿ, ಮಾನಸಿಕ ತುಮುಲವಾಗಲಿ ಇರಲಿಲ್ಲ.

ಕೇವಲ ಅರುಣಾಚಲೇಶ್ವರನ ದಿವ್ಯ ಸಾನ್ನಿಧ್ಯದ ಕಲ್ಪನೆಯಿಂದಲೇ ರಮಣನ ದೈಹಿಕ ಹಸಿವು ಹಿಂಗಿಹೋಗಿತ್ತು. ನೆಪಕ್ಕೆ ಮಾತ್ರ ಊಟ ಮುಗಿಸಿದ. ಹೊಟ್ಟೆ ತುಂಬಿತೋ ಇಲ್ಲವೋ ಗೊತ್ತಿಲ್ಲ. ಅರುಣಾಚಲಕ್ಕೆ ಹೋಗುವ ಕಾತರ. ಪೆಟ್ಟಿಗೆ ಹತ್ತಿರ ಬಂದಾಗ ತನಗೆ ಮೂರು ರೂಪಾಯಿ ಸಾಕು. ಅಗತ್ಯಕ್ಕಿಂತ ಹೆಚ್ಚು ಹಣ ಬೇಡ ಎನಿಸಿತು. ಅಷ್ಟು ಹಣಮಾತ್ರ ತೆಗೆದುಕೊಂಡು ಉಳಿದ ಎರಡು ರೂಪಾಯಿಯನ್ನು ಅಲ್ಲಿಯೇ ಇರಿಸಿದ. ತರುವಾಯ ತನ್ನ ಬಗೆಗೆ ಮನೆಯವರು ಯಾರೂ ಆತಂಕಪಡಬಾರದು ಸುಮ್ಮನೆ ಅರಸುತ್ತ ಅಲೆದು ಶ್ರಮಿಸಬಾರದು ಎಂಬ ಮಾನವೀಯ ಸಹಜ ಅರಿವಿನಿಂದ ಒಂದು ಪತ್ರವನ್ನು ಬರೆದಿರಿಸಿದ. ಅದರ ಒಕ್ಕಣೆ ಈ ರೀತಿ ಇತ್ತು.

'ನಾನು ತಂದೆಯನ್ನು ಹುಡುಕಿ ಅವನ ಆಜ್ಞೆಯಂತೆಯೇ ಇಲ್ಲಿಂದ ಹೊರಟಿದ್ದೇನೆ. ಇದು ಮಹತ್ವದ ಸಾಹಸಯಾತ್ರೆ. ಆದ್ದುದರಿಂದ ಯಾರೂ ಇದಕ್ಕಾಗಿ ಶೋಕಿಸಬಾರದು. ಹುಡುಕಲು ಯತ್ನಿಸಬಾರದು, ಹಣ ಖರ್ಚು ಮಾಡಬಾರದು. ನಿನ್ನ ಕಾಲೇಜು ಶುಲ್ಕ ಕಟ್ಟಲಾಗಿಲ್ಲ. ಇದರೊಂದಿಗೆ ಎರಡು ರೂಪಾಯಿ ಇರಿಸಿದೆ.'

ಪತ್ರದಲ್ಲಿ ಎಲ್ಲಿಯೂ ಅಂಕಿತವೇ ಇರಲಿಲ್ಲ. ನಾಮರೂಪದಿಂದ ನಿರ್ದೇಶಿಸುವ ಈ ಭಾವರೂಪ ಜಗತ್ತಿನಲ್ಲಿ ವ್ಯಾವಹಾರಿಕ ಉಪಯೋಗಕ್ಕಾಗಿ ಅಂಕಿತವು ಬಳಕೆಯಾಗುವದು. ಆತ್ಮ ಚೈತನ್ಯಕ್ಕಿಂತ ನಾನು ಬೇರೆ ಎಂದು ಆತನಿಗೆ ಅನಿಸಲೇ ಇಲ್ಲ. ಹಾಗಿರುವಾಗ ಆತ್ಮ ಚೈತನ್ಯಕ್ಕೆ ಹೊರತಾದ ನಾಮನಿರ್ದೇಶನದ ಅಗತ್ಯ ನನಗೇಕೆ ಎನಿಸಿತು.

ಪತ್ರವನ್ನು ಬರೆದಿಟ್ಟ ರಮಣರು ಮನೆಗೆ ವಿದಾಯಹೇಳಿ ರೈಲು ನಿಲ್ದಾಣದತ್ತ ಹೆಜ್ಜೆಹಾಕಿದರು. ಅಂದು 1896 ಅಗಸ್ಟ್ 26 ಆತ್ಮಾನುಭವದ ಆರ್ಜನೆಗಾಗಿ ಆ ಚೈತನ್ಯಶಕ್ತಿಯ ದಿವ್ಯ ಸಾಕ್ಷಾತ್ಕಾರಕ್ಕಾಗಿ ತಿರುವಣ್ಣಾಮಲೈನತ್ತ ಸತ್‌ಸಂಕಲ್ಪದಿಂದ ಹೊರಟ ದಿನ. ರೈಲು ಹೊರಡುವುದು 11.45 ಕ್ಕೆ. ಆಗಲೇ 12 ಗಂಟೆಯಾಗಿತ್ತು. ಆದರೆ ರೈಲು ಇನ್ನೂ ಬಂದಿರಲಿಲ್ಲ. ಎರಡು ರೂಪಾಯಿ ಹದಿಮೂರು ಆಣೆಗೆ ತಿಂಡಿವನಂಗೆ ಟಿಕೇಟು ತೆಗೆದರು. ರೈಲು ಮಧುರೈ ದಾಟಿ ಮುಂದಕ್ಕೆ ಸಾಗುತ್ತಿತ್ತು. ಆಗ ಸ್ವಲ್ಪ ಹೊತ್ತಿಗೆ ಮೌಲ್ವಿ ಒಬ್ಬರು ರಮಣರನ್ನು ಮಾತನಾಡಿಸುತ್ತ 'ಸ್ವಾಮಿ, ಎಲ್ಲಿಗೆ ಹೋಗುತ್ತಿದ್ದೀರಿ?' ಎಂದು ಕೇಳಿದರು. ರಮಣರು 'ತಿರುವಣ್ಣಾಮಲೈಗೆ' ಎನ್ನಲು ತಾನೂ ಅಲ್ಲಿಗೇ ಹೋಗುತ್ತಿರುವದಾಗಿಯೂ ವಿಲ್ಲುಪುರಂನಲ್ಲಿ ರೈಲನ್ನು ಬದಲಾಯಿಸಬೇಕೆಂತಲೂ ತಿಳಿಸಿದರು. ಬೆಳಗಿನಜಾವ ಮೂರುಗಂಟೆಗೆ ರೈಲು ವಿಲ್ಲುಪುರಂ ನಿಲ್ದಾಣವನ್ನು ಸೇರಿತು. ರಮಣರು ಅಲ್ಲಿ ಇಳಿದು ತಿರುವಣ್ಣಾಮಲೈ ಹಾದಿ ಅರಸಿ ಹೊರಟರು. ರಾತ್ರಿಯ ತನಕ ನಡೆದು ಸುಮಾರು ಹತ್ತು ಮೈಲಿ ಕ್ರಮಿಸಿದರು. ಹಸಿವು ಬಾಯಾರಿಕೆಗಳ ಮರೆತು ನಿರಂತರ ನಡೆದು ತುಂಬಾ ದಣಿದಿದ್ದರು. ಕೀಲೂರು ದೇವಾಲಯದಲ್ಲಿ ನಗಾರಿ ಸೇವೆಯಲ್ಲಿದ್ದವನ ಉದಾರತೆಯಿಂದ ಪ್ರಸಾದ ದೊರೆಯಿತು. ಪ್ರಸಾದ ತೆಗೆದುಕೊಂಡು ದೇವಾಲಯದಿಂದ ಹೊರಗೆ ಬರುತ್ತಿರುವಂತೆ ಬವಳಿ ಬಂದು ಬಿದ್ದುಬಿಟ್ಟರು. ಆಗ ಅಲ್ಲಿ ನೆರೆದವರಲ್ಲಿ ಯಾರೋ ನೀಡಿದ ನೀರನ್ನು ಕುಡಿದು ಚೆಲ್ಲಿಹೋಗಿದ್ದ ಪ್ರಸಾದದ ಅಗಳನ್ನು ಹೆಕ್ಕಿತಿಂದು ಹಾಗೆಯೇ ಗಾಢವಾಗಿ ನಿದ್ದೆಹೋದರು.

ಮರುದಿನ ಅಗಸ್ಟ್ 31, ಗೋಕುಲಾಷ್ಟಮಿ ಬೆಳಿಗ್ಗೆ ಎಚ್ಚರವಾದಾಗ ಮುತ್ತುಕೃಷ್ಣ ಭಾಗವತರ್ ಎಂಬವರು ರಮಣರನ್ನು ತಮ್ಮ ಮನೆಗೆ ಕರೆದೊಯ್ದು ಊಟ ನೀಡಿದರು. ಆಗ ರಮಣರು ತಮ್ಮ ಕಿವಿಯಲ್ಲಿರುವ ಬಂಗಾರದ ಓಲೆಗಳನ್ನು ಭಾಗವತರಲ್ಲಿ ಅಡವಿಟ್ಟು ಪ್ರಯಾಣ ಮುಂದುವರಿಸಲು ಅನುವಾದರು. ಹಣವನ್ನು ನೀಡಿದ ಮುತ್ತು ಕೃಷ್ಣಭಾಗವತರು ಯಾವಾಗ ಬೇಕಾದರೂ ಹಣ ನೀಡಿ ಓಲೆ ಪಡೆಯಬಹುದು ಎಂದು ರಸೀದಿಯನ್ನೂ ನೀಡಿದರು. ಮನೆಯ ಒಡತಿ ಕನಿಕರಿಸಿ ಪ್ರೀತಿಯಿಂದ ತಿಂಡಿಯ ಪೊಟ್ಟಣವನ್ನು ಕೊಟ್ಟಳು. ಮುಂದೆ ದಾರಿಯಲ್ಲಿ ರಮಣರು ಪ್ರೀತಿಯಿಂದ ಮನೆಯೊಡತಿ ಕೊಟ್ಟ ಪೊಟ್ಟಣವನ್ನು ಹಾಗೆಯೇ ಇರಿಸಿಕೊಂಡು ರಸೀದಿಯನ್ನು ಹರಿದು ಹಾಕಿದರು. ಅಂತೂ ಸಪ್ಟೆಂಬರ್ ಒಂದರಂದು ಅವರು ತಿರುವಣ್ಣಾಮಲೈ ತಲುಪಿದರು. ಆಗಲೇ ಕ್ಷಣಕಾಲ ಎಲ್ಲಿಯೂ ನಿಲ್ಲದೇ ನೇರವಾಗಿ ದೇವಸ್ಥಾನಕ್ಕೆ ಹೋಗಿ 'ತಂದೆ ನಾನು ಬಂದೆ' ಎಂದು ಆ ಮಹಾ ಚೈತನ್ಯ ಶಕ್ತಿಗೆ ಶರಣಾಗಿಬಿಟ್ಟರು. ಕಾವ್ಯಕಂಠ ಗಣಪತಿಮುನಿಗಳು ಈ ಸಂದರ್ಭವನ್ನು 'ಮಧುರೆಯ ಅಮ್ಮನ ಮಡಿಲಿನಿಂದ ತಂದೆಯ ಮಡಿಲಿಗೆ ಚಿಮ್ಮಿದಂತೆ' ಎಂದು ಬಹು ಹೃದಯಂಗಮವಾಗಿ ಅರ್ಥಪೂರ್ಣವಾಗಿ ಗೀತಿಸಿದ್ದಾರೆ. ಮನಸ್ಸಿನ ನೋವು – ನಲಿವು ಮಾನಾಪಮಾನ ತನ್ನದೆನ್ನುವ ಎಲ್ಲವನ್ನು ಸರ್ವಸಮರ್ಪಣ ಭಾವದಲ್ಲಿ ಆ ತಂದೆಗೆ ಅರ್ಪಿಸಿ ಹಗುರವಾಗಿ ನಿರ್ಮಾನಸ ತೆರೆಯ ಆತ್ಮಾನಂದದ ಅಂಬುಧಿಯಲ್ಲಿ ರಮಣರು ಕರಗಿಹೋದರು.

ಬದುಕಿನ ಭವ ಬಂಧನವ ಕಳಚಿ ಮುಕ್ತಭಾವದಿಂದ ಅರುಣಾಚಲ ಶಿವನ ಮಗುವಾಗಿ ಮಂದಿರದಿಂದ ಹೊರಬರುತ್ತಿರುವಂತೆಯೇ ಯಾರೋ ಅಪರಿಚಿತ ವೃದ್ಧರೊಬ್ಬರು 'ಏನೋ, ಮಗು! ಮುಡಿಕೊಡಬೇಕಾ? ಎಂದು ಕೇಳುತ್ತ ತಾವೇ ಪ್ರೇಮದಿಂದ ರಮಣರನ್ನು ಕ್ಷೌರಿಕನ ಬಳಿ ಕರೆದುಕೊಂಡು ಹೋಗಿ ಮುಂಡನ ಮಾಡಿಸಿದರು. ಅನಂತರ ರಮಣರು ಅಲ್ಲಿಯೇ ಸಮೀಪದಲ್ಲಿರುವ ಅಯ್ಯನ

ಕುಳಂ ಕೊಳದಲ್ಲಿ ಇಳಿದು ತಮ್ಮ ಮೈಮೇಲೆ ಇರುವ ಜನಿವಾರ ಮತ್ತು ಕೈಯಲ್ಲಿ ಹಿಡಿದಿರುವ ಭಾಗವತರ ಪತ್ನಿ ಕೊಟ್ಟಿದ್ದ ತಿಂಡಿಪೊಟ್ಟಣ ಎಲ್ಲವನ್ನೂ ಎಸೆದುಬಿಟ್ಟರು. ತಾನು ಉಟ್ಟ ಪಂಚೆಯನ್ನು ಹರಿದು ಕೌಪೀನವಾಗಿ ಧರಿಸಿದರು. ಎಲ್ಲವನ್ನು ಕಳೆದು ಬರಿದಾಗಿ ನಿಂತರು. ಇನ್ನೇನು ಸ್ನಾನ ಮಾಡಬೇಕು ಎಂದು ಕೊಳದ ಮೆಟ್ಟಿಲನ್ನು ಇಳಿಯುವಷ್ಟರಲ್ಲಿ ಧೋ ಧೋ ಎಂದು ಜೋರಾಗಿ ಮಳೆ ಸುರಿಯಿತು. ತನು ತೊಳೆದು ಕೊಳೆ ಕೊಚ್ಚಿಹೋಯಿತು.

ಮನತುಂಬ ಮಲವಿರಲು
ತನುವ ತೊಳೆದರೆ ಸಾಕೆ?
ಮನದ ಕೊಳೆ ಕೊಚ್ಚಿ ಹೋಗಿರಲು
ತನುವ ಮಾಲಿನ್ಯ ಕಾಡುವುದೆ ಒಳಗೆ ?

ತಾಯಿ ಮಗುವನು ಸ್ನಾನ ಮಾಡಿಸುವಂತೆ
ಆ ವಿಶ್ವದೇವಿಯೇ ನನ್ನ ತನು ತೊಳೆಯುತಿಹಳು
ಬರಿದಾಗಿ ನಿಂತಿಹೆನು ನಾನೀಗ ಎಲ್ಲವನು ಚೆಲ್ಲಿ
ವಾಸ್ತವದ ಅರಿವಿನಲಿ ನನ್ನದೇನಿಹುದು ಇಲ್ಲಿ

ಎಲ್ಲವೂ ತಂತಾನೆ ಆಕಸ್ಮಿಕವಾಗಿ ನಿರಪೇಕ್ಷವಾಗಿ ನಡೆಯುತ್ತಲಿತ್ತು. ಅಂತೆಯೇ ರಮಣರು 'ಓ ಸ್ನಾನವೂ ಆಯಿತು! ಎಂದು ಮನದಲ್ಲಿಯೇ ಉದ್ಗರಿಸುತ್ತ ಮನಃ ದೇವಾಲಯಕ್ಕೆ ಬಂದರು. ಝುಂಝಾವಾತದ ಅಬ್ಬರ ಚಳಿಗಾಳಿಯ ಚುಮು ಚುಮು ಕೊರೆತ ತನುವ ಕೊರೆಯುತ್ತಿತ್ತು. ಕೌಪೀನವಲ್ಲದೇ ಬೇರೆನೂ ಇರಲಿಲ್ಲ. ದೇಹವೇ ತನದಲ್ಲ ಎಂಬಂತೆ ರಮಣರು ನಿರಾಕುಲಚಿತ್ತರಾಗಿದ್ದರು. ಬಂದ ಮೊದಲ ನಾಲ್ಕು ತಿಂಗಳು ಸ್ನಾನ ಕೂಡ ಮಾಡಲಿಲ್ಲ. ದೇಹಾಭಿಮಾನ ಶೂನ್ಯರಾಗಿ ವಿರಕ್ತರಾಗಿ ದೇವಾಲಯ ಮಂಟಪ, ಕಟ್ಟೆ-ಚಿಟ್ಟೆ, ಕಂಬಗಳು, ಬೀದಿ ಪಕ್ಕದಲ್ಲಿ ಬಳಕೆಯಿಲ್ಲದೆ ಖಾಲಿ ಇರುವ ಜಾಗಗಳು ಹೀಗೆ ಮನಬಂದಲ್ಲಿ ಆಶ್ರಯ ಪಡೆಯುತ್ತ ಬಾಹ್ಯಲೋಕದ ಪರಿವೆಯೇ ಇಲ್ಲದೇ ಮೌನದ ಮಡಿಲಿಗೆ ಶರಣಾಗಿ ಇದ್ದುಬಿಟ್ಟರು.

ಅರುಣಾಚಲೇಶ್ವರ ಸಹಸ್ರಮಂಟಪದ ಆವರಣದೊಳಗೆ ನೀರವದಲ್ಲಿ ಅದ್ದಿದಂತೆ ತನ್ನಲ್ಲಿ ತಾನು ಲೀನವಾಗಿರುವ ಸಮಯದಲ್ಲಿ ಕೆಲವು ಪೋಕರಿ ಹುಡುಗರು ರಮಣರ ಮೇಲೆ ಕಲ್ಲು, ಇಟ್ಟಿಗೆಚೂರು, ಸಗಣಿ ಮುಂತಾದವುಗಳನ್ನು ಎರಚುವ ಹೀನಕೃತ್ಯಗಳನ್ನು ಮಾಡತೊಡಗಿದರು. ಆದರೆ ರಮಣರು ಮಾತ್ರ ಇದಾವ ಕೃತ್ಯಗಳಿಗೂ ಪ್ರತಿಕ್ರಿಯೆ ವ್ಯಕ್ತಪಡಿಸದೆ ತಟಸ್ಥರಾಗಿದ್ದರು. ಆದಾಗ್ಯೂ ಉಂಡಾಡಿ ಹುಡುಗರ ಕುಚೇಷ್ಟೆ ಕಿರುಕುಳ ಇವುಗಳಿಂದ ಮುಕ್ತವಾಗಿರುವ ಏಕಾಂತ ಸ್ಥಳವನ್ನರಸುತ್ತ ಮಂಟಪದ ಕಗ್ಗತ್ತಲ ಗುಹೆಗೆ ತಲುಪಿದರು. ಪಾತಾಳಲಿಂಗ ಎಂದು ಹೆಸರಾದ ಆ ಮಂಟಪದ ನೆಲ ತೇವಪೂರಿತವಾಗಿ ಅಲ್ಲಿ ಇರುವೆ, ಗೊದ್ದ ಮುಂತಾದ ಕ್ರಿಮಿ, ಕೀಟಗಳು ವಾಸವಾಗಿದ್ದವು. ಇವು ರಮಣರನ್ನು ಕಚ್ಚಿ ಕಚ್ಚಿ ಗಾಯಮಾಡಿ ದೇಹದಿಂದ ರಕ್ತಸೋರುವಂತೆ ಮಾಡಿದವು. ಕತ್ತಲಿನಿಂದ ಆವೃತವಾದ ಈ ನಿರ್ಜನಗುಹೆಯನ್ನೂ ಪತ್ತೆಹಚ್ಚಿದ ದುಷ್ಟ ಹುಡುಗರು ಮತ್ತೆ ಮೊದಲಿನಂತೆಯೇ ಕಲ್ಲು, ಇಟ್ಟಿಗೆಚೂರು ಮುಂತಾದವುಗಳನ್ನು ದೂರದಿಂದಲೇ ತೂರುವುದನ್ನು ಪ್ರಾರಂಭಿಸಿದರು. ಆದರೆ ಬಾಲಕ ರಮಣರು

ಮಾತ್ರ ನಿರ್ವಿಕಾರ ಚಿತ್ತದಿಂದ ತಟಸ್ಥರಾಗಿ ಕುಳಿತೇ ಇದ್ದರು. ಆಗ ವೆಂಕಟಾಚಲಪತಿ ಎಂಬ ಸದ್‌ಗ್ರಹಸ್ಥರೊಬ್ಬರು ಈ ಚಿತ್ರಹಿಂಸೆಯನ್ನು ನೋಡಲಾಗದೇ ಆ ಉದ್ಧಟ ಹುಡುಗರನ್ನು ಓಡಿಸಿದರು. ತರುವಾಯ ಅಲ್ಲಿಯೇ ಸಮೀಪದಲ್ಲಿರುವ ಸಾಧುವೊಬ್ಬರನ್ನು ಕರೆತಂದು ಇಬ್ಬರೂ ಸೇರಿ ಬಾಲಕ ರಮಣರನ್ನು ಎತ್ತಿಕೊಂಡು ಹೋಗಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಎದುರಿನ ಪ್ರಾಂಗಣದಲ್ಲಿ ಕುಳ್ಳಿರಿಸಿದರು. ಆದರೆ ಇದಾವುದರ ಅರಿವೇ ಇಲ್ಲದ ರಮಣರು ಧ್ಯಾನದಲ್ಲಿ ಲೀನವಾಗಿದ್ದರು. ಆಗ ಮುನಿಸ್ವಾಮಿ ಎಂಬ ಒಬ್ಬ ಸಾಧುಪುರುಷರು ಸ್ವಲ್ಪಕಾಲ ಅವರ ಯೋಗಕ್ಷೇಮ ನೋಡಿಕೊಂಡಿದ್ದರು. ತರುವಾಯ ನಿಧಾನವಾಗಿ ತೆವಳಿಕೊಂಡು ಮುಳ್ಳು ಕಂಟಿ ಪೊದೆಗಳಿಂದ ತುಂಬಿರುವ ಅರಳೀವನಕ್ಕೆ ಬಂದು ಅಲ್ಲಿ ಧ್ಯಾನಿಸುತ್ತಿದ್ದರು. ಅದೇ ಕೆಲವು ದಿನಗಳಿಗೆ ಹಾಗೆಯೇ ಹೇಗೋ ಪ್ರಯತ್ನಿಸುತ್ತ ಸಾವರಿಸಿಕೊಂಡು ದೇವಾಲಯದ ವಾಹನ ಮಂಟಪದ ಬಳಿ ಬಂದು ಧ್ಯಾನಿಸತೊಡಗಿದರು. ನವೆಂಬರ – ಡಿಸೆಂಬರ ತಿಂಗಳಿನಲ್ಲಿ ಕಾರ್ತಿಕ ದೀಪೋತ್ಸವ ಪ್ರಾರಂಭವಾಗಲು ಜನಜಾತ್ರೆ ನಡೆಯಿತು. ಹಾಗೆ ಬಂದವರಲ್ಲಿ ಉದ್ದಂಡಿ ನಾಯನಾರ್ ಎಂಬ ಒಬ್ಬ ದೈವಭಕ್ತರು ಬಾಲಕ ರಮಣರ ದಿವ್ಯ ವೈರಾಗ್ಯವನ್ನು ಕಂಡು ಅವರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನಾಯನಾರರು ಇಲ್ಲದ ಸಮಯ ನೋಡಿ ಆ ದುಷ್ಟ ಹುಡುಗರು ಪುನಃ ತಮ್ಮ ಹಿಂಸಾಕಾಂಡವನ್ನು ಮುಂದುವರಿಸಿದರು. ಇಷ್ಟಕ್ಕೇ ತೃಪ್ತನಾಗದ ಅವರಲ್ಲೊಬ್ಬ ಅತ್ಯಂತ ಹೇಯವಾಗಿ ರಮಣರ ಮೈಮೇಲೆ ಮೂತ್ರ ವಿಸರ್ಜನೆ ಮಾಡಿದನು. ರಮಣರಿಗೆ ಮಾತ್ರ ಇದರ ಯಾವ ಅರಿವೂ ಇರಲಿಲ್ಲ. ಎಚ್ಚೆತ್ತ ಮೇಲೆಯೂ ಕೋಪ, ತಾಪ, ಬೇಸರವೇನೂ ಆಗಲಿಲ್ಲ. ಆತ್ಮ ದರ್ಶನದ ಹಾದಿಯಲ್ಲಿರುವ ಸಾಧಕನನ್ನು ಶೌಚ – ಅಶೌಚ ಎಂಬ ಯಾವ ನಿಯಮಗಳೂ ಬಾಧಿಸಲಾರವು ಎಂಬುದಕ್ಕೆ ರಮಣರು ಒಬ್ಬ ಜೀವಂತ ಸಾಕ್ಷಿಯಾಗಿದ್ದರು.

ಅನಂತರ ಉದ್ದಂಡಿ ನಾಯನಾರರು ಮತ್ತು ಅಣ್ಣಾಮಲೆಯ ತಂಬಿರಾನ್ ಎಂಬವರು ರಮಣರನ್ನು ಗುರುಮೂರ್ತಂ ದೇವಾಲಯಕ್ಕೆ ಎತ್ತಿಕೊಂಡು ಹೋಗಿ ಅತ್ಯಂತ ಕರುಣೆಯಿಂದಲು ಭಕ್ತಿಯಿಂದಲು ಉಪಚರಿಸಿದರು. ಸ್ನಾನವಿಲ್ಲದೇ ಅದೆಷ್ಟು ದಿನಗಳು ಗತಿಸಿಹೋಗಿದ್ದವೋ! ಕೂದಲು ಮುದ್ದೆ ಮುದ್ದೆಯಾಗಿ ಜಡೆಗಟ್ಟಿತ್ತು. ಉಗುರುಗಳು ಉದ್ದುದ್ದ ಬೆಳೆದಿದ್ದವು. ಕೈಗಳು ಎತ್ತಲಾಗದ ಸ್ಥಿತಿಯಲ್ಲಿ ನಿಷ್ಕ್ರಿಯವಾಗಿದ್ದವು. ಬಾಯಿ ಕಳೆಸಿ ತಿನ್ನಿಸಿದರೆ ಒಂದಷ್ಟು ತಿಂದು ಮತ್ತೆ ಸಮಾಧಿಯಲ್ಲಿ ಲೀನವಾಗುತ್ತಿದ್ದರು. ಒಂದು ದಿನ ತಂಬಿರಾನ್ ರಮಣರಿಗೆ ಸ್ನಾನ ಮಾಡಿಸಲು ನಿರ್ಧರಿಸಿ ಎಣ್ಣೆ, ನೀರು, ಸುಗಂಧ ದ್ರವ್ಯಗಳೊಂದಿಗೆ ಅವರ ಬಳಿ ಬಂದಾಗ ಇದನ್ನು ಅರಿತ ರಮಣರು 'ತಿನ್ನುವ ಆಹಾರವೊಂದೇ ಈ ದೇಹಕ್ಕೆ ಬೇಕಾದ ಸೇವೆ' ಎಂದು ಇದ್ದಿಲು ಚೂರಿನಿಂದ ಗೋಡೆಯ ಮೇಲೆ ತಮಿಳಿನಲ್ಲಿ ಬರೆದರು. ಆಗ ಈತ ವಿದ್ಯಾವಂತನಾಗಿದ್ದು ತಮಿಳುನಾಡಿನವನೇ ಎಂದು ಜನರಿಗೆ ಮನದಟ್ಟಾಯಿತು. ಅನಂತರ ತಾಲೂಕು ಕಚೇರಿಯ ಪ್ರಧಾನ ಗುಮಾಸ್ತ ವೆಂಕಟರಾಮಯ್ಯರ್ ಎನ್ನುವವರು ರಮಣರ ಪೂರ್ವ ಜೀವನದ ವಿಷಯವನ್ನು ತಿಳಿದುಕೊಳ್ಳಬೇಕೆಂದು ದಿನವೂ ಬರುತ್ತಿದ್ದರೂ ಅದರಿಂದ ಏನೂ ಪ್ರಯೋಜನವಾಗದಿರಲು ಆಗ ಉಪವಾಸ ಸತ್ಯಾಗ್ರಹವನ್ನೇ ಪ್ರಾರಂಭಿಸಿದರು. ಇದರಿಂದ ಕನಿಕರಗೊಂಡ ಬಾಲಕ ರಮಣರು ಗೋಡೆಯ ಮೇಲೆ 'ವೆಂಕಟರಾಮನ್ ತಿರುಚುಳಿ' ಎಂದು ಬರೆದರು.

ಪ್ರಥಮ ಸಂದೇಶ

ಅಂದು ವೆಂಕಟರಮಣನು ಮನೆಬಿಟ್ಟು ಹೋದನಂತರ ಮನೆಯಲ್ಲಿ ಅಣ್ಣ, ಚಿಕ್ಕಪ್ಪ ಹಾಗೂ ಬಂಧುಗಳು ಆತನನ್ನು ಅನೇಕ ಕಡೆಗಳಲ್ಲಿ ಅರಸಿ ಎಲ್ಲಿಯೂ ಸುಳುವಿನ ಜಾಡು ಸಿಗದೆ ನಿರಾಶರಾದರು. ಮಗನನ್ನು ಕಳೆದುಕೊಂಡ ಅಳಗಮ್ಮಾಳ ಶೋಕಕ್ಕೆ ಎಲ್ಲೆಯೇ ಇರಲಿಲ್ಲ. ಹೀಗಿರುವಾಗ ಚಿಕ್ಕಪ್ಪ ಸುಬ್ಬಯ್ಯರರು ನಿಧನರಾದರು. ಆ ವೇಳೆಗೆ ಅವರ ಅಂತ್ಯಕರ್ಮದ ಆಚರಣೆಗೆ ಮಧುರೆಗೆ ಬಂದ ತಿರುಚುಳಿಯ ಯುವಕನೊಬ್ಬನಿಂದ ವೆಂಕಟರಮಣನು ತಿರುವಣ್ಣಾಮಲೈನಲ್ಲಿ ಇರುವುದಾಗಿ ತಿಳಿಯಿತು. ಆಗ ಚಿಕ್ಕಪ್ಪ ನೆಲ್ಲಿಯಪ್ಪನ್ ಅಲ್ಲಿಗೆ ಬಂದು ಮನೆಗೆ ಬರುವಂತೆ ಪರಿ ಪರಿಯಾಗಿ ಕೇಳಿಕೊಂಡರು. ಆದರೆ ಯಾವುದಕ್ಕೂ ಮಣಿಯದ ರಮಣರು ತಣ್ಣಗೆ ಅಚಲ ಮೌನಿಯಾಗಿದ್ದರು. ಇದರಿಂದ ತಾಯಿ ಅಳಗಮ್ಮಾಳು ಹಿರಿಯ ಮಗ ನಾಗಸ್ವಾಮಿಯೊಂದಿಗೆ ಅಲ್ಲಿಗೆ ಬಂದಳು. ಈ ಸಮಯಕ್ಕೆ ರಮಣರು ಚೂತವನ (ಮಾವಿನತೋಪು) ತ್ಯಜಿಸಿ ಪವಳಕುನ್ರು ಎಂಬ ಸಣ್ಣ ಗುಡ್ಡದ ಮೇಲಿರುವ ದೇವಾಲಯದಲ್ಲಿ ವಾಸವಾಗಿದ್ದರು. ದೇಹಾಭಿಮಾನ ಶೂನ್ಯನಾಗಿ ಕುಳಿತಿದ್ದ ಮುದ್ದು ಮಗನನ್ನು ಕಂಡ ಆ ತಾಯಿಯ ದುಃಖದ ಕೋಡಿಯ ಕಟ್ಟು ಒಡೆಯಿತು. ಮಗನನ್ನು ತಬ್ಬಿ ಕಣ್ಣೀರುಗರೆಯುತ್ತ ರೋದಿಸತೊಡಗಿದಳು. 'ನೀನು ಮನೆ ಬಿಟ್ಟು ಇಪ್ಪತ್ತೆಂಟು ತಿಂಗಳಾಗಿ ಹೋದವು. ಹೇಗಿದ್ದವನು ಹೇಗಾಗಿ ಹೋದೆ!' ಎಂದು ಹಳಹಳಿಸಿದಳು. ಮನೆಗೆ ಬರುವಂತೆ ಗೋಗರೆದಳು. ಸುತ್ತಮುತ್ತ ಇರುವವರನ್ನೆಲ್ಲ ಅಂಗಲಾಚಿ ಹೇಗಾದರೂ ಮಾಡಿ ಮಗನನ್ನು ತನ್ನೊಂದಿಗೆ ಕಳುಹಿಸಿಕೊಡಿ ಎಂದು ಆಕ್ರಂದಿಸಿದಳು. ಆಗ ಅದನ್ನು ನೋಡಲಾರದೆ ಅಲ್ಲಿ ನೆರೆದವರಲ್ಲಿ ಒಬ್ಬರು ಅಮ್ಮ ಅಷ್ಟೊಂದು ರೋದಿಸುತ್ತಾರೆ ಆಗಲಿ ಅಥವಾ ಇಲ್ಲ ಎಂದು ಎರಡರಲ್ಲಿ ಒಂದು ಶಬ್ದ ತಿಳಿಸಿಬಿಡು. ಮಾತೂ ಬೇಡ ಅಂತಾದರೆ ಇದೋ, ಈ ಕಾಗದದ ಮೇಲೆ ಬರೆದು ತಿಳಿಸು. ಎಂದು ಕಾಗದ ಮತ್ತು ಲೇಖನಿ ನೀಡಿದರು. ಆಗ ಸ್ವಲ್ಪವೂ ಉದ್ವೇಗವಿಲ್ಲದೆ ಬಾಲಕ ರಮಣರು 'ಸರ್ವವ್ಯಾಪಿಯಾದ ಸೃಷ್ಟಿಕರ್ತನು ಪ್ರತಿಯೊಬ್ಬನಿಗೂ ಅವನ ಪೂರ್ವಕರ್ಮಕ್ಕೆ ಅನುಸಾರವಾಗಿ ಜೀವನದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವಂತೆ ಮಾಡುತ್ತಾನೆ. ಏನು ಆಗಬಾರದು ಎಂದು ವಿಧಿಯಿದೆಯೋ ಅದು ಎಷ್ಟೇ ಪ್ರಯತ್ನ ಮಾಡಿದರೂ ಆಗುವುದಿಲ್ಲ; ಯಾವುದು ಆಗಬೇಕೆಂದಿದೆಯೋ ಅದು ಆಗಿಯೇ ತೀರುತ್ತದೆ. ಇದು ನಿಶ್ಚಿತ. ಆದುದರಿಂದ ಅತ್ಯುತ್ತಮ ಮಾರ್ಗವೆಂದರೆ ಮೌನವಾಗಿ ಸುಮ್ಮನೆ ಇದ್ದುಬಿಡುವುದು.' ಇದು ಭಗವಾನ್ ರಮಣ ಮಹರ್ಷಿಗಳ ಪ್ರಥಮ ಸಂದೇಶ.

ತಿರುವಣ್ಣಾಮಲೈಗೆ ಬಂದ ಮೊದಲ ನಾಲ್ಕು ತಿಂಗಳು ಬಾಲಕ ರಮಣ ಸ್ನಾನವನ್ನು ಮಾಡಿರಲಿಲ್ಲ. ಆ ವೇಳೆಗೆ ದೈವಭಕ್ತ ಪೊನ್ನಸ್ವಾಮಿ ಎಂಬವರ ಪತ್ನಿ ಅರುಣಾಚಲ ದೇವಸ್ಥಾನದ ಶಿವನ ದರ್ಶನಕ್ಕಾಗಿ ಆಗಾಗ ಬರುತ್ತಿದ್ದಳು. ಆಗೆಲ್ಲ ಸ್ನಾನ ಮಾಡದೆ ಜಡೆಗಟ್ಟಿದ ಕೂದಲಿನೊಂದಿಗೆ ಸರಿಯಾಗಿ ಆಹಾರ ಪೋಷಣೆಯಿಲ್ಲದೆ ಸೊರಗಿದ ತಪಸ್ವಿ ಬಾಲಕನೋರ್ವನು ಸುಪ್ತ ಸಮಾಧಿಯಲ್ಲಿ ಮುಳುಗಿರುವುದನ್ನು ಕಾಣುತ್ತಿದ್ದಳು. ಅದನ್ನು ನೋಡಿ ಆ ತಾಯ ಹೃದಯದಲ್ಲಿ ಕರುಣೆ ಅನುಕಂಪ ಉಕ್ಕಿ ಬರುತ್ತಿತ್ತು. ಅಂತೆಯೇ ಅದೊಂದು ದಿನ ಅವಳು ಸ್ನಾನಕ್ಕೆ ಬೇಕಾದ ಅಂಟವಾಳಕಾಯಿ ಪುಡಿ, ನೀರು ಎಲ್ಲವನ್ನು ಅಣಿಗೊಳಿಸಿ ರಮಣರನ್ನು ಅಂಕಣದ ಅಂಚಿಗೆ ಎಳೆದು ತಂದು ಕುಳ್ಳಿರಿಸಿದಳು. ರಮಣನಿಗೆ ಇದು ಅನಿರೀಕ್ಷಿತವಾಗಿತ್ತು. ಅವನು ಪ್ರತಿರೋಧ ಸೂಚಿಸಿದ. ಆದರೆ ಹಟಮಾರಿ ಮೊಂಡು ಹುಡುಗನನ್ನು



ರಮಣ ಮಹರ್ಷಿಗಳ ದಿವ್ಯ ಸನ್ನಿಧಿಯಲ್ಲಿ ದೈವರಾತರು

ತಾಯಿ ಪಳಗಿಸುವಂತೆ ವಾತ್ಸಲ್ಯದಿಂದ ತಲೆ ಮತ್ತು ದೇಹವನ್ನು ಸ್ನಾನಮಾಡಿಸಿ ಸ್ವಚ್ಛಗೊಳಿಸಿದಳು. ಇದೇ ರೀತಿ ಗುರುಮೂರ್ತಂನಲ್ಲಿರುವಾಗ ಇನ್ನೊಬ್ಬ ಸಾಧ್ವಿ ತಾಯಿ ಮೀನಾಕ್ಷಿ ಎನ್ನುವವಳು ಬಾಲಕ ರಮಣರನ್ನು ಸ್ನಾನ ಮಾಡಿಸಿದಳು. ಅನಂತರ ಪಳನಿಸ್ವಾಮಿಯವರು ದಿನಾಲು ನಿಯಮಿತವಾಗಿ ಸ್ನಾನಮಾಡಿಸತೊಡಗಿದರು. ಹೀಗೆ ಎಳೆಯ ವಯಸ್ಸಿನಲ್ಲಿಯೇ ಅಚಲಚಿತ್ತರಾಗಿ ಧೃಡ ಸಂಕಲ್ಪದಿಂದ ಯಾವ ಆಮಿಷಗಳಿಗೂ ಒಳಗಾಗದೇ ತನಗೆ ತಾನೇ ಗುರುವಾಗಿ, ಮಾರ್ಗದರ್ಶಿಯಾಗಿ ದಿವ್ಯ ತಪಸ್ಸಿನಿಂದ ರಮಣರು ಜ್ಞಾನೋದಯವನ್ನು ಪಡೆದರು; ಆತ್ಮಸಾಕ್ಷಾತ್ಕಾರದ ಆನಂದಮಯ ಸ್ಥಿತಿಯನ್ನು ಅನುಭವಿಸಿದರು.

ಭಗವಾನ್ ಶ್ರೀರಮಣಮಹರ್ಷಿಗಳ ಸಂದರ್ಶನ

ಭಗವಾನ್ ಶ್ರೀ ರಮಣ ಮಹರ್ಷಿಗಳನ್ನು ಕಾಣುವ ಹಂಬಲದಲ್ಲಿ ಮದರಾಸಿನಿಂದ ಹೊರಟ ದೈವರಾತನು ಅರುಣಾಚಲವನ್ನು ತಲುಪಿ ಅಲ್ಲಿಂದ ಸ್ಕಂದಾಶ್ರಮಕ್ಕೆ ನಡೆದನು. ಭಗವಾನ್ ಶ್ರೀ ರಮಣ ಮಹರ್ಷಿಗಳು ಅಲ್ಲಿ ಜಗದಿರುವ ಮರೆತು ನೀರವ ಮುದ್ರೆಯಿಂದ ಶಿಲಾತಲವೊಂದರ ಮೇಲೆ ಸಹಜ ಸಮಾಧಿಯ ಆನಂದಮಯ ಸ್ಥಿತಿಯಲ್ಲಿ ಲೀನವಾಗಿದ್ದರು. ದಿವ್ಯ ಪ್ರಶಾಂತ ಅರೆದೆರೆದ ಅವರ ಕಂಗಳಲ್ಲಿ ಅವ್ಯಕ್ತ ಕಾಂತಿ ತುಂಬಿತ್ತು. ಅವರ ಈ ದಿವ್ಯ ಸಾಕ್ಷಾತ್ಕಾರದ ಸಹಜ ಸ್ವರೂಪವನ್ನು ಕಂಡಾಗ ದೈವರಾತನು ಪುಲಕಿತನಾಗಿ ತನ್ನೆಲ್ಲ ಮಾರ್ಗಾಯಾಸ ಮರೆತು ಅನಿಮೀಲಿತ ಅವರ ಕರುಣಾಪೂರಿತ ಆರ್ದ್ರಭಾವದ ಕಂಗಳನ್ನು ನೋಡುತ್ತ ಸಂಮೋಹಿಂತನಾಗಿ ಕುಳಿತುಬಿಟ್ಟನು. ಆತನ ಅಂತಃಕರಣ ತೆರೆಯಿತು. ರಮಣಮಹರ್ಷಿಗಳ ಕಂಗಳಿಂದ ಹೊರಸೂಸಿ ಹರಿಯುತ್ತಿರುವ ಪ್ರಶಾಂತ ದಿವ್ಯ ತೇಜಸ್ಸು ದೈವರಾತನ ಅಂತರಂಗವನ್ನು ಸ್ಪರ್ಶಿಸಿದಾಗ ಅವನಿಗರಿವಿಲ್ಲದೆ ರಮಣ ಮಹರ್ಷಿಗಳ ಸ್ತುತಿಯೊಂದು ಆತನ ಮುಖದಿಂದ ಆವಿರ್ಭವಿಸಿತು.

ಶ್ರೀಮತ್ಪಾರಾಶರೋಽಯಂ ಪ್ರಮುದಿತವದನಃ ಪಾವನಃ ಪಾರ್ವತೀಯಃ ।
ಪ್ರತ್ಯಗ್ ದೃಗ್ ದೇವಕಲ್ಪೋ ವಿಗತಭವಭಯಃ ಸರ್ವದಾ ಸುಪ್ರಸನ್ನಃ ॥
ಆತ್ಮನ್ಯೇವ ಪ್ರಲೀನಃ ಸಕಲಗುಣನಿಧಿರ್ಮೌನಮುದ್ರೋಪಪನ್ನೋ ।
ದೃಷ್ಟಃ ಸಂತೃಪ್ತಚಿತ್ತೋ ರಮಣಮುನಿರಹೋ ಸಚ್ಚಿದಾನಂದಲೀನಃ ॥1॥

ಯಂ ದೃಷ್ಟ್ವೈವಾವಶಿಷ್ಟಂ ಭವತಿ ಪುನರಹೋ ನೇಹ ಕರ್ತವ್ಯತಾಯಾಂ ।
ಸದ್ಯಶ್ಚಿತ್ತಪ್ರಸಾದಾದ್ವಿಗಲತಿ ಮನಸಃ ಸರ್ವಸಂಕಲ್ಪಜಾಲಮ್ ॥
ವೃತ್ತಿಃ ಶಾಮ್ಯತ್ಯನೇಕಾವಿಧಿಮನುಜನಿತಾ ದ್ವೇಷಿಣೋ ವಾ ನಿಷೇಧಾತ್ ।
ಸಂತಂ ಪಾರಾಶರಂ ತಂ ಗುರುರಮಣಯತಿಂ ಸಂತತಂ ಚಿಂತಯಾಮಿ ॥2॥

ಯೇನೇಯಂ ಚಿತ್ರಸೃಷ್ಟಿರ್ಬಹಿರಿವ ಮನಸಾ ಸ್ವಪ್ನವತ್ ಸಂಪ್ರದೃಷ್ಟಾ ।
ದೃಷ್ಟಿಃ ಪ್ರತ್ಯಗ್ಗತಾಽಪಿ ಪ್ರಣತಭಯಹರೀ ಸಂವಿಮೃಷ್ಟಾ ದಯಾರ್ದ್ರಾ ॥
ಸ್ವಾರ್ಥಾಃ ಸಂಗಸ್ಯ ಹಾನಾತ್ ತದನುಗಧಿಯಃ ಸರ್ವತಃ ಸನ್ನಿರಸ್ತಾಃ ।
ತ್ರಾತಸ್ತೇನೇಹ ಮರ್ತ್ಯೋ ರಮಣಭಗವತಾ ಧನ್ಯತಾಂ ಯಾತಿ ಸದ್ಯಃ.॥3॥

ಯಸ್ಮೈ ತತ್ತ್ವಾರ್ಥವೇತ್ರೇ ಪರಮಪದವಿದೇ ಸ್ವಾತ್ಮನೋ ಬೋಧಯಿತ್ರೇ ।
ಸ್ವಾನಂದಸ್ಯಾಪಯಿತ್ರೇ ಜನಿಮರಣಭಯಾತ್ ಪ್ರಾಣಿನಸ್ತ್ರಾಣಯಿತ್ರೇ ॥
ಸ್ವಾತ್ಮಾನಂ ಪ್ರಾಪ್ಯಬುಧ್ಯಾ ಶರಣಮುಪಗತಾ ಧನ್ಯತಾ ಯಾಂತಿ ಲೋಕಾಃ ।
ತಸ್ಮೈ ಪಾರಾಶರಾಯೋಂ ರಮಣಭಗವತೇ ಜ್ಞಾನದಾತ್ರೇ ನಮಸ್ತೇ ॥4॥

ಯಸ್ಮಾತ್ ಸಂಪೂರ್ಣಕಾಮಾತ್ ವಿಗತಕಲಿಮಲಾತ್ ದಿವ್ಯವಾಗಾತ್ಮದೇಹಾನ್ ।
ನಿತ್ಯಂ ಪ್ರದ್ಯೋತಮಾನಾಜ್ಜಗತಿ ಹಿ ತಪಸಾ ಸಂಸ್ಥಿತಪ್ರಜ್ಞತೋಽನ್ಯಃ ॥
ಸಂತಪ್ತಾನಾಂ ಪ್ರಜಾನಾಂ ವಿಷಯವಿಷಧರ್ಯೈರ್ನೈವ ಕಂಚಿಚ್ಛರಣ್ಯಃ ।
ತಸ್ಮಾತ್ ಪಾರಾಶರಾನ್ಮೇ ರಮಣ ಮುನಿವರಾದಾತ್ಮನಃ ಸಂವಿದಸ್ತು ॥5॥

ಯಸ್ಯಾಹಂ ಮೇ ಮತಿರ್ಹಿ ಸ್ವಯಮಿಹ ಗಲಿತಾ ಸಂವಿದೇವಾವಶಿಷ್ಟಾ ।
ಧರ್ಮಾಧರ್ಮಪ್ರಪಂಚಃ ಸಹ ವಿಧಿಭಿರಹೋ ಸಂಪ್ರಶಾಂತೋ ನಿಷೇಧೈಃ ॥
ಇಷ್ಟಾನಿಷ್ಟೇ ಸಮಾನೇ ಸ್ಥಿತಿರಪಿ ಜಗತಿ ಪ್ರಾಣಿನಾಂ ವಾ ಹಿತಾರ್ಥಾ ।
ತಸ್ಯೇದಂ ಪಾದಯುಗ್ಮಂ ರಮಣಭಗವತಃ ಸಂಪ್ರಪದ್ಯೇ ಶರಣ್ಯಂ ॥6॥

ಯಸ್ಮಿನ್ತ್ಯಾಶ್ರಮಸ್ಥೇ ಹ್ಯಭಯಮುಪಗತೇ ವೀತವರ್ಣಪ್ರಪಂಚೇ ।
ಬ್ರಹ್ಮಿಷ್ಠೇ ನಿತ್ಯತೃಪ್ತೇ ಪರಮರಸನಿಧೌ ಸಿದ್ಧಯೋಽಷ್ಟೌ ಪ್ರಣಮ್ರಾಃ ॥
ಕಾಮಾಶ್ಚ ಪ್ರಾಪ್ತಕಾಮಾಃ ಸುಖಮಿಹ ಪರಮಂ ಸಂವಿಶಂತೀವ ನಿತ್ಯಂ ।
ತಸ್ಮಿನ್ ಪಾರಾಶರೇ ಮೇ ರಮಣಮುನಿವರೇ ಧೀಂದ್ರಿಯಾಣ್ಯಾರಮಂತಾಮ್ ॥7॥

ಸ್ವಾಮಿನ್ ಸರ್ವಾರ್ತಿಹಾರಿನ್ ನಯ ಪರಮಗುರೋ ನಿರ್ಮಲಜ್ಞಾನ ಮೂರ್ತೇ ।
ವಾಸಿಷ್ಠಸ್ಯ ಪ್ರಸಾದಾತ್ ತವ ಚರಣಯುಗಂ ಪ್ರಾಪ್ಯ ಸರ್ವೈರ್ದುರಾಪಮ್ ॥
ಪೂರ್ಣಾಃಕಾಮಾ ಇಹೇತಿ ಪ್ರಣಹಿತಮನಸಾ ಧನ್ಯತಾಂ ಭಾವಯಂತಂ ।
ತ್ರಾಹೀಮಂ ಪಾಪಜಾಲಾದ್ ರಮಣಮುನಿಪತೇ ದೈವರಾತಂ ಪ್ರಪನ್ನಮ್ ॥8॥

ರಮಣಂ ರಮಣೀಯಚಿದ್ವಿಕಾಸಂ ಶರಣಂ ಸಂಸ್ಮರಣೀಯಸದ್ವಿಲಾಸಮ್ ।
ಪರಮಂ ಪರಮಾರ್ಥತತ್ತ್ವಬೋಧಂ ಕಲಯೇ ಕಲ್ಮಷಕೀಲನಪ್ರಬೋಧಮ್॥

ಹೀಗೆ ದಿವ್ಯಪ್ರೇರಣೆಯಿಂದ ಪ್ರಕಟವಾದ ಆ ಎಂಟು ಶ್ಲೋಕಗಳನ್ನು ಒಂದು ಕಾಗದದ ಮೇಲೆ ಕೂಡಲೇ ದೈವರಾತನು ಬರೆದುಕೊಂಡನು. ಈ ಸ್ತುತಿಯು ಎಂಟು ವಿಭಕ್ತಿಗಳಿಂದ ಯುಕ್ತವಾಗಿರುವ ಕಾರಣ ಇದನ್ನು "ಶ್ರೀ ರಮಣ ವಿಭಕ್ತ್ಯಷ್ಟಕ" ಎಂದು ಹೆಸರಿಸಿದನು.

ರಮಣರ ಸನ್ನಿಧಿಯಲ್ಲಿ ಆಧ್ಯಾತ್ಮದ ಆ ದಿವ್ಯ ಪರಿಸರದಲ್ಲಿ ದೈವರಾತನು ತನ್ಮಯನಾದನು.

ಎಂದೂ ಕಾಣದಿರುವ ಅನಿರ್ವಚನೀಯ ಸಹಜ ಆನಂದವನ್ನು ಆತ ಅನುಭವಿಸಿದನು. ಹೀಗೆ ಈ ಸ್ಥಿತಿಯಲ್ಲಿ ಇರುವಾಗ ಒಂದು ದಿನ ಅವನು ರಮಣಮಹರ್ಷಿಗಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿ ಅವರ ಆತ್ಮಾನುಭವದ ಉತ್ತರವನ್ನು ಪಡೆದು ಸಂಶಯದಿಂದ ಮುಕ್ತನಾದನು.

ದೈವರಾತರು ಮತ್ತು ಆಚಾರ್ಯ ರಮಣರ ನಡುವೆ ನಡೆದ ಈ ಸಂವಾದದಲ್ಲಿ ಜೀವನ ಪಾರಮ್ಯದ ತಾತ್ಪರ್ಯವು ಬಹು ಸುಂದರವಾಗಿ ನಿರೂಪಿಸಲ್ಪಟ್ಟಿದೆ. ಇದು ಶ್ರೀ ರಮಣಗೀತೆಯ ಮೂರನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಮುಖ್ಯ ಕರ್ತವ್ಯಗಳ ನಿರೂಪಣೆ

ದೈವರಾತಸ್ಯ ಸಂವಾದಂ ಆಚಾರ್ಯ ರಮಣಸ್ಯ ಚ।
ನಿಬಧ್ನೀಮಸ್ತೃತೀಯೇ ಸ್ಮಿನ್ನಧ್ಯಾಯೇऽ ವಿದುಷಾಂ ಮುದೇ॥1॥

ದೈವರಾತರಿಗೂ ಮತ್ತು ಆಚಾರ್ಯ ರಮಣರಿಗೂ ನಡೆದ ಸಂವಾದವನ್ನು ವಿದ್ವಾಂಸರ ಸಂತೋಷಕ್ಕಾಗಿ ಈ ಮೂರನೆಯ ಅಧ್ಯಾಯದಲ್ಲಿ ತೆರೆಯುತ್ತೇವೆ.

* ಪ್ರಶ್ನೆ–ಒಂದು :

ದೈವರಾತ ಉವಾಚ–

ಕಿಂ ಕರ್ತವ್ಯಂ ಮನುಷ್ಯಸ್ಯ ಪ್ರಧಾನಮಿಹ ಸಂಸೃತೌ ।
ಏತಂ ನಿರ್ಧಾರ್ಯ ಭಗವಾನ್ ತನ್ಮೇ ವ್ಯಾಖ್ಯಾತುಮರ್ಹತಿ ॥

ಸಂಸಾರದಲ್ಲಿ ಮನುಷ್ಯನು ಮಾಡಬೇಕಾದ ಪ್ರಧಾನ ಕೆಲಸ ಯಾವುದು? ಭಗವಾನ್, ಅದನ್ನು ನಿರ್ಧರಿಸಿ ಕೃಪೆಯಿಂದ ನನಗೆ ವಿವರಿಸಿ.

* ಉತ್ತರ :

ಭಗವಾನ್ ಉವಾಚ–

ಸ್ವಸ್ಯ ಸ್ವರೂಪಂ ವಿಜ್ಞೇಯಂ ಪ್ರಧಾನಂ ಮಹದಿಚ್ಛತಾ ।
ಪ್ರತಿಷ್ಠಾ ಯತ್ರ ಸರ್ವೇಷಾ ಫಲಾನಾಮುತಕರ್ಮಣಾಮ್ ॥

ಶ್ರೇಯಸ್ಸನ್ನು ಅಪೇಕ್ಷಿಸುವವನು ತನ್ನ ನಿಜಸ್ವರೂಪವನ್ನು ಕಂಡುಕೊಳ್ಳಬೇಕು. ನಾವು ಮಾಡುವ ಎಲ್ಲ ಕ್ರಿಯೆಗಳಿಗೂ ಮತ್ತು ಅವುಗಳ ಫಲಗಳಿಗೂ ಅದೇ ಮೂಲವಾಗಿದೆ.

* ಪ್ರಶ್ನೆ–ಎರಡು :

ದೈವರಾತ ಉವಾಚ–

ಸ್ವಸ್ಯ ಸ್ವರೂಪವಿಜ್ಞಾನೇ ಸಾಧನಂ ಕಿಂ ಸಮಾಸತಃ ।
ಸಿಧ್ಯೇತ್ ಕೇ ನ ಪ್ರಯತ್ನೇನ ಪ್ರತ್ಯಗ್ ದೃಷ್ಟಿರ್ಮಹೀಯಸೀ ॥

ತನ್ನ ನಿಜಸ್ವರೂಪವನ್ನು ತಿಳಿಯಲು ಲಘುವಾದ ಉಪಾಯ ಯಾವುದು? ಯಾವ ಪ್ರಯತ್ನದಿಂದ ನಮಗೆ ಮಹತ್ವಪೂರ್ಣವಾದ ಅಂತರ್ದರ್ಶನವು (ಆತ್ಮದರ್ಶನವು) ಸಿದ್ಧಿಸುತ್ತದೆ?

* ಉತ್ತರ :

ಭಗವಾನ್ ಉವಾಚ–

ವಿಷಯೇಭ್ಯಃ ಪರಾವೃತ್ಯ ವೃತ್ತೀಃ ಸರ್ವಾಃ ಪ್ರಯತ್ನತಃ ।
ವಿಮರ್ಶೇ ಕೇವಲಂ ತಿಷ್ಠೇತ್ ಅಚಲೇ ನಿರುಪಾಧಿಕೇ ॥

ನಮ್ಮ ಆಲೋಚನೆಗಳನ್ನು ಇಂದ್ರಿಯ ವಿಷಯಗಳಿಂದ ಶ್ರಮವಹಿಸಿ ಹಿಂತಿರುಗಿಸಕೊಳ್ಳಬೇಕು. ಅನಂತರ ನಿರುಪಾಧಿಕವೂ ಅಚಲವೂ ಆದ ಜಿಜ್ಞಾಸೆಮಾಡಬೇಕು.

* ಪ್ರಶ್ನೆ–ಮೂರು :

ದೈವರಾತ ಉವಾಚ–

ಯಾವತ್ ಸಿದ್ಧಿರ್ಭವೇನ್ನೃಣಾಂ ಯೋಗಸ್ಯ ಮುನಿಕುಂಜರ ।
ತಾವಂತಂ ನಿಯಾಮಾಃ ಕಾಲಂ ಕಿಂ ಯತ್ನಮುಪಕುರ್ವತೇ ॥

ಮುನಿಶ್ರೇಷ್ಠನೇ, ಯೋಗಸಿದ್ಧಿ ಮನುಷ್ಯರಿಗೆ ಏರ್ಪಡುವವರೆಗೂ ನಿಯಮಗಳು ಆತ್ಮಪ್ರಾಪ್ತಿಯ ಪ್ರಯತ್ನದಲ್ಲಿ ಸಹಾಯ ಮಾಡುತ್ತವೆಯೇ? ಅಂದರೆ ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯಗಳನ್ನು ಅನುಸರಿಸಬೇಕೆ?

* ಉತ್ತರ :

ಭಗವಾನ್ ಉವಾಚ–

ಪ್ರಯತ್ನಮುಪಕುರ್ವಂತಿ ನಿಯಮಾ ಯುಂಜತಾಂ ಸತಾಮ್ ।
ಸಿದ್ಧಾನಾಂ ಕೃತಕೃತ್ಯಾನಾಂ ಗಲಂತಿ ನಿಯಮಾಸ್ಸ್ವಯಮ್ ॥

ಜ್ಞಾನೋದಯದ ಪ್ರಾಪ್ತಿಗಾಗಿ ಮಾಡುವ ಪ್ರಾಮಾಣಿಕ ಪ್ರಯತ್ನಗಳಿಗೆ ನಿಯಮಗಳು ಸಹಾಯ ಮಾಡುತ್ತವೆ. ಯಾರು ಅರಿವಿನ ಹಾದಿಯಲ್ಲಿ ಇರುತ್ತಾರೋ ಅವರನ್ನು ನಿಯಮಗಳು ತಾವಾಗಿಯೇ ಬಿಡುತ್ತವೆ. ಅಂದರೆ ಸೂತಕಾದಿ ಅಶೌಚ ನಿಯಮಗಳು ಅವರನ್ನು ಬಾಧಿಸುವುದಿಲ್ಲ. ದೇಹದ ಒಳಗೇ ತುಂಬಿರುವ ಮಲಕ್ಕಿಂತ ಹೊರಗಿನಿಂದ ಸೋಂಕುವ ಮೈಲಿಗೆಯು ಹೆಚ್ಚಿನದಲ್ಲ. ಇವೆಲ್ಲ ಕೇವಲ ಮನಸ್ಸಿನ ಭಾವನೆಗಳು ಎಲ್ಲ ಬಂಧನಗಳನ್ನು ಕಳಚಿ ಆಚೆಗೆ ಹೋದಾಗ ಸಾಧಕನನ್ನು ಯಾವುದೂ ಬಾಧಿಸುವುದಿಲ್ಲ.

* ಪ್ರಶ್ನೆ–ನಾಲ್ಕು :

ದೈವರಾತ ಉವಾಚ–

ಕೇವಲೇನ ವಿಮರ್ಶೇನ ಸ್ಥಿರೇಣ ನಿರುಪಾಧಿನಾ ।
ಯಥಾ ಸಿದ್ಧಿಃ ತಥಾ ಮಂತ್ರೈರ್ಜಪ್ಯೈಃ ಸಿದ್ಧಿರ್ಭವೇನ್ನ ವಾ ॥

ಶುದ್ಧವೂ, ಸ್ಥಿರವೂ, ನಿರ್ವಿಷಯವೂ ಆದ ವಿಚಾರಮಾತ್ರದಿಂದ ನಾವು ಪಡೆಯುವ ಸಿದ್ಧಿಯನ್ನು ಮಂತ್ರಜಪದಿಂದಲೂ ಪಡೆಯಲು ಸಾಧ್ಯವೇ ಅಥವಾ ಇಲ್ಲವೇ?

* ಉತ್ತರ :

ಭಗವಾನ್ ಉವಾಚ–

ಅಚಂಚಲೇನ ಮನಸಾ ಮಂತ್ರೈಃ ಜಪ್ತೈಃ ನಿರಂತರಮ್ ॥
ಸಿದ್ಧಿಃ ಸ್ಯಾತ್ ಶ್ರದ್ಧಧಾನಾನಾಂ ಜಪ್ತೇನ ಪ್ರಣವೇನ ವಾ ॥

ಚಿತ್ತಚಾಂಚಲ್ಯವಿಲ್ಲದೇ ನಿರಂತರವಾಗಿ ಜಪಿಸಲ್ಪಡುವ ಮಂತ್ರಗಳಿಂದಲೂ, ಅಥವಾ ಪ್ರಣವ ಜಪದಿಂದಲೂ ಶ್ರದ್ಧೆಯುಳ್ಳವರಿಗೆ ಸಿದ್ಧಿ ಏರ್ಪಡುತ್ತವೆ.

ವೃತ್ತಿರ್ಜಪೇನ ಮಂತ್ರಾಣಾಂ ಶುದ್ಧಸ್ಯ ಪ್ರಣವೇನ-ವಾ ।
ವಿಷಯೇಭ್ಯಃ ಪರಾವೃತ್ತಾ ಸ್ವಸ್ವರೂಪಾತ್ಮಿಕಾ ಭವೇತ್ ॥

ಮಂತ್ರ ಜಪದಿಂದಲೂ ಅಥವಾ ಪ್ರಣವ ಜಪದಿಂದಲೂ ನಮ್ಮ ಮನೋವೃತ್ತಿಗಳು ಇಂದ್ರಿಯ ಸಂಬಂಧವಾದ ವಿಷಯಗಳಿಂದ ಹಿಂದಿರುಗುತ್ತವೆ; ಮತ್ತು ನಮ್ಮ ನಿಜ ಸ್ವರೂಪದ್ನೊಂದಿಗೆ ಒಂದಾಗುತ್ತವೆ.

ಈ ಸಂವಾದವು 1917 ನೇ ವರ್ಷದ ಜುಲೈ ತಿಂಗಳಿನ ಏಳನೇ ದಿನಾಂಕದಲ್ಲಿ ನಡೆಯಿತು. ದೈವರಾತರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳಿಗೆ ರಮಣ ಮಹರ್ಷಿಗಳು ತಮಿಳಿನಲ್ಲಿ ಉತ್ತರಿಸಿದ್ದು ಅದನ್ನು ಕಾವ್ಯಕಂಠ ಗಣಪತಿ ಮುನಿಗಳು ಸಂಸ್ಕೃತದಲ್ಲಿ ಗ್ರಂಥಸ್ಥಗೊಳಿಸಿದರು. ಅನಂತರ 'ರಮಣಗೀತೆ' ಗ್ರಂಥ ರಚನೆ ಮಾಡುವಾಗ ಅದರಲ್ಲಿ ಮೂರನೇ ಅಧ್ಯಾಯವಾಗಿ ಇದನ್ನು ಸಂಯೋಜಿಸಿದರು. ಅದು ಒಟ್ಟು ಹದಿನೆಂಟು ಅಧ್ಯಾಯಗಳಿಂದ ಯುಕ್ತವಾಗಿದ್ದು ವಾಸಿಷ್ಠ ಗಣಪತಿ ಮುನಿಗಳು, ವಿಶಾಲಾಕ್ಷಿ ಅಮ್ಮನವರು, ದೈವರಾತರು ಹಾಗೂ ಇನ್ನಿತರು ಕೇಳಿದ ಪ್ರಶ್ನೆಗಳಿಗೆ ರಮಣ ಮಹರ್ಷಿಗಳು ಉತ್ತರಿಸಿದ್ದು ಇರುತ್ತದೆ. ಕೊನೆಯ ಅಧ್ಯಾಯವು ಗಣಪತಿ ಮುನಿಗಳು ರಮಣರನ್ನು ಸ್ತುತಿಸಿದ ಸ್ತೋತ್ರವಾಗಿರುತ್ತದೆ.

ಆಧ್ಯಾತ್ಮಿಕ ಹಸಿವಿನಲ್ಲಿ ಹೀಗೆ ರಮಣರೊಂದಿಗೆ ಸಂವಾದವನ್ನು ನಡೆಸಿದಾಗ ದೈವರಾತರಿಗೆ ಇಪ್ಪತ್ತೈದರ ಹರೆಯ. ಆದಾಗ್ಯೂ ಅವರು ರಮಣಮಹರ್ಷಿಗಳೊಂದಿಗೆ ನಡೆಸಿದ ಈ ಸಂವಾದವು ಆಧ್ಯಾತ್ಮದಲ್ಲಿ ಒಲವುಳ್ಳ ಜಿಜ್ಞಾಸುಗಳಿಗೆ ಒಳ್ಳೆಯ ಮಾರ್ಗದರ್ಶಿಯಾದ ಕೈಪಿಡಿಯಂತಿದೆ. ಈ ರೀತಿ ದೈವರಾತರು ರಮಣರ ಸಾನ್ನಿಧ್ಯದಲ್ಲಿ ಆತ್ಮಾನುಭವದ ಅನ್ವೇಷಣೆಯಲ್ಲಿ ಮಗ್ನನಾಗಿರುವಾಗ ಗಣಪತಿ ಮುನಿಗಳು ವಿಶಾಲಾಕ್ಷಿ ಅಮ್ಮನವರು ಮತ್ತು ಮಕ್ಕಳೊಂದಿಗೆ ಅಲ್ಲಿಗೆ ಆಗಮಿಸಿದರು. ಆಗ ದೈವರಾತರು ಅವರಿಗೆ ರಮಣರ ಸನ್ನಿಧಿಯಲ್ಲಿ ತನ್ನಲ್ಲಿ ಅಭಿವ್ಯಕ್ತವಾದ 'ಶ್ರೀ ರಮಣವಿಭಕ್ತ್ಯಾಷ್ಟಕ' ಸ್ತುತಿಯನ್ನು ತೋರಿಸಿದರು. ಅದನ್ನು ನೋಡಿದ ಗಣಪತಿ ಮುನಿಗಳು ತಾನು ರಚಿಸಿದ ರಮಣರ ಸ್ತೋತ್ರಗಳಿಗಿಂತಲೂ ರಮಣರ ವ್ಯಕ್ತಿತ್ವದ ಸ್ವರೂಪವು ಇದರಲ್ಲಿ ಚೆನ್ನಾಗಿ ಮೂಡಿಬಂದಿರುವದಾಗಿ ಕೊಂಡಾಡಿದರು.

ಆರ್ಷಭಾವದ ದಿವ್ಯ ದರ್ಶನ

ಜೀವ ಜೀವಗಳಲ್ಲಿ ಮಿಡಿಯುವ ಆತ್ಮಶಕ್ತಿಯ ಮೂಲ ಸ್ವರೂಪವೇ 'ನಾನು'. 'ನಾನು ಯಾರು' ಎಂದು ಅರಿಯುವುದೇ ಮನುಷ್ಯನ ನಿಜವಾದ ಕರ್ತವ್ಯ. ಇದೇ ಸಹಜವಾದ ತಪಸ್ಸು – ಎಂದು ತಿಳಿಸಿಕೊಟ್ಟವರು ಭಗವಾನ್ ಶ್ರೀ ರಮಣ ಮಹರ್ಷಿಗಳು. ತಾವು ಇಚ್ಛಿಸಿದಾಗಲೆಲ್ಲ ಅದೇ ಕ್ಷಣದಲ್ಲಿ ಬಾಹ್ಯಗತ್ತಿನ ಪರಿವೆಯಿಂದ ಸುಪ್ತ ಸಮಾಧಿಗೆ ಜಾರುತ್ತಿದ್ದ ಅವರಿಗೆ ತಪಸ್ಸು ಒಂದು ಸಹಜ ಕ್ರಿಯೆಯಾಗಿತ್ತು. ಅಂತೆಯೇ ಅತ್ಯಂತ ಎಳೆಯ ವಯಸ್ಸಿನಲ್ಲಿ ಹಾಗೂ ಅತೀ ಕಡಿಮೆ ಅವಧಿಯಲ್ಲಿಯೇ ಅವರು ಆತ್ಮಸಾಕ್ಷಾತ್ಕಾರ ಪಡೆದರು.

ಅಂದು 1915 ರ ಚಾತುರ್ಮಾಸ್ಯದ ಸಮಯ ಭಗವಾನ್ ಶ್ರೀ ರಮಣ ಮಹರ್ಷಿಗಳು ಸುಪ್ತ ಸಮಾಧಿ ಸ್ಥಿತಿಯಲ್ಲಿರುವಾಗ ಆರ್ಷಿಜ್ಞಾನದ ಬೆಳಕು ಶ್ಲೋಕ ರೂಪದಲ್ಲಿ ಹರಿದುಬಂದಿತು.

ಹೃದಯ ಕುಹರ ಮಧ್ಯೇ ಕೇವಲಂ ಬ್ರಹ್ಮಮಾತ್ರಂ
ಹ್ಯಹಮಹಮಿತಿ ಸಾಕ್ಷಾದಾತ್ಮರೂಪೇಣ ಭಾತಿ ।
ಹೃದಿ ವಿಶ ಮನಸಾ ಸ್ವಂ ಚಿನ್ವತಾ ಮಜ್ಜತಾ ವಾ
ಪವನ ಚಲನರೋಧಾತ್ಮನಿಷ್ಠೋ ಭವತ್ವಮ್ ॥

"ಹೃದಯ ಕುಹರ ನಡುವೆ ಕೇವಲ ಬ್ರಹ್ಮ ಒಂದೇ ಆತ್ಮರೂಪದಲ್ಲಿ ನಾನು ನಾನು ಎಂಬ ಸಾಕ್ಷೀರೂಪದಿಂದ ಬೆಳಗುತ್ತಿದೆ. ನಾನು ಎನ್ನುವುದರ ಮೂಲವನ್ನು ತಿಳಿಯುವುದರಿಂದಲೂ ಆತ್ಮಚೈತನ್ಯದ ಶೋಧನೆಯಿಂದಲೂ ಪ್ರಾಣಾಯಾಮದ ಗತಿಯಲ್ಲಿ ಅಂತರಂಗ ಪ್ರವೇಶಿಸುತ್ತ ಆತ್ಮನಿಷ್ಠನಾಗು" ಎಂಬುದೇ ಈ ಶ್ಲೋಕದ ತಾತ್ಪರ್ಯ.

ಕಾವ್ಯಕಂಠ ವಾಸಿಷ್ಠ ಗಣಪತಿಮುನಿಗಳು ಇದನ್ನು 'ರಮಣೋಪನಿಷತ್' ಎಂತಲೂ 'ಹಾರ್ದೋಪನಿಷತ್' ಎಂದೂ ಕರೆದಿದ್ದಾರೆ. ಇದು ಸಂಪೂರ್ಣವಾಗಿ ಆತ್ಮಜ್ಞಾನದ ಕುರಿತಾಗಿದ್ದು ಅದನ್ನು ಅತ್ಯಂತ ಸ್ಪಷ್ಟವಾಗಿ ಸಂಶಯಕ್ಕೆಡೆಯಿಲ್ಲದಂತೆ ಹೇಳಿರುವುದು ಇದರ ವೈಶಿಷ್ಟ್ಯವಾಗಿದೆ.

ಅರುಣಗಿರಿಯ ಪ್ರದಕ್ಷಿಣೆ

ದೈವರಾತನು ಅರುಣಗಿರಿಯ ಮಹಾಯೋಗಿ ಭಗವಾನ್ ಶ್ರೀರಮಣ ಮಹರ್ಷಿಗಳ ಸನ್ನಿಧಿಯಲ್ಲಿ ಕಳೆದ ಸಮಯವು ಬಹಳ ಅಮೂಲ್ಯವಾಗಿತ್ತು. ಆಗ ದೈವರಾತನಿಗೆ ಇಪ್ಪತ್ತೈದರ ವಯಸ್ಸು. ರಮಣರು ಆತನ ಭಾವೀ ಆಧ್ಯಾತ್ಮಿಕ ಬದುಕಿಗೆ ಬೆಳಕು ನೀಡುತ್ತ ಮಾರ್ಗದರ್ಶನ ಮಾಡುತ್ತಿದ್ದರು. ಗುರು ವಾಸಿಷ್ಠ ಗಣಪತಿಮುನಿಗಳು ಮತ್ತು ಪರಮಗುರು ಶ್ರೀ ರಮಣಮಹರ್ಷಿಗಳ ಆತ್ಮೀಯ ಒಡನಾಟದಲ್ಲಿ ಒಂದಷ್ಟು ಕಾಲ ಸುಖಿಸುವ ಸೌಭಾಗ್ಯ ಒದಗಿ ಬಂದದ್ದು ದೈವರಾತನ ಸುಯೋಗವಾಗಿತ್ತು.

ಅದೊಂದು ದಿನ ವೈಶಾಖ ಪೌರ್ಣಿಮೆಯಂದು ದೈವರಾತನು ಪರಮಗುರು ಶ್ರೀರಮಣಮಹರ್ಷಿಗಳ ಪಾದಪದ್ಮಗಳಿಗೆ ನಮಸ್ಕರಿಸುತ್ತಿರುವಾಗ 'ನೀನು ಅರುಣಗಿರಿಯ ಪ್ರದಕ್ಷಿಣೆ ಮಾಡಿದ್ದೀಯಾ?' ಎಂದು ಪ್ರಶ್ನಿಸುತ್ತ ಆತನು ಅದನ್ನು ಕೈಗೊಳ್ಳುವಂತೆ ಪ್ರೇರೇಪಿಸಲು ಸ್ವತಃ ತಾವೇ

ಪ್ರದಕ್ಷಿಣೆ ಕೈಗೊಂಡಿದ್ದು ರಮಣರ ವಿಶೇಷವಾಗಿತ್ತು. "ಇಲ್ಲಿ ಈ ಪರ್ವತವೇ ದೇವರು. ಇದರ ಕೆಳಗಡೆ ಊರಿನಲ್ಲಿರುವ ಅರುಣಾಚಲೇಶ್ವರ ಲಿಂಗವು ಈಶ್ವರಸ್ವರೂಪದ ಈ ಪರ್ವತಕ್ಕೆ ಪ್ರತೀಕವಾಗಿದೆ." ಎಂದು ನುಡಿದಾಗ ದೈವರಾತನು "ತಾವು ಪ್ರದಕ್ಷಿಣೆ ಮಾಡಲು ಅಪೇಕ್ಷಿಸಿದರೆ ನಾನು ತಮ್ಮ ಮಾರ್ಗದರ್ಶನದಲ್ಲಿಯೇ ಅದರಲ್ಲಿ ಪಾಲ್ಗೊಂಡು ಧನ್ಯನಾಗುತ್ತೇನೆ." ಎಂದು ವಿನೀತಭಾವದಿಂದ ಪ್ರಾರ್ಥಿಸಿದನು. ಅದಕ್ಕೆ ಮಹರ್ಷಿಗಳು ನಸುನಗುತ್ತ 'ಹಾಗೆಯೇ ಆಗಲಿ' ಎಂದರು.

ಅಂತೆಯೇ ಆ ದಿನ ಸಾಯಂಕಾಲದೊಳಗೆ ಉಪಹಾರ ಮುಗಿಸಿ ಪರ್ವತ ಪ್ರದಕ್ಷಿಣೆಗೆ ಹೊರಡಲು ಎಲ್ಲರೂ ಅನುವಾಗಿ ಕುಳಿತಿದ್ದರು. ಚಂದ್ರೋದಯವಾಗುತ್ತಲೇ ಪೂರ್ಣ ಬೆಳದಿಂಗಳಿನ ಹೊನಲು ಬೆಳಕಿನಲ್ಲಿ ಮಹರ್ಷಿಗಳ ಜತೆ ದೈವರಾತ ಮತ್ತು ಇನ್ನೂ ಕೆಲವು ಜನ ಶಿಷ್ಯರು ಅರುಣಾಚಲ ಶಿರೋಭಾಗದಲ್ಲಿರುವ ಸ್ಕಂದಾಶ್ರಮದಿಂದ ಇಳಿದು ಪರ್ವತದ ಪಾದಭೂಮಿಗೆ ಬಂದು ತಲುಪಿದರು. ದೈವರಾತನಿಗೆ ದಾರಿಯುದ್ದಕ್ಕೂ ಭಜನೆಯೊಂದಿಗೆ ನರ್ತಿಸುತ್ತ ಸಾಗಬೇಕು ಎಂಬ ಹಂಬಲವಿತ್ತು. ಆದರೆ ದಾರಿ ಬಹು ಇಕ್ಕಟ್ಟಾಗಿ ತಿರುವು ಮುರುವಿನಿಂದ ಕೂಡಿದ್ದು ದುರ್ಗಮವಾಗಿರುವುದರಿಂದ ತನ್ನಾಸೆಯನ್ನು ತಾತ್ಕಾಲಿಕವಾಗಿ ಅದುಮಿಟ್ಟು ಕೇವಲ ಭಜನೆಯನ್ನು ಮಾಡುತ್ತ ಸಾಗಿದನು. ಆದಾಗ್ಯೂ ಅವಕಾಶವಿರುವಲ್ಲೆಲ್ಲ ರಮಣರ ಸುತ್ತ ವರ್ತುಲಾಕಾರವಾಗಿ ನರ್ತಿಸುತ್ತ ಮುಂದೆ ಮುಂದೆ ಹೆಜ್ಜೆ ಹಾಕುತ್ತಿದ್ದನು.

ಶಿವಹರ ಶಂಕರ ಗೌರೀಶಂ । ವಂದೇ ಗಂಗಾಧರಮೀಶಮ್ ॥
ರುದ್ರಂ ಪಶುಪತಿಮೀಶಾನಂ । ಕಲಯೇ ಕಾಶೀ ಪುರನಾಥಮ್ ॥
ವಿಶ್ವೇಶಾ ತವ ಶರಣಂ । ವಿಶ್ವನ್ನಾಥಾ ತವ ಶರಣಮ್ ॥
ನಂದಿ ವಾಹನ ನಾಗಭೂಷಣ । ಚಂದ್ರಶೇಖರ ತವ ಶರಣಮ್ ॥

ಈ ಭಜನೆ ಮುಗಿಯುತ್ತಿರುವಂತೆಯೇ ರುದ್ರಾಧ್ಯಾಯದ ಸ್ವರಚಿತ ರುದ್ರ ಭಜನೆ ಪ್ರಾರಂಭಿಸಿದನು. ಈ ರಚನೆ ಇಪ್ಪತ್ತೈದು ಶ್ಲೋಕಗಳಲ್ಲಿ ಸಂಕಲಿತವಾಗಿದೆ.

ಭಗವನ್ ಭರ್ಗ ಸಮಗ್ರವಿಭೂತೇ । ಬಾವಿತ ಭದ್ರದ ರುದ್ರ ನಮಸ್ತೇ ॥

ಈ ಭಜನೆಗಳೊಂದಿಗೆ ವೇದೋಕ್ತವಾದ–

ತ್ರಾತಾರಮಿಂದ್ರಂ ಅವಿತಾರಮಿಂದ್ರಂ
ಹವೇ ಹವೇ ಸುಹವಮ್ ಶೂರಮಿಂದ್ರಮ್ ॥

ಮುಂತಾದ ವೈದಿಕ ಗೀತೆಗಳನ್ನೂ ಮಧ್ಯೆ ಮಧ್ಯೆ ಬಳಸಿಕೊಳ್ಳುತ್ತಿದ್ದನು. ಇವುಗಳಷ್ಟೇ ಅಲ್ಲದೆ ಮರಾಠಿ, ಹಿಂದಿ ಭಜನೆಗಳನ್ನೂ ಹಾಡುತ್ತಿದ್ದನು. ಹೀಗೆ ಪ್ರಕೃತಿಮಡಿಲ ಮಗುವಾಗಿ ದಿವ್ಯ ಅರುಣಾಚಲೇಶ್ವರನ ಸನ್ನಿಧಿಯಲ್ಲಿ ಭಕ್ತಿಯ ಪಾರಮ್ಯದಿಂದ ದೈವರಾತನು ದೈವಿಕ ವಾತಾವರಣವನ್ನೇ ನಿರ್ಮಾಣ ಮಾಡಿದನು. ಮೇಲಿನಿಂದ ಕೆಳಗಿಳಿದು ಪರ್ವತದ ಪದತಲವನ್ನು ತಲುಪಿದಾಗ ಮುಂದಿನ ಮಾರ್ಗವು ಅಗಲವಾಗಿ ಅಚ್ಚುಕಟ್ಟಾಗಿತ್ತು. ಪರ್ವತ ಪ್ರದಕ್ಷಿಣೆಯ ಒಟ್ಟು ಮಾರ್ಗದ ಉದ್ದ ಸುಮಾರು ಎಂಟು ಮೈಲಿಗಳಷ್ಟು ಇತ್ತು. ತಿರುವಣ್ಣಾಮಲೈ ದೇವಾಲಯದ ಉತ್ತರಕ್ಕೆ ಪರ್ವತದ ಎತ್ತರದ ಭಾಗದಲ್ಲಿ ಅಡಿವಣ್ಣಾಮಲೈ


ಎಂಬ ಚಿಕ್ಕ ಕ್ಷೇತ್ರವಿದ್ದು ಅಲ್ಲಿ ಒಂದು ಶಿವಲಿಂಗವಿದೆ. ರಮಣ ಮಹರ್ಷಿಗಳು ಮತ್ತು ಅವರ ಶಿಷ್ಯರು ಅಲ್ಲಿಗೆ ತಲುಪಿದಾಗ ನಸುಕು ಹರಿಯುತ್ತ ಬೆಳಕು ಮೂಡಿತ್ತು. ಮಹರ್ಷಿಗಳು ಅರುಣಾಚಲವನ್ನು ಸುತ್ತುತ್ತಾ ಅಲ್ಲಿಗೆ ಬರುತ್ತಿದ್ದಾರೆಂಬ ಸುದ್ದಿಯು ಆ ವೇಳೆಗಾಗಲೇ ಅಲ್ಲಿಗೆ ತಲುಪಿ ಬಹಳಷ್ಟು ಜನ ಅವರ ಭಕ್ತವೃಂದದವರು ಅವರಿಗಾಗಿ ಕಾಯುತ್ತಿದ್ದರು. ಅವರೆಲ್ಲರೂ ಮಹರ್ಷಿಗಳಿಗೆ ನಮಸ್ಕರಿಸಿ "ತಾವು ನಿನ್ನೆಯೇ ಸಾಯಂಕಾಲ ಸ್ಕಂದಾಶ್ರಮದಿಂದ ಪಾದಚಾರಿಯಾಗಿ ಹೊರಟು ಈ ದಿನ ಮುಂಜಾವಿನ ತನಕ ನಡೆದು ಆಯಾಸಗೊಂಡಿದ್ದೀರಿ. ಆದ್ದರಿಂದ ಮಧ್ಯಾಹ್ನದವರೆಗೆ ವಿಶ್ರಾಂತಿ ಮಾಡಿ ತಣಿವಿನ ಇಳಿ ಹೊತ್ತಿನಲ್ಲಿ ಪುನಃ ಮುಂದಕ್ಕೆ ಸಾಗಬಹುದೆಂದು ಪ್ರಾರ್ಥಿಸಿದರು. ಅದಕ್ಕೆ ರಮಣರು ಸಮ್ಮತಿಸಿದರು. ಆಗ ಕೂಡಲೇ ಎಲ್ಲರಿಗೂ ಊಟದ ಏರ್ಪಾಡು ಮಾಡಲಾಯಿತು. ಮಧ್ಯಾಹ್ನ ಊಟ ಮುಗಿಸಿ ಸುಮಾರು ಒಂದು ಗಂಟೆ ಕಾಲ ವಿಶ್ರಾಂತಿ ಪಡೆದು ಅಲ್ಲಿಯ ಜನರಿಂದ ಬೀಳ್ಕೊಂಡು ಪುನಃ ಭಜನೆ ಮತ್ತು ನರ್ತನಗಳೊಂದಿಗೆ ಮುಂದಕ್ಕೆ ಹೊರಡಲಾಯಿತು. ಸುಮಾರು ಎರಡು ಮೈಲು ನಡೆದಾಗ ಪಚ್ಚಮ್ಮ ಎಂಬ ಸ್ಥಳಕ್ಕೆ ಆಗಮಿಸಿ ಅಲ್ಲಿ ದೇವಿ ದರ್ಶನ ಪಡೆಯಲಾಯಿತು. ಆಗ ರಮಣಮಹರ್ಷಿಗಳು ನಾಲ್ಕು ವರ್ಷಗಳ ಹಿಂದೆ ತಾವು ವಾಸಿಷ್ಠ ಗಣಪತಿಮುನಿಗಳ ಜತೆ ಅಲ್ಲಿ ಒಂದು ತಿಂಗಳಕಾಲ ತಪಸ್ಸು ಆಚರಿಸಿದ ವಿಷಯವನ್ನು ತಿಳಿಸಿದರು. ಮುಂದೆ ಸಾವಕಾಶವಾಗಿ ಹೆಜ್ಜೆ ಹಾಕುತ್ತಾ ಸಾಯಂಕಾಲದ ವೇಳೆಗೆ ಎಲ್ಲರೂ ಸ್ಕಂದಾಶ್ರಮ ಸೇರಿದರು.

ಗುರು ಮತ್ತು ಪರಮಗುರುಗಳ ಸನ್ನಿಧಿಯಲ್ಲಿ ದೈವರಾತ

ಪ್ರತಿದಿನ ಪ್ರಾತಃಕಾಲ ದೈವರಾತನು ತಿರುವಣ್ಣಾಮಲೈ ಊರಿಗೆ ಹೋಗಿ ಹಾಲು ತೆಗೆದುಕೊಂಡು ಸ್ಕಂದಾಶ್ರಮಕ್ಕೆ ಬಂದು ಕಾಫೀ ತಯಾರಿಸಿ ಮಹರ್ಷಿಗಳಿಗೆ, ವಾಸಿಷ್ಠ ಗಣಪತಿಮುನಿಗಳಿಗೆ ಮತ್ತು ವಿಶಾಲಾಕ್ಷಿ ಅಮ್ಮನವರಿಗೆ ಕೊಟ್ಟು ನಂತರ ತಾನು ಸೇವಿಸುತ್ತಿದ್ದನು. ರಮಣ ಮಹರ್ಷಿಗಳಿಗೆ ಕೊಡುವಾಗ 'ಇಂದ್ರಾಯ ಸ್ವಾಹಾ' ಎಂದು ಕೊಡುತ್ತ ಗಣಪತಿಮುನಿಗಳಿಗೆ ಕೊಡುವಾಗ 'ಬ್ರಹ್ಮಣಸ್ಪತಯೇ ಸ್ವಾಹಾ' ಎಂದೂ ವಿಶಾಲಾಕ್ಷಿ ಅಮ್ಮನವರಿಗೆ ಕೊಡುವಾಗ 'ಸರಸ್ವತ್ಯೈ ಸ್ವಾಹಾ' ಎನ್ನುತ್ತ ಭಕ್ತಿಯಿಂದ ಹವಿಸ್ಸನ್ನು ಅರ್ಪಿಸುವಂತೆ ಸಮರ್ಪಿಸುತ್ತಿದ್ದನು.

ದೈವರಾತನು ಸ್ಕಂದಾಶ್ರಮಕ್ಕೆ ಹೋಗುವ ಪೂರ್ವದಲ್ಲಿಯೇ ರಮಣಮಹರ್ಷಿಗಳ ತಾಯಿ ಅಳಗಮ್ಮಾಳರು ಮಗನಿರುವಲ್ಲಿಗೆ ಬಂದು ವಾಸವಾಗಿದ್ದರು. ಅವರು ಬಹಳ ಮಡಿ-ಮೈಲಿಗೆ ಆಚಾರದವರಾದ್ದರಿಂದ ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳುತ್ತಿದ್ದರು. ದೈವರಾತನು ಸ್ಕಂದಾಶ್ರಮಕ್ಕೆ ಬಂದು ವಾಸಿಸುತ್ತಿರುವಾಗ ಸೌಜನ್ಯಪೂರಿತ ಸದಾ ಸೇವಾಮನೋಭಾವದ ಆತನ ಆಚಾರ, ವಿಚಾರಗಳು ಹಾಗೂ ಉನ್ನತ ಸಂಸ್ಕಾರದ ಪರಿಚಯವಾದಾಗ ಅಳಗಮ್ಮಾರ ಸೇವೆಮಾಡುವುದಕ್ಕೆ ದೈವರಾತನಿಗೆ ಅವಕಾಶ ದೊರೆಯಿತು. ಇದರಿಂದ ಪ್ರತಿದಿನ ಅವರಿಗೆ ಇಷ್ಟವಾದ ಅಡಿಗೆಯನ್ನು ದೈವರಾತನೇ ತಯಾರಿಸುತ್ತಿದ್ದನು.

ಯಾವ ಗುರು, ಪರಮಗುರುಗಳ ಸನ್ನಿಧಿಯಲ್ಲಿ ದೈವರಾತನು ವಾಸವಾಗಿದ್ದರೂ ಅಡಿಗೆ ತಯಾರಿಸುತ್ತಿದ್ದರೂ ತನಗೆ ಬೇಕಾದ ಕನಿಷ್ಠ ಆಹಾರದ ಅವಶ್ಯಕತೆಯನ್ನು ಮಧುಕರಿಯಿಂದಲೇ ಪೂರಯಿಸಿಕೊಳ್ಳುವುದು ಆತನ ಪರಿಪಾಟವಾಗಿತ್ತು. ದಿನಾಲು ಮಧ್ಯಾಹ್ನದಲ್ಲಿ ಸ್ಕಂದಾಶ್ರಮದಿಂದ ಸುಮಾರು



ಗುರು ಮತ್ತು ಪರಮಗುರುಗಳ ಜತೆಯಲ್ಲಿ ದೈವರಾತರು

ಎರಡು ಮೈಲಿ ದೂರವಿರುವ ತಿರುವಣ್ಣಾಮಲೈ ಅಗ್ರಹಾರಕ್ಕೆ ಹೋಗಿ ಮಧುಕರಿ ಮಾಡಿ ಪುನಃ ಆಶ್ರಮಕ್ಕೆ ಮರಳುತ್ತಿದ್ದನು. ಆದರೆ ಅಷ್ಟರೊಳಗೆ ಆಶ್ರಮದಲ್ಲಿ ಎಲ್ಲರ ಊಟ ಮುಗಿದಿರುತ್ತಿತ್ತು. ಆದಾಗ್ಯೂ ದೈವರಾತನು ಮಧುಕರಿಯಿಂದ ತಾನು ತಂದಿರುವ ಅನ್ನವನ್ನು ಒಂದು ಹಿಡಿಯಷ್ಟು ಮಹರ್ಷಿಗಳಿಗೆ 'ಇಂದ್ರಾಯ ಸ್ವಾಹಾ' ಎಂದು ಸಮರ್ಪಿಸುತ್ತಿದ್ದನು. ಮಹರ್ಷಿಗಳು ಅದನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ಆ ದಿನಗಳಲ್ಲಿ ದೈವರಾತನು ಉಪ್ಪು, ಹುಳಿ, ಖಾರ, ಮಸಾಲೆ ಪದಾರ್ಥಗಳಿಂದ ಕೂಡಿದ ಆಹಾರ ಪದಾರ್ಥಗಳನ್ನು ತ್ಯಜಿಸಿರುವದರಿಂದ ಮಧುಕರಿಗೆ ಹೋದಾಗ ಅಂತಹ ಯಾವ ಪದಾರ್ಥವನ್ನೂ ತನ್ನ ಜೋಳಿಗೆಗೆ ಹಾಕಿಸಿಕೊಳ್ಳುತ್ತಿರಲಿಲ್ಲ. ಈ ವಿಷಂಯವನ್ನು ತಿಳಿದಿದ್ದ ರಮಣಮಹರ್ಷಿಗಳು ದೈವರಾತನು ನೀರಿನ ಸಮೀಪಕ್ಕೆ ಹೋಗಿ ಊಟಕ್ಕೆ ಕುಳಿತುಕೊಳ್ಳುತ್ತಿರುವಂತೆ ಉಪ್ಪಿಲ್ಲದ ಮಜ್ಜಿಗೆ ಕಳುಹಿಸಿಕೊಡುವ ಏರ್ಪಾಡು ಮಾಡಿದ್ದರು.

ತಿರುವಣ್ಣಾಮಲೈನಲ್ಲಿರುವ ದೇವಾಲಯದ ಒಳಗಿನ ವಿಶಾಲವಾದ ಪ್ರಾಂಗಣದಲ್ಲಿ ದಿನಾಲು ಅಪರಾಹ್ನ ಇಳಿ ಹೊತ್ತಿನಲ್ಲಿ ಆಧ್ಯಾತ್ಮಿಕ ಉಪನ್ಯಾಸ, ಜಿಜ್ಞಾಸೆಗಳು ನಡೆಯುತ್ತಿದ್ದವು. 'ರಮಣಾನಂದ ನಿಲಯ' ಎಂಬ ಹೆಸರಿನಲ್ಲಿ ಸ್ಥಳೀಯರಿಂದಲೇ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದ್ದು ಅವರು ಈ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ದೈವರಾತನು ಅವಕಾಶ ದೊರೆತಾಗಲೆಲ್ಲ ಅಲ್ಲಿಗೆ ಹೋಗುತ್ತಿದ್ದನು.

ವಿರೂಪಾಕ್ಷ ಗುಹೆಯಲ್ಲಿ ಹಿಂದೆ ರಮಣಮಹರ್ಷಿಗಳು ತಪಸ್ಸನ್ನಾಚರಿಸಿದ್ದ ವಿಷಯವನ್ನು ತಿಳಿದು ಆ ಗುಹೆಯನ್ನು ದೈವರಾತನಿಗೆ ನೋಡಬೇಕೆಂಬ ಆಸೆಯಾಯಿತು. ಆ ಸಮಯಕ್ಕೆ ಗಣಪತಿ ಮುನಿಗಳಿಗೆ ಅಲ್ಲಿ ತಪಸ್ಸು ಮಾಡಬೇಕೆಂಬ ಇಚ್ಛೆಯುಂಟಾಗಿ ತಮ್ಮ ಮನದಿಂಗಿತವನ್ನು ದೈವರಾತನಿಗೆ ತಿಳಿಸಿದಾಗ ಆತನು ಅವರ ಸೇವೆಗೆ ನಿಂತನು. ಗಣಪತಿ ಮುನಿ ದಂಪತಿಗಳು ಇಲ್ಲಿ ಒಂದು ತಿಂಗಳಕಾಲ ಉಳಿದು ತಪಸ್ಸು ಆಚರಿಸಿದರು.

ಗಣಪತಿಮುನಿಗಳು ಒಂದು ಮಾಸ ತಪಸ್ಸಿನ ಅವಧಿ ಮುಗಿಸಿ ಪುನಃ ಸ್ಕಂದಾಶ್ರಮಕ್ಕೆ ಹಿಂದಿರುಗಿದ ಸ್ವಲ್ಪ ಕಾಲದಲ್ಲಿಯೇ ವಿಶಾಲಾಕ್ಷಿ ಅಮ್ಮನವರಿಗೆ ಗರ್ಭಕೋಶದ ವ್ಯಾಧಿ ಪ್ರಾರಂಭವಾಯಿತು. ಇದರಿಂದಾಗಿ ದೈವರಾತನು (ಮದರಾಸು) ಚೆನ್ನೈವರೆಗೆ ಹೋಗಿ ಬರುವ ಸಂದರ್ಭವೊಂದು ಒದಗಿಬಂತು. ಗಣಪತಿ ಮುನಿಗಳು ಪತ್ನಿ ವಿಶಾಲಾಕ್ಷಿ ಅಮ್ಮನವರನ್ನು ಗರ್ಭಕೋಶದವ್ಯಾಧಿಯ ಚಿಕಿತ್ಸೆಗಾಗಿ ದೈವರಾತನೊಂದಿಗೆ ತಮ್ಮ ಆತ್ಮೀಯ ಶಿಷ್ಯ ದೊರೈಸ್ವಾಮಿ ಎಂಬವರಲ್ಲಿಗೆ ಕಳಿಸಿಕೊಟ್ಟರು. ದೈವರಾತನು ಮದರಾಸಿನಿಂದ ಮರಳುವಾಗ ಶಿವಕಾಂಚಿ ಮತ್ತು ವಿಷ್ಣುಕಾಂಚಿ ಕ್ಷೇತ್ರಗಳನ್ನು ಸಂದರ್ಶಿಸಿದನು.

ಶಿವಕಾಂಚಿಯಲ್ಲಿ ಒಂದು ಸಾಮವೇದ ಪಾಠಶಾಲೆಯಿತ್ತು. ಅದರ ಅಧ್ಯಾಪಕರು ಒಳ್ಳೆಯ ವಿದ್ವಾಂಸರಾಗಿದ್ದರು. ಆದ್ದರಿಂದ ಸಾಮವೇದವನ್ನು ಕಲಿಯಬೇಕೆಂಬ ಅಭಿಲಾಷೆಯಿಂದ ಅಲ್ಲಿ ಒಂದು ವಾರ ಉಳಿದಿದ್ದನು. ಆದರೆ ಗಣಪತಿಮುನಿಗಳಿರುವಲ್ಲಿಗೆ ಹೋಗುವುದು ಅವಶ್ಯವಿರುವ ಕಾರಣ ಅಲ್ಲಿ ಉಳಿಯಲಾಗಲಿಲ್ಲ. ಅಲ್ಲಿಂದ ವಿಷ್ಣುಕಾಂಚಿಗೆ ಹೊರಟು ಮೊದಲ ದಿನ ಚಕ್ರತೀರ್ಥದಲ್ಲಿ ಸ್ನಾನಮಾಡಿ ಭಸ್ಮಧಾರಣೆಯೊಂದಿಗೆ ನಿತ್ಯ ನೈಮಿತ್ತಿಕಗಳನ್ನು ಪೂರಯಿಸಿ ಮಧ್ಯಾಹ್ನ ಮಧುಕರಿಗೆ ನಡೆದನು. ಅಲ್ಲಿಯ ಗೃಹಣಿಯರು ಈತನ ಭಸ್ಮಧಾರಣೆಯನ್ನು ಕಂಡು ಭಿಕ್ಷೆ ನೀಡದೇ ಬಾಗಿಲು ಹಾಕಿಕೊಂಡರು. ಆಗ

ದೈವರಾತನು ಮರಳಿ ಚಕ್ರತೀರ್ಥ ಮಂಟಪಕ್ಕೆ ಬಂದು ಅಂದು ಉಪವಾಸವೇ ಉಳಿದನು. ಸಾಯಂಕಾಲ ಇಳಿಹೊತ್ತಿನ ವೇಳೆ ಒಬ್ಬೊಬ್ಬರೇ ವಿದ್ವಾಂಸರು ವಿಹಾರಾರ್ಥವಾಗಿ ಅಲ್ಲಿಗೆ ಬಂದು ಶಾಸ್ತ್ರ ಚರ್ಚೆಯಲ್ಲಿ ತೊಡಗಿದ್ದರು. ಆಗ ಅಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಕುಳಿತಿರುವುದನ್ನು ಕಂಡು ಅವನು ಯಾರು ಎಲ್ಲಿಯವನು ಇತ್ಯಾದಿ ವಿಚಾರಿಸಿ ಆತ ಅದ್ವೈತ ಪರಂಪರೆಯವನು ಎಂದು ತಿಳಿದಾಗ ವಾದ ಮಾಡಲು ಮುಂದಾದರು. ದೈವರಾತನು "ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ॥" (ಋಗ್ವೇದ : 1-164-20) ಎಂಬ ಋಗ್ವೇದ ಮಂತ್ರವನ್ನು ಪ್ರಮಾಣವಾಗಿಟ್ಟು ಅದ್ವೈತ-ದ್ವೈತ-ವಿಶಿಷ್ಟಾದ್ವೈತ ಈ ಮೂರು ತತ್ವಗಳಲ್ಲಿ ಯಾವುದೇ ರೀತಿಯ ವಸ್ತು ಸಿದ್ಧವಾದ ವಿರೋಧವು ಇಲ್ಲವೆಂದು ವಾದಿಸಿ ಆ ವಿದ್ವಾಂಸರನ್ನು ಸಂತೋಷಗೊಳಿಸಿದನು.

ದೈವರಾತನು ಅಲ್ಲಿಂದ ಶಿವಕಾಂಚಿಗೆ ಬಂದು ಸ್ಕಂದಾಶ್ರಮ ಸೇರಿದನು. ತರುವಾಯ ಸುಮಾರು ಹದಿನೈದು ದಿನಗಳಲ್ಲಿ ವಿಶಾಲಾಕ್ಷಿ ಅಮ್ಮನವರೂ ಗುಣಮುಖರಾಗಿ ಮರಳಿಬಂದು ಗಣಪತಿ ಮುನಿಗಳನ್ನು ಸೇರಿಕೊಂಡರು. ಶರನ್ನವರಾತ್ರಿ ಸನ್ನಿಹಿತವಾಗುತ್ತಲಿತ್ತು. ಈ ವೇಳೆಯಲ್ಲಿ ವಾಸಿಷ್ಠ ಗಣಪತಿ ಮುನಿಗಳು ರೇಣುಕಾಂಬಾ ಕ್ಷೇತ್ರದಲ್ಲಿ ತಪಸ್ಸು ಮಾಡಲು ನಿಶ್ಚಯಿಸಿದ್ದರು. ಅಂತೆಯೇ ಭಗವಾನ್ ಶ್ರೀರಮಣಮಹರ್ಷಿಗಳ ಅನುಮತಿ ಪಡೆದು ಪತ್ನಿ ವಿಶಾಲಾಕ್ಷಿಅಮ್ಮನವರು ಮತ್ತು ತಪಃಶಿಷ್ಯ ದೈವರಾತ ಇವರೊಂದಿಗೆ ರೇಣುಕಾಂಬ ಕ್ಷೇತ್ರವಾದ ಪಡವೇಟ್ಟೆಗೆ ಹೊರಟರು.

ಸಿರಿ ಸಂಪನ್ನ ಆರ್ಷ ಪರಿಸರ

ಪಡವೇಟ್ಟಿ ಕ್ಷೇತ್ರದ ಸುತ್ತಮುತ್ತಲಿನ ಪರಿಸರ ತುಂಬಾ ಸುಂದರವಾಗಿತ್ತು. ಹಸಿರನುಟ್ಟು ಶೃಂಗಾರವಾಗಿರುವ ವಸುಧೆ. ದಟ್ಟ ಅರಣ್ಯ ನಡುವೆ ಹರಿಯುವ ನದಿ. ಅದರ ದಂಡೆಯ ಮೇಲೆ ಕೃಷಿಯೋಗ್ಯ ಹೊಲ. ಅಪರೂಪವಾದ ಜೀವ ವೈವಿಧ್ಯ ಮಾರ್ದನಿಸುವ ಹಕ್ಕಿ ಪಕ್ಷಿಗಳ ಮಧುರ ಇಂಚರ. ಹೂವು, ಹಣ್ಣು, ಕಾಯಿ, ಕಂದಮೂಲಗಳಿಂದ ಸಂಪನ್ನವಾಗಿರುವ ತಾಯ ಮಡಿಲು ಸಾವಿರಾರು ವರ್ಷಗಳ ಹಿಂದಿನ ಪ್ರಶಾಂತ ಆರ್ಷಪರಿಸರಕ್ಕೆ ಮತ್ತೊಮ್ಮೆ ಸಾಕ್ಷಿಯಾಗುತ್ತಲಿತ್ತು.

ಪಡವೇಟ್ಟ ಗ್ರಾಮವು 'ನಂದೋರಾಜಾ ಭವಿಷ್ಯತಿ' ಎಂದು ಜನರು ಮೆಚ್ಚುಗೆಯಿಂದ ವೈಭವವನ್ನು ಹಾಡಿಹೊಗಳಿರುವ ನಂದರಾಜನ ರಾಜ್ಯದ ಮುಖದ್ವಾರವೆಂದು ಪ್ರತೀತಿಯಿದೆ. ಪಡವೇಟ್ಟಿನಿಂದ ತಿರುವಣ್ಣಾಮಲೈ ಕಡೆಗೆ ಐದು ಮೈಲಿ ದೂರದಲ್ಲಿ 'ಚಂದವಾಶಿಲ್' ಎಂದರೆ ಸುಂದರವಾದ ಬಾಗಿಲು ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಸಣ್ಣ ಗ್ರಾಮವಿದೆ. ಇಲ್ಲಿ ಅಂಚೆಕಚೇರಿಯೂ ಇದೆ. ಗಣಪತಿ ಮುನಿಗಳು, ವಿಶಾಲಾಕ್ಷಿ ಅಮ್ಮನವರು ಹಾಗೂ ದೈವರಾತ ಇವರು ಮೊದಲು ರೇಣುಕಾಂಬಾ ಮಂದಿರವನ್ನು ಸಂದರ್ಶಿಸಿದರು. ಆ ಕ್ಷಣದಲ್ಲಿ ಅವರು ತಾಯಮಡಿಲಲ್ಲಿ ಮಗುವು ಎಲ್ಲವನ್ನು ಮರೆತು ಸುಖಿಸುವಂತೆ ಇಹದ ಪರಿವೆಯಿಂದ ಅಂತರಂಗದ ದಿವ್ಯಭಾವಕ್ಕೆ ಜಾರಿದರು. ದೂರದ ಊರಿನಿಂದ ತಾಯ ಸನ್ನಿಧಾನವನ್ನು ಅರಸಿಬಂದ ಮಕ್ಕಳ ಮುಗ್ಧಭಾವ ಅವರಲ್ಲಿ ತುಂಬಿತ್ತು. ಸ್ವಲ್ಪ ಹೊತ್ತಿನಲ್ಲಿ ಹೊರಗಿನ ಪ್ರಪಂಚದ ಅರಿವು ಆದಾಗ ಅಲ್ಲಿಯ ಸುತ್ತಲಿನ ಪರಿಸರವನ್ನು ಅವಲೋಕಿಸುತ್ತ ನಡೆದರು. ರೇಣುಕಾಂಬಾ ಮಂದಿರದ ಎದುರಿಗೆ ಒಂದು ಸಣ್ಣ ಧರ್ಮಶಾಲೆಯಿತ್ತು. ಹತ್ತಿರದಲ್ಲಿ ಎಲ್ಲಿಯೂ ಯಾರ ವಸತಿಯೂ ಇರಲಿಲ್ಲ.

ಪೂಜಾರಿಯ ಮನೆ ದೂರದಲ್ಲಿದ್ದು ಆತ ಮುಂಜಾನೆ, ಮಧ್ಯಾಹ್ನ ಮತ್ತು ಸಂಧ್ಯಾ ಕಾಲಗಳಲ್ಲಿ ಪೂಜೆ ಮುಗಿಸಿ ಹೋದರೆ ಮಂದಿರಕ್ಕೆ ಮತ್ತೆ ಯಾರೂ ಬರುತ್ತಿರಲಿಲ್ಲ. ಜನವಸತಿಯಿಲ್ಲದ ನಿರ್ಜನ ಸ್ಥಳವಾದ ಇಲ್ಲಿಯ ಪರಿಸರ ಬಹು ಪ್ರಶಾಂತವಾಗಿರುವದರಿಂದ ತಪಸ್ಸು ಗೈಯುವುದಕ್ಕೆ ಪ್ರಶಸ್ತವಾಗಿತ್ತು.

ಆಶ್ವಿನ ಶುಕ್ಲ ನವಮಿ ಶರನ್ನವರಾತ್ರಿಯ ದಿನದಂದು ವಾಸಿಷ್ಠಗಣಪತಿಮುನಿಗಳು, ವಿಶಾಲಾಕ್ಷಿ ಅಮ್ಮನವರು ಮತ್ತು ದೈವರಾತ ಮೂವರೂ ಬ್ರಾಹ್ಮೀ ಮುಹೂರ್ತದಲ್ಲೆದ್ದು ಸ್ನಾನಮಾಡಿ ಶುಚಿರ್ಭೂತರಾಗಿ ರೇಣುಕಾಂಬಾ ಮಂದಿರ ಸಭಾಮಂಟಪದ ಒಂದೊಂದು ಕಂಬದ ಬಳಿಯಲ್ಲಿ ಕುಳಿತು ಪ್ರಾಂಜಲಭಾವದಲ್ಲಿ ಧ್ಯಾನ ಮಗ್ನರಾದರು. ಗಣಪತಿಮುನಿಗಳು ಪಂಚಬೀಜಾಕ್ಷರಿ ರೇಣುಕಾ ಮಂತ್ರವನ್ನೂ ವಿಶಾಲಾಕ್ಷಿ ಅಮ್ಮನವರು ಮೂರು ಬೀಜಾಕ್ಷರದ ನೀರ ಸರಸ್ವತೀ ಮಂತ್ರವನ್ನೂ ಜಪಿಸುತ್ತಿದ್ದರೆ ದೈವರಾತನು "ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿವೇದಃ" ಎಂಬ ವೈದಿಕ ಮಂತ್ರವನ್ನು ಧ್ಯಾನಿಸುತ್ತಿದ್ದನು.

ಸುಮಾರು ಹತ್ತು ಗಂಟೆಯ ವೇಳೆಗೆ ದೈವರಾತನು ಧ್ಯಾನ ಮುಗಿಸಿ ಧರ್ಮಶಾಲೆಗೆ ಹೋಗಿ ಅಡಿಗೆ ತಯಾರಿಕೆಯಲ್ಲಿ ನಿರತನಾದನು. ಮಧ್ಯಾಹ್ನ ಹನ್ನೆರಡು ಗಂಟೆಯೊಳಗೆ ಅಡಿಗೆ ಪೂರ್ಣಗೊಂಡಾಗ ಗಣಪತಿ ಮುನಿಗಳು ಮತ್ತು ಅಮ್ಮನವರು ಊಟಕ್ಕೆ ಬರುತ್ತಿದ್ದು ಮೂವರೂ ಹವಿಸ್ಸಿಗೆ ಸಮನಾದ ಅನ್ನ, ಹಾಲು, ತುಪ್ಪ, ಮೊಸರು, ಹೆಸರುಬೇಳೆಗಳಿಂದ ಯುಕ್ತವಾದ ಉಪ್ಪು, ಹುಳಿ, ಖಾರ ರಹಿತವಾದ ಆಹಾರವನ್ನು ಸೇವಿಸುತ್ತಿದ್ದರು.

ಋಷಿಕುಲ ಜೀವನ

ಕಾಲದ ಪುನರಾವರ್ತನೆ ನಡೆದಿತ್ತು. ಋಷಿಕುಲಜೀವನ ಪ್ರಕೃತಿಮಡಿಲಿನ ನೀರವ ನೆಲೆಯಲ್ಲಿ ಅಬಾಧಿತವಾಗಿ ಸಾಗಿತ್ತು. ಮುಕ್ತಭಾವದಲ್ಲಿ ಮೂರು ತಾಪಸ ಜೀವಗಳು ಬದುಕಿನ ಸಹಜ ಆತ್ಮಸಾಕ್ಷಾತ್ಕಾರದ ಹಂಬಲದಲ್ಲಿ ತಪೋನಿರತವಾಗಿದ್ದವು. ನಿರಂತರ ದಿವ್ಯಜೀವನ ಸಂಸ್ಕಾರದಿಂದ ಅರಿವಿನ ಬೆಳಕು ಹರಿದು ಬರುವುದಕ್ಕೆ ದೈವರಾತನ ಮನೋಭೂಮಿಕೆ ಸಿದ್ಧವಾಗುತ್ತಿತ್ತು. ಶರನ್ನವರಾತ್ರಿಯ ಒಂಭತ್ತು ದಿನಗಳು ಕಳೆದು ಹತ್ತನೇ ದಿನವು ಆರಂಭವಾಗಿತ್ತು. ವಾಸಿಷ್ಠ ಗಣಪತಿ ಮುನಿಗಳು ಧ್ಯಾನಿಸುತ್ತಾ ಮೆಲ್ಲ ಮೆಲ್ಲಗೆ ತಪಸ್ಸಿನ ಆಳಕ್ಕೆ ಇಳಿಯುತ್ತಿರುವ ಸಮಯ. ಅಪರಿಚಿತ ಮಂತ್ರದ ಧ್ವನಿಯೊಂದು ಕೇಳಿ ಬಂದಾಗ ಅವರ ಏಕಾಂತಕ್ಕೆ ಭಂಗವುಂಟಾಯಿತು. ಧ್ವನಿ ಬಂದತ್ತ ಕಣ್ತೆರೆದು ನೋಡಿದರು. ದೈವರಾತನ ಮುಖದಿಂದಲೇ ಅದು ಹರಿದು ಬರುತ್ತಿತ್ತು. ಗಣಪತಿ ಮುನಿಗಳಿಗೆ ಆಶ್ಚರ್ಯವಾಯಿತು. ದಿನಾಲು ಮೌನವಾಗಿ ಧ್ಯಾನಿಸುತ್ತಿದ್ದ ಈತ ಇಂದೇಕೆ ಹೀಗೆ ಮಂತ್ರೋಚ್ಚಾರ ಮಾಡುತ್ತಿದ್ದಾನೆ? ಅದೇನೋ ಅನುಮಾನ, ಊಹೆ, ತವಕದಿಂದ ಎದ್ದು ಆತನ ಸಮೀಪಕ್ಕೆ ಹೋಗಿ ಆಲಿಸಿದರು. ಸುಪ್ತ ಸ್ಥಿತಿಯ ದಿವ್ಯ ಪ್ರಜ್ಞಾ ಪ್ರವಾಹದಲ್ಲಿ ಆ ಶಬ್ದಗಳು ಪ್ರಕಟಗೊಳ್ಳುತ್ತಿದ್ದವು. ಒಂದೇ ರೀತಿಯಲ್ಲಿ ತಡೆಯಿಲ್ಲದೇ ಮಂದ್ರಸ್ವರದ ಲಯದಲ್ಲಿ ಅನುರಣಿಸುವ ಅದು ಸುಲಭಗ್ರಾಹ್ಯವಾಗಿರಲಿಲ್ಲ. ಹೀಗೆ ಪರೀಕ್ಷಿಸುತ್ತಿರುವಾಗಲೇ ಶಬ್ದದ ಹರಿವು ನಿಧಾನಗೊಂಡು ನಿಂತು ಹೋಯಿತು. ಆದರೆ ಗಣಪತಿಮುನಿಗಳು ಮಾತ್ರ ಮರುದಿನ ಹಿಂದಿನ ದಿನದ ಪುನರಾವರ್ತನೆಯ ಖಚಿತ ನಿರೀಕ್ಷೆಯಿಂದ ಅದನ್ನು ದಾಖಲಿಸಿಕೊಳ್ಳಲು ಬೇಕಾದ ಲೇಖನ ಸಾಮಗ್ರಿಗಳೊಡನೆ ಅನುವಾಗಿ


ಕುಳಿತಿದ್ದರು. ಅವರು ಊಹಿಸಿದಂತೆಯೇ ಆ ದಿನವೂ ಅದೇ ಸಮಯಕ್ಕೆ ಸುಪ್ತ ಸ್ಥಿತಿಯಲ್ಲಿ ದೈವರಾತನ ಮುಖದಿಂದ ಶಬ್ದಗಳು ಆವಿರ್ಭವಿಸತೊಡಗಿದವು. ಆಗ ಗಣಪತಿಮುನಿಗಳು ತಕ್ಷಣ ಆ ಶಬ್ದಗಳು ಉಚ್ಚಾರವಾಗುತ್ತಿರುವ ಕ್ರಮದಲ್ಲಿಯೇ ವೇಗವಾಗಿ ಬರೆದುಕೊಳ್ಳತೊಡಗಿದರು. ಆದರೆ ವೇಗವಾಗಿ ಶಬ್ದಗಳು ಉಚ್ಚರಿಸಲ್ಪಡುವದರಿಂದಲೂ ಮಂದ್ರವಾಗಿರುವದರಿಂದಲೂ ಶಬ್ದ ಗ್ರಹಣ ಸ್ಪಷ್ಟವಾಗಿ ಆಗದೇ ಪ್ರಕಟವಾಗುವ ವೇಗಕ್ಕೆ ಎಲ್ಲವನ್ನು ಸಮನಾಗಿ ಬರೆದುಕೊಳ್ಳಲು ಆಗುತ್ತಿರಲಿಲ್ಲ. ನಂತರ ಅಂತಹ ಅಪೂರ್ಣ ಬರಹಗಳನ್ನು ಬಿಟ್ಟು ಪೂರ್ಣವಾದವುಗಳನ್ನು ಮಾತ್ರ ಸಂಕಲಿಸಿಕೊಂಡರು.

ಅಂದು ಸಾಯಂಕಾಲ ಕುತೂಹಲದಿಂದ ತಾವು ಬರೆದಿಟ್ಟುಕೊಂಡ ಒಂದೊಂದೇ ಸಾಲುಗಳನ್ನು ಅವುಗಳಲ್ಲಿಯ ಪ್ರತಿಯೊಂದು ಶಬ್ದಗಳನ್ನೂ ಸೂಕ್ಷ್ಮವಾಗಿ ಅವಲೋಕಿಸಿದರು. ಅವೆಲ್ಲವೂ ವೈದಿಕ ಶಬ್ದಗಳಾಗಿರುವುದು ಕಂಡು ಬಂದಾಗ ಮತ್ತೆ ಮತ್ತೆ ಆ ಶಬ್ದಗಳ ಸಂಧಿ ಕ್ರಮವನ್ನು ಪರೀಕ್ಷಿಸಲಾಗಿ ಪ್ರತಿಯೊಂದು ಶಬ್ದವೂ ಋಗ್ವೇದ ಮಂತ್ರಗಳ ಛಂದೋಬಂಧದಲ್ಲಿರುವುದು ಮನದಟ್ಟಾಯಿತು. ಋಗ್ವೇದದಲ್ಲಿ ಕಂಡು ಬರುವ ಅದೇ ದೇವತೆಗಳು, ಅದೇ ವೈದಿಕ ಛಂದಸ್ಸುಗಳು, ಅದೇ ಸ್ವರ, ನಾದ ಮತ್ತು ಭಾಷೆ ಎಲ್ಲವೂ ಅನುರೂಪವಾಗಿದ್ದವು. ಅಂತೆಯೇ ವಾಸಿಷ್ಠಗಣಪತಿಮುನಿಗಳು "ಇವು ನೂತನ ವೇದಮಂತ್ರಗಳು" ಎಂಬ ಖಚಿತವಾದ ನಿರ್ಧಾರಕ್ಕೆ ಬಂದರು. "ಅನಂತಾ ವೈ ವೇದಾ" ವೇದಗಳು ಅನಂತವಾಗಿವೆ. ಪ್ರಾಚೀನ ಋಷಿಗಳಂತೆ ಅರ್ವಾಚೀನ ಋಷಿಗಳೂ ತಪಸ್ಸಿನ ಸುಪ್ತಸ್ಥಿತಿಯಲ್ಲಿ ನೂತನ ಮಂತ್ರದರ್ಶನ ಪಡೆಯಬಹುದು ಎಂಬುದು ಅವರಿಗೆ ಈಗ ಪ್ರತ್ಯಕ್ಷ ಗೋಚರವಾಗಿತ್ತು.

ದೈವರಾತನಿಗೆ ಮಂತ್ರದರ್ಶನ ಆರಂಭವಾಗಿ ಎರಡು ದಿನಗಳು ಕಳೆದು ಮೂರನೇ ದಿವಸದ ಅಂದು ಹಿಂದಿನ ದಿನಗಳಿಗಿಂತ ಹೆಚ್ಚು ಜಾಗರೂಕತೆಯಿಂದ ಶಬ್ದಗಳನ್ನು ಗ್ರಹಿಸಿ ಬರೆದುಕೊಳ್ಳಲು ಸಫಲರಾದರು. ಮಂತ್ರಗಳ ದಿವ್ಯದರ್ಶನವು ದೈವರಾತನಿಗೆ ಹದಿನಾರು ದಿನಗಳ ಕಾಲ ಮುಂದುವರಿಯಿತು. ಗಣಪತಿಮುನಿಗಳು ಎಲ್ಲವನ್ನು ಸಂಗ್ರಹಿಸಿದ ಮೇಲೆ ಋಕ್ಕುಗಳನ್ನು ಸೂಕ್ತದಲ್ಲಿಯೂ ಸೂಕ್ತಗಳನ್ನು ಅನುವಾಕದಲ್ಲಿಯೂ ಸಂಕಲನ ಮಾಡಿ ಅದೇ ಕ್ರಮದಲ್ಲಿ ಅದಕ್ಕೆ "ವಾಸಿಷ್ಠಾನ್ವಯ ಭ್ಯಾಷ್ಯ" ಎಂಬ ಶೀರ್ಷಿಕೆಯಡಿಯಲ್ಲಿ ಭಾಷ್ಯವನ್ನು ಬರೆಯಲು ಆರಂಭಿಸಿದರು. ಪ್ರಧಾನವಾಗಿ ದೇವತಾ ತತ್ವಗಳ ಆಧಾರದ ಮೇಲೆ ಸೂಕ್ತ, ಅನುವಾಕಗಳ ರಚನೆ ಮಾಡಿದರು. ಹದಿನಾರು ದಿನಗಳ ಅವಧಿಯಲ್ಲಿ ಪೂರ್ಣವಾಗಿ ದೊರೆತ ಋಕ್ಕುಗಳು ನಾಲ್ಕು ನೂರಾ ಐವತ್ತು. ಈ ಋಕ್ಕುಗಳು ಗಾಯತ್ರಿ, ಅನುಷ್ಟುಪ, ತ್ರಿಷ್ಟುಪ ಮತ್ತು ಜಗತಿ ಈ ನಾಲ್ಕು ಛಂದಸ್ಸುಗಳಿಂದ ಯುಕ್ತವಾಗಿವೆ. ಎಂಟು ಅನುವಾಕಗಳು, ನಲವತ್ತೆಂಟು ಸೂಕ್ತಗಳು ಮತ್ತು ನಾಲ್ಕು ನೂರಾ ಐವತ್ತು ಮಂತ್ರಗಳಿರುವ ಈ ಸಂಕಲನಕ್ಕೆ ಗಣಪತಿಮುನಿಗಳು "ಛಂದೋದರ್ಶನ" ಎಂದು ಹೆಸರನ್ನಿಟ್ಟರು.

ಛಂದೋದರ್ಶನ ಆವಿರ್ಭಾವ

ಇದು ಗಣಪತಿಮುನಿಗಳ ಅಂತರಂಗದ ಮಾತು. ವಾಸಿಷ್ಠಾನ್ವಯ ಭಾಷ್ಯ ಭೂಮಿಕೆಯಲ್ಲಿ ಅವರು ಸವಿಸ್ತಾರವಾಗಿ ಪ್ರತಿಯೊಂದು ವಿಷಯವನ್ನು ಪ್ರಸ್ತಾಪಿಸುತ್ತಾ ಅಲ್ಲಿ ಕಂಡುಬರುವ ಸಂದೇಹಗಳಿಗೆ ಅತ್ಯಂತ ಸಮಾಧಾನಕರವಾದ ಉತ್ತರವನ್ನು ನೀಡುತ್ತಾರೆ. ದೈವರಾತನಿಗಾದ ನೂತನ ಋಗ್ವೇದ ಮಂತ್ರದರ್ಶನದ ಪ್ರಾಮಾಣ್ಯ. ದೈವರಾತನ ಪರಿಚಯ, ಮಂತ್ರದರ್ಶನ ವೃತ್ತಾಂತದ ಸಂಪೂರ್ಣ ವಿವರಣೆ



ಶ್ರೀ ವಾಸಿಷ್ಠ ಗಣಪತಿಮುನಿಗಳು

ॐ

ಎಲ್ಲವನ್ನೂ ಅವರು ತಮ್ಮ ಭೂಮಿಕೆಯಲ್ಲಿ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ನಿರೂಪಿಸಿದ್ದಾರೆ.

"ನನ್ನ ಶಿಷ್ಯರಲ್ಲಿ ಈ ದೈವರಾತನು ಹದಿನಾರು ವರ್ಷ ವಯಸ್ಸಿಗೂ ಮೊದಲಿನಿಂದ ಬಾಲ್ಯದಿಂದಲೇ ಯೋಗನಿರತನಾದವನು. ನನ್ನ ಸಂಗಡ ಭಗವಾನ್ ರಮಣ ಮಹರ್ಷಿಗಳ ದರ್ಶನಕ್ಕಾಗಿ ಅರುಣಾಚಲಕ್ಕೆ ಬಂದನು. ರಮಣ ಮಹರ್ಷಿಗಳ ಸಹಜ ಸಮಾಧಿಯ ಆನಂದಮಯ ಸ್ಥಿತಿಯನ್ನು ಕಂಡು ದೈವರಾತನಿಗೆ ತಾನೂ ಅಂತಹ ಸಮಾಧಿ ಸ್ಥಿತಿಯನ್ನು ಹೊಂದಬೇಕು ಅನಿಸಿತು. ಹೀಗಿರುವಾಗ ಅನನ್ಯವಾದ ಗುರುಭಕ್ತಿಯಿಂದ ನನ್ನನ್ನು ಅನುಸರಿಸಿ ಪಡವೇಟ್ಟ ಎಂಬ ಹಳ್ಳಿಯಲ್ಲಿರುವ ರೇಣುಕಾಂಬ ಕ್ಷೇತ್ರಕ್ಕೆ ಬಂದನು. ಶಾಲಿವಾಹನ ಶಕೆ 1839 (1917) ಶರನ್ನವರಾತ್ರಿಯ ನವಮಿಯಿಂದ ನಾನು ಮತ್ತು ನನ್ನ ಧರ್ಮಪತ್ನಿ ವಿಶಾಲಾಕ್ಷಿ ಹಾಗೂ ದೈವರಾತ ತಪಸ್ಸು ಪ್ರಾರಂಭಿಸಿದೆವು.

ದೈವರಾತನು ತಪೋಮಗ್ನನಾಗಿ ಸಮಾಧಿಸ್ಥಿತಿಯಲ್ಲಿರುವ ಸಮಯದಲ್ಲಿ ಆತನ ಮುಖದಿಂದ ಶಬ್ದಗಳು ಪ್ರಾದುರ್ಭವಿಸತೊಡಗಿದವು. ಎರಡು ದಿನಗಳ ಸೂಕ್ಷ್ಮ ಅವಲೋಕನದಿಂದ ಅವು ಋಗ್ವೇದ ಮಂತ್ರಗಳೆಂದು ತಿಳಿಯಿತು. ಸಮಾಧಿಯ ಯೋಗಾವೇಶದಲ್ಲಿರುವ ದೈವರಾತನ ಮುಖದಿಂದ ಹೊರ ಬರುತ್ತಿರುವ ವಾಕ್ಕನ್ನು ಗುರುತಿಸಿ "ಇದೋ ಈ 'ಛಂದೋದರ್ಶನವು' ನನ್ನಿಂದ ಸಂಗ್ರಹಿಸಲ್ಪಟ್ಟು ಹೇಗೆ ಕೇಳಲ್ಪಟ್ಟಿತೋ ಹಾಗೆಯೇ ಪ್ರಕಾಶಿಸಲ್ಪಡುತ್ತಿದೆ. ಶಿಷ್ಯವಾತ್ಸಲ್ಯದಿಂದಲೂ 'ಬಾಲಾದಪಿ ಸುಭಾಷಿತಮ್' ಅಮೂಲ್ಯವಾದ ಮಕ್ಕಳ ಮಾತನ್ನೂ ಗೌರವಿಸಬೇಕು ಎಂಬ ವಿವೇಕಿಗಳ ಮಾತಿಗನುಸಾರವಾಗಿಯೂ ಆರ್ಷದರ್ಶನವನ್ನು ಗೌರವಿಸಬೇಕೆಂಬ ಸಂಸ್ಕೃತಿಯಿಂದಲೂ ಆ ಸಮಯದಲ್ಲಿ ನಾನೇ ಸ್ವತಃ ಈ ವಾಸಿಷ್ಠಾನ್ವಯ ಭಾಷ್ಯವನ್ನು ರಚಿಸಿರುತ್ತೇನೆ.

ಇಲ್ಲಿಯೂ ವಿಶೇಷವೆಂದರೆ ಇಪ್ಪತ್ತೈದು ವರ್ಷ ವಯಸ್ಸಿನ ಈ ದೈವರಾತನು ಸಂಸ್ಕೃತಭಾಷೆಯಲ್ಲಿ ಪರಿಣಿತನಲ್ಲದಿದ್ದರೂ ಬಾಲ್ಯದಿಂದಲೇ ನಿರಂತರವಾಗಿ ತಪಸ್ಸು, ಯೋಗ ಸಾಧನೆಗಳಲ್ಲಿ ನಿರತನಾಗಿ ಅನ್ಯರಿಗೆ ಸಾಧ್ಯವಿಲ್ಲದ ಯಾವ ಈ "ಛಂದೋದರ್ಶನ" ವನ್ನು ಸಾಕ್ಷಾತ್ಕರಿಸಿಕೊಂಡನೋ ಆ ಮಂತ್ರಗಳು ಛಂದಸ್ಸಿನಲ್ಲಿಯೂ, ಸ್ವರದಲ್ಲಿಯೂ, ಶಬ್ದದಿಂದಲೂ, ಅರ್ಥದಿಂದಲೂ, ತತ್ವದರ್ಶನದಲ್ಲಿಯೂ ಪ್ರಸಿದ್ಧವಾದ ಪ್ರಾಚೀನ ಋಗ್ವೇದ ಮಂತ್ರಗಳಿಗೆ ಸಮಾನವಾಗಿಯೇ ಇವೆ. ಶಾಸ್ತ್ರದೃಷ್ಟಿಯಿಂದ ನೋಡಿದರೆ ಇದು ತಿಳಿಯುತ್ತದೆ. ಛಂದೋದರ್ಶನವನ್ನು ನೋಡಿದ ನಿಷ್ಕಲ್ಮಷ ಹೃದಯಿಗಳಿಗೆ ವಿವೇಚನಯುಳ್ಳವರಿಗೆ, ಜ್ಞಾನಿಗಳಿಗೆ ಇದು ಸ್ಪಷ್ಟವಾಗುತ್ತದೆ.

ಹಾಗೆಯೇ ಈ ದೈವರಾತನು ತಪಸ್ವಿಯೂ ಯೋಗಿಯೂ ಆಗಿದ್ದು ಆಧ್ಯಾತ್ಮ ತತ್ವ ತಿಳಿದವನೂ ವೇದಮಂತ್ರ ದೃಷ್ಟಾರನೂ ಆಗಿದ್ದಾನೆ. ಇಂತಹ ಅವನು ಯೋಗದಿಂದಲೂ, ತಪಸ್ಸಿನಿಂದಲೂ, ವಿದ್ಯೆಯಿಂದಲೂ, ಸದಾಚಾರದಿಂದಲೂ ವಿನಯಾದಿ ಸತ್‌ಸ್ವಭಾವದಿಂದಲೂ ಪ್ರಾಚೀನ ಮಹರ್ಷಿಗಳಿಂದ ಅಲಂಕರಿಸಲ್ಪಟ್ಟ 'ಬ್ರಹ್ಮರ್ಷಿ' ಪದವನ್ನು ಅಲಂಕರಿಸುವುದಕ್ಕೆ ಅರ್ಹನು ಎಂದು ಸೌಹಾರ್ದದಿಂದ ಅಭಿಪ್ರಾಯ ಪಡುತ್ತೇನೆ." ಹೀಗೆ ಗಣಪತಿಮುನಿಗಳು ಶಿಷ್ಯವಾತ್ಸಲ್ಯದಿಂದ ತಮ್ಮ ಅಂತರಂಗವನ್ನು ಅಭಿವ್ಯಕ್ತಗೊಳಿಸಿದ್ದಾರೆ.

ಶರನ್ನವರಾತ್ರಿಯ ವಿಜಯಾದಶಮಿಯಿಂದ ಪ್ರಾರಂಭವಾಗಿ ಹದಿನಾರು ದಿನಗಳವರೆಗೆ ಬೆಳಗಿನ ಸಮಯ ಹತ್ತುಗಂಟೆಯ ಅವಧಿಯೊಳಗೆ ದೈವರಾತನಿಗೆ ನೂತನ ಆರ್ಷದರ್ಶನದ ಅದ್ಭುತಯೋಗ ಪ್ರಾಪ್ತವಾಯಿತು.

ಗಣಪತಿಮುನಿಗಳು ಮಂತ್ರದರ್ಶನದ ಆರಂಭದ ದಿನಗಳಿಂದಲೇ ಸಂಕಲನದ ಜತೆಯಲ್ಲಿ ಭಾಷ್ಯರಚನೆಯನ್ನೂ ಪ್ರಾರಂಭಿಸಿದರು. ಶಾಲಿವಾಹನ ಶಕೆ 1839 ಕಾರ್ತಿಕ ಪೌರ್ಣಿಮೆಯಿಂದ ಮೊದಲುಮಾಡಿ ಮಾಘಪೌರ್ಣಿಮಿ ತನಕ ಬರೆಯುತ್ತಾ ಭಾಷ್ಯರಚನೆಯನ್ನು ಪೂರ್ಣಗೊಳಿಸಿದರು.

ವಾಸಿಷ್ಠಗಣಪತಿಮುನಿಗಳು ಛಂದೋದರ್ಶನದ ಭಾಷ್ಯ ರಚನೆಯನ್ನು ರೇಣುಕಾಂಬ ಸನ್ನಿಧಿಯಲ್ಲಿಯೇ ಮಾಡುತ್ತಿರುವ ಕಾರಣ ಅದು ಪೂರ್ಣಗೊಳ್ಳುವವರೆಗೂ ಆ ಮೂವರೂ ಸಹಜವಾಗಿ ಅಲ್ಲಿಯೇ ಇರಬೇಕಾಗಿತ್ತು. ಒಂದು ತಿಂಗಳ ಅವಧಿಯ ವಾಸ್ತವ್ಯಕ್ಕೆ ಮಾತ್ರವೇ ಸಿದ್ಧತೆ ಮಾಡಿಕೊಂಡು ಬಂದಿದ್ದು ಈಗ ಪುನಃ ಆಹಾರಧಾನ್ಯ, ಹಾಲು ಮುಂತಾದವುಗಳಿಗೆ ಹೊಸದಾಗಿ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು.

ಗಣಪತಿಮುನಿ ಆರ್ಷದಂಪತಿಗಳು ಹಾಗೂ ಅವರ ಅಂತೇವಾಸೀ ತಪಃಶಿಷ್ಯ ದೈವರಾತ ಇವರ ದಿವ್ಯ ವ್ಯಕ್ತಿತ್ವದಿಂದ ಪ್ರಭಾವಿತರಾದ ಅಲ್ಲಿಯ ಕೆಲವು ಜನರು ಮುಂದಿನ ಅವರ ವಾಸ್ತವ್ಯಕ್ಕೆ ಬೇಕಾದ ಆಹಾರಧಾನ್ಯಗಳು ಹಾಗೂ ಇತರ ಎಲ್ಲ ವ್ಯವಸ್ಥೆಗಳನ್ನು ಮಾಡಿದರು. ಅಲ್ಲದೇ ಹಾಲಿಗಾಗಿ ಒಂದು ಸವತ್ಸಾ ಗೋವನ್ನೂ ನೀಡಿದರು. ಗೋವು ಬಂದ ಮೇಲೆ ದೈವರಾತನ ದಿನಚರಿಯಲ್ಲಿ ಕೆಲವೊಂದು ಬದಲಾವಣೆಗಳಾದವು. ದಿನಾಲು ನಸುಕಿನಲ್ಲಿಯೇ ಎದ್ದು ಮಂದಿರದ ಮುಂದಿನ ಅಂಗಳವನ್ನು ಗುಡಿಸಿ ಗೋಮಯದಿಂದ ಸಾರಿಸಿ ರಂಗವಲ್ಲಿ ಹಾಕುವುದು. ಹಸುವಿನ ಹಟ್ಟಿಯನ್ನು ಸಗಣಿ ತೆಗೆದು ಸ್ವಚ್ಛಗೊಳಿಸಿ ಹಾಲು ಕರೆಯುವುದು ಅನಂತರ ಸ್ನಾನಮಾಡಿ ಬಂದು ಗುರುದಂಪತಿಗಳಿಗೆ ಕಾಫೀ ಮಾಡಿಕೊಡುವುದು ಇವು ವಾಡಿಕೆಯಾಯಿತು. ಹಾಗೆಯೇ ಮಧ್ಯಾಹ್ನದ ಊಟದ ನಂತರ ಆಕಳನ್ನು ಮೇಯಲು ಬಿಟ್ಟು ಒಂದು ಹೊರೆ ಹುಲ್ಲನ್ನು ಕೊಯ್ದು ಅದನ್ನು ಹೊತ್ತು ಪುನಃ ಆಕಳೊಂದಿಗೆ ರೇಣುಕಾಂಬೆಯ ದಿವ್ಯ ಪರಿಸರದ ಮಡಿಲಿಗೆ ಮರಳುತ್ತಿದ್ದನು. ಹೀಗೆ ದೈವರಾತನ ನಿತ್ಯಚರಿಯಲ್ಲಿ ಅವನಿಗಿಷ್ಟವಾದ ಗೋಸೇವೆಯೂ ಸೇರ್ಪಡೆಯಾಯಿತು.

ದೈವರಾತನ ಶಿಸ್ತುಬದ್ಧವಾದ ಕರಾರುವಾಕ್ಕಾದ ಕಠಿಣ ಜೀವನವನ್ನು ಕಂಡು ವಿಶಾಲಾಕ್ಷಿ ಅಮ್ಮನವರ ಹೃದಯ ಕರುಣೆಯಿಂದ ಕರಗಿತು. ದಿನಾಲು ಅವನೊಬ್ಬನೇ ಎಳ್ಳಷ್ಟು ತನ್ನ ಕಾಯಕದಲ್ಲಿ ಚುತಿ ಬಾರದಂತೆ ನಿರ್ವಹಿಸುತ್ತಿರುವ ಪರಿಯನ್ನು ಅನುಲಕ್ಷಿಸಿ ಅವನ ಕೆಲಸದಲ್ಲಿ ನೆರವಾಗಲು ಯೋಚಿಸಿದರು. ಅಂದು ದೈವರಾತನು ಊಟದ ನಂತರ ಎಂದಿನಂತೆ ಆಕಳನ್ನು ಮೇಯಿಸಿಕೊಂಡು ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ತಿರುಗಿ ಬರುವಷ್ಟರಲ್ಲಿ ವಿಶಾಲಾಕ್ಷಿ ಅಮ್ಮನವರು ಪಾತ್ರೆಗಳನ್ನೆಲ್ಲಾ ತೊಳೆದಿಟ್ಟಿದ್ದರು.

ಇದನ್ನು ಕಂಡ ದೈವರಾತನಿಗೆ ತನ್ನ ಗುರುಸೇವೆಯಲ್ಲಿ ಲೋಪವಾದಂತೆ ಆಘಾತವಾಯಿತು. ಕರ್ತವ್ಯ ನಿರ್ವಹಣೆಯಲ್ಲಿ ಭಂಗವಾದಂತೆ ಅನಿಸಿತು. "ಗುರುಮಾತೆಯ ಕೈಯಿಂದ ಕೆಲಸ ಮಾಡಿಸಿಕೊಂಡು ನಾನಿಲ್ಲಿ ಇರುವುದರ ಔಚಿತ್ಯವಾದರೂ ಏನಿದೆ?" ಹೀಗೆ ಯೋಚಿಸುತ್ತಾ ಅವನು ಅಮ್ಮನವರಿಗಾಗಲಿ, ಗುರುವರ್ಯರಿಗಾಗಲಿ ಏನೊಂದೂ ತಿಳಿಸದೇ ಅದೇ ಕ್ಷಣದಲ್ಲಿ ಮೌನವಾಗಿ ತನ್ನ ಕೃಷ್ಣಾಜಿನ, ಕಮಂಡಲ ಮುಂತಾದವನ್ನು ತೆಗೆದುಕೊಂಡು ಅಲ್ಲಿಂದ ಹೊರಟುಬಿಟ್ಟನು. ಎಂದಿನಂತಿರದ ಇಂದಿನ ದೈವರಾತನ ಖಿನ್ನತೆಯನ್ನು ಅದೇನೋ ಹೇಳಲಾಗದ ತುಮುಲದ ಮುಖಭಾವವನ್ನು ಅನಿರೀಕ್ಷಿತ ವರ್ತನೆಯನ್ನೂ ದೂರದಿಂದಲೇ ಗಮನಿಸುತ್ತಿದ್ದ ವಿಶಾಲಾಕ್ಷಿ ಅಮ್ಮನವರು ಆತಂಕಗೊಂಡು ಬರೆಯುವುದರಲ್ಲಿ ಮಗ್ನರಾಗಿದ್ದ ಗಣಪತಿಮುನಿಗಳಿಗೆ ವಿಷಯವನ್ನು ತಿಳಿಸಿದರು. ಇದನ್ನು ಕೇಳಿದ ಅವರು ಅದೇ ನಿಮಿಷದಲ್ಲಿ ಕನ್ನಡಕ,

ಲೇಖನಿ, ಬರಹ ಸಾಮಗ್ರಿಗಳನ್ನು ಸ್ಥಳದಲ್ಲಿಯೇ ಬಿಟ್ಟು ಅದಾಗಲೇ ಸ್ವಲ್ಪ ದೂರ ಉಪಕ್ರಮಿಸಿದ್ದ ದೈವರಾತನ ಬಳಿ ತಲುಪಿ "ಏಕೆ ನಮ್ಮನ್ನು ಬಿಟ್ಟು ಹೋಗುತ್ತಿರುವೆ? ಅಂತಹ ಅಪ್ರಿಯವಾದುದು ಏನು ನಡೆಯಿತು? ಎಂದು ಕಳ ಕಳಿಯಿಂದ ವಿಚಾರಿಸಿದರು. ಅದಕ್ಕೆ ದೈವರಾತನು "ಅಮ್ಮನವರಿಂದ ಕೆಲಸಮಾಡಿಸಿಕೊಂಡು ನಾನು ಒಂದು ದಿನವೂ ನಿಮ್ಮೊಂದಿಗಿರಲು ಸಾಧ್ಯವಿಲ್ಲ" ಎಂದು ನಡೆದ ಸಂಗತಿಯನ್ನು ತಿಳಿಸಿದನು. ಆಗ ಗಣಪತಿಮುನಿಗಳು "ಅದೇನೇ ಇರಲಿ, ನೀನೇ ಮನೆಗೆ ಬಂದು ಅಮ್ಮನವರ ಹತ್ತಿರ ಹೇಳಿ ಹೋಗಬಹುದು" ಎಂದರು. ಅದರಂತೆ ದೈವರಾತನು ಗುರುವರ್ಯರ ಸಂಗಡ ಅಮ್ಮನವರಲ್ಲಿಗೆ ಬಂದು ತನ್ನ ವಿಚಾರವನ್ನು ಅರುಹಿದನು. ಅದನ್ನು ಕೇಳಿ ಅಮ್ಮನವರು "ಇಂದಿನ ಈ ಘಟನೆಯೊಂದು ಆಕಸ್ಮಿಕವೆಂದು ಭಾವಿಸಿ ಮರೆತುಬಿಡು; ಇನ್ನು ಮುಂದೆ ನಾನು ಯಾವ ಕೆಲಸವನ್ನೂ ಮಾಡುವುದಿಲ್ಲ" ಎಂದು ಭರವಸೆಯಿತ್ತರು.

ದೈವರಾತನ ಆಶಯ ಒಂದೇ ಆಗಿತ್ತು. ಗುರುಮಾತೆಯವರಿಂದ ಯಾವ ಕೆಲಸವನ್ನೂ ಮಾಡಿಸದೇ ಅವರ ಚರಣ ಸೇವಕನಾಗಿ ತಾನೇ ಎಲ್ಲವನ್ನೂ ಗೈಯುತ್ತ ಸರ್ವವಿಧದಿಂದಲೂ ಅವರನ್ನು ಸೇವಿಸಬೇಕು ಎಂಬ ದೃಢಭಕ್ತಿ ಅವನದಾಗಿತ್ತು. ಹೀಗೆ ಗುರುದಂಪತಿಗಳು ಮತ್ತು ದೈವರಾತನ ನಡುವಿನ ಸಂಬಂಧ ಆದರ್ಶವಾಗಿತ್ತು. ಅಷ್ಟೊಂದು ಪ್ರಾಂಜಲ, ಅಷ್ಟೊಂದು ಅನುಪಮ ಗುರುಚರಣ ಸೇವಕ ವಾಸಿಷ್ಠಾಂತೇವಾಸೀ ದೈವರಾತನ ಅಂತರಂಗದ ದಿವ್ಯಪಾರಮ್ಯ.

ವಾಸಿಷ್ಠಗಣಪತಿಮುನಿಗಳು ಛಂದೋದರ್ಶನ ಅನ್ವಯಭಾಷ್ಯ ರಚಿಸುತ್ತಿರುವ ದಿನಗಳಲ್ಲಿ ಬಿಡುವಿನ ವೇಳೆ ಪಡವೇಟ್ಟ ಕ್ಷೇತ್ರದ ಸುತ್ತಲಿನ ಸುಂದರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ದೈವರಾತನೊಂದಿಗೆ ಹೋಗುತ್ತಿದ್ದರು. ಈ ಪ್ರದೇಶವು ಹಿಂದೆ ನಂದರಾಜನೆಂಬ ಒಬ್ಬ ಅರಸನ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಅಲ್ಲಿಯ ಜನರು ಹೇಳುತ್ತಿದ್ದರು. ಈ ಪ್ರದೇಶದ ಮಧ್ಯದಲ್ಲಿ ಒಂದು ಸಣ್ಣ ನದಿಯು ಹರಿಯುತ್ತಿದೆ. ಇದರ ಇಬ್ಬದಿಯಲ್ಲಿಯೂ ಹಿಂದೆ ಸಾವಿರಾರು ಮನೆಗಳಿರುವ ಭಗ್ನಾವಶೇಷದ ಕುರುಹುಗಳು ಕಾಣಿಸುತ್ತಿತ್ತು. ಇವುಗಳಲ್ಲಿ ಮೂಕಸಾಕ್ಷಿಯಾಗಿ ಕೆಲವು ಶಿಥಿಲ ದೇವಾಲಯಗಳು ತಮ್ಮ ಅಸ್ತಿತ್ವವನ್ನು ಸಾರುತ್ತಿದ್ದವು. ಈ ಪ್ರದೇಶದ ನಾಲ್ಕೂ ನಿಟ್ಟಿನಲ್ಲಿ ಎತ್ತರವಾದ ಗುಡ್ಡಗಳಿವೆ. ಹಿಂದಿನಿಂದಲೂ ಇರುವ ಅದೇ ಜಮೀನು, ಹೊಲಗಳಲ್ಲಿ ಕೃಷಿಯು ಮಾತ್ರ ಈಗಲೂ ಹಾಗೆಯೇ ನಡೆದು ಬರುತ್ತಿದೆ.

ಈ ಪ್ರದೇಶದಲ್ಲಿರುವ ಎರಡು ಶಿಥಿಲದೇವಾಲಯಗಳು ಗಣಪತಿ ಮುನಿಗಳು ಮತ್ತು ದೈವರಾತನ ಮನ ಕಲಕಿದವು. ಅವುಗಳಲ್ಲಿ ಒಂದು ಸೋಮೇಶ್ವರ ದೇವಾಲಯವೂ ಇನ್ನೊಂದು ಅರ್ಧನಾರೀಶ್ವರ ದೇವಾಲಯವೂ ಆಗಿತ್ತು. ಇವುಗಳ ಮೇಲೆ ಅರಳಿ, ಆಲ ಮುಂತಾದ ಮರಗಳು ಬೆಳೆದಿದ್ದರೂ ಗೋಡೆ ಮತ್ತು ಛಾವಣಿ ಸ್ವಲ್ಪವೂ ಬಿರುಕು ಬಿಟ್ಟಿರದೇ ಇನ್ನೂ ಸುಸ್ಥಿತಿಯಲ್ಲಿಯೇ ಇರುವುದು ವಿಶೇಷವಾಗಿತ್ತು. ಮಳೆಗಾಲದಲ್ಲಿ ಒಂದೇ ಒಂದು ಹನಿ ನೀರು ಕೂಡ ಒಳಗೆ ಬೀಳುತ್ತಿರಲಿಲ್ಲ. ಗಿಡಮರಗಳು ಒತ್ತೊತ್ತಾಗಿ ಬೆಳೆದು ದೇವಾಲಯದ ಪ್ರವೇಶದ್ವಾರಗಳನ್ನು ಮುಚ್ಚಿಬಿಟ್ಟಿರುವುದರಿಂದ ಒಳಗೆ ಹೋಗುವುದು ಅಸಾಧ್ಯವಾಗಿತ್ತು. ಗಣಪತಿ ಮುನಿಗಳು ಅಲ್ಲಿಯ ರೈತರಲ್ಲಿ ಮಂದಿರದ ಒಳಗೆ ಹೋಗಲು ದಾರಿಮಾಡಿಕೊಡುವಂತೆ ಕೇಳಿದಾಗ ಅವರು ದೇಗುಲದ ದ್ವಾರವನ್ನು ಮುಚ್ಚಿ ಬೆಳೆದಿರುವ ಗಿಡ ಮರಗಳನ್ನು ಕಡಿದು ತೆರವು ಮಾಡಿಕೊಟ್ಟರು. ಗಣಪತಿ ಮುನಿಗಳು ದೇವಾಲಯದ ಒಳಗಡೆಗೆ ಹೋದಾಗ ಅಲ್ಲಿಯ

ನೋಟವನ್ನು ಕಂಡು ಬೆರಗಾದರು. ಸಭಾಮಂಟಪವು ಬಹು ವಿಶಾಲವಾಗಿದ್ದು ನೂರಾರು ಕಲ್ಲಿನ ಕಂಬಗಳಿದ್ದವು. ಆದರೆ ಮುಂದೆ ಗರ್ಭಗೃಹಕ್ಕೆ ಹೋಗುವ ಭಾಗ ಕತ್ತಲಿನಿಂದ ಆವೃತವಾಗಿತ್ತು. ಅತ್ತಿತ್ತ ಕೈಯಾಡಿಸಿ ತಡಕಾಡುತ್ತ ಗರ್ಭಗೃಹವನ್ನು ತಲುಪಿದಾಗ ಎಲ್ಲೆಲ್ಲು ಬಾವಲಿಗಳು ಕೀಚ್ ಕೀಚ್ ಎನ್ನುತ್ತಿದ್ದವು. ದಟ್ಟವಾದ ಗಬ್ಬುವಾಸನೆ ಉಸಿರುಗಟ್ಟಿಸುತ್ತಿತ್ತು. ಮೂರ್ತಿಯನ್ನು ಮುಟ್ಟಿನೋಡುವ ತವಕದಿಂದ ದೈವರಾತನು ಮುಂದೆ ಹೋದಾಗ ಸುಮಾರು ಆರು ಅಡಿಗಳಷ್ಟು ಆಳವಿರುವ ಹೊಂಡದಲ್ಲಿ ಬಿದ್ದುಬಿಟ್ಟನು. ಸಾವರಿಸಿಕೊಂಡು ಹೇಗೋ ಪ್ರಯಾಸಪಟ್ಟು ಮೇಲಕ್ಕೆ ಬಂದು ಗೋಡೆ ಹಿಡಿದು ಕತ್ತಲಲ್ಲಿಯೇ ಪರೀಕ್ಷಿಸುತ್ತಿರುವಾಗ ಒಂದು ಮೂಲೆಯಲ್ಲಿ ಶಿವಲಿಂಗ ಬಿದ್ದಿರುವುದು ಕಂಡು ಬಂದಿತು. ಬಹುಶಃ ಯಾರೋ ನಿಧಿಯ ಆಸೆಯಿಂದ ಈ ದುಷ್ಕೃತ್ಯವನ್ನು ಗೈದಿದ್ದರು. ಇದನ್ನೆಲ್ಲ ಕಂಡು ಗಣಪತಿ ಮುನಿಗಳು ಬಹು ದುಃಖಿತರಾಗಿ ತಮ್ಮ ಬಿಡದಿಗೆ ಮರಳಿದರು.

ಗಣಪತಿಮುನಿಗಳು ಪಡವೇಟ್ಟಿನಂತಹ ನಿರ್ಜನ ಪ್ರದೇಶದ ಪುಟ್ಟ ಹಳ್ಳಿಯಲ್ಲಿದ್ದರೂ ಈ ವಿಷಯ ಹೇಗೋ ಅಲ್ಲಿಯ ಸುತ್ತಮುತ್ತಲಿನವರಿಗೆ ಹಾಗೂ ದೂರ ದೂರದ ಊರಿನ ವಿದ್ಯಾವಂತರು, ಪಂಡಿತರು, ಕೆಲವು ಅಧಿಕಾರಿ ವರ್ಗದವರು ಮುಂತಾದವರಿಗೆಲ್ಲ ತಿಳಿದು ಅವರು ಆಗಾಗ ಬಂದು ಹೋಗುತ್ತಿದ್ದರು. ಅವರಲ್ಲಿ ಕೆಲವರು ಲೌಕಿಕರಾಗಿದ್ದರೆ ಮತ್ತೆ ಕೆಲವರು ವಿರಕ್ತರೂ ಇರುತ್ತಿದ್ದರು. ಹೀಗೆ ಬಂದವರಲ್ಲಿ ಅತ್ಯಂತ ನಿಕಟರಾದವರು ಒಂದೆರಡು ದಿನ ಉಳಿದು ಹೋಗುವವರೂ ಇದ್ದರು. ಅಂತವರಲ್ಲಿ ಗಣಪತಿಮುನಿಗಳಿಗೆ ಪ್ರೀತಿ ಪಾತ್ರರಾದ ಈಶ್ವರಸ್ವಾಮಿಗಳೂ ಒಬ್ಬರು. ಇವರು ವಿನೋದಪ್ರವೃತ್ತಿಯವರಾಗಿದ್ದು ಗಣಪತಿಮುನಿಗಳನ್ನೂ ಬಿಡದೆ ತಮಾಷೆ ಮಾಡುತ್ತಿದ್ದರು. ಇವರು ಬಂದಾಗಲೆಲ್ಲ ದೈವರಾತನಿಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದು ಆತನ ಮೆಚ್ಚುಗೆಗೆ ಪಾತ್ರರಾಗಿದ್ದರು.

ಬಾಲಭಾವದ ದಿವ್ಯವ್ಯಕ್ತಿತ್ವ.

ಅದೊಂದು ದಿನ ಈಶ್ವರಸ್ವಾಮಿಗಳು ಊಟದ ವೇಳೆಯಲ್ಲಿ ದೈವರಾತನ ಹತ್ತಿರ "ಈ ಹೊತ್ತು ನಿನಗೊಂದು ತಮಾಷೆ ತೋರಿಸುತ್ತೇನೆ" ಎಂದು ನುಡಿದರು. ಅಷ್ಟು ಹೊತ್ತಿಗಾಗಲೇ ದೈವರಾತನು ಎಲೆಹಾಕಿ ಗುರು ದಂಪತಿಗಳು ಊಟಕ್ಕೆ ಕುಳಿತಿದ್ದು ಅವರ ಪಕ್ಕದಲ್ಲಿ ಈಶ್ವರಸ್ವಾಮಿಗಳೂ ಕುಳಿತರು. ತೋವೆ ಊಟವಾದ ಬಳಿಕ ಅನ್ನಕ್ಕೆ ಎಲ್ಲರೂ ಸಾಂಬಾರು ಹಾಕಿಸಿಕೊಂಡಾಗ ಈಶ್ವರಸ್ವಾಮಿಗಳು ಅದಕ್ಕೆ ಒಂದು ಲೋಟ ನೀರು ಹಾಕಿಕೊಂಡು ಊಟ ಮಾಡತೊಡಗಿದರು. ಅದನ್ನು ಕಂಡ ಗಣಪತಿ ಮುನಿಗಳು ತಾವೂ ಒಂದು ಲೋಟ ನೀರು ಸುರವಿಕೊಂಡು ಊಟ ಮಾಡಿದರು. ಇದನ್ನೆಲ್ಲ ನೋಡುತ್ತಿದ್ದ ವಿಶಾಲಾಕ್ಷಿ ಅಮ್ಮನವರಿಗೆ ನಗೆ ಬಂದರೂ ಹೇಗೋ ತಡೆದುಕೊಂಡು ಮುಖ ಕೆಳಗೆಮಾಡಿ ಊಟ ಮಾಡಿದರು.

ಸಾಮಾನ್ಯವಾಗಿ ಗಣಪತಿಮುನಿಗಳು ಊಟ ಮಾಡುವಾಗ ರುಚಿಯನ್ನು ಗಮನಿಸುತ್ತಿರಲಿಲ್ಲ. ಎಲೆಯಲ್ಲಿ ಏನೇನಿದೆ ಏನೆಲ್ಲ ಬಡಿಸಿದ್ದಾರೆ ಎಂಬುದರ ಪರಿವೆಯೇ ಇರುತ್ತಿರಲಿಲ್ಲ. ಅಂತಹ ಪ್ರಸಂಗಗಳಲ್ಲಿ ದೈವರಾತನು ಇಲ್ಲಿ ಪಲ್ಯ ಇದೆ. ಇಲ್ಲಿ ಚಟ್ನಿ ಇದೆ ಎಂದು ಅವರಿಗೆ ನೆನಪಿಸುತ್ತಿದ್ದನು.

ಮರುದಿನ ದೈವರಾತನು ಅಡಿಗೆ ತಯಾರಿ ಮಾಡುತ್ತಿರುವಾಗ ಈಶ್ವರಸ್ವಾಮಿಗಳೂ ಅವನ ಜತೆ ಸೇರಿದರು. ಆಗ ದೈವರಾತನು ಅವರೊಂದಿಗೆ "ಈ ದಿನ ನಾನೂ ನಿಮಗೊಂದು ತಮಾಷೆ

ಕಾಣಿಸುತ್ತೇನೆ." ಎಂದನು. ಅಂದು ಆತ ಸೂರಣಗಡ್ಡೆಯ ಸಾಂಬಾರು ಮಾಡಲು ಯೋಚಿಸಿದ್ದನು. ಗಣಪತಿಮುನಿಗಳು ಸೂರಣಗಡ್ಡೆಯ ಪದಾರ್ಥವನ್ನು ಸೇವಿಸುತ್ತಿರಲಿಲ್ಲ. ಅದಕ್ಕಾಗಿ ಸೂರಣಗಡ್ಡೆಯ ಸಿಪ್ಪೆಯನ್ನು ಹೆರೆದು ತೆಗೆದು ದೊಡ್ಡ ದೊಡ್ಡ ಹೋಳುಗಳನ್ನಾಗಿ ಮಾಡಿ ಪ್ರತ್ಯೇಕವಾಗಿ ಬೇಯಿಸಿದನು. ನಂತರ ಅದರ ನೀರು ಬಸಿದು ಹೋಳುಗಳು ತಣ್ಣಗಾಗುತ್ತಿರುವಂತೆ ಬಿಸಿ ಆರುವ ಮೊದಲೇ ಅವುಗಳನ್ನು ಒಡೆದು ನುಣ್ಣಗೆ ಹಿಸುಕಿ ಹಿಟ್ಟಿನಂತೆ ಮಾಡಿ ಆಗಲೇ ಅನುವಾಗಿಸಿಟ್ಟಿದ್ದ ಸಾಂಬಾರಿಗೆ ಹಾಕಿ ಕದಡಿದನು. ಹೋಳುಗಳಿಲ್ಲದ ಕಾರಣ ಅದು ಸೂರಣಗಡ್ಡೆಯ ಸಾಂಬಾರು ಎಂದು ಯಾರಿಗೂ ತಿಳಿಯುವಂತಿರಲಿಲ್ಲ. ಎಂದಿನಂತೆ ಎಲ್ಲರಿಗೂ ಊಟಕ್ಕೆ ಬಡಿಸಿದಾಗ ಅಂದು ಎಲ್ಲರೂ ಸಾಂಬಾರನ್ನೆ ಹೆಚ್ಚು ಇಷ್ಟಪಟ್ಟು ಹಾಕಿಸಿಕೊಂಡರು. ಕೊನೆಯಲ್ಲಿ ಈಶ್ವರಸ್ವಾಮಿಗಳು "ಇಂದು ನನಗೆ ಮಜ್ಜಿಗೆ ಬೇಡ ಸಾಂಬಾರನ್ನೇ ಹಾಕಿಬಿಡು" ಎಂದು ಸಾಂಬಾರನ್ನೆ ಹಾಕಿಸಿಕೊಂಡರು. ಆಗ ಗಣಪತಿ ಮುನಿಗಳು ಅಡಿಗೆ ಮನೆಯಲ್ಲಿರುವ ದೈವರಾತನನ್ನು ಕರೆದು "ಈಶ್ವರಸ್ವಾಮಿಗಳು ಮಜ್ಜಿಗೆ ಬದಲಾಗಿ ಸಾಂಬಾರನ್ನೇ ಹಾಕಿಸಿಕೊಂಡರು; ನಾನೇನು ಮಾಡಲಿ?" ಎಂದು ಕೇಳಿದರು. ಅದಕ್ಕೆ ದೈವರಾತನು "ತಮಗೆ ಯಾವುದಿಷ್ಟವೋ ಅದನ್ನು ಮಾಡಬಹುದು" ಎಂದನು. "ಹಾಗಾದರೆ ನನಗೂ ಸಾಂಬಾರನ್ನೇ ಹಾಕಿಬಿಡು" ಎಂದಾಗ ದೈವರಾತನು ಅವರಿಗೆ ಸಾಂಬಾರನ್ನೇ ಬಡಿಸಿದನು. ಹೀಗೆ ಸೂರಣಗಡ್ಡೆಯ ಸಾಂಬಾರನ್ನು ಎಲ್ಲರೂ ಸೊಗಸಾಗಿ ಊಟ ಮಾಡಿದರು. ಈಶ್ವರಸ್ವಾಮಿಗಳು ಹೊರಗಡೆ ಚಿಟ್ಟೆಯ ಮೇಲೆ ಕುಳಿತಿದ್ದು ಗಣಪತಿಮುನಿಗಳು ಅದರ ಮುಂದಿನ ಆವರಣದಲ್ಲಿ ಇತ್ತಿಂದತ್ತ ಅತ್ತಿಂದಿತ್ತ ಅಡ್ಡಾಡುತ್ತಿದ್ದರು. ಆಗ ಈಶ್ವರಸ್ವಾಮಿಗಳು "ಇಂದು ದೈವರಾತನು ಯಾತರ ಸಾಂಬಾರು ಮಾಡಿದ್ದಾನೆಯೋ ಗೊತ್ತಿಲ್ಲ. ನನ್ನ ತುಟಿಗಳಲ್ಲಿ ಏನೋ ತುರಿಕೆಯಾದಂತೆ ಅನಿಸುತ್ತಿದೆ" ಎಂದರು. ಗಣಪತಿ ಮುನಿಗಳಿಗೆ ಸೂರಣಗಡ್ಡೆಯ ತುರಿಕೆ ಬಗ್ಗೆ ಬಹಳ ಭಯವಿತ್ತು. ಅಂತೆಯೇ ಗಾಬರಿಯಾಗಿ "ಏನು! ಇಂದು ಮಾಡಿದ್ದು ಸೂರಣಗಡ್ಡೆ ಸಾಂಬಾರಾ?" ಎಂದು ಕೇಳಲು ಈಶ್ವರಸ್ವಾಮಿಗಳು "ಅದೇನು ಮಾಡಿದ್ದಾನೋ ನನಗೆ ತಿಳಿಯದು" ಎಂದಾಗ ಗಣಪತಿಮುನಿಗಳು ತಕ್ಷಣ ಅಡಿಗೆಮನೆಗೆ ಬಂದು "ಈ ದಿನ ಅಡಿಗೆಯಲ್ಲಿ ಸೂರಣಗಡ್ಡೆ ಉಪಯೋಗಿಸಿದ್ದೀಯಾ?" ಎಂದು ದೈವರಾತನಿಗೆ ಕೇಳಿದಾಗ ಆತ 'ಯಾಕೆ?' ಎನ್ನಲು "ಈಶ್ವರ ಸ್ವಾಮಿಗಳ ತುಟಿಯಲ್ಲಿ ತುರಿಕೆ ಆಗುತ್ತಿದೆಯಂತೆ" ಎಂದರು. ಅದಕ್ಕೆ ದೈವರಾತನು "ಅವರಿಗೆ ತುರಿಸಿದರೆ ತುರಿಸಲಿ; ನಿಮಗೆ ತುರಿಸಿದರೆ ಹೇಳಿ. ಮಾಡಿದ ಸಾಂಬಾರು ಪಾತ್ರೆಯಲ್ಲಿ ಇನ್ನೂ ಸ್ವಲ್ಪ ಇದೆ. ಸೂರಣಗಡ್ಡೆಯ ಹೋಳುಗಳು ಅದರಲ್ಲಿ ಇದೆಯೋ ಎಂದು ಪರೀಕ್ಷಿಸಬಹುದು. ನಾನೂ ಅಮ್ಮನವರೂ ಇದೇ ಸಾಂಬಾರು ಹಾಕಿಕೊಂಡು ಊಟ ಮಾಡಿದ್ದೇವೆ. ನಮಗೇನೂ ಆಗಿಲ್ಲ" ಎಂದು ಸಾಂಬಾರು ಇರುವ ಪಾತ್ರೆಯನ್ನು ಅವರ ಮುಂದೆ ಹಿಡಿದಾಗ ಸಾಂಬಾರನ್ನು ಬೆರಳಿನಿಂದ ಕದಡಿ ನೋಡಿದರು. ಅದರಲ್ಲಿ ಸೂರಣಗಡ್ಡೆಯ ಒಂದು ಹೋಳೂ ಇರಲಿಲ್ಲ. ಇದರಿಂದ ಗಣಪತಿಮುನಿಗಳು ಸುಮ್ಮನಾಗಿ ಹೋದರು.

ಸ್ವಲ್ಪ ಸಮಯದ ನಂತರ ಈಶ್ವರಸ್ವಾಮಿಗಳು ನಿಜವಾಗಿ ನನಗೆ ಏನೂ ತುರಿಕೆ ಅನಿಸಿರಲಿಲ್ಲ. ಗಣಪತಿಮುನಿಗಳ ಮನಸ್ಸು ಎಳೆಯ ಮಕ್ಕಳಂತೆ ಎಷ್ಟು ಮುಗ್ಧವಾದುದು! ಅವರು ಮಹಾನ್ ವಿದ್ವಾಂಸರೂ ಜ್ಞಾನಿಗಳೂ ಆಗಿದ್ದರೂ ಅಷ್ಟೇ ಅಮಾಯಕರೂ ಆಗಿದ್ದಾರೆ ಎಂಬುದನ್ನು ತೋರಿಸಲೆಂದೇ ಹಾಗೆ ಹೇಳಿದೆ. ಎಂದು ನಗುತ್ತಾ ನುಡಿದರು. ಗಣಪತಿ ಮುನಿಗಳಂತಹ ಗುರುಗಳು ಸಿಗುವುದೇ ಒಂದು ಮಹಾಸೌಭಾಗ್ಯ. ದೈವರಾತನ ಅದೃಷ್ಟವೇ ಗಣಪತಿಮುನಿಗಳ ರೂಪದಲ್ಲಿ ಒಲಿದು ಬಂದಿತ್ತು.

ಮಾರ್ಗಶಿರ ಮಾಸದಲ್ಲಿ ಗಣಪತಿಮುನಿಗಳ ತಂದೆಯವರ ಪುಣ್ಯತಿಥಿಯ ದಿನ (ಸಾಂವತ್ಸರಿಕ ಶ್ರಾದ್ಧ) ಬಂದಿತ್ತು. ಆದರೆ ಆರ್ಷಪರಂಪರೆಯಲ್ಲಿ ಶ್ರಾದ್ಧಕರ್ಮದ ಆಚರಣೆಯಿಲ್ಲವೆಂದು ಅವರು ಆಗಾಗ್ಗೆ ಸಂದರ್ಭ ಬಂದಾಗಲೆಲ್ಲ ಹೇಳುತ್ತಿದ್ದರು. ಆದಾಗ್ಯೂ ಅವರು ಶ್ರಾದ್ಧಕರ್ಮದ ವಿರೋಧಿಯೇನೂ ಆಗಿರಲಿಲ್ಲ. ತಾಯಿ-ತಂದೆಯರ ಸ್ಮರಣೆಗಾಗಿ ಅವರ ಋಣವನ್ನು ನೆನೆಯುವದಕ್ಕಾಗಿ ಆ ದಿನದಂದು ಸರಳವಾಗಿ ಎಲ್ಲರೂ ಸೇರಿ ಊಟ ಮಾಡುವ ಆಚರಣೆಯನ್ನಿಟ್ಟುಕೊಂಡಿದ್ದರು. ಆದರೆ ಅದು ಸಾಂಪ್ರದಾಯಿಕವಾಗಿ ರೂಢಿಯಲ್ಲಿರುವ ಪಿಂಡಪ್ರದಾನ ಪದ್ಧತಿಯ ಶ್ರಾದ್ಧಕರ್ಮವಾಗಿರಲಿಲ್ಲ. ಪಿತೃಋಣವನ್ನು ನೆನೆದು ಭಕ್ತಿಯಿಂದ ಅರ್ಪಣಾಭಾವದಲ್ಲಿ ನೀಡುವ ಸರಳ ಭೋಜನವಾಗಿತ್ತು.

ಗಣಪತಿಮುನಿಗಳು ಮರುದಿನ ತಂದೆಯ ಶ್ರಾದ್ಧದ ನಿಮಿತ್ತ ಏನೇನು ಅಡಿಗೆ ಮಾಡಬೇಕೆಂದು ದೈವರಾತನಿಗೆ ತಿಳಿಸಿದರು. ತೋವೆ, ಪಲ್ಯ, ಸಾಸಿವೆ, ಶಿರಾ, ಪೂರಿ ಮತ್ತು ಪಾಯಸ ಇವುಗಳನ್ನು ಮಾಡುವದೆಂದು ನಿಶ್ಚಯಿಸಲಾಯಿತು. ಆದಿನ ರಾತ್ರಿ ಸುಮಾರು ಹನ್ನೆರಡು ಘಂಟೆಯ ವೇಳೆಗೆ ಗಣಪತಿಮುನಿಗಳಿಗೆ ಎಚ್ಚರವಾದಾಗ ಅಡಿಗೆ ಮನೆಯಲ್ಲಿ ಏನೋ ಸದ್ದಾಗುತ್ತಿರುವುದನ್ನು ಕೇಳಿ ಎದ್ದು ಬಂದರು. ದೈವರಾತನು ಮರುದಿನದ ಅಡಿಗೆಯ ಪೂರ್ವತಯಾರಿ ನಡೆಸಿದ್ದನು. ಬೇಳೆ, ಕಾಳು, ತರಕಾರಿ ಎಲ್ಲವನ್ನು ಯಾವುದು ಎಷ್ಟೆಷ್ಟುಬೇಕು ಎಂದು ಅವುಗಳನ್ನು ಆಯಾ ಪಾತ್ರೆಗಳಿಗೆ ಹಾಕಿ ಅನುವುಗೊಳಿಸಿಟ್ಟಿದ್ದನು. ದೈವರಾತನ ಮುಂಜಾಗರೂಕತೆ ಹಾಗೂ ಕಾರ್ಯದಕ್ಷತೆ ಕಂಡು ಗಣಪತಿ ಮುನಿಗಳು ಬಹುವಾಗಿ ಮೆಚ್ಚಿಕೊಂಡರು.

ಮಹಾಶಿವರಾತ್ರಿಗೆ ಪೂರ್ವದಲ್ಲಿಯೇ ಛಂದೋದರ್ಶನದ ಭಾಷ್ಯ ರಚನೆಯ ಕಾರ್ಯ ಪೂರ್ಣಗೊಂಡಿತ್ತು. ವಾಸಿಷ್ಠ ಗಣಪತಿ ಮುನಿಗಳಂತಹ ಗುರುವೂ ದೈವರಾತನಂತಹ ಶಿಷ್ಯನೂ ಆಧುನಿಕ ಯುಗದಲ್ಲಿ ಬದುಕಿ ಬಾಳಿದ ಇಪ್ಪತ್ತನೇ ಶತಮಾನದ ಎರಡು ಮಹಾನ್ ಚೇತನಗಳು ಮತ್ತೊಮ್ಮೆ ಋಷಿಕುಲ ಜೀವನದ ಕನಸನ್ನು ಹೊತ್ತು ಪ್ರಾಂಜಲ ಭಾವದ ಅನಾವರಣಗೊಳಿಸಿದರು.

ಆರ್ಷಯುಗದಲ್ಲಿ ಜಾತಿ, ಮತ, ಪಂತ ಹಾಗೂ ಇಂದು ಪ್ರಚಲಿತವಿರುವ ಧರ್ಮಗಳ ಈ ಪರಿಕಲ್ಪನೆಯ ದುರಂತಭಾವವಿರಲಿಲ್ಲ. ನೆಲ, ಜಲ, ಗಾಳಿ, ಬೆಳಕು, ಆಕಾಶ ಎಲ್ಲವೂ ದೇವರು ಎಂದರು. ಸಕಲ ಜೀವಿಗಳಾದಿಯಾಗಿ ಚರಾ-ಚರ ವಸ್ತುಗಳಲ್ಲಿ ದೈವತ್ವವನ್ನು ಕಂಡರು. ಜಾತಿ, ಮತ, ಧರ್ಮಗಳೇ ಇಲ್ಲದ ಜಗತ್ತಿನ ಏಕೈಕ ಪರಂಪರೆ ಎಂದರೆ ಅದು ಆರ್ಷ ಸಂಸ್ಕೃತಿ ಮಾತ್ರ. "ಹಿಂದು ಧರ್ಮ" ಎಂಬುದು ಬ್ರಿಟಿಷರು ನೀಡಿದ ಹೆಸರು.

ಎಲ್ಲ ಮತಪ್ರವರ್ತಕರು ಹೇಳುವಂತೆ 'ಜ್ಞಾನೋದಯಕ್ಕಾಗಿ' ಅಥವಾ 'ಆತ್ಮಸಾಕ್ಷಾತ್ಕಾರಕ್ಕಾಗಿ' ಹೆಂಡತಿ, ಮಕ್ಕಳು ಎಲ್ಲವನ್ನೂ ಪರಿತ್ಯಾಗ ಮಾಡಿ ಅದನ್ನು ಸಾಧಿಸಬೇಕು ಎಂದು ಋಷಿಗಳು ಹೇಳಲಿಲ್ಲ. ಸಾವಿರಾರು ಆರ್ಷದಂಪತಿಗಳು ನಿಸರ್ಗ ನಿಯಮಕ್ಕೆ ಸಹಜವಾದ ಬದುಕಿನಲ್ಲಿ ಅನುರೂಪ ದಾಂಪತ್ಯದಲ್ಲಿ ಸಾಮರಸ್ಯದ ಪರಿಪೂರ್ಣಭಾವದಲ್ಲಿ ತಪೋನಿರತರಾಗಿ ಜ್ಞಾನೋದಯ ಪಡೆದರು. ವೇದಮಂತ್ರ ದೃಷ್ಟಾರರಾದರು. ಹೀಗೆ ದೃಷ್ಟಾರರಾದ ಪುರುಷರನ್ನು ಬ್ರಹ್ಮರ್ಷಿಗಳೆಂದೂ ಸ್ತ್ರೀಯರನ್ನು ಬ್ರಹ್ಮವಾದಿನಿಯರೆಂದೂ ಕರೆಯುತ್ತಿದ್ದರು. ಜಗತ್ತಿನ ಯಾವ ಮತ, ಪಂತಗಳೂ ಆರ್ಷ ಸಂಸ್ಕೃತಿಯಷ್ಟು ಗೌರವದಿಂದ, ಪೂಜನೀಯ ಭಾವದಿಂದ ಹೆಣ್ಣನ್ನು ಕಾಣಲಿಲ್ಲ.

ಅಂದಿನ ಅಬಾಧಿತ ಋಷಿಸಂದೇಶಗಳು ಆರ್ಷಿಯುಗದ ಋಗ್ವೇದ ಕಾಲದ ನಂತರ ಹಂತ ಹಂತವಾಗಿ ಮಸುಕಾಗುತ್ತ ಪೌರಾಣಿಕ ಕಾಲಕ್ಕೆ ರಾಜ ಮಹಾರಾಜರ ಪ್ರಭಾವಕ್ಕೆ ಒಳಗಾಗಿ ಯಜ್ಞ ಯಾಗಾದಿಗಳು ವೈಭವೀಕರಿಸಲ್ಪಡುತ್ತ ಪ್ರಾಣಿ ಬಲಿ ಪದ್ಧತಿಯೂ, ಜೀವನೀಯ ದ್ರವ್ಯಗಳನ್ನು ಅಗ್ನಿಗೆ ಹಾಕುವ ಪದ್ಧತಿಯೂ ಬೆಳೆದು ಬಂದವು. ಆಗ ಅನಂತರ ಬಂದ ಬೌದ್ಧ ಧರ್ಮವೇ ಮೊದಲಾದ ಮತಧರ್ಮ ಪ್ರವರ್ತಕರು ಆರ್ಷಪರಂಪರೆಯ ಮೂಲ ತತ್ವವನ್ನು ಅರಿಯದೇ ಕೇವಲ ಪುರೋಹಿತವರ್ಗದ ಸಾಂಪ್ರದಾಯಿಕ ಆಚರಣೆಯನ್ನು ನೋಡಿ ಹಿಂಸೆಯಿಂದ ಕೂಡಿರುವದೆಂದೂ ದೋಷಪೂರಿತವೆಂದೂ ದೂಷಿಸಿದರು. ಆಚರಣೆಗಳು ಬದಲಾಗಬಹುದು. ಮನುಷ್ಯರ ಮನೋಭಾವ ಬದಲಾಗಬಹುದು. ಕಾಡು ನಾಡಾಗಬಹುದು. ಇನ್ನೂ ಏನೇನೋ ಆಗಬಹುದು. ಆದರೆ ಆರ್ಷದರ್ಶನದ ಆ ವಾಕ್ಯಗಳಲ್ಲಿ ಒಂದಕ್ಷರವೂ ಬದಲಾಗದು. ಆದ್ದರಿಂದ ಈ ಋಷಿ ಸಂಸ್ಕೃತಿಯ ನಿರಾಬಾಧಿತ ತತ್ವಗಳ ಬಗೆಗೆ ಯಾರು ಏನೇ ಹೇಳಿದರೂ ಅದರ ಪರಿಪೂರ್ಣತೆಗೆ ಏನೂ ಹಾನಿಯಾಗದು. ಹೀಗೆ ಋಷಿಕಾಲದ ತತ್ವಗಳನ್ನು ಸಂದರ್ಭಗಳಿಗನುಸಾರವಾಗಿ ವಾಸಿಷ್ಠಗಣಪತಿಮುನಿಗಳು ಅಂತೇವಾಸೀ ದೈವರಾತನಿಗೆ ಎಳೆ ಎಳೆಯಾಗಿ ಬೋಧಿಸುತ್ತ ಅವನನ್ನು ಋಷಿಯನ್ನಾಗಿ ಮಾಡಿದರು; ಬ್ರಹ್ಮರ್ಷಿಯಾಗಿಸಿದರು.

ಇದಲ್ಲವೇ ಗುರು–ಶಿಷ್ಯರ ಆದರ್ಶ ಸಂಬಂಧ ! ಅನನ್ಯವಾದ ದಿವ್ಯಾನುಬಂಧ ! ಖ್ಯಾತ ವಿದ್ವಾಂಸರೂ ಹಿರಿಯ ಪತ್ರಕರ್ತರೂ ಆಗಿದ್ದ ಪಾ. ವೆಂ. ಆಚಾರ್ಯರು ತಮ್ಮ ಒಂದು ಲೇಖನದಲ್ಲಿ ಹೀಗೆ ಉದ್ಗರಿಸುತ್ತಾರೆ.

"ದೈವೀ ಪ್ರಸಾದವು ವಿಚಿತ್ರವಾದದ್ದು. ಅದು ಶಿಷ್ಯನನ್ನು ಮಂತ್ರದ್ರಷ್ಟಾರನಾದ, ಋಷಿಯಾಗಿ ಮಾಡಿ ಗುರುವನ್ನು ಭಾಷ್ಯಕಾರನಾಗಿ ಮಾಡುತ್ತದೆ"

ವಾಸಿಷ್ಠ ಗಣಪತಿಮುನಿಗಳು ಪಡವೇಟಿಗೆ ಬರುವ ಪೂರ್ವದಲ್ಲಿಯೇ ಅವರ ಮಗ ಮಹದೇವನ ವಿವಾಹದ ಪ್ರಸ್ತಾಪ ಮಾಡಲ್ಪಟ್ಟಿತ್ತು. ತರುವಾಯ ಈಗ ಕಾಲಯುಕ್ತ ಸಂವತ್ಸರದ ಚೈತ್ರ ಶುಕ್ಲ ಅಷ್ಟಮಿ ದಿನದಂದು ವಿವಾಹ ಮುಹೂರ್ತವನ್ನು ನಿಶ್ಚಯಿಸಲಾಯಿತು. ಈ ವಿಷಯವನ್ನು ಅಂಚೆಯ ಮೂಲಕ ವಧುವಿನ ತಾಯಿ–ತಂದೆಯರಿಗೆ ತಿಳಿಸಲು ಗಣಪತಿಮುನಿಗಳು ದೈವರಾತನನ್ನು ಚಂದವಾಶಿಲ್‌ಗೆ ಕಳಿಸಿದರು. ಅದರಂತೆ ಅವನು ಅಂಚೆಯ ಮೂಲಕ ವಿಷಯವನ್ನು ರವಾನಿಸಿ ಪುನಃ ಪಡವೇಟಿಗೆ ಹಿಂದಿರುಗಿದನು.

ಫಾಲ್ಗುಣಮಾಸದ ಒಂದೊಂದೇ ದಿನಗಳು ಕಳೆಯುತ್ತಿದ್ದವು. ಗಣಪತಿಮುನಿಗಳು ಮತ್ತು ದೈವರಾತನ ಅಗಲುವಿಕೆಯ ಸಮಯ ಸಮೀಪಿಸುತ್ತಲಿತ್ತು. ಅವರು ರೇಣುಕಾಂಬ ಕ್ಷೇತ್ರದಿಂದ ಹೊರಡುವದಕ್ಕೆ ಒಂದೆರಡು ದಿನಗಳ ಮೊದಲು ಮೂವರೂ ಮಾತನಾಡುತ್ತ ಅಂಗಳದ ಚಿಟ್ಟೆಯ ಮೇಲೆ ಕುಳಿತಿದ್ದರು. ಆಗ ಗಣಪತಿ ಮುನಿಗಳು ತಮ್ಮ ಅಂತರಂಗವನ್ನು ನಿವೇದಿಸಿಕೊಂಡರು. ಕಾರಣ, ಗಣಪತಿಮುನಿ ದಂಪತಿಗಳು ಆಂಧ್ರಪ್ರದೇಶದ ಪಾರ್ವತೀಪುರಕ್ಕೂ ದೈವರಾತನು ಮರಳಿ ಗೋಕರ್ಣಕ್ಕೂ ಹೊರಡಲಿದ್ದರು. ಗುರುದಂಪತಿಗಳಿಬ್ಬರೂ ದೈವರಾತನನ್ನು ತಮ್ಮ ಮಗನಂತೆ ಆತ್ಮೀಯವಾಗಿ ಪ್ರೀತಿಸುತ್ತಿದ್ದರು. ಅಂತೆಯೇ ಸಹಜವಾಗಿಯೇ ಅಗಲುವಿಕೆಯ ನೋವು ಅವರನ್ನು ಬಾಧಿಸುತ್ತಿತ್ತು.

ಅದೊಂದು ಹೃದಯಸ್ಪರ್ಶಿ ಸನ್ನಿವೇಶವಾಗಿತ್ತು. ಗಣಪತಿ ಮುನಿಗಳು "ನೀನು ನನ್ನ ಬಳಿಯಲ್ಲಿ ಯಾವ ವಿದ್ಯೆಯನ್ನೂ ಕಲಿಯಲಿಲ್ಲ. ನನ್ನಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸಲಿಲ್ಲ. ನಿನ್ನ ನಿಷ್ಕಲ್ಮಷ

ಸೇವೆಯ ಫಲವಾಗಿ ವಿದ್ಯೆ ಮತ್ತು ಜ್ಞಾನವನ್ನು ಆ ಪರಮಾತ್ಮನೇ ನಿನಗೆ ಕರುಣಿಸಲಿ. ನೀನು ಮಾಡಿದ ಸೇವೆಯ ಋಣವನ್ನು ತೀರಿಸಲು ನಾನು ಈ ಜನ್ಮದಲ್ಲಿ ಶಕ್ತನಲ್ಲ. ನೀನು ವಿವಾಹವಾದರೆ ನಿನ್ನ ಮಗನಾಗಿ ಹುಟ್ಟಿಬಂದು ನಿನ್ನ ಋಣವನ್ನು ತೀರಿಸುತ್ತೇನೆ" ಎಂದು ಅಶ್ರುಪೂರಿತವಾಗಿ ನುಡಿದರು. ಅದೇ ರೀತಿ ವಿಶಾಲಾಕ್ಷಿ ಅಮ್ಮನವರೂ ಗದ್ಗದ ಕಂಠದಿಂದ ಗಣಪತಿಮುನಿಗಳು ನುಡಿದ ಮಾತನ್ನೇ ಹೇಳಿ ತಮ್ಮ ಅಂತಃಕರಣವನ್ನು ತೋಡಿಕೊಂಡರು. ಗುರುದಂಪತಿಗಳು ನುಡಿದ ಮಾತುಗಳನ್ನು ಕೇಳಿ ದೈವರಾತನು ಅವರು ತನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ, ವಾತ್ಸಲ್ಯಗಳನ್ನು ಕಂಡು ಆ ಕ್ಷಣದಲ್ಲಿ ಏನೊಂದೂ ಮಾತಾಡಲು ತೋಚದೇ ಮೂಕನಾದನು. ಅನಂತರ ಸ್ವಲ್ಪ ಸಮಯ ಬಿಟ್ಟು "ನಾನು ತಮ್ಮ ಸೇವೆಯನ್ನು ವಿದ್ಯೆಗಾಗಿಯೋ, ಜ್ಞಾನಕ್ಕಾಗಿಯೋ, ಧನಕ್ಕಾಗಿಯೋ ಅಥವಾ ಯಾವುದೇ ಪ್ರತಿಫಲಾಪೇಕ್ಷೆಯಿಂದಲೋ ಮಾಡಲಿಲ್ಲ. ಸೇವೆ ಮಾಡಬೇಕೆಂಬ ಹಂಬಲದಿಂದಲೇ ಸೇವೆ ಮಾಡಿದ್ದೇನೆ. ತಮ್ಮಂತಹ ಗುರುದಂಪತಿಗಳು, ರಮಣ ಮಹರ್ಷಿಗಳಂತಹ ಪರಮ ಗುರುಗಳು ನನಗೆ ಜನ್ಮ ಜನ್ಮಾಂತರಗಳಲ್ಲೂ ದೊರಕಲೆಂದು ಆ ಪರಮಾತ್ಮನನ್ನು ಬೇಡಿಕೊಳ್ಳುತ್ತೇನೆ." ಎಂದು ದೈವರಾತನು ವಿನೀತನಾಗಿ ನುಡಿದನು. ಅವನ ಜೀವನದಲ್ಲಿ ಇದೊಂದು ಸ್ಮರಣೀಯ ಸನ್ನಿವೇಶವಾಗಿತ್ತು.

ನಿರಪೇಕ್ಷಭಾವದ ಸೇವಾಮನೋವೃತ್ತಿ ದೈವರಾತನಿಗೆ ಜನ್ಮಜಾತವಾಗಿ ಬಂದಿತ್ತು. ಜೀವಸಹಜ ಬಯಕೆಯಿಂದ ಏನೆಲ್ಲವನ್ನು ಅಪೇಕ್ಷಿಸಬಹುದೋ ಅದಾವುದನ್ನು ಬಯಸದೇ ಎಲ್ಲವನ್ನೂ ಮರೆತು ತನ್ನೊಳಗೆ ತಾನು ತನ್ಮಯನಾಗಿ ಸೇವೆಯಲ್ಲಿ ಕರಗಿಹೋಗುವದೊಂದೇ ಅವನಿಗೆ ಗೊತ್ತು. ಅಂತಹ ಗುರುಸೇವೆಯಿಂದಲೇ ಆತ ಸ್ವರ್ಗೀಯವಾದ ದಿವ್ಯಾನಂದ ಪಡೆಯುತ್ತಿದ್ದ. ಇದೇ ಅವನ ಅಂತರಂಗದ ಬೆಳಕಿಗೆ ಕಾರಣವಾಯಿತು.

ಈ ಮೊದಲೇ ನಿಶ್ಚಯಿಸಿದಂತೆ ಆ ದಿನದಂದು ಮೂವರೂ ಪಡವೇಟಿನಿಂದ ಚಂದವಾಶಿಲ್‌ಗೆ ಹೋಗಿ ಅಲ್ಲಿಂದ ಸಮೀಪದ ರೈಲು ನಿಲ್ದಾಣಕ್ಕೆ ಹೋದರು. ನಿಲ್ದಾಣಕ್ಕೆ ರೈಲು ಬಂದಾಗ ಅದು ಹೊರಡುವವರೆಗೂ ಗುರು-ಶಿಷ್ಯರಿಬ್ಬರಲ್ಲಿಯೂ ಅಗಲುವಿಕೆಯ ನೋವು ತುಂಬಿತ್ತು. ಪಾರ್ವತೀಪುರಕ್ಕೆ ಹೋಗುವ ರೈಲಿನಲ್ಲಿ ಗುರುದಂಪತಿಗಳನ್ನು ಬೀಳ್ಕೊಟ್ಟು ಅದೇ ಸ್ವಲ್ಪ ಹೊತ್ತಿನಲ್ಲಿ ಬಂದ ಇನ್ನೊಂದು ರೈಲಿನ ಮೂಲಕ ದೈವರಾತನು ತಿರುವಣ್ಣಾಮಲೈ ತಲುಪಿದನು. ಅಲ್ಲಿಂದ ಮುಂದೆ ರಮಣಾಶ್ರಮಕ್ಕೆ ಹೋಗಿ ಅಲ್ಲಿ ಸ್ಕಂದಾಶ್ರಮದಲ್ಲಿರುವ ರಮಣರ ಸನ್ನಿಧಿಯನ್ನು ಸೇರಿ ಪಡುವೇಟಿನ ರೇಣುಕಾಂಬಾ ಮಂದಿರದಲ್ಲಿ ಲಭಿಸಿದ ಮಂತ್ರದರ್ಶನದ ವಿಷಯವನ್ನು ನಿವೇದಿಸಿದನು. ತರುವಾಯ ಮೂರು ದಿನಗಳ ಕಾಲ ರಮಣ ಮಹರ್ಷಿಗಳ ಸನ್ನಿಧಿಯಲ್ಲಿ ಉಳಿದು ಅವರ ಅನುಜ್ಞೆ ಪಡೆದು ಮಂಗಳೂರು ಮಾರ್ಗವಾಗಿ ಗೋಕರ್ಣಕ್ಕೆ ಬಂದನು.

ಮರಳಿ ತಾಯ್ನೆಲದ ನೆರಳಿಗೆ

ಗೋಕರ್ಣಕ್ಕೆ ಮರಳಿದ ದೈವರಾತರು ಈ ಹಿಂದೆ ತಾವು ಬಾಲ್ಯದಲ್ಲಿ ವಾಸವಾಗಿದ್ದ ವರದೇಶ್ವರ ಮಂದಿರದ ಪುಟ್ಟ ಮಂಟಪದಲ್ಲಿ ಉಳಿದುಕೊಂಡರು. ಸದಾ ಆರ್ಷಜೀವನ, ವೈದಿಕ ತತ್ವಗಳ ಬಗೆಗೆ ಯೋಚಿಸುತ್ತಿದ್ದ ದೈವರಾತರು ತಮ್ಮ ಮುಂದಿನ ಗುರಿಯ ಕುರಿತು ಚಿಂತಿಸತೊಡಗಿದರು. ಹಿಂದೆ ಸಿದ್ಧಪುರದಲ್ಲಿ ತಪಸ್ಸುಮಾಡಿದ ಸಮಯದಲ್ಲಿ ಗೈದ ಸಂಕಲ್ಪವು ಈಗ ಸಂವಾದಿಯಾಗಿ ಮೂಡಿಬಂತು. ಋಷಿಕುಲ

ಪದ್ಧತಿಯ ಶಿಕ್ಷಣ ನೀಡುವಂತಹ ಒಂದು ಆಶ್ರಮವನ್ನು ಸ್ಥಾಪಿಸಬೇಕು, ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಪಡವೇಟಿನಲ್ಲಿರುವಾಗ ಗುರುವರ್ಯ ವಾಸಿಷ್ಠ ಗಣಪತಿಮುನಿಗಳಲ್ಲಿ 'ನಾನು ಋಷಿಕುಲ ಪದ್ಧತಿಯ ವೈದಿಕ ಶಿಕ್ಷಣವನ್ನು ಕಲಿಸುವ ಆಶ್ರಮ ಸ್ಥಾಪಿಸುವ ಸಂಕಲ್ಪ ಮಾಡಿದ್ದೇನೆ. ತಾವೇ ಅದರ ಕುಲಪತಿಗಳಾಗಬೇಕು' ಎಂದು ತನ್ನ ಮನದಾಸೆಯನ್ನು ನಿವೇದಿಸಿಕೊಂಡಾಗ ಅವರು 'ಈ ಭರತ ಭೂಮಿಯ ಎಲ್ಲೆಡೆಯಲ್ಲಿಯೂ ಪ್ರಕೃತಿ ಮಡಿಲಿನಲ್ಲಿ ಸಹಜವಾಗಿ ಬದುಕುವ ಮೂಲಭೂತ ಅರಿವನ್ನು ಉಂಟುಮಾಡಿ ಜೀವನ ಶಿಕ್ಷಣವನ್ನು ಕಲಿಸುವ ಮಾದರಿಯ ವಿದ್ಯಾಶಾಲೆಗಳು ಆಗಬೇಕು. ನಿನ್ನ ಈ ಧ್ಯೇಯವು ಸ್ತುತ್ಯವಾದುದಾಗಿದೆ. ಈ ನಿನ್ನ ಕಾರ್ಯದಲ್ಲಿ ಯಶಸ್ಸು ದೊರೆಯಲಿ!' ಎಂದು ಶುಭ ಹಾರೈಸಿದ್ದರು.

"ಆಶ್ರಮ ಸ್ಥಾಪನೆಯು ತಾವು ಹುಟ್ಟಿ ಬೆಳೆದ ಜನ್ಮಭೂಮಿ ಗೋಕರ್ಣದಲ್ಲಿಯೇ ಆಗಬೇಕು. ಅದು ಸಾಧ್ಯವಾಗದಿದ್ದರೆ ಕರ್ನಾಟಕದಲ್ಲಿಯೇ ಎಲ್ಲಿಯಾದರೂ ಒಂದು ಪ್ರಶಸ್ತವಾದ ಪ್ರಶಾಂತ ಪ್ರಕೃತಿಯ ಮಡಿಲಿನಲ್ಲಿ ಆಗಬೇಕು. ಪ್ರಾಥಮಿಕ ಹಂತದಿಂದಲೇ ಕೃಷಿ, ಗೋ ಸಂಗೋಪನಗಳಂತಹ ಅರಿವಿನೊಂದಿಗೆ ಹಳ್ಳಿಗರ ಮಕ್ಕಳಿಗೆ ಅಕ್ಷರ ಜ್ಞಾನವಾಗಬೇಕು. ಇವುಗಳ ಜತೆಗೆ ಯೋಗ ಮತ್ತು ಪ್ರಾಥಮಿಕ ವನೌಷಧ ಚಿಕಿತ್ಸಾಜ್ಞಾನ ಕೂಡ ಲಭಿಸಬೇಕು" ಹೀಗೆ ಆದರ್ಶ ಧ್ಯೇಯಗಳೊಂದಿಗೆ ದೈವರಾತರ ವಿಚಾರಗಳು ಮನದಲ್ಲಿ ತುಡಿಯುತ್ತಲಿದ್ದವು. ಇವರ ವಿಚಾರಗಳನ್ನು ತಿಳಿದ ಕುಲಪುರೋಹಿತರಾದ ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರು "ಶರಾವತೀ ನದಿಯ ದಂಡೆಯ ಮೇಲೆ ಒಂದು ಉತ್ತಮ ಸ್ಥಳವಿದೆ. ಅಲ್ಲಿ ನಿಮ್ಮ ಪೂರ್ವಜರು ಹಿಂದೆ ವಾಸವಾಗಿದ್ದು ಅವರು ಯಜ್ಞಯಾಗಾದಿಗಳನ್ನು ಮಾಡುವದಕ್ಕಾಗಿ ಇಟ್ಟಿಗೆಯಲ್ಲಿ ನಿರ್ಮಿಸಿದ ಯಜ್ಞಶಾಲೆ ಮತ್ತು ಸಭಾವೇದಿಕೆ ಇತ್ಯಾದಿ ಕುರುಹುಗಳನ್ನು ಈಗಲೂ ಆ ಸ್ಥಳದಲ್ಲಿ ಕಾಣಬಹುದು. ಇಂದಿಗೂ ಅದನ್ನು 'ಯಜ್ಞಶಾಲಾ' ಎಂದೇ ಕರೆಯಲಾಗುತ್ತಿದೆ. ಇದು ಸುಪ್ರಸಿದ್ಧ ಜೋಗಜಲಪಾತದಿಂದ ಸುಮಾರು ಮೂರು ಮೈಲಿಗಳಷ್ಟು ದೂರದಲ್ಲಿದೆ. ಈ ಯಜ್ಞಶಾಲಾ ಜಾಗದಿಂದ ಮೇಲ್ಭಾಗದಲ್ಲಿ ಸುಮಾರು ಇನ್ನೂರು ಎಕರೆ ನೀರಾವರಿಯ ಭತ್ತದ ಗದ್ದೆಗಳಿವೆ." ಇತ್ಯಾದಿ ಆ ಪ್ರದೇಶದ ಮಾಹಿತಿಯ ವಿವರಗಳನ್ನು ನೀಡಿದರು. ಇದರಿಂದ ಉತ್ತೇಜಿತರಾದ ದೈವರಾತರು ಆ ಪ್ರದೇಶದ ಬಗ್ಗೆ ಹೆಚ್ಚಿನ ಪರಿಚಯವಿರುವ ಇಡಗುಂಜಿ ಗಜಾನನ ಸಭಾಹಿತರೆಂಬವರ ಸಂಗಡ ಆ ಸ್ಥಳವನ್ನು ನೋಡಲು ಹೋದರು. ನಿಸರ್ಗರಮಣೀಯವಾದ ಸಸ್ಯಸಂಪತ್ತಿನಿಂದ ಕೂಡಿದ ಆ ಪ್ರದೇಶವು ಆಶ್ರಮ ನಿರ್ಮಿಸಲು ಪ್ರಶಸ್ತ ಸ್ಥಳವೇನೋ ಆಗಿತ್ತು. ಆದರೆ ಅದು ಶರಾವತಿ ವಿದ್ಯುದ್ ಯೋಜನೆಯ ಕಾರಣ ಮುಳುಗಡೆಯಾಗಲಿರುವುದೆಂದು ಅಲ್ಲಿಯ ಜನರಿಂದ ತಿಳಿದಾಗ ಆ ವಿಚಾರವನ್ನು ಕೈ ಬಿಡಬೇಕಾಯಿತು. ಅನಂತರ ಅಲ್ಲಿಂದ ಇನ್ನೂ ಎತ್ತರಕ್ಕೆ ಮೇಲ್ಭಾಗದಲ್ಲಿರುವ ಬಾರಂಗಿ ಎಂಬಲ್ಲಿಗೆ ಹೋಗಿ ವಿಚಾರಿಸಿದಾಗ ಆ ಪ್ರದೇಶವೂ ಅಪಾಯ ಮಟ್ಟದಲ್ಲಿಯೇ ಇರುವದೆಂದು ಗೊತ್ತಾದಾಗ ಮತ್ತೆ ಮುಂದಕ್ಕೆ ಏನೂ ಯೋಚಿಸದೇ ತಮ್ಮ ಸಂಗಡಿಗರೊಂದಿಗೆ ದೈವರಾತರು ಗೋಕರ್ಣಕ್ಕೆ ಬಂದರು.

ದಿವ್ಯ ಸ್ವರ್ಗೀಯ ತಾಣ ಅಶೋಕವನ

ಅದೊಂದು ದಿನ ದೈವರಾತರು ಆಶ್ರಮ ನಿರ್ಮಾಣಕ್ಕಾಗಿ ಸೂಕ್ತ ಸ್ಥಳವನ್ನರಸುತ್ತ ಭೀಮಕುಂಡದ ಮಾರ್ಗವಾಗಿ ಅಶೋಕವನ ತಲುಪಿದರು. ಎಲ್ಲೆಲ್ಲು ತುಂಬಿರುವ ಹಸಿರು ವನಸಿರಿಯ ಸಸ್ಯ ಸಂಪತ್ತು,

ಸಮೃದ್ಧವಾದ ನೀರಿನ ಕೆರೆತೊರೆಗಳಿಂದ ಕೂಡಿದ ಪ್ರಶಾಂತವಾದ ದಿವ್ಯ ಪರಿಸರ ಹಾಗೂ ಹಕ್ಕಿ ಪಿಕ್ಕಿಗಳ ಮಧುರ ಇಂಚರ ಇವು ದೈವರಾತರ ಮನಸೆಳೆದವು. ಹಿಂದೆ ಇಲ್ಲಿಯ ಸ್ವರ್ಗೀಯ ನೀರವ ವಾತಾವರಣಕ್ಕೆ ಮನಸೋತ ಮಧ್ಯಪ್ರದೇಶದ ರಾಜಪುರೋಹಿತ ಜಂಬುರಾಮಭಟ್ಟ ಸಪ್ರೆಂಬುವರು ತಮ್ಮ ವಿದ್ಯಾರ್ಥಿಗಳೊಂದಿಗೆ ಹಾಗೂ ಊರ ಜನರ ಸಹಕಾರದೊಂದಿಗೆ ಇಲ್ಲಿಯ ಮಲ್ಲಿಕಾರ್ಜುನ ದೇವರಿಗೆ ಗುಡಿಯನ್ನು ನಿರ್ಮಿಸಿದ್ದರು. ಈ ಸ್ಥಳವು ಎಲ್ಲ ರೀತಿಯಿಂದಲೂ ಆಶ್ರಮ ನಿರ್ಮಾಣಕ್ಕೆ ಅನುರೂಪವಾಗಿರುವಂತೆ ತೋರಿತು. ಅಂತೆಯೇ ಇಲ್ಲಿ ಒಂದು ತಿಂಗಳಕಾಲ ತಪಸ್ಸನ್ನಾಚರಿಸಿ ಶಾಲಿವಾಹನ ಶಕ 1841 (ಕ್ರಿ.ಶ 1919) ಸಿದ್ಧಾರ್ಥಿ ಸಂವತ್ಸರ ಅಕ್ಷಯ ತೃತೀಯಾ ಶುಕ್ರವಾರ ದಿನದಂದು ಔಪಚಾರಿಕವಾಗಿ ದೈವರಾತರು ಆಶ್ರಮ ಸ್ಥಾಪನೆಯ ಸಂಕಲ್ಪ ಮಾಡಿದರು.

ಆಶ್ರಮದ ನಿರ್ಮಾಣಕ್ಕೆ ಅಶೋಕವನವನ್ನೇನೋ ಆಯ್ಕೆಮಾಡಿಯಾಗಿತ್ತು. ಈ ಸ್ಥಳವು ತಪಸ್ಸನ್ನಾಚರಿಸುವುದಕ್ಕೆ ಯೋಗ್ಯವಾದುದಾಗಿತ್ತೇ ವಿನಃ ವಿದ್ಯಾರ್ಥಿಗಳು ದಿನಾಲು ಮನೆಯಿಂದ ಬಂದು ಹೋಗುವುದಕ್ಕೆ ಅನುಕೂಲವಾಗಿರಲಿಲ್ಲ. ಕಲ್ಲು–ಮುಳ್ಳು, ಹಳ್ಳ–ದಿಣ್ಣೆಗಳಿಂದ ಕೂಡಿದ ಅಂಕುಡೊಂಕಾದ ಕಾಲುದಾರಿಯಲ್ಲಿ ಏರಿಳಿಯುತ್ತ ಸುಮಾರು ಎರಡೂವರೆ ಮೈಲಿದೂರ ನಡೆದು ಗುಡ್ಡ ಬೆಟ್ಟಗಳ ದಾಟಿ ಅಶೋಕವನ ತಲುಪುವದು ದುಸ್ತರವಾಗಿತ್ತು. ಅಂತೆಯೇ ಗೋಕರ್ಣಕ್ಕೆ ಸಮೀಪವಾಗಿ ಎಲ್ಲಿಯಾದರೂ ಒಂದು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡುವುದು ಉಚಿತವೆನಿಸಿತು. ಆದ್ದರಿಂದ ದೈವರಾತರು ತಾತ್ಕಾಲಿಕವಾಗಿ ಅಶೋಕವನದಲ್ಲಿಯ ಆಶ್ರಮ ನಿರ್ಮಾಣದ ವಿಚಾರವನ್ನು ಅದುಮಿಟ್ಟು ಗೋಕರ್ಣಕ್ಕೆ ಸಮೀಪದ ಭೀಮಕುಂಡ ಉಪವನಕ್ಕೆ ಬಂದು ಅಲ್ಲಿ ತಪವನಾಚರಿಸತೊಡಗಿದರು. ಇದನ್ನು ಕಂಡು ಈ ವಲಯದಲ್ಲಿ ವಾಸಿಸುತ್ತಿದ್ದ ಹಾಲಕ್ಕಿ ಜನಾಂಗದ ರೈತರು ಭೀಮಕುಂಡ ತೀರ್ಥದಿಂದ ಸ್ವಲ್ಪ ದೂರದಲ್ಲಿ ದೈವರಾತರಿಗಾಗಿ ಒಂದು ಕುಟೀರವನ್ನು ನಿರ್ಮಿಸಿಕೊಟ್ಟರು.

ಭೀಮಕುಂಡ ಉಪವನವು ಗುಡ್ಡಗಳ ನಡುವೆ ತಗ್ಗಿನಲ್ಲಿ ಮೈದಳೆದು ನಿಂತಿರುವ ಒಂದು ಸುಂದರ ತಪ್ಪಲು ಪ್ರದೇಶ. ಇಲ್ಲಿ ಭೀಮಕುಂಡ ತೀರ್ಥವೆಂಬ ಒಂದು ಪುಟ್ಟ ಕೆರೆಯಿದೆ. ಇದು ಇಲ್ಲಿಯ ತೋಟಗಳಿಗೆ ನೀರುಣಿಸುವ ಆಕರ. ಈ ಭೀಮಕುಂಡ ತೀರ್ಥದ ಮೇಲ್ಭಾಗದಲ್ಲಿ ಪ್ರಾಚೀನವಾದ ಜನಾರ್ದನ ದೇವರ ಮೂರ್ತಿಯಿದೆ. ಈ ಮೂರ್ತಿಯ ದಕ್ಷಿಣದಲ್ಲಿ ಸಣ್ಣ ಅಂಗಳವಿದ್ದು ಅದಕ್ಕೆ ಮುರಾಕಲ್ಲಿನಿಂದ ನಿರ್ಮಿತವಾದ ಕಟ್ಟೆಯಿದ್ದು ಅಂಚಿನಲ್ಲಿ ನಾಗಸಂಪಿಗೆ, ಸುರಹೊನ್ನೆ ಮುಂತಾದ ಮರಗಳಿದ್ದವು. ಕೆಳಭಾಗದ ಪಶ್ಚಿಮ ದಿಸೆಯಲ್ಲಿ ತೆಂಗು, ಅಡಿಕೆ, ಬಾಳೆಗಳಿಂದ ಕೂಡಿದ ತೋಟವಿತ್ತು.

ಗೃಹಸ್ಥಾಶ್ರಮ ಸ್ವೀಕಾರ

ಈ ವೇಳೆಗಾಗಲೇ ದೈವರಾತರ ದಿವ್ಯ ವ್ಯಕ್ತಿತ್ವದ ಪ್ರತಿಭೆ ಗೋಕರ್ಣದಲ್ಲಿ ಸಾವಕಾಶವಾಗಿ ಹರಡತೊಡಗಿತ್ತು. ಅಂತೆಯೇ ಕೆಲವು ವಿದ್ಯಾರ್ಥಿಗಳು ವೇದಾಧ್ಯಯನ ಮತ್ತು ಯೋಗಾಭ್ಯಾಸಕ್ಕಾಗಿ ಬರತೊಡಗಿದರು. ಇವರಲ್ಲಿ ಬಾಲಾಜಿ ಎಂಬ ವಿದ್ಯಾರ್ಥಿಯು ದೈವರಾತರ ವಿಶೇಷ ಪ್ರೀತಿಗೆ ಪಾತ್ರನಾಗಿ ಪ್ರಧಾನ ಶಿಷ್ಯನಾದನು. ಈತನ ಹೆಸರು ಬಾಲಕೃಷ್ಣ ಎಂದಿದ್ದು ದೈವರಾತರು ಪ್ರೀತಿಯಿಂದ 'ಬಾಲಾಜಿ' ಎಂದು ಕರೆಯುತ್ತಿದ್ದರು. ತಪೋಜೀವನದೊಂದಿಗೆ ಅಧ್ಯಾಪನವೃತ್ತಿಯನ್ನು ಆರಂಭಿಸಿದ ಈ ಸಮಯದಲ್ಲಿ

ದೈವರಾತರಿಗೆ ಗೃಹಸ್ಥ ಜೀವನದ ಯೋಗ ಒದಗಿ ಬಂದಿತು. ಒಂದು ದಿನ ಮಂಜಾವಿನಲ್ಲಿ ಜಂಭೆ ಕುಟುಂಬದ ಸಾವಿತ್ರಿ ಮತ್ತು ವೆಂಕಟರಮಣ ದಂಪತಿಗಳು ದೈವರಾತರಿಗೆ ನಿಕಟ ಪರಿಚಿತಳಾದ ಸಾವಿತ್ರಿಯ ಅಕ್ಕ ಪರಮೇಶ್ವರಿಯೊಂದಿಗೆ ಬಂದು ತಮ್ಮ ಮಗಳನ್ನು ಮದುವೆಯಾಗಿ ಗೃಹಸ್ಥಜೀವನವನ್ನು ಪ್ರಾರಂಭಿಸಬೇಕೆಂದು ತಮ್ಮ ಮನದಿಚ್ಛೆಯನ್ನು ವ್ಯಕ್ತಪಡಿಸಿದರು. ಅದನ್ನು ಆಲಿಸಿದ ದೈವರಾತರು ಇದೀಗ ಗೃಹಸ್ಥಾಶ್ರಮದ ಸ್ವೀಕಾರಕ್ಕೆ ಸರಿಯಾದ ಸಮಯವೆಂದು ಅವರ ಅಭಿಲಾಷೆಯನ್ನು ಗೌರವಿಸಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಆದರೆ ವಿವಾಹವು ಆರ್ಷೇಯ ಸಂಸ್ಕೃತಿಗೆ ಅನುರೂಪವಾಗಿ ನಡೆಯಬೇಕು ಎಂದು ತಮ್ಮ ದಿಟ್ಟ ನಿರ್ಧಾರವನ್ನು ತಿಳಿಸಿದರು. ಇದಕ್ಕೆ ಸಾವಿತ್ರಿ ಮತ್ತು ವೆಂಕಟರಮಣ ದಂಪತಿಗಳು ಸಮ್ಮತಿಸಿದರು. ಹೀಗೆ ಮದುವೆಯ ಮಾತುಕತೆಗಳು ಸಂಪನ್ನಗೊಂಡಾಗ "ಶುಭಸ್ಯ ಶೀಘ್ರಂ" ಎಂಬಂತೆ ಅಂದಿನ ಶುಭ ಮುಹೂರ್ತದಲ್ಲಿಯೇ ವಿವಾಹವನ್ನು ನಿಶ್ಚಯಿಸಲಾಯಿತು.

ಸರಳ ಜೀವನ ಪಾರಮ್ಯದಲ್ಲಿ ಮದುವೆಯ ಶುಭಕಾರ್ಯವು ಆಗಲೇ ಅಣಿಗೊಳ್ಳತೊಡಗಿತು. ದೈವರಾತರ ತಂದೆ ವಿಘ್ನೇಶ್ವರ ಭಟ್ಟರಿಗೂ, ಕುಲಪುರೋಹಿತರಾದ ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರಿಗೂ, ಋಗ್ವೇದ ಗುರುಗಳಾದ ಕೃಷ್ಣಭಟ್ ಮ್ಯೆಯರವರಿಗೂ ಅಂದಿನ ಶುಭ ಮುಹೂರ್ತದಲ್ಲಿಯೇ ದೈವರಾತನ ಲಗ್ನವಿದೆ ಎಂಬ ಆಮಂತ್ರಣ ಕಳುಹಿಲಾಯಿತು. ವಿವಾಹದ ಈ ಸಮಾಚಾರ ತಿಳಿದ ತಕ್ಷಣ ಆಮಂತ್ರಿತರೆಲ್ಲ ಬಂದು ಸೇರಿದರು.

ವಿಶಾಲವಾಗಿ ಪಲ್ಲವಿಸಿನಿಂತಿರುವ ಅರಳಿಮರವೇ ಮದುವೆಯ ಚಪ್ಪರ. ಅದರಡಿಯ ಚೌಕಾಕಾರದ ಕಟ್ಟೆಯೇ ವಿವಾಹ ಮಂಟಪ. ಅದಕ್ಕೆ ಹೊಂದಿಕೊಂಡಿರುವ ಅಂಗಳದ ಕಟ್ಟೆ ಚಿಟ್ಟೆಗಳೇ ಬಂದವರಿಗೆ ಕುಳಿತುಕೊಳ್ಳುವ ಆಸನಗಳಾದವು. ಹತ್ತಿರದಲ್ಲಿರುವ ಹಾಲಕ್ಕಿ ಕುಟುಂಬದ ಜನರು ಅದಾಗಲೇ ಬಂದು ತಳಿರು ತೋರಣಗಳಿಂದ ಸಿಂಗರಿಸಿ ಆ ಸ್ಥಳದಲ್ಲಿ ವಿವಾಹ ವೇದಿಕೆಯನ್ನು ಸಿದ್ಧಗೊಳಿಸಿದರು.

ತಂದೆ ವಿಘ್ನೇಶ್ವರ ಭಟ್ಟರಿಗೆ, ಋಗ್ವೇದ ಗುರುಗಳಾದ ಕೃಷ್ಣಭಟ್ ಮ್ಯೆಯರರಿಗೆ ನಮಸ್ಕರಿಸುವಷ್ಟರಲ್ಲಿ ಪುರೋಹಿತ ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರು ಆಗಮಿಸಿದರು. ಅವರಿಗೂ ನಮಸ್ಕರಿಸಿ ಸ್ವಾಗತಿಸಿದ ದೈವರಾತರು ಅವರನ್ನು ವಿವಾಹ ವೇದಿಕೆಗೆ ಕರೆದೊಯ್ದು ಸುಖಾಸನವಿತ್ತು ಸತ್ಕರಿಸಿ ಮಂಗಳಕಾರ್ಯವನ್ನು ಪ್ರಾರಂಭಿಸುವ ಮೊದಲು ಕೈಮುಗಿದು "ಈಗ ವಾಡಿಕೆಯಲ್ಲಿರುವ ಗ್ರಾಮಧರ್ಮ, ಜನಪದ ಧರ್ಮ ಮುಂತಾದ ಆಡಂಬರದ ಪದ್ಧತಿಯನ್ನು ಬಿಟ್ಟು ಶುದ್ಧ ವೈದಿಕ ವಿಧಿ, ವಿಧಾನಗಳಿಗೆ ಅನುಗುಣವಾಗಿ ಅಶ್ವಲಾಯನ ಗೃಹ ಸೂತ್ರದಲ್ಲಿ ಹೇಳಲಾದ ಸರಳ ರೀತಿಯಲ್ಲಿಯೇ ನನ್ನ ವಿವಾಹವನ್ನು ಮಾಡಿಸಬೇಕು" ಎಂದು ಪ್ರಾರ್ಥಿಸಿದರು. ಅದನ್ನು ಕೇಳಿ ಪುರೋಹಿತರು ನಗುತ್ತಾ "ನೀನು ಹೇಳಿದಂತೆ ವಿವಾಹ ವಿಧಿಯನ್ನು ನೆರವೇರಿಸುವುದಕ್ಕೆ ನನ್ನದೇನೂ ಆಕ್ಷೇಪವಿಲ್ಲ" ಎಂದರು. ವಿವಾಹದ ಆಚರಣೆಯು ಸರಳವಾಗಿ ನಡೆಯುತ್ತಿರಲು ಗುರುಗಳಾದ ಕೃಷ್ಣಭಟ್ ಮ್ಯೆಯರರು ಸಾಂಪ್ರದಾಯಿಕವಾಗಿ ವಿವಾಹದಲ್ಲಿ ಬಾರಿಸುವ ಮಂಗಳವಾದ್ಯಕ್ಕಾಗಿ "ನಾದ ಶಬ್ದಮಯೀ ಘಂಟಾಂ" ಎಂಬ ಎರಡು ಶ್ಲೋಕಗಳನ್ನು ಹೇಳಿ ಗಂಟೆ ಬಾರಿಸಿದರು.

ಬೆಳಗಿನ ಆರುಘಂಟೆಗೆ ವಿವಾಹ ನಿಶ್ಚಿತಾರ್ಥವೂ ಅದೇ ದಿನ ಮಧ್ಯಾಹ್ನ ಹನ್ನೆರಡು ಘಂಟೆಗೆ ಮದುವೆಯೂ ಸಂಪನ್ನವಾಯಿತು. ಸರಳ ಜೀವನದ ಸಹಜ ನಡೆಗೆ ಅದೊಂದು ಮಾದರಿಯಾಗಿತ್ತು.

ವಿವಾಹದಲ್ಲಿ ಈ ಮೊದಲಿನ ವರಮಹಾಲಕ್ಷ್ಮಿ ಎಂಬ ಹೆಸರಿಗೆ ಬದಲಾಗಿ ವಧುವಿಗೆ 'ಶ್ರದ್ಧಾದೇವಿ' ಎಂದು ದೈವರಾತರು ನಾಮಕರಣ ಮಾಡಿದರು. ಮದುವೆಯ ನಂತರ ತಪಸ್ಸಿಗಾಗಿ ನಿರ್ಮಿತವಾಗಿರುವ ಕುಟೀರದಲ್ಲಿಯೇ ಗೃಹಪ್ರವೇಶದ ಶಾಸ್ತ್ರವನ್ನು ಪೂರಯಿಸಲಾಯಿತು. ಗೃಹಸ್ಥ ಜೀವನ ಸ್ವೀಕಾರದ ತರುವಾಯ ಪ್ರತಿದಿನ ಅಗ್ನಿ ಉಪಾಸನೆ ನಡೆಯತೊಡಗಿತು.

ಸಮುದ್ರತೀರದಲ್ಲಿ ಆಶ್ರಮ ನಿರ್ಮಾಣ.

ದೈವರಾತರು ಭೀಮಕುಂಡ ಉಪವನದಲ್ಲಿ ಗೃಹಸ್ಥ ಜೀವನ ಪ್ರಾರಂಭಿಸಿದ ಅದೇ ವರ್ಷದಲ್ಲಿ ಗೋಕರ್ಣದಿಂದ ಸ್ವಲ್ಪ ದೂರ ಸಮುದ್ರತೀರದ ದಂಡೆಯ ಮೇಲೆ ಆಶ್ರಮ ನಿರ್ಮಿಸುವುದಕ್ಕೆ ಒಂದು ಸೂಕ್ತ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ಶೀಘ್ರವಾಗಿ ಆಶ್ರಮ ನಿರ್ಮಾಣಕಾರ್ಯ ನಡೆಯಿತು. ಮಾವು, ಬೇವು, ಬಿಲ್ವ, ಪುನ್ನಾಗ, ಅರಳಿ, ತೆಂಗು ಇತ್ಯಾದಿ ಸಸ್ಯಗಳ ತೋಟದ ನಡುವೆ ವಿಶಾಲ ಅಂಗಳ ಮಧ್ಯೆ ಆಶ್ರಮ ನಿರ್ಮಾಣವಾಯಿತು. ಪೂರ್ವಾಭಿಮುಖವಾಗಿ ನಿಂತಿರುವ ಆಶ್ರಮವನ್ನು ಪ್ರವೇಶಿಸುತ್ತಿರುವಂತೆ ಎಡಗಡೆಯಲ್ಲಿ ಕಟ್ಟೆ ಚಿಟ್ಟೆಗಳಿಂದ ಕೂಡಿದ ಮುಖಶಾಲೆ ಅದರಿಂದ ಮುಂದಕ್ಕೆ ಸುಮಾರು ಅರವತ್ತು ವಿದ್ಯಾರ್ಥಿಗಳು ಕುಳಿತು ಅಧ್ಯಯನ ಮಾಡಬಹುದಾದಷ್ಟು ದೊಡ್ಡದಾದ ಪಾಠಶಾಲೆ; ಅದರ ಗೋಡೆಗೆ ಹೊಂದಿಕೊಂಡು ನಾಲ್ಕೂ ದಿಸೆಯಲ್ಲಿ ಅತಿಥಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಚಿಟ್ಟೆಗಳ ಸುಂದರ ಸೋಪಾನ ಹಾಗೂ ಇನ್ನೊಂದೆಡೆಯಲ್ಲಿ ವ್ಯಾಯಾಮಶಾಲೆ ಇದ್ದವು. ಇದರಿಂದ ಆಚೆ ಸುಮಾರು ಮೂವತ್ತು ಅಡಿಗಳ ಅಂತರದಲ್ಲಿ ಬಾವಿ, ಸ್ನಾನಗೃಹಗಳೂ ಅದರ ಮುಂದೆ ಪಾಕಶಾಲೆ, ಯಜ್ಞಶಾಲೆ ಹಾಗೂ ಗೋಶಾಲೆ ಇವು ವ್ಯವಸ್ಥಿತವಾಗಿ ನಿರ್ಮಿಸಲ್ಪಟ್ಟಿದ್ದವು.

ಗೋಕರ್ಣ ಸಮುದ್ರತೀರದಲ್ಲಿ ಆಶ್ರಮ ನಿರ್ಮಾಣವಾಗಲು ದೈವರಾತ ದಂಪತಿಗಳು ಭೀಮಕುಂಡ ಉಪವನದಿಂದ ಕಡಲತೀರದ ಆಶ್ರಮಕ್ಕೆ ಬಂದು ನೆಲೆಸಿದರು. ಭೀಮಕುಂಡ ಉಪವನದಲ್ಲಿರುವಾಗ ನಾಲ್ಕಾರು ವಿದ್ಯಾರ್ಥಿಗಳು ಮಾತ್ರ ಬರುತ್ತಿದ್ದರೆ ಕಡಲತೀರದ ಆಶ್ರಮಕ್ಕೆ ಪ್ರಾರಂಭದಲ್ಲಿಯೇ ಇಪ್ಪತ್ತು ವಿದ್ಯಾರ್ಥಿಗಳು ಬರತೊಡಗಿದರು. ಹೀಗೆ ನಾಲ್ಕಾರು ತಿಂಗಳು ಕಳೆಯುವಷ್ಟರಲ್ಲಿ ಊರಿನ ಅನೇಕ ಜನರು ಋಷಿಕುಲ ಪದ್ಧತಿಯ ಆಶ್ರಮದ ಚಟುವಟಿಕೆಗಳನ್ನು ವೀಕ್ಷಿಸಲು ಬರತೊಡಗಿದರು. ದೈವರಾತರ ಋಷಿಕುಲ ಯೋಗಾಶ್ರಮದ ಖ್ಯಾತಿಯು ದೂರದೂರಕ್ಕೆ ಹರಡುತ್ತಿರುವಂತೆ ಮಕ್ಕಳು ಮಾತ್ರವಲ್ಲದೇ ಮೂವತ್ತರಿಂದ ಅರವತ್ತು ವರ್ಷಗಳ ಪ್ರಾಯದ ವಯಸ್ಕರೂ ಕೂಡ ಯೋಗ, ವೇದಭಾಷ್ಯ ಇತ್ಯಾದಿ ಕಲಿಕೆಗಾಗಿ ಬರುವುದಕ್ಕೆ ಆರಂಭಿಸಿದರು.

ವಿದ್ಯಾರ್ಥಿಗಳು ಮಧ್ಯಾಹ್ನ ಮಧುಕರಿ ವೃತ್ತಿಯಿಂದ ಊಟ ಮಾಡುತ್ತಿದ್ದರು. ಬೇಸಿಗೆಯಲ್ಲಿ ನಡುಹಗಲು ಬಿಸಿಲಿಗೆ ಮಳಲ ದಾರಿಯು ತೀವ್ರವಾಗಿ ಕಾದು ಅಂಗಾಲು ಸುಡುತ್ತಿತ್ತು. ಅಂತೆಯೇ ದೈವರಾತರು ದಾರಿಯುದ್ದಗಲಕ್ಕೂ ಕೆಂಪು ಮಣ್ಣು ಹರಡಿಸಿ ಅದರ ಮೇಲೆ ಗರಿಕೆಯನ್ನು ನೆಟ್ಟು ಹುಲ್ಲಿನಹಾಸು ನಿರ್ಮಿಸಿ ಬರಿಗಾಲಿನಲ್ಲಿ ನಡೆಯುವವರಿಗೆ ತೊಂದರೆಯಾಗದಂತೆ ಮಾಡಿದರು. ಅಂದು ಹೆಚ್ಚಿನ ಜನರು ಬರಿಗಾಲಿನಲ್ಲಿ ನಡೆಯುವದು ಸಾಮಾನ್ಯವಾಗಿತ್ತು.

ಆರ್ಷೇಯ ಶಿಕ್ಷಣ

ಒಂದೆಡೆ ಕಡಲು. ಇನ್ನೊಂದೆಡೆ ಸಸ್ಯರಾಜಿಯ ಹಸಿರಿನ ಮಡಿಲು. ನಡುವೆ ಉದ್ದಕ್ಕೂ ಕಣ್ಣೋಟ ಹರಿಯುವವರೆಗೂ ಕಡಲತೀರದ ಮಳಲರಾಶಿಯ ವಿಶಾಲಬಯಲು. ಇಲ್ಲಿ ಆರ್ಷೇಯ ವಾತಾವರಣದ ದೈವರಾತರ ಕನಸಿನ ಆಶ್ರಮ ಮೈದಳೆದು ನಿಂತಿತ್ತು. 'ಪ್ರಕೃತಿ ಮಡಿಲಿನ ಹಸಿರು ಶಾಲೆಯಲ್ಲಿ ಸ್ವಾಭಾವಿಕ ನೆರಳಿನ ತಣಿವಿನಲ್ಲಿ ಕಲಿಕೆಯು ಸಾಗಬೇಕು. ಕೇವಲ ಅಕ್ಷರ ವಿದ್ಯೆ ಮಾತ್ರವೇ ಶಿಕ್ಷಣವಲ್ಲ. ಹುಟ್ಟಿನಿಂದ ಸಾವಿನವರೆಗೂ ಮನುಷ್ಯನು ಕಲಿಯುತ್ತಲೇ ಇರುತ್ತಾನೆ. ಶಾಂತಿ, ಸಹಕಾರ, ಸಾಮರಸ್ಯಗಳಿಂದ 'ವಸುಧೈವ ಕುಟುಂಬಕಂ' ಎಂಬ ಆಪ್ತ ವಾಕ್ಯದಂತೆ ಈ ಜಗತ್ತಿನ ಜೀವಿಗಳೆಲ್ಲವೂ ಒಂದೇ ಕುಟುಂಬದ ಸದಸ್ಯರು ಎನ್ನುವ ಅರಿವು ಮೂಡಿಸುವಂತಹ ಶಿಕ್ಷಣವಿರಬೇಕು. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಅನ್ನವನ್ನು ತಾನೇ ಉತ್ಪತ್ತಿ ಮಾಡಬಲ್ಲ ನಿರಾವಲಂಬನೆ ಸಾಮರ್ಥ್ಯದ ಮೂಲಭೂತ ಜ್ಞಾನವಾಗಬೇಕು. ಯಾವನು ಕೃಷಿಯನ್ನು ಹೀನಾಯವಾಗಿ ಕಾಣುತ್ತಾನೆಯೋ ಅವನಿಗೆ ಕೃಷಿಕ ಬೆಳೆದ ಅನ್ನವನ್ನು ಉಣ್ಣುವ ಅಧಿಕಾರವಿಲ್ಲ. ಕೀಳರಿಮೆಯಿಲ್ಲದೆ ಸ್ವಹಸ್ತದಿಂದ ಅನ್ನೋತ್ಪಾದನೆ ಮಾಡುವದು ಪ್ರತಿಯೊಬ್ಬನ ಪವಿತ್ರ ಕರ್ತವ್ಯ ಎಂಬ ಭಾವನೆ ಬೆಳೆಯಬೇಕು' ಇದು ದೈವರಾತರ ಘೋಷವಾಕ್ಯವಾಗಿತ್ತು.

ಶ್ರದ್ಧಾದೇವಿ

ಶಾಲೆ ಕಲಿಯದ ಒಬ್ಬ ಹದಿಹರೆಯದ ಹೆಣ್ಣು ಒಂದು ವಿದ್ಯಾಸಂಸ್ಥೆಯ ಹೊಣೆಹೊತ್ತು ಮುನ್ನಡೆಸುವದೆಂದರೆ ಸಾಮಾನ್ಯ ಸಂಗತಿಯಲ್ಲ. ತನ್ನ ಹನ್ನೊಂದನೇ ವಯಸ್ಸಿನಿಂದಲೇ ಆಶ್ರಮಕ್ಕೆ ಬರುವ ಅತಿಥಿ ಅಭ್ಯಾಗತರ ಆದರೋಪಚಾರ, ವಿದ್ಯಾರ್ಥಿಗಳ ಯೋಗ ಕ್ಷೇಮ ವಿಚಾರ, ಗೋಸಂಗೋಪನೆ ಮತ್ತು ಕೃಷಿ ಇತ್ಯಾದಿಯಾಗಿ ಎಲ್ಲ ಜವಬ್ದಾರಿಯನ್ನು ಶ್ರದ್ಧಾದೇವಿಯು ನಿರ್ವಹಿಸತೊಡಗಿದಳು.

ಶ್ರೀಕ್ಷೇತ್ರ ಗೋಕರ್ಣದಲ್ಲಿ ವಾಸಿಸುತ್ತಿದ್ದ ಶ್ರೀಮತಿ ಸಾವಿತ್ರಿ ಮತ್ತು ವೆಂಕಟರಮಣ ಜಂಭೆ ದಂಪತಿಗಳ ಮಗಳಾಗಿ ಶ್ರದ್ಧಾದೇವಿಯು 1911–ಶುಕ್ರವಾರದಂದು ಜನಿಸಿದರು. ತಾಯಿ–ತಂದೆಯರು ಇಟ್ಟ ಹೆಸರು ವರಮಹಾಲಕ್ಷ್ಮಿ, ತಮ್ಮ ಎಂಟನೇ ವಯಸ್ಸಿನಲ್ಲಿ ದೈವರಾತರೊಂದಿಗೆ ಮದುವೆಯಾದ ಇವರು ಮುಂದೆ ತಮ್ಮ ಪತಿ ಗೃಹವಾದ ಆಶ್ರಮದಲ್ಲಿಯೇ ಬೆಳೆದು ದೊಡ್ಡವರಾದರು. ಮದುವೆಯ ವೇಳೆಗೆ ಶ್ರದ್ಧಾದೇವಿಯವರು ಕೇವಲ ಎಂಟು ವರ್ಷ ವಯಸ್ಸಿನ ಹುಡುಗಿಯಾದ ಕಾರಣ ಇವರ ವಿಧವೆ ದೊಡ್ಡಮ್ಮ ಪರಮೇಶ್ವರಿಯವರು ತಮ್ಮ ಮಕ್ಕಳೊಂದಿಗೆ ಆಶ್ರಮಕ್ಕೆ ಬಂದು ಉಳಿದುಕೊಂಡರು.

ಶ್ರದ್ಧಾದೇವಿಯವರದು ಜಪ, ತಪ, ಅನುಷ್ಠಾನಗಳಿಂದ ಕೂಡಿದ ತಾಪಸ ಜೀವನ. ಪ್ರತಿದಿನ ನೈಮಿತ್ತಿಕವಾಗಿ ಅಗ್ನಿ ಉಪಾಸನೆ ಮಾಡುತ್ತಿದ್ದರು. ತಪೋ ಜೀವನದೊಂದಿಗೆ ಗೃಹ ಕೃತ್ಯಗಳು, ಗೋಶಾಲೆಯ ಕೆಲಸ, ಕಷಿ ಕೆಲಸ ಹೀಗೆ ಬಿಡುವಿಲ್ಲದ ಕರ್ಮ ಜೀವನ ಅವರದಾಗಿತ್ತು. ನಾಯಿ ಮತ್ತು ಬೆಕ್ಕುಗಳೆಂದರೆ ಅವರಿಗೆ ಬಹಳ ಇಷ್ಟ ಅಂತೆಯೆ ನಾಲ್ಕು ನಾಯಿಗಳು ಮತ್ತು ಎರಡು ಬೆಕ್ಕುಗಳನ್ನು ಅವರು ಸಾಕಿಕೊಂಡಿದ್ದರು. ದಿನಾಲು ನಾಯಿಗಳಿಗೆ ಅನ್ನಹಾಕದೇ ಅವರು ಊಟ ಮಾಡುತ್ತಿರಲಿಲ್ಲ.

ಗೋವುಗಳ ಆರೈಕೆ ಶ್ರದ್ಧಾದೇವಿಯವರ ಪ್ರೀತಿಯ ಕೆಲಸವಾಗಿತ್ತು. ದಿನಾಲು ಸರಿಯಾದ ಸಮಯಕ್ಕೆ ಅವುಗಳಿಗೆ ಹುಲ್ಲು ಹಾಕುವುದು, ನೀರು ಕೊಡುವದು, ಎಳೆಗರುಗಳಿಗೆ ಹಾಲುಣಿಸಿ ಹಸುಗಳ ಹಾಲು ಕರೆಯುವದು ಇವೆಲ್ಲವನ್ನು ಅಕ್ಕರೆಯಿಂದ ಮಾಡುತ್ತಿದ್ದರು. ದನಕರುಗಳಿಗೆ ಬರುವ ಶೀತ, ಜ್ವರ, ಅಜೀರ್ಣ, ಕಾಲುಬಾಯಿ ರೋಗ ಇವುಗಳಿಗೆಲ್ಲ ಸ್ವತಃ ತಾವೇ ಮೂಲಿಕೆಗಳಿಂದ ಪರಿಣಾಮಕಾರಿ ಚಿಕಿತ್ಸೆ ನೀಡುತ್ತಿದ್ದರು. ಇದು ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿತ್ತು.

ಆಶ್ರಮದಲ್ಲಿ ದಿನಾಲು ಬೆಳಗಿನ ಉಪಹಾರಕ್ಕೆ ಮತ್ತು ರಾತ್ರಿಯ ಆಹಾರಕ್ಕೆ ಗಂಜಿಯೂಟದ ವ್ಯವಸ್ಥೆಯಿತ್ತು. ಶ್ರದ್ಧಾದೇವಿಯು ಎರಡು ಹೊತ್ತು ಗಂಜಿ ತಯಾರಿಸಿ ಊಟದ ಸಮಯವಾಗುತ್ತಲೇ ಹೊರವಲಯದಲ್ಲಿ ತೂಗುಹಾಕಿರುವ ದೊಡ್ಡ ಗಂಟೆಯನ್ನು ಬಾರಿಸುತ್ತಿದ್ದಳು. ಗಂಟೆಯ ಶಬ್ದ ಕೇಳುತ್ತಲೇ ವಿದ್ಯಾರ್ಥಿಗಳೆಲ್ಲ ಶಿಸ್ತಿನಿಂದ ಬಂದು ಒಬ್ಬನು ತಾಟುಗಳನ್ನು ಇನ್ನೊಬ್ಬನು ನೀರಿನ ಲೋಟಗಳನ್ನು ಇರಿಸಿದರೆ ಮತ್ತೆ ಯಾರಾದರೊಬ್ಬರು ತಾಟುಗಳಿಗೆ ಗಂಜಿಯನ್ನೂ ಇನ್ನು ಕೆಲವರು ಉಪ್ಪು, ಉಪ್ಪಿನಕಾಯಿಯನ್ನೂ ಬಡಿಸುತ್ತಿದ್ದರು. ಆಗ ಶ್ರದ್ಧಾದೇವಿಯು ಅವರವರ ಇಷ್ಟಕ್ಕೆ ತಕ್ಕಂತೆ ಹಾಲು, ಮೊಸರು, ಕಡೆದ ಮಜ್ಜಿಗೆ, ತುಪ್ಪ ಇವುಗಳನ್ನು ಬಡಿಸುತ್ತಿದ್ದರು. ಊಟದ ನಂತರ ಅವರವರ ತಾಟುಗಳನ್ನು ಅವರೇ ತೊಳೆದಿಡುತ್ತಿದ್ದರು. ಇದು ಆಶ್ರಮದ ನಿಯಮವಾಗಿತ್ತು.

ಶ್ರದ್ಧಾದೇವಿಯನ್ನು ಆಶ್ರಮದ ವಿದ್ಯಾರ್ಥಿಗಳೆಲ್ಲ ಅಕ್ಕರೆಯಿಂದ ಅಕ್ಕ ಎಂದೂ ಮತ್ತೆ ಕೆಲವರು ಗೌರವದಿಂದ ಶ್ರದ್ಧಕ್ಕ ಎಂತಲೂ ಕರೆಯುವದು ವಾಡಿಕೆಯಾಗಿತ್ತು. ಇದು ಆಶ್ರಮಕ್ಕಷ್ಟೇ ಸೀಮಿತವಾಗಿರದೇ ಊರಿನವರಿಗೆಲ್ಲ ಅವರು 'ಅಕ್ಕ' ಎಂದೇ ಪರಿಚಿತರಾಗಿದ್ದರು. ಆದರೆ ಹಾಲಕ್ಕಿ ಜನಾಂಗದವರಿಗೆ ಇವರು 'ಅಬ್ಬೋರು' ಅಥವಾ 'ಅಬ್ಬೇರು' ಹಾಗೂ 'ಅಮ್ಮೋರು' ಆಗಿದ್ದರು. ಆಶ್ರಮಕ್ಕೆ ಬರುವ ಹಾಲಕ್ಕಿ ಒಕ್ಕಲಿಗರಿಗೆ ಶ್ರದ್ಧಾದೇವಿಯು ಯಥೇಚ್ಛವಾಗಿ ಕುಡಿಯಲು ಮತ್ತು ಮನೆಗೆ ಒಯ್ಯಲು ಮಜ್ಜಿಗೆ ಕೊಡುತ್ತಿದ್ದಳು. ಆಶ್ರಮಕ್ಕೆ ಹತ್ತಿರದಲ್ಲಿ ವಾಸಿಸುವ ಕುಟುಂಬಗಳು ತಮ್ಮ ತುರ್ತು ಅಗತ್ಯಕ್ಕೆ ಬೇಕಾದ ಉಪ್ಪು, ಉಪ್ಪಿನಕಾಯಿ, ಬೆಲ್ಲ, ತೆಂಗಿನಕಾಯಿ ಮುಂತಾದ ಜೀನಸು ದ್ರವ್ಯಗಳನ್ನು ಒಯ್ಯುತ್ತಿದ್ದರು. ಆಶ್ರಮಕ್ಕೆ ಬಂದು ಕೇಳುವ ಯಾರಿಗೂ ಶ್ರದ್ಧಾದೇವಿಯು ತನ್ನಲ್ಲಿರುವ ವಸ್ತುವನ್ನು ಇಲ್ಲವೆನ್ನುತ್ತಿರಲಿಲ್ಲ. ಪಡೆವ ಕೈಗಳ ಆನಂದಕ್ಕಿಂತ ಕೊಡುವ ಕೈಗಳ ಆನಂದ ಬಹು ದಿವ್ಯವಾದದ್ದು, ಅದು ಅವರ್ಣನೀಯ. ಸುತ್ತಮುತ್ತಲಿನವರಿಗೆಲ್ಲ ಶ್ರದ್ಧಾದೇವಿಯ ಮೇಲೆ ಅದೆಷ್ಟು ಗೌರವ ಭಾವವಿತ್ತೆಂದರೆ ಆಪತ್ಕಾಲದಲ್ಲಿ ಸಹಾಯಕ್ಕಾಗಿ ಒಂದು ಕೂಯಿತ್ತರೆ ಸಾಕು ಮಧ್ಯರಾತ್ರಿಯಲ್ಲಾದರೂ ಎಲ್ಲ ಜನರು ತಕ್ಷಣ ನೆರವಿಗೆ ಧಾವಿಸಿ ಬರುತ್ತಿದ್ದರು. ಅವರೆಲ್ಲರೂ ಶ್ರದ್ಧಾದೇವಿಯನ್ನು ದೇವತೆಯಂತೆಯೇ ಭಕ್ತಿಯಿಂದ ಕಾಣುತ್ತಿದ್ದರು.

ಕೃಷಿ ಮತ್ತು ಗೋಸಂಗೋಪನೆ ಒಂದಕ್ಕೊಂದು ಅವಿಭಾಜ್ಯ ಸಂಬಂಧ ಹೊಂದಿರುವ ಕಾರಣ ಈ ಎರಡೂ ವಿಷಯಗಳನ್ನು ಜತೆಜತೆಯಾಗಿ ಬೋಧಿಸುವದು ಅನಿವಾರ್ಯವಾಗಿತ್ತು. ಅಂತೆಯೇ ಅಶೋಕವನದಲ್ಲಿ ಕೃಷಿ ಮತ್ತು ಗೋಸಂಗೋಪನೆಯ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದರು. ಅನಧ್ಯಾಯದ ದಿನಗಳಲ್ಲಿ ಅಂದರೆ ವೇದಾಧ್ಯಯನವಿಲ್ಲದಿರುವ ಬಿಡುವಿನ ದಿನಗಳಲ್ಲಿ ಋತುಮಾನಕ್ಕೆ ಅನುಗುಣವಾಗಿ ತೊಡಗಬೇಕಾದ ಕೃಷಿಯ ವಿಧಿ ವಿಧಾನಗಳ ಪ್ರತ್ಯಕ್ಷ ಶಿಕ್ಷಣವನ್ನು ಇಲ್ಲಿ ಕಲಿಸಲಾಗುತ್ತಿತ್ತು. ಸ್ವತಃ ದೈವರಾತರೇ ನೇಗಿಲು ಹಿಡಿದು ಉಳುಮೆ ಮಾಡಿ ಬೇಸಾಯವನ್ನು ಬೋಧಿಸುತ್ತಿದ್ದರು. ಗದ್ದೆ, ತೋಟ, ಅರಣ್ಯ ಮತ್ತು ಹುಲ್ಲು ಬೇಣಗಳ ನಿರ್ವಹಣೆ ಕುರಿತು ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಣ ಕಡ್ಡಾಯವಾಗಿತ್ತು.



ಅಶೋಕಾವನದಲ್ಲಿ ಮುಕ್ತ ಗೋಶಾಲೆ

ಮುಕ್ತ ಗೋಶಾಲೆ

ಅಶೋಕವನದಲ್ಲಿ ಕರು ಹಾಕಿದ ಹಸುಗಳಿಗೆ ಆಶ್ರಮದ ಪಕ್ಕದಲ್ಲಿಯೇ ಒಂದು ಪ್ರತ್ಯೇಕ ಗೋಶಾಲೆಯೂ ಇತರ ಹಸು, ಕರು, ಎತ್ತು ಮತ್ತು ಹೋರಿಗಳಿಗೆ ವಿಶಾಲ ಬಯಲಿನ ನಡುವೆ ಇನ್ನೊಂದು ಮುಕ್ತಗೋಶಾಲೆಯೂ ಇತ್ತು. ಮುಕ್ತ ಗೋಶಾಲೆಯಲ್ಲಿ ಯಾವ ರಾಸುಗಳನ್ನೂ ಕಟ್ಟುತ್ತಿರಲಿಲ್ಲ. ದಿನಾಲು ಸಾಯಂಕಾಲ ಎಲ್ಲ ಗೋವುಗಳೂ ತಾನಾಗಿ ಗೋಶಾಲೆಗೆ ಬಂದು ಸೇರುತ್ತಿದ್ದವು. ರಾತ್ರಿ ವೇಳೆ ಮಾತ್ರ ಬಾಗಿಲು ಹಾಕಲಾಗುತ್ತಿದ್ದು ಬೆಳಗಿನ ಜಾವ ನಸುಕು ಹರಿಯುತ್ತಿದ್ದಂತೆಯೇ ಬಾಗಿಲು ತೆರೆದು ಅವುಗಳನ್ನು ಮೇಯಲು ಬಿಡಲಾಗುತ್ತಿತ್ತು. ಹಗಲು ಬಿಸಿಲ ಹೊತ್ತಿನಲ್ಲಿ ಬಾಯಾರಿದ ಗೋವುಗಳಿಗೆ ನೀರು ಕುಡಿಯಲು ಆಳವಿಲ್ಲದ ಒಂದು ಸಣ್ಣ ಕೆರೆಯನ್ನು ನಿರ್ಮಿಸಲಾಗಿತ್ತು. ಗೋವುಗಳು ಪ್ರಖರವಾದ ಬಿಸಿಲ ದಿನಗಳಲ್ಲಿ ಬಾಯಾರಿಕೆ ತಣಿಸಿ ಅಲ್ಲಿಯೇ ಸಮೀಪದ ಮಾವಿನ ಮರದ ನೆರಳಿನಲ್ಲಿ ಬೀಸಿ ಬರುವ ತಂಗಾಳಿಗೆ ಹಾಯಾಗಿ ಮೈಯೊಡ್ಡಿ ಮಲಗುತ್ತಿದ್ದವು. ಅಶೋಕವನದಲ್ಲಿ ಅಂದು ಎಲ್ಲೆಲ್ಲಿಯೂ ಮಾವಿನ ಮರಗಳು ತುಂಬಿರುವುದರಿಂದ ವಸಂತ ಋತುವಿನಲ್ಲಿ ಗೋವುಗಳು ಮಾವಿನ ಮರದಡಿಯಲ್ಲಿ ಉದುರಿದ ಮಾವಿನ ಹಣ್ಣುಗಳನ್ನು ಮೆಲ್ಲುತ್ತ ನಿಂತಿರುವುದು ಸಾಮಾನ್ಯವಾಗಿತ್ತು. ಹೀಗೆ ಮುಕ್ತ ವಾತಾವರಣದಲ್ಲಿ ಸ್ವಚ್ಛಂದವಾಗಿ ಗೋವುಗಳು ಇರಬೇಕು ಎಂಬುದೇ ದೈವರಾತರ ಆಶಯವಾಗಿತ್ತು.

ಅಕ್ಷೈರ್ಮಾದೀವ್ಯಃ ಕೃಷಿಮಿತ್ ಕೃಷ ಸ್ವ
ವಿತ್ತೇ ರಮಸ್ವ ಬಹುಮನ್ಯಮಾನಃ ॥ (ಋಗ್ವೇದ : 5–34–13)

'ಕವಡೆಗಳಿಂದ ಅಂದರೆ ಕೇವಲ ಹಣದಿಂದ ಜೀವಿಸಬೇಡ. ಕೃಷಿ ಮಾಡಿ ಸ್ವತಃ ನೀನೇ ಉತ್ಪಾದಿಸಿದ ನಿಜವಾದ ವಿತ್ತದಿಂದ ಜೀವಿಸು.'

ಸಂದರ್ಭ ಬಂದಾಗಲೆಲ್ಲ ಕೃಷಿಯ ಕುರಿತು ದೈವರಾತರು ಹೇಳುತ್ತಿದ್ದ ಆರ್ಷವಾಣಿ ಇದಾಗಿತ್ತು.

ಬದುಕಲು ಕಲಿಸದ ಶಿಕ್ಷಣ ಅದು ಶಿಕ್ಷಣವಲ್ಲ. ಯಾವ ಶಿಕ್ಷಣದಿಂದ ನಾವು ಸಹಜವಾಗಿ ಜೀವಿಸಬಲ್ಲೆವೋ ಅದೇ ಪರಿಪೂರ್ಣವಾದ ಶಿಕ್ಷಣ. ಅದೇ ಜೀವನ ಶಿಕ್ಷಣ. ಮಾನವನ ಮಾನವೀಯ ವ್ಯಕ್ತಿತ್ವ ವಿಕಾಸಕ್ಕೆ ಅನುರೂಪವಾದ "ಸಪ್ತಮರ್ಯಾದೆ"ಗಳಿಂದ ಕೂಡಿದ ಶಿಕ್ಷಣ ಪದ್ಧತಿಯನ್ನು ಅವರು ಬೋಧಿಸಿದರು. ಅದೇ "ಸಪ್ತಮರ್ಯಾದಾ ಸದ್ವಿದ್ಯಾ" ಹುಲು ಮನುಜನನ್ನು ದೇವಮಾನವನನ್ನಾಗಿಸುವ ಶಿಕ್ಷಣಪಾರಮ್ಯವಿದು.

ಸಪ್ತಮರ್ಯಾದಾ ಸದ್ವಿದ್ಯಾ

1. ಆಹಾರ : ಅಹಿಂಸಾವೃತ್ತಿಯಿಂದ ಕೂಡಿದ ಸಾತ್ವಿಕ ಆಹಾರವನ್ನು ಸೇವಿಸಬೇಕು. ಅದು ಅತಿಯಾದ ಉಪ್ಪು, ಹುಳಿ, ಖಾರಗಳಿಲ್ಲದೆ ಸೌಮ್ಯವಾಗಿರಬೇಕು. ದೇಹ ಮತ್ತು ಮನಸ್ಸುಗಳಿಗೆ ಅಹಿತವನ್ನುಂಟುಮಾಡುವ ಹಾಗೂ ವ್ಯಗ್ರಗೊಳಿಸುವಂತಹ ಆಹಾರ ಸೇವಿಸಬಾರದು. ದಯೆ, ಕರುಣೆ, ಪ್ರೀತಿಗಳ ಮಾನವೀಯ ವ್ಯಕ್ತಿತ್ವದ ವಿಕಾಸಕ್ಕೆ ಆಹಾರವೂ ಮುಖ್ಯ ಕಾರಣವಾಗಿದೆ.

2. ವಿಹಾರ : ವಿಹಾರವೆಂದರೆ ತನು, ಮನಗಳನ್ನು ವಿಕಸಿತಗೊಳಿಸುವ ಉಲ್ಲಾಸಕರವಾದ ಚರ್ಯೆ, ಸಂತೋಷದಾಯಕ ಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು. ಮುಂಜಾವು ಅಥವಾ ಸಂಜೆಯ ಪ್ರಶಾಂತ ವಾತಾವರಣದಲ್ಲಿ ಹಾಯಾಗಿ ಸುಖಿಸುತ್ತ ಹೆಜ್ಜೆ ಹಾಕುವುದು.

3. ಆಚಾರ : ಸಕಲ ಜೀವಿಗಳಲ್ಲಿ ಮಿಡಿಯುತ್ತಿರುವ ವಿಶ್ವಚೈತನ್ಯವಾದ ದೇವರ ಬಗೆಗೆ ಭಕ್ತಿಯನ್ನು ಹೊಂದಿದ್ದು ಅದರ ಸಹಾಯದಿಂದ ಮನಸ್ಸನ್ನು ಪ್ರಾಂಜಲಗೊಳಿಸುತ್ತ ದ್ವೇಷಾಸೂಯೆ, ಮೋಸ, ವಂಚನೆ, ಹಿಂಸೆ ಇತ್ಯಾದಿಗಳತ್ತ ಹರಿಯದಂತೆ ನಿಗ್ರಹಿಸುವದು. ದಿನಕ್ಕೊಂದು ಬಾರಿಯಾದರೂ ಮೌನದಲ್ಲಿ ಮನವನ್ನು ಏಕಾಗ್ರಗೊಳಿಸಿ ಶಾಂತವಾಗಿ ಧ್ಯಾನಿಸುವದು. ತಾಯಿ-ತಂದೆಯರನ್ನು, ಗುರು, ಹಿರಿಯರನ್ನು ಗೌರವಿಸುವದು. ಅಕ್ಕ-ತಮ್ಮಂದಿರು, ಅಣ್ಣ-ತಂಗಿಯರು ಅನನ್ಯವಾದ ಸೋದರಭಾವದ ಪವಿತ್ರ ಪ್ರೇಮವನ್ನು ಹೊಂದಿರುವದು ಇವೆಲ್ಲವೂ ಸದಾಚಾರಗಳು. ಈ ವಿಶ್ವ ಸೃಷ್ಟಿಯ ಪಂಚ ಭೂತಗಳಿಂದ ಸಂಯೋಜಿತವಾದ ಪ್ರಕೃತಿಯಲ್ಲಿ ದೊರೆಯುವ ದವಸ-ಧಾನ್ಯ, ಹಣ್ಣು ಹಂಪಲು, ಕಂದ ಮೂಲಗಳು ಇತ್ಯಾದಿ ಜೀವನೋಷಕ ಆಹಾರದಲ್ಲಿ ದೈವಿಕ ಭಾವವನ್ನು ಕಾಣುವುದು; ಇಂತಹ ಉದಾತ್ತ ಆಚಾರಗಳು ಮನುಷ್ಯನನ್ನು ಅಲ್ಪತೆಯಿಂದ ದೈವತ್ವದ ಕಡೆಗೆ ಒಯ್ಯುವವು.

4. ವಿಚಾರ : ವಿಚಾರವೆಂದರೆ ನಮ್ಮ ಜೀವನದ ಕುರಿತಾದ ವಿವೇಚನೆ. ಯಾವುದು ಕೆಟ್ಟದು ಯಾವುದು ಒಳ್ಳೆದು ಎಂಬ ವಿಮರ್ಶೆಯ ಪರಿಜ್ಞಾನ. ಇಂತಹ ವೈಚಾರಿಕ ಜ್ಞಾನವಿಲ್ಲದೇ ಹೋದರೆ ಬದುಕಿನ ಬಯಲಲ್ಲಿ ಅದು ನಾವು ಹಿಡಿದ ಕತ್ತಲಿನ ಓಟವಾಗುತ್ತದೆ. ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸಿ ವಾಸ್ತವವನ್ನು ಅರಿಯುವದು.

5. ಉಚ್ಚಾರ : ಮನಸ್ಸಿನ ಭಾವನೆಗಳನ್ನು ಶಬ್ದ ರೂಪದಲ್ಲಿ ಅಭಿವ್ಯಕ್ತಗೊಳಿಸುವದು ಉಚ್ಚಾರ. ಹಕ್ಕಿಗಳ ಉಲಿಯ ಕೂಜನ, ಚಿಲಿಪಿಲಿ ಹಾಡು ಎಲ್ಲವೂ ಉಚ್ಚಾರವೇ ಆಗಿದೆ. ಗೇಯ ನಾದಗಳು, ಸಂಗೀತ ಸರಿಗಮದ ಮಧುರ ಸ್ವರಗಳು ಮನೋವಿಕಾಸಕ್ಕೆ ಕಾರಣವಾಗಬಲ್ಲವು. ಅಂತೆಯೇ ನಮ್ಮ ಮಾತುಗಳು ಕರ್ಕಶವೆನಿಸದೇ ಅಪಸ್ವರಗೊಳ್ಳದೇ ಸಭ್ಯತೆಯ ಎಲ್ಲೆಯಲ್ಲಿ ಶಿಷ್ಟಭಾವದಲ್ಲಿ ಶ್ರುತಿ ಹಿಡಿಯಬೇಕು. ಬದುಕೊಂದು ಭಕ್ತಿಗೀತೆಯಾಗಿ, ಭಾವಗೀತೆಯಾಗಿ, ಸಂಗೀತವಾಗಿ ಹರಿಯಬೇಕು; ಓಂಕಾರವಾಗಬೇಕು.

6. ಪ್ರಚಾರ : ಮನುಷ್ಯ ಸಂಘಜೀವಿ. ಸಮಸ್ತ ವಿಶ್ವವೇ ಕುಟುಂಬ. ಸಹಕಾರದ ಸಹಜೀವನದಿಂದ ಬದುಕು ಸ್ವರ್ಗವಾಗುವದು. ಕೆಲವರು ಸುಲಭವಾಗಿ ಜೀವನವನ್ನು ಅರ್ಥಮಾಡಿಕೊಳ್ಳುತ್ತಾರೆ. ಆದರೆ ಮತ್ತೆ ಕೆಲವರಿಗೆ ತಿಳಿಸಿ ಹೇಳಬೇಕಾಗುತ್ತದೆ. ತಾಯಿ-ತಂದೆಯರು ಮಕ್ಕಳಿಗೂ, ಗುರುವು ಶಿಷ್ಯರಿಗೂ, ತಿಳಿದವರು ತಿಳಿಯದವರಿಗೂ ಜೀವನ ಸಂಹಿತೆಯನ್ನು ಬೋಧಿಸಬೇಕಾಗುತ್ತದೆ. ಜನಹಿತಕ್ಕಾಗಿ ಮಂಗಳವನ್ನು ಬೋಧಿಸುವದು ಪ್ರಚಾರ.

ಸಾಕ್ಷಾತ್ಕಾರ

ಆರ್ಷಪರಂಪರೆಯಲ್ಲಿ ಗುರುವಿಗೆ ಮಹತ್ತರ ಸ್ಥಾನವಿತ್ತು. ಗುರುವಿನ ಮಾರ್ಗದರ್ಶನದಲ್ಲಿಯೇ ನಮ್ಮೆಲ್ಲ ಸಾಧನೆ ಕೈಗೂಡುವುದು. ಅಂತೆಯೇ ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳು ಯೋಗ್ಯ ಗುರುಗಳನ್ನರಸಿ ಹೋಗುತ್ತಿದ್ದರು. ಸಮರ್ಥ ಗುರುವಿನ ಮಾರ್ಗದರ್ಶನದಲ್ಲಿ ಜ್ಞಾನವನ್ನು ಪಡೆಯುತ್ತಿದ್ದರು.

ಅನ್ವೇಷಣೆ ಮನುಜ ಸಹಜ ಪ್ರವೃತ್ತಿ. ಬಾಹ್ಯ ಜಗತ್ತನ್ನು ಅರಿಯುವ ಮೊದಲು ನಮ್ಮನ್ನು ನಾವು ಅರಿಯಬೇಕು. ನಮ್ಮ ಮನಸ್ಸಿನೊಳಗೊಂದು ಸುಪ್ತ ಶಕ್ತಿಯಿದೆ. ಅದೇ ಆತ್ಮ. ಸಕಲ ಜೀವಿಗಳ ಅರಿವಿಗೆ ಕಾರಣವಾದ ನಿಜವಾದ ಗುರುವು ಇದಾಗಿದೆ. ಇದರ ಸಾಕ್ಷಾತ್ಕಾರದಿಂದ ನಮಗೆ ನಿಜವಾದ ಜ್ಞಾನವಾಗುವದು. ನಾವು ಯಾವುದರನ್ನು ಕುರಿತು ತನ್ಮಯವಾಗಿ ಧ್ಯಾನಿಸುತ್ತೇವೆಯೋ ನಮಗೆ ಅದರ ಸತ್ಯ ದರ್ಶನವಾಗುವದು. ಸಪ್ತ ಮರ್ಯಾದೆಗಳ ಅನಾವರಣದಿಂದ ನಮಗೆ ಆದರ್ಶ ಜೀವನದ ಸಾಕ್ಷಾತ್ಕಾರವಾಗುವದು.

ಒಂದು ಮಾಸ ಜಲೋಪವಾಸ ಮತ್ತು ಕಠೋರ ತಪಸ್ಸು

ಶ್ರೀ ವಾಸುದೇವಾನಂದ ಟೇಂಬೆ ಸ್ವಾಮಿ ದತ್ತಭಕ್ತನ ಭಕ್ತ ದೈವರಾತರಿಗೆ ವೈದಿಕ ದತ್ತಾತ್ರೇಯ ತತ್ವಗಳ ಕುರಿತಾದ ಗ್ರಂಥವನ್ನು ರಚಿಸಬೇಕೆಂಬ ಮನಸ್ಸಾಯಿತು. ಅಂತೆಯೇ ಭೀಮಾನದಿ ತೀರದಲ್ಲಿರುವ ದತ್ತಾತ್ರೇಯನ ದಿವ್ಯ ಸಾನ್ನಿಧ್ಯದಲ್ಲಿ ಒಂದು ತಿಂಗಳ ಕಾಲ ಉಪವಾಸ ವ್ರತದೊಂದಿಗೆ ತಪಸ್ಸು ಮಾಡಬೇಕೆಂಬ ಹಂಬಲದಿಂದ ಶ್ರೀ ಕ್ಷೇತ್ರ ಗಾಣಗಾಪುರಕ್ಕೆ ತೆರಳಿದರು. ಈ ಪವಿತ್ರ ಸ್ಥಳವು ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲೂಕಿನಲ್ಲಿದೆ. ಇಲ್ಲಿ ಭೀಮಾ ನದಿಯು ಹರಿಯುತ್ತಿದ್ದು ಅದರ ದಂಡೆಯ ಮೇಲೆ ದತ್ತ ಮಂದಿರವಿದೆ. ಇದು ಪೂರ್ವಾಭಿಮುಖವಾಗಿದ್ದು ಮಂದಿರದ ಒಳಗೆ ದತ್ತಾತ್ರೇಯನ ಮೂರ್ತಿಯಾಗಲಿ, ಪಾದುಕೆಗಳಾಗಲಿ ಇರುವದಿಲ್ಲ. ಕೇವಲ ಪೀಠ ಮಾತ್ರವಿದ್ದು ಇದಕ್ಕೆ "ನಿರ್ಗುಣ ಪಾದುಕಾ" ಎಂದು ಕರೆಯಲಾಗುತ್ತದೆ. ವಾಡಿಕೆಯಲ್ಲಿ ಇದನ್ನು "ದತ್ತಪೀಠ" ಎನ್ನುತ್ತಾರೆ. ಇದು ನಿರ್ಗುಣೋಪಾಸನೆಯ ಪ್ರತೀಕವಾಗಿದೆ.

ಕ್ರಿ.ಶ. 1929 ವಿಭವ ಸಂವತ್ಸರ ಮಾಘ ಕೃಷ್ಣ ನವಮಿಯಿಂದ ದೈವರಾತರು ಒಂದು ಮಾಸ ಉಪವಾಸ ವ್ರತಕ್ಕೆ ಪೂರ್ವಭಾವಿಯಾಗಿ ಎರಡು ವಾರಕಾಲ ಹಾಲು, ತುಪ್ಪ, ಮೊಸರುಗಳಿಂದ ಯುಕ್ತವಾದ ಅನ್ನಾಹಾರ ಸೇವನೆ ಪ್ರಾರಂಭಿಸಿ ಫಾಲ್ಗುಣ ಶುಕ್ಲ ಸಪ್ತಮಿಗೆ ನಿಲುಗಡೆ ಮಾಡಿದರು. ಅನಂತರ ಫಾಲ್ಗುಣ ಶುಕ್ಲ ಅಷ್ಟಮಿಯಿಂದ ಕೇವಲ ನೀರನ್ನು ಮಾತ್ರ ಸೇವಿಸುತ್ತ ತಪಸ್ಸನ್ನು ಪ್ರಾರಂಭಿಸಿದರು. ಒಂದು ತಿಂಗಳ ಕಾಲ ಆಚರಿಸಿದ ಜಲೋಪವಾಸದ ಪರಿಣಾಮವಾಗಿ ದೈವರಾತರ ಪರಿಪುಷ್ಟ ದೇಹಸೌಷ್ಠವ ಸೊರಗಿತು. ಆಹಾರವಿಲ್ಲದೆ ತನುಶಕ್ತಿ ಕರಗಿ ಸಾವರಸಿ ನಡೆಯುವಂತಾಗಿತ್ತು. ಹೀಗೆ ಒಂದು ಮಾಸ ನಿರಶನವಾಸ ಪೂರಯಿಸಿದ ದೈವರಾತರು ಮೊದಲ ಮೂರು ದಿನಗಳ ಕಾಲ ಕೇವಲ ಹಣ್ಣಿನರಸ ಮತ್ತು ನಂತರ ನಾಲ್ಕು ದಿನಗಳು ಸ್ವಲ್ಪ ಸ್ವಲ್ಪವಾಗಿ ಹಾಲು, ಹಣ್ಣಿನ ಸೇವನೆ ಮಾಡಿದರು. ಈ ರೀತಿ ಏಳು ದಿನಗಳನ್ನು ಕಳೆದು ಮಿತವಾದ ಪ್ರಮಾಣದ ಏರಿಕೆ ಕ್ರಮದಲ್ಲಿ ಅನ್ನಾಹಾರ ಪ್ರಾರಂಭಿಸಿ ಮಾಮೂಲ ಮೊತ್ತಕ್ಕೆ ಹೊಂದಿಸಿಕೊಂಡರು. ಉಪವಾಸ ಆರಂಭಿಸುವಾಗ ಆಹಾರವನ್ನು ಕಡಿಮೆಗೊಳಿಸುತ್ತ ಯಾವ ಇಳಿಕೆಯ ಕ್ರಮದಲ್ಲಿ ನಿಲುಗಡೆ ಮಾಡಲಾಗುವದೋ ಅದೇ ವಿಧಾನದಿಂದ ಉಪವಾಸದ ಅಂತ್ಯದಲ್ಲಿಯೂ ಸಹ ಪುನಃ ಆಹಾರ ಸೇವನೆ ಮಾಡುವಾಗ ಸ್ವಲ್ಪ ಸ್ವಲ್ಪವಾಗಿ ಏರಿಕೆ ಕ್ರಮದಲ್ಲಿ ಪೂರಕವಾದ ನಿಯಮ ಪಾಲಿಸಬೇಕು. ಇದು ಉಪವಾಸ ಆಚರಣೆಯ ಶಾಸ್ತ್ರೀಯ ಕ್ರಮವಾಗಿದೆ. ಈ ನಿಯಮ ಅವಗಣನೆಯಾದಾಗ ಅಪಾಯವಷ್ಟೇ ಅಲ್ಲದೆ ಪ್ರಾಣಾಪಾಯವೂ ಸಂಭವಿಸಬಹುದಾದ ಸಾಧ್ಯತೆಯಿರುತ್ತದೆ. ತೀವ್ರವಾದ ಹಸಿವಿನ ಬಳಲಿಕೆಯಲ್ಲಿ ದೇಹವು ಮತ್ತು ಮನಸ್ಸು ಬಹುವಾಗಿ ಕಂಗೆಟ್ಟು ಎಷ್ಟು ತಿಂದರೂ ತಣಿಯದ

ಸ್ಥಿತಿ ಉಂಟಾಗಿ ಸೂಕ್ಷ್ಮವಾಗಿರುತ್ತದೆ. ಅಂತೆಯೇ ಈ ಸಮಯದಲ್ಲಿ ಬಹಳ ಎಚ್ಚರಿಕೆಯಿಂದ ತನುಮನಗಳ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗುವದು.

ದೈವರಾತರು ಭೀಮಾನದೀ ತೀರದಲ್ಲಿ ತಪಸ್ಸು ಮಾಡುತ್ತಿರುವಾಗ ಅವರ ಗುರುಗಳಾದ ವಾಸಿಷ್ಠ ಗಣಪತಿಮುನಿಗಳು ಅರುಣಾಚಲದಿಂದ ಗೋಕರ್ಣಕ್ಕೆ ಆಗಮಿಸಿದರು. ಅಲ್ಲಿ ತಮ್ಮ ಶಿಷ್ಯ ದೈವರಾತರ ಕಡಲತೀರದ ಆಶ್ರಮಕ್ಕೆ ಬಂದಾಗ ಶ್ರದ್ಧಾದೇವಿಯು ಅವರನ್ನು ಭಕ್ತಿಯಿಂದ ಸ್ವಾಗತಿಸಿ ಉಪಚರಿಸಿದಳು. ಹೊರಗೆ ಅರ್ಣವದ ಘೋಷ; ಒಳಗೆ ವಿದ್ಯಾರ್ಥಿಗಳ ವೇದಘೋಷ. ಎಲ್ಲೆಲ್ಲೂ ಋಷಿ ಜೀವನದ ವಾತಾವರಣ. ಗಣಪತಿಮುನಿಗಳಿಗೆ ಬಹಳ ಸಂತೋಷವಾಯಿತು. ಅವರು ಆಶ್ರಮದ ಮುಖಶಾಲೆಯ ಚಿಟ್ಟೆಯ ಮೇಲೆ ಆಸೀನರಾಗಿ ದಣಿವು ತಣಿಸಿಕೊಳ್ಳುತ್ತಿರುವಂತೆ ಶ್ರದ್ಧಾದೇವಿಯು ಅವರಿಗೆ ಹಾಲು-ಹಣ್ಣುಗಳನ್ನು ಅರ್ಪಿಸಿ ನಮಸ್ಕರಿಸಿದಳು. ಅದಾಗಲೇ ಅರುಣಾಚಲದಲ್ಲಿರುವಾಗ ಅವಳಿಗೆ ಗಣಪತಿ ಮುನಿಗಳ ಆತ್ಮೀಯಭಾವದ ಪರಿಚಯವಾಗಿತ್ತು. ಅಂತೆಯೇ ಶ್ರದ್ಧಾದೇವಿಯು ಕುಶಲ ವಿಚಾರಿಸಿದ ಬಳಿಕ ದೈವರಾತರು ಭೀಮಾನದೀತೀರದ ಆತ್ರೇಯ ಸನ್ನಿಧಿಯಲ್ಲಿ ಅನ್ನಾಹಾರ ತೊರೆದು ತಪೋನಿರತವಾಗಿರುವ ವಿಷಯವನ್ನು ಅರುಹಿದಳು. ಅದನ್ನು ಕೇಳಿ ಕೋಮಲ ಮನಸ್ಸಿನ ಗಣಪತಿ ಮುನಿಗಳಿಗೆ ದೈವರಾತರ ಬಗೆಗೆ ಬಹಳ ಆತಂಕವಾಯಿತು. ಅವರು ದೈವರಾತರನ್ನು ಬಹಳ ಪ್ರೀತಿಸುತ್ತಿದ್ದರು. ಅಂತೆಯೇ ಅಂದು ಇರುಳು ಕಳೆದು ಬೆಳಗಾಗುತ್ತಿರುವಂತೆ ಒಂದು ಪತ್ರವನ್ನು ಬರೆದರು. ಈ ಪತ್ರದ ಶೈಲಿಯು ಬಹು ಸುಂದರವಾಗಿದ್ದು ಗುರು-ಶಿಷ್ಯರ ನಡುವಿನ ಅನ್ಯೋನ್ಯ ಭಾವವನ್ನು, ಪ್ರೀತಿ, ಮಮಕಾರಗಳ ಅವರ ಆದರ್ಶ ಸಂಬಂಧವನ್ನು ನಮ್ಮೆದುರು ಬಿಚ್ಚಿಡುತ್ತದೆ.

ತಪೋನಿರತ ದೈವರಾತರಿಗೆ ಗುರುವರ್ಯ ವಾಸಿಷ್ಠಗಣಪತಿಮುನಿಗಳಿಂದ ಪತ್ರಲೇಖನ

ಫಾಲ್ಗುಣ ಶುಕ್ಲ ಅಷ್ಟಮಿ 18-03-29

ಮಗು ದೈವರಾತ,

ನಾನು ನಿನ್ನೆ ಗೋಕರ್ಣಕ್ಕೆ ಬಂದಿರುತ್ತೇನೆ. ನೀನು ಪವಿತ್ರ ಭೀಮಾನದೀ ತೀರದಲ್ಲಿ ಉಗ್ರ ತಪಸ್ಸನ್ನಾಚರಿಸುತ್ತಿರುವ ವಿಷಯ ತಿಳಿಯಿತು. ತುಂಬಾ ಸಂತೋಷವಾಯಿತು. ನಿನ್ನಲ್ಲಿ ಅಂತರ್ಗತವಾದ ಸಹಜಶಕ್ತಿ, ಅನೇಕ ಜನ್ಮಗಳ ಸಂಪ್ರಾಪ್ತ ಅರಿವು, ಪ್ರಾಚೀನ ಋಷಿ ಪರಂಪರೆಯ ಅಪಾರವಾದ ಶ್ರದ್ಧೆ ಈ ಮೂರೂ ನಿನ್ನಲ್ಲಿರುವ ತಪಸ್ಸಿನ ಉತ್ಸಾಹವನ್ನು ಹೆಚ್ಚಿಸಲಿ. ನಾನು ಸುಮಾರು ಮೂರು ತಿಂಗಳಕಾಲ ಈ ಪ್ರದೇಶದಲ್ಲಿ ನೆಲೆಸಿರುತ್ತೇನೆ. ವಾಸ್ತವಿಕವಾಗಿ ನಿನ್ನನ್ನು ನೋಡಲು ನನ್ನ ಮನಸ್ಸು ಬಹಳ ಕಾತರವಾಗಿದೆ. ಆದರೂ ತೀವ್ರವಾದ ತಪಸ್ಸಿನಲ್ಲಿ ತೊಡಗಿರುವ ನಿನ್ನನ್ನು ಇಲ್ಲಿಗೆ ಬರುವಂತೆ ಹೇಳಲು ಮನಸ್ಸಾಗುತ್ತಿಲ್ಲ. ನೀನು ನನಗೆ ಅತ್ಯಂತ ಪ್ರಿಯನಾದವ. ಆದರೆ ಅದಕ್ಕಿಂತಲೂ ಪ್ರಿಯವಾದದ್ದು ನಿನ್ನ ತಪಸ್ಸು. ನಾನು ಗೋಕರ್ಣಕ್ಕೆ ಬಂದಿರುವದು ನಿನ್ನ ತಪಸ್ಸಿಗೆ ಕೊಂಚವೂ ಬಾಧಕವಾಗದಿರಲಿ. ಇದು ನನ್ನ ಪ್ರೀತಿಯ ಆದೇಶ. ತ್ವರಿತವಾಗಿ ಈ ಪತ್ರಕ್ಕೆ ಉತ್ತರ ಬರೆಯಬೇಕು. ಒಮ್ಮೆ ಗೋಕರ್ಣಕ್ಕೆ ಬರುವದರಿಂದಾಗಿ ನಿನ್ನ ತಪಸ್ಸಿಗೆ ಭಂಗ ಬರುವುದಿಲ್ಲವೆಂದಾದರೆ ನನ್ನ ಹೃದಯವು ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತದೆ. ನಿನ್ನ ಸಂಕಲ್ಪಕ್ಕೆ ಇದು ಬಾಧಕವೆಂದಾದರೆ ನಿಶ್ಚಿತವಾಗಿಯೂ ಇಷ್ಟವಾದ ತಪಸ್ಸಿನಿಂದ ನಿವೃತ್ತಿಬೇಡ. ನಾನು

ಇಲ್ಲಿಂದ ಹಿಂದಿರುಗುವಾಗ ನಿನ್ನನ್ನು ಕಂಡೇ ಮಹರ್ಷಿ ರಮಣರ ಆಶ್ರಮಕ್ಕೆ ಹೋಗುತ್ತೇನೆ. ಕೆಲವು ಆತ್ಮೀಯರು ನನ್ನನ್ನು ಸದಾ ಇಲ್ಲಿಯೇ ಉಳಿಸಿಕೊಳ್ಳುವ ಆಶಯದಲ್ಲಿದ್ದಾರೆ. ಅವರ ಆಶಯವು ಸಫಲವಾದರೆ ನಮ್ಮಿರ್ವರ ಸಮಾಗಮವು ಭವಿಷ್ಯದಲ್ಲಿ ಇಲ್ಲಯೇ ಆದೀತು. ಶ್ರದ್ಧಾ ಹಾಗೂ ಸೋಮಶ್ರವರೊಂದಿಗೆ ನಿನ್ನ ಪ್ರೀತಿಯ ಗೋವುಗಳು ಕುಶಲವಾಗಿವೆ.

ಇತಿ ನಿನ್ನ ತಪಃ ಸಂಪದಾಕಾಂಕ್ಷಿ

ವಾಸಿಷ್ಠ ಗಣಪತಿ

ದೈವರಾತರಿಂದ ಉತ್ತರ ಬಂದಾಗ ಗಣಪತಿಮುನಿಗಳು ಬರೆದ ಇನ್ನೊಂದು ಪತ್ರ.

ಶುಕ್ಲ ಸಂವತ್ಸರ ಚೈತ್ರ ಶುಕ್ಲ ಸಪ್ತಮಿ ಮಂಗಳವಾರ

ಮಗು ದೈವರಾತ,

ಅತ್ಯಂತ ದಾರುಣವಾದ ತಪಸ್ಸಿನಲ್ಲಿ ನಿರತನಾಗಿರುವ ನಿನ್ನ ಪತ್ರ ತಲುಪಿ ಅಭಿಪ್ರಾಯವಾಯಿತು. ನಾನು ಇಷ್ಟನ್ನು ಮಾತ್ರ ಸೂಚಿಸಬಲ್ಲೆ. ಯೋಗಿಯಾದ ನಿನಗೆ ಅನ್ನಾಹಾರವಿಲ್ಲದ ತಪಸ್ಸು ಬೇಡ. ಸಮಸ್ತ ಬ್ರಾಹ್ಮಣವೃಂದವೇ ದೀನಸ್ಥಿತಿಯನ್ನು ಹೊಂದಿರುವಾಗ (ಆರ್ಷ ವ್ಯಕ್ತಿತ್ವದ ದಿವ್ಯ ತೇಜಸ್ಸನ್ನು ಕಳೆದುಕೊಂಡಿರುವಾಗ) ನಿನ್ನಂತವರೇ ಭವಿಷ್ಯದ ಆಶಾಜ್ಯೋತಿಗಳು. ಕತ್ತಲೆಯಾಗಿ ಕಾಡುವ ವಿಘ್ನಗಳಿಂದ ನಮ್ಮ ತಪಸ್ಸು ಆಕ್ರಾಂತವಾಗಿದೆ. ಆದರೂ ಎಲ್ಲ ಕಾಲದಲ್ಲಿಯೂ ತಪಸ್ಸಿನಿಂದಲೇ ವ್ಯಕ್ತಿತ್ವವು ಪ್ರಕಾಶಿಸುತ್ತದೆ. ತಪಸ್ಸಿನಿಂದ ಮಂಗಳವಾಗಲಿ.

ತೊಂದರೆಗಳು ಬರುವುದು ಸಹಜ. ಹಾಗೆ ಜ್ವರವು ಬಂದಿದ್ದು ಸೀತಾರಾಮನ ಚಿಕಿತ್ಸೆಯಿಂದ ಅದು ದೂರವಾಯಿತು. ಕಣ್ಣಿನ ತೊಂದರೆಯೂ ಸದ್ಯ ದೂರವಾಗಿದೆ. ಆದರೆ ಸರ್ಪಸುತ್ತು ಕಾಣಿಸಿಕೊಂಡಿದೆ. ಕ್ಷುದ್ರವಾದ ಈ ರೋಗವೂ ಬೇಗನೇ ನಿವಾರಣೆಯಾದೀತು. ರಕ್ಷಿಸುವುದಕ್ಕೆ ಭಗವಾನ್ ಇಂದ್ರನಿದ್ದಾನೆ. ಕ್ರಿಯಾ ವೀರನೇ! ನಿನ್ನ ತಪಸ್ಸು ಸಂಪನ್ನವಾಗಲಿ.. ಇಚ್ಛೆಗಳೆಲ್ಲ ಈಡೇರಲಿ.

ಸದಾ ನಿನ್ನ ಹಿತಾಭಿಲಾಷಿ

ವಾಸಿಷ್ಠ

ಉಪವಾಸದ ತೀವ್ರತೆಯಿಂದ ಬಳಲಿರುವ ತಮ್ಮ ದೈಹಿಕ ಶಕ್ತಿಯು ಸಹಜ ಸ್ಥಿತಿಗೆ ಮರಳುತ್ತಿದ್ದಂತೆ ದೈವರಾತರು ಗಾಣಾಗಾಪುರದಿಂದ ಗೋಕರ್ಣಕ್ಕೆ ಬಂದರು. ಈ ಮೊದಲೇ ಗಣಪತಿ ಮುನಿಗಳು ಕಡಲತೀರದ ಆಶ್ರಮಕ್ಕೆ ಆಗಮಿಸಿರುವ ಕಾರಣ ದೈವರಾತರು ತಮ್ಮ ತಪಸ್ಸನ್ನು ಒಂದು ತಿಂಗಳ ಅವಧಿಗೆ ಪೂರ್ಣಗೊಳಿಸಿ ಗುರುವರ್ಯರನ್ನು ಕಾಣುವ ಹಂಬಲದಿಂದ ಆಶ್ರಮ ತಲುಪಿದರು. ಆಶ್ರಮವನ್ನು ಪ್ರವೇಶಿಸುತ್ತಿದ್ದಂತೆ ಗಣಪತಿ ಮುನಿಗಳ ಚರಣಗಳಿಗೆರಗಿ ನಮಸ್ಕರಿಸಿ ಕುಶಲ ವಿಚಾರಿಸಿದರು. ಅನಂತರ ತಮ್ಮ ಒಂದು ತಿಂಗಳ ಅನಶನ ವ್ರತಾಚರಣೆಯ ಅನುಭವವನ್ನು ನಿವೇದಿಸಿದರು. ಶಿಷ್ಯನ ಅನಶನ ವ್ರತದಿಂದ ಬಹುವಾಗಿ ಆತಂಕಗೊಂಡಿದ್ದ ಗಣಪತಿ ಮುನಿಗಳಿಗೆ ಆತ ಯಶಸ್ವಿಯಾಗಿ ಅದನ್ನು ಪೂರಯಿಸಿ ಬಂದಾಗ ತುಂಬಾ ಸಂತೋಷವಾಯಿತು.

ಮೂಲ-ಯಜುರ್ವೇದ ಸಂಹಿತಾ

ಕೃಷ್ಣಯಜುರ್ವೇದದ ಪರಿಷ್ಕರಣೆ – ಸಂಹಿತೆ, ಬ್ರಾಹ್ಮಣ ಮತ್ತು ಆರಣ್ಯಕಗಳ ವಿಂಗಡಣೆಯ ಮೂಲಕ ಮೌಲಿಕ "ಮೂಲ–ಯಜುರ್ವೇದ ಸಂಹಿತಾ" ಕೃತಿಯ ಸಂಪಾದನೆ. ಇದು ದೈವರಾತರ ಐತಿಹಾಸಿಕ ಸಾಧನೆ.

ಅವ್ಯವಸ್ಥಿತವಾಗಿರುವ ಕೃಷ್ಣಯಜುರ್ವೇದವನ್ನು ಉಚಿತವಾದ ರೀತಿಯಲ್ಲಿ ಪರಿಷ್ಕರಿಸಿ ಸಂಪನ್ನಗೊಳಿಸಬೇಕೆಂಬುದು ದೈವರಾತರ ಬಹುದಿನಗಳ ಸಂಕಲ್ಪವಾಗಿತ್ತು. ಆದ್ದರಿಂದ ಅವರು ತಮ್ಮ ಯಜುರ್ವೇದ ಗುರುಗಳಾದ ಮಹಾಬಲೇಶ್ವರ ಭಟ್ಟ ಗಾಯತ್ರಿಯವರೊಂದಿಗೆ ಹಾಗೂ ಸುಬ್ಬಣ್ಣ ಭಟ್ಟ ಚಿತ್ರಗೆಮಠ ಮುಂತಾದ ಇತರ ವಿದ್ವಾಂಸರ ಜತೆಗೆ ಕೃಷ್ಣಯಜುರ್ವೇದ ಸಂಹಿತೆಯ ಪರಿಷ್ಕರಿಸುವ ಕುರಿತು ವಿಷಯವನ್ನು ಪ್ರಸ್ತಾಪಿಸಿದರು. "ಕೃಷ್ಣ ಯಜುರ್ವೇದ ಸಂಹಿತೆಯಲ್ಲಿ ಬ್ರಾಹ್ಮಣ ಮತ್ತು ಆರಣ್ಯಕಗಳು ಮಿಶ್ರವಾಗಿದ್ದು ಅವುಗಳನ್ನು ಬೇರ್ಪಡಿಸಿ ಶುದ್ಧಗೊಳಿಸಬೇಕು. ಇದು ದೈವರಾತರ ಅಭಿಪ್ರಾಯವಾಗಿತ್ತು. ಇದನ್ನು ಕೇಳಿದ ವಿದ್ವಾಂಸರು ಪ್ರಸ್ತುತ ಯಜುರ್ವೇದ ಸಾರಸ್ವತ ಪಾಠಕ್ಕೆ "ಸಂಸ್ಕಾರ ರತ್ನಮಾಲಾ" ಗ್ರಂಥದಲ್ಲಿ ಹೇಳಲಾದ ಪೌರಾಣಿಕ ವೃತ್ತಾಂತವು ಪ್ರಮಾಣವೆಂದು ವಾದಿಸಿದರು. ಅದಕ್ಕೆ ದೈವರಾತರು ಬೌಧಾಯನ, ಆಪಸ್ತಂಭ ಮತ್ತು ಹಿರಣ್ಯಕೇಶೀ ಗ್ರಹ್ಯಸೂತ್ರಗಳ ಪ್ರಮಾಣವನ್ನು ಆಧಾರವಾಗಿ ನೀಡುತ್ತ "ಸಂಸ್ಕಾರ ರತ್ನಮಾಲಾ" ಗ್ರಂಥದಲ್ಲಿ ತಿಳಿಸಿರುವ ಪೌರಾಣಿಕ ವೃತ್ತಾಂತವು ಸಮರ್ಪಕವಾದ ಪ್ರಮಾಣವಲ್ಲ" ಎಂದು ತಮ್ಮ ವಾದದ ಸಮರ್ಥನೆ ಮಾಡಿದರು.

ವಾಸ್ತವಿಕವಾಗಿ ಎಲ್ಲರಿಗೂ ಸತ್ಯದ ಅರಿವಾಗಿದ್ದರೂ ತಮಗಿಂತ ಕಿರಿಯನಾದ ದೈವರಾತರ ಅಭಿಪ್ರಾಯವನ್ನು ಯಾರೊಬ್ಬರೂ ಒಪ್ಪುವದಕ್ಕೆ ಸಿದ್ಧವಿರಲಿಲ್ಲ. ಅಂತೆಯೇ ಮಹಾಬಲೇಶ್ವರ ಭಟ್ಟ ಗಾಯತ್ರಿಯವರು "ನನ್ನ ಹತ್ತಿರ ಯಜುರ್ವೇದ ಅಧ್ಯಯನ ಮಾಡಿ ಈಗ ನನಗೇ ಅದರ ಬಗೆಗೆ ತಿಳಿಯ ಹೇಳುತ್ತಿರುವೆಯಲ್ಲ!" ಎಂದು ಛೇಡಿಸಿದರು. ಆಗ ದೈವರಾತರು ಶಾಂತಚಿತ್ತದಿಂದ "ನಾನು ನಿಮ್ಮಲ್ಲಿ ಯಾರೊಬ್ಬರ ವೈದಿಕ ವಿದ್ವತ್ತೆಯನ್ನು ಎಳ್ಳಷ್ಟೂ ಪ್ರಶ್ನಿಸುತ್ತಿಲ್ಲ; ನಿಮ್ಮಲ್ಲಿ ನನಗೆ ಗೌರವವಿರುವರಿಂದಲೇ ನಿಮ್ಮೆಲ್ಲರ ಸಹಕಾರದಿಂದ ಈ ಕಾರ್ಯವನ್ನು ಸಂಪನ್ನಗೊಳಿಸಬೇಕೆಂಬುದೇ ನನ್ನ ಅಭಿಲಾಷೆಯಾಗಿದೆ" ಎಂದರು. ಇದರಿಂದ ಯಜುರ್ವೇದ ವಿದ್ವಾಂಸರಲ್ಲಿ ತಾವು ಅನುಸರಿಸಿಕೊಂಡು ಬಂದಿರುವ ಪದ್ಧತಿಯು ಮೌಲ್ಯ ಕಳೆದುಕೊಳ್ಳುತ್ತಿರುವ ಅನುಭವವಾಯಿತು. ಅಂತೆಯೇ ಅವರು ತಮ್ಮ ತಮ್ಮಲ್ಲಿ ಚರ್ಚಿಸಿ ವಿಷಯವನ್ನು ವಾಸಿಷ್ಠ ಗಣಪತಿಮುನಿಗಳ ಬಳಿಗೆ ಒಯ್ಯಲು ನಿರ್ಧರಿಸಿದರು. ಈ ವೇಳೆಗೆ ಅವರು ದೈವರಾತರ ಆಶ್ರಮದಲ್ಲಿ ತಂಗಿರುವದರಿಂದ ಯಜುರ್ವೇದ ವಿದ್ವಾಂಸರು ಅಲ್ಲಿಗೆ ಆಗಮಿಸಿ ಗಣಪತಿ ಮುನಿಗಳ ಸಾನ್ನಿಧ್ಯದಲ್ಲಿ ದೈವರಾತರೊಂದಿಗೆ ಯಜುರ್ವೇದ ಸಂಹಿತೆಯ ಪರಿಷ್ಕರಣೆಯ ವಿಚಾರವಾಗಿ ಚರ್ಚಿಸಿದರು. ಗಣಪತಿ ಮುನಿಗಳು ಎರಡೂ ಕಡೆಯ ವಾದವನ್ನು ಆಲಿಸಿ ಈಗಿರುವ ಕೃಷ್ಣಯಜುರ್ವೇದವು ಅವ್ಯವಸ್ಥಿತವೂ ದೋಷಪೂರ್ಣವೂ ಆಗಿದ್ದು ಅದನ್ನು ಮೂಲರೂಪದಲ್ಲಿರುವಂತೆ ಕ್ರಮಬದ್ಧವಾದ ರೀತಿಯಲ್ಲಿ ಸಂಕಲನ ಮಾಡುವುದು ಉಚಿತವೆಂದು ಅಭಿಪ್ರಾಯಪಟ್ಟರು. ಇದರಿಂದ ವಿಷಯದ ಅರಿವಾದ ವಿದ್ವಾಂಸರು ಯಜುರ್ವೇದ ಸಂಹಿತೆಯ ಪರಿಷ್ಕರಣೆಗೆ ತಮ್ಮ ಒಮ್ಮತದ ಒಪ್ಪಿಗೆಯನ್ನು ಸೂಚಿಸಿದರು.

ಅನಂತರ ದೈವರಾತರು ತಮ್ಮ ಸಂಕಲ್ಪದಂತೆ ಗೋಕರ್ಣದ ಯಜುರ್ವೇದ ವಿದ್ವಾಂಸರ ಸಹಕಾರದೊಂದಿಗೆ ಬೌಧಾಯನ, ಆಪಸ್ತಂಭ ಮತ್ತು ಹಿರಣ್ಯಕೇಶಿ ಗೃಹ್ಯ ಸೂತ್ರಗಳನ್ನು ಆಧಾರವಾಗಿಸಿಕೊಂಡು ಬ್ರಾಹ್ಮಣ ಮತ್ತು ಆರಣ್ಯಕಗಳಲ್ಲಿ ಸೇರ್ಪಡೆಯಾಗಿದ್ದ ಸಂಹಿತೆಯ ಸೂಕ್ತಗಳನ್ನು ಬೇರ್ಪಡಿಸಿ ಉಚಿತ ಸ್ಥಾನದಲ್ಲಿರಿಸಿ "ಮೂಲ-ಯಜುರ್ವೇದ ಸಂಹಿತಾ" ಎಂದು ಹೆಸರಿಸಿದರು. ಇದು ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ ಮತ್ತು ಸ್ವಾಯಂಭುವ ಎಂಬ ಐದು ಕಾಂಡಗಳಿಂದ ಸಂಯೋಜಿತವಾಗಿದೆ. ಈ ಗ್ರಂಥವು ಮುಂದೆ 1973 ರಲ್ಲಿ ಬನಾರಸ ಹಿಂದು ವಿಶ್ವವಿದ್ಯಾಲಯದಿಂದ ಪ್ರಕಾಶಿಸಲ್ಪಟ್ಟಿತು.

ಈ ಮೊದಲೇ ದೈವರಾತರು ವೇದ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ ಇವುಗಳ ಬಗೆಗೆ ವಿವರವಾದ ಪರಿಚಯವನ್ನೊಳಗೊಂಡ "ವೇದ ವೇದಿಕಾ" ಎಂಬ ಗ್ರಂಥವೊಂದನ್ನು ರಚಿಸಿದ್ದರು. ಇದರಲ್ಲಿ ವೇದಮಂತ್ರಗಳಿಗೂ ಹಾಗೂ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳಿಗೂ ಇರುವ ವ್ಯತ್ಯಾಸ ಭೇದಗಳ ಕುರಿತು ಚರ್ಚಿಸಿ ತಮ್ಮ ವಿಚಾರವನ್ನು ಅಭಿವ್ಯಕ್ತಗೊಳಿಸಿದ್ದರು. ಈ ಗ್ರಂಥವನ್ನು ನೋಡಿದ ಪಂಡಿತ್ ವಿ.ಎಸ್.ಸಾತವಳೇಕರರು ಇದನ್ನು ತಮ್ಮ ಕೃಷ್ಣಯಜುರ್ವೇದ ಗ್ರಂಥದೊಂದಿಗೆ ಮಹರಾಷ್ಟ್ರದ ಪಾರಡಿಯಲ್ಲಿ 1957 ರಲ್ಲಿ ಪ್ರಕಟಿಸಿದರು. ಆದರೆ ದೈವರಾತರಿಗೆ "ವೇದವೇದಿಕಾ" ಗ್ರಂಥವು ಮೂಲ-ಯಜುರ್ವೇದ ಸಂಹಿತೆಗೆ ಭೂಮಿಕೆಯಾಗಿ ಪ್ರಕಟಿಸಬೇಕೆಂಬ ಹಂಬಲವಿದ್ದು ಅದು ಈಡೇರಲಿಲ್ಲ.

"ವ್ಯಾಸರು ವೇದವನ್ನು ವಿಭಾಗ ಮಾಡಿದರು ಎಂಬುದು ಪೌರಾಣಿಕವಾಗಿ ಬಂದ ನಂಬಿಗೆಯಾಗಿದೆ. ಆದರೆ ಇದು ಸತ್ಯವಲ್ಲ. ಋಗ್ವೇದಾದಿ ನಾಲ್ಕೂ ವೇದಗಳ ಪರಂಪರೆಯಲ್ಲಿ ದಾಖಲಿತವಾಗಿರುವ ಶಾಕಲ, ಕಾಣ್ವ, ಮಾಧ್ಯಂದಿನ, ತೈತ್ತಿರೀಯ, ಮೈತ್ರಾಯಣೀಯ, ರಾಣಾಯನೀಯ, ಕೌಥುಮೀಯ ಮತ್ತು ಜೈಮಿನೀಯ ಮುಂತಾದವರ ಸಾಲಿನಲ್ಲಿ ವ್ಯಾಸರ ಹೆಸರಿನ ಉಲ್ಲೇಖವಿಲ್ಲ. ಹಾಗೊಮ್ಮೆ ವ್ಯಾಸರೇ ವೇದವನ್ನು ವಿಭಾಗಿಸಿದರು ಎಂದಾದರೆ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳ ಕಾಲಕ್ಕೆ ಮೊದಲೇ ಅವರು ಇದ್ದರೆಂದು ಪರಿಗಣಿಸಬೇಕಾಗುತ್ತದೆ. ಋಗ್ವೇದ, ಯಜುರ್ವೇದ, ಸಾಮವೇದದ ಮಂತ್ರದರ್ಶನಗಳೆಲ್ಲವೂ ಕೇವಲ ಒಂದೇ ಶತಮಾನದ ಅವಧಿಯಲ್ಲಿ ಆಗಿರದೇ ಸಾವಿರಾರು ವರ್ಷಗಳ ಅವಧಿಯಲ್ಲಿ ಆವಿರ್ಭವಿಸಲ್ಪಟ್ಟಿದ್ದು ಆಯಾ ಋಷಿ ಪರಂಪರೆಯಲ್ಲಿ ಒಂದೊಂದೂ ಒಂದೊಂದು ಶಾಖೆಯ ರೂಪದಲ್ಲಿ ಪ್ರತ್ಯೇಕವಾಗಿಯೇ ಕರ್ಣಪರಂಪರೆಯಲ್ಲಿ ರಕ್ಷಿಸಲ್ಪಟ್ಟಿತು. ಆದ್ದರಿಂದ ವೇದವನ್ನು ವ್ಯಾಸರು ವಿಭಾಗಿಸಿದರು ಎಂಬುದು ಬಾಲಿಶವೆನಿಸುತ್ತದೆ. ಹೀಗೆ ದೈವರಾತರು ವೈದಿಕ ವಿಚಾರಗಳ ಬಗೆಗೆ ಆಳವಾದ ವಿಮರ್ಶಕ ದೃಷ್ಟಿಯುಳ್ಳವರಾಗಿದ್ದು ಅದನ್ನು ಸೂಕ್ಷ್ಮವಾಗಿ ಅವಲೋಕಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತಿದ್ದರು.

ಕೃಷಿಯ ಅರಿವಿನ ಸರಳ ಬದುಕು

ಮಳೆಗಾಲ ಮುಗಿದು ಭತ್ತದ ಫಸಲು ಮಾಗಿ ಕೊಯಿಲಾಗುತ್ತಿರುವಂತೆ ಕಡಲ ಕಿನಾರೆಯ ರೈತರೆಲ್ಲ ತರಕಾರಿ ಬೆಳೆಯುವುದಕ್ಕಾಗಿ ತಮ್ಮ ಗದ್ದೆಯಲ್ಲಿ ಭೂಮಿಯನ್ನು ಅಗೆದು ಅನುವುಗೊಳಿಸುತ್ತಿದ್ದರು. ಅಂಗುಲ ಅಂಗುಲ ಜಾಗವನ್ನೂ ವ್ಯರ್ಥವಾಗಿ ಖಾಲಿಬಿಡದೆ ಬೆಳೆಯನ್ನು ಬೆಳೆಯುವದು ಇಲ್ಲಿಯ ರೈತರ ವಿಶೇಷತೆ. ಆಶ್ರಮಕ್ಕೆ ಹೊಂದಿಕೊಂಡು ನಾತಿದೂರದಲ್ಲಿ ಗದ್ದೆಯಿತ್ತು. ಇದು ವಿದ್ಯಾರ್ಥಿಗಳಿಗೆ

ಕೃಷಿಯ ಬದುಕಿನ ಪ್ರಾಥಮಿಕ ಪಾಠದ ಪ್ರತ್ಯಕ್ಷ ಅನುಭವ ತಾಣವಾಗಿತ್ತು. ಹರಿವೆ, ಬೆಂಡೆ, ತೊಂಡೆ, ಹೀರೆ, ಪಡವಲ, ಕಲ್ಲಂಗಡಿ, ಗೆಣಸು ಹೀಗೆ ಬಗೆ ಬಗೆಯ ತರಕಾರಿಗಳನ್ನು ಸ್ವತಃ ಶ್ರದ್ಧಾದೇವಿಯೇ ಬೆಳೆಸುತ್ತಿದ್ದಳು. ಸಸಿಮಡಿಗಳು, ಓಳಿಗಳು, ಪಾತಿಗಳು ಮತ್ತು ಅವುಗಳ ನಡುವಿನ ಕಾಲುದಾರಿಗಳು ಎಲ್ಲವೂ ಅಚ್ಚುಕಟ್ಟಾಗಿ ಇರುತ್ತಿದ್ದವು. ಹೀರೆ, ಪಡವಲ ಚಪ್ಪರಗಳ ಅಡಿಯಲ್ಲಿ ಮೂರಡಿ ಆಳದ ನೀರಿನ ಹೊಂಡಗಳನ್ನು ಅಲ್ಲಲ್ಲಿ ನಿರ್ಮಿಸಲಾಗುತ್ತಿತ್ತು. ಮಣ್ಣಿನ ಕೊಡಗಳಲ್ಲಿ ದಿನಾಲು ನಸುಕಿನಲ್ಲಿ ಸಸ್ಯಗಳಿಗೆ ನೀರೆರೆಯಲಾಗುತ್ತಿತ್ತು. ಕೃಷಿಯ ಪಾಠವನ್ನು ಇಲ್ಲಿ ಯಾರಿಗೆ ಯಾರೂ ಹೇಳಿಕೊಡುತ್ತಿರಲಿಲ್ಲ. ಹಿರಿಯರನ್ನು ನೋಡಿ ಕಿರಿಯರು ಮಾಡಿ ಕಲಿಯುತ್ತಿದ್ದರು. ಇದು ವಿದ್ಯಾರ್ಥಿಗಳಿಗೆ ಅನುಭವ ಜ್ಞಾನವಾಗಿರುತ್ತಿತ್ತು.

ಬಿಡುವಿನ ದಿನಗಳಲ್ಲಿ ದೈವರಾತರು ಬೆಳಗಿನ ವೇಳೆ ಆಸಕ್ತ ವಿದ್ಯಾರ್ಥಿಗಳಿಗೆ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಆಸನ, ನವಲಿ, ಧೌತಿ, ಬಸ್ತಿ, ನೇತಿ ಇತ್ಯಾದಿ ಹಠಯೋಗದ ಕ್ರಿಯೆಗಳನ್ನು ಹಾಗೂ ಪ್ರಾಣಾಯಾಮವನ್ನು ಕಲಿಸುತ್ತಿದ್ದರು. ಅದನ್ನು ಅವರು ದಿನಾಲು ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಅಭ್ಯಾಸ ಮಾಡುತ್ತಿದ್ದರು. ಆಶ್ರಮದ ಹೊರವಲಯದ ಒಂದು ಬದಿಯಲ್ಲಿ ವ್ಯಾಯಾಮ ಶಾಲೆಯಿದ್ದು ಅಲ್ಲಿ ಊರಿನ ಕೆಲವು ಯುವಕರು ಸುಂದರ ಅಂಗ ಸೌಷ್ಟವಕ್ಕಾಗಿ ವ್ಯಾಯಾಮ ಮಾಡಲು ಬರುತ್ತಿದ್ದರು.

ದೈವರಾತರ ವೇದವಿದ್ಯಾ ಗುರುಗಳಾದ ಕೃಷ್ಣಭಟ್ ಮ್ಯೆಯರರಿಗೆ ಶಿಷ್ಯನ ಮೇಲೆ ಬಹಳ ಅಕ್ಕರೆ; ಅದೇನೋ ಮಮಕಾರ. ಅಂತೆಯೇ ಅವರು ತಮ್ಮ ಮಕ್ಕಳಾದ ಯಜ್ಞದತ್ತ ಮತ್ತು ಹರಿಭಟ್ಟ ಇವರೊಂದಿಗೆ ತಾವು ನಡೆಸುತ್ತಿದ್ದ ವೇದಶಾಲೆಯ ಮಕ್ಕಳನ್ನೂ ಶಿಷ್ಯ ದೈವರಾತನ ಆಶ್ರಮಕ್ಕೆ ಕರೆತಂದು ಸ್ವತಃ ಋಗ್ವೇದದ ಪಾಠ ಮಾಡುತ್ತಿದ್ದರು.

ಒಂದು ದಿನ ಸಂಸ್ಕೃತ ವಿದ್ವಾಂಸರೊಬ್ಬರು "ಕೃಷ್ಣ ಭಟ್ಟರು ವೇದಸಭೆಯಲ್ಲಿ ವೇದಘೋಷ ಮಾಡಬಲ್ಲರೇ ವಿನಃ ಅವರಿಗೆ ಸಂಸ್ಕೃತ ಭಾಷಾಜ್ಞಾನವಾಗಲಿ, ವೇದಾರ್ಥಜ್ಞಾನವಾಗಲಿ ಇಲ್ಲ" ಎಂದು ಲಘುವಾಗಿ ಮಾತನಾಡಿದರು. ಇದನ್ನು ಕೇಳಿ ಮೃದು ಮನಸ್ಸಿನವರೂ ಭಾವುಕರೂ ಆದ ಕೃಷ್ಣಭಟ್ಟರು ದೈವರಾತರಲ್ಲಿಗೆ ಬಂದು ನಡೆದ ಘಟನೆಯನ್ನು ಹೇಳುತ್ತ ಅತ್ತುಬಿಟ್ಟರು. ಇದನ್ನು ಕೇಳಿ ದೈವರಾತರು ಗುರುಗಳನ್ನು ಸಮಾಧಾನಪಡಿಸುತ್ತ ಹೇಗಾದರೂ ಅವರ ಮನಸ್ಸನ್ನು ಸಂತೋಷಗೊಳಿಸಲು ನಿರ್ಧರಿಸಿದರು. ಅಂದೇ ಸಾಯಂಕಾಲ ಶ್ರೀ ಮಹಾಬಲೇಶ್ವರ ದೇವಾಲಯದ ಧರ್ಮಶಾಲೆಯ ಆವರಣದಲ್ಲಿ ವಿದ್ವಾಂಸರು, ವೈದಿಕ ಅಭಿಮಾನಿಗಳು ಮುಂತಾದವರು ಸಭೆ ಸೇರಿದರು. ಅಲ್ಲಿ ವೇದಮೂರ್ತಿ ಶ್ರೀಕೃಷ್ಣಭಟ್ಟ ಮ್ಯೆಯರರನ್ನು ಅಗ್ರಪೀಠದಲ್ಲಿ ಕುಳ್ಳಿರಿಸಿ ಅವರ ಉದಾತ್ತ ವ್ಯಕ್ತಿತ್ವದ ಬಗ್ಗೆ ಮಾತನಾಡಿದರು. "ಹಲವು ವರ್ಷಗಳಿಂದ ನಿರಪೇಕ್ಷಿತ ಭಾವದಲ್ಲಿ ತಮ್ಮಲ್ಲಿಗೆ ಬಂದ ವಿದ್ಯಾರ್ಥಿಗಳಿಗೆಲ್ಲ ವೇದಪಾಠವನ್ನು ಮಾಡುತ್ತ ಬಂದಿರುವ ಇಂಥವರಿಂದಲೇ ನಮ್ಮ ವೇದವಿದ್ಯೆ ಇನ್ನೂ ಜೀವಂತವಾಗಿದೆ. ಸಂಸ್ಕೃತ ಕಲಿತವರೆಲ್ಲ ವೇದವನ್ನು ಬಲ್ಲವರಾಗಿರುವುದಿಲ್ಲ ಅಥವಾ ವೇದಾರ್ಥವನ್ನು ತಿಳಿದವರಾಗಿರುವುದಿಲ್ಲ. ನಾಲ್ಕು ವೇದಗಳಲ್ಲಿ ಒಂದಾದ ಋಗ್ವೇದವೊಂದೇ ಹತ್ತು ಮಂಡಲಗಳಲ್ಲಿ ಯುಕ್ತವಾಗಿದ್ದು ಅಂತಹ ವೇದರಾಶಿಯನ್ನು ಕಂಠಪಾಠ ಮಾಡುವುದು ಎಲ್ಲರಿಂದ ಸಾಧ್ಯವಿಲ್ಲ. ಸ್ವರಲೋಪವಾಗದೇ ವರ್ಣಲೋಪವಾಗದೇ ವೇದವನ್ನು ಪಠನಮಾಡುವುದಕ್ಕೆ ಅಗಾಧ ಮೇಧಾಶಕ್ತಿ ಬೇಕು. ಆದ್ದರಿಂದ ಇವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ." ಎಂದು ಅಂದಿನ ಸಭೆಯಲ್ಲಿ ಕೃಷ್ಣಭಟ್ಟ ಮ್ಯೆಯರರನ್ನು ಗೌರವಪೂರ್ವಕವಾಗಿ

ಸನ್ಮಾನಿಸಿದರು. ಇದರಿಂದ ಕೃಷ್ಣಭಟ್ಟ ಮೈಯರರ ಮನಸ್ಸಿಗೆ ಆದ ನೋವು, ಹಿಂಸೆ, ಅಪಮಾನ ದೂರವಾಯಿತು.

ಕೃಷ್ಣಭಟ್ ಮೈಯರರು ವಿದ್ಯಾರ್ಥಿಗಳಿಗೆಲ್ಲ ಅತ್ಯಂತ ಅಚ್ಚುಮೆಚ್ಚಿನ ಆದರ್ಶ ಗುರುಗಳಾಗಿದ್ದರು. ಮಧುರವಾದ ಅವರ ಕಂಠದಿಂದ ವೇದ ಮಂತ್ರಗಳು ಸ್ವರಬದ್ಧವಾಗಿ ಹರಿದು ಬರುವಾಗ ಅದನ್ನು ಕೇಳುವದೇ ಕಿವಿಗೆ ಹಿತವಾಗಿತ್ತು. ಇವರಂತೆಯೇ ಗೋಕರ್ಣದ ಇನ್ನಿಬ್ಬರು ವೇದ ವಿದ್ವಾಂಸರಾದ ನಾರಾಯಣ ನರಸಿಂಹ ಜೋಶಿ ಮತ್ತು ಮಹಾಬಲೇಶ್ವರ ಅಣ್ಣಪ್ಪಭಟ್ಟ ಹಿರೇ ಇವರುಗಳು ಆಶ್ರಮದಲ್ಲಿ ವೇದ ಪಾಠದ ಅಧ್ಯಾಪನೆಯನ್ನು ಮಾಡುತ್ತಿದ್ದರು. ಇದರಿಂದಾಗಿ ದೈವರಾತರ ತಪೋಜೀವನ ಮತ್ತು ದೇಶಸಂಚಾರ ಸುಗಮವಾಗಿ ಸಾಗುವಂತಾಗಿತ್ತು.

ಶ್ರೀ ರಮಣ ಮಹರ್ಷಿಗಳ ದಿವ್ಯ ಸನ್ನಿಧಿಯಲ್ಲಿ ದೈವರಾತ ದಂಪತಿಗಳು.

ದೈವರಾತರು ಗೃಹಸ್ಥಾಶ್ರಮ ಸ್ವೀಕರಿಸಿ ಸುಮಾರು ನಾಲ್ಕು ವರ್ಷ ಕಳೆದಿದ್ದವು. ಆಗ ಅವರಿಗೆ ಪತ್ನಿ ಶ್ರದ್ಧಾದೇವಿಯೊಂದಿಗೆ ಅರುಣಾಚಲಕ್ಕೆ ತೆರಳಿ ರಮಣ ಮಹರ್ಷಿಗಳ ಆಶೀರ್ವಾದ ಪಡೆದುಬರಬೇಕೆಂಬ ಹಂಬಲವಾಯಿತು. ಅಂತೆಯೇ ಶ್ರದ್ಧಾದೇವಿಯೊಂದಿಗೆ ಅರುಣಾಚಲ ತಲುಪಿ ರಮಣ ಮಹರ್ಷಿಗಳ ಚರಣಗಳಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆದರು. ಇದೇ ಸಮಯಕ್ಕೆ ವಾಸಿಷ್ಠಮುನಿ ದಂಪತಿಗಳೂ ಅಲ್ಲಿಗೆ ಆಗಮಿಸಿದ್ದು ಒಂದು ಯೋಗಾ ಯೋಗವಾಗಿತ್ತು. ಶ್ರದ್ಧಾದೇವಿ ಮತ್ತು ದೈವರಾತರು ಅವರಿಗೂ ನಮಸ್ಕರಿಸಿ ಆಶೀರ್ವಾದ ಪಡೆದರು. ಹೀಗೆ ದೈವರಾತ ದಂಪತಿಗಳಿಗೆ ಪರಮಗುರು ರಮಣ ಮಹರ್ಷಿಗಳು ಮತ್ತು ಗುರು ದಂಪತಿಗಳಾದ ವಾಸಿಷ್ಠ ಗಣಪತಿ ಮುನಿಗಳು ಮತ್ತು ವಿಶಾಲಾಕ್ಷಿ ಅಮ್ಮನವರ ದಿವ್ಯ ಸಾನ್ನಿಧ್ಯವೂ ಒಟ್ಟಿಗೆ ಲಭಿಸಿತು. ಸುಮಾರು ಎರಡು ತಿಂಗಳಕಾಲ ಅರುಣಾಚಲದ ಪವಿತ್ರ ಪರಿಸರದಲ್ಲಿ ಮಹರ್ಷಿಗಳನ್ನು ಸೇವಿಸಿದ ದೈವರಾತ ದಂಪತಿಗಳು ಅನಂತರ ಅವರ ಅನುಜ್ಞೆ ಪಡೆದು ಗೋಕರ್ಣಕ್ಕೆ ಮರಳಿದರು.

ಸಮುದ್ರತೀರದ ಆಶ್ರಮದಲ್ಲಿ ದೈವರಾತ ದಂಪತಿಗಳ ಋಷಿ ಜೀವನ ಸಾಗುತ್ತಿರಲು ಕಾಲಕ್ರಮದಲ್ಲಿ ಅವರಿಗೆ ಸೋಮಶ್ರವ, ಸತ್ಯಶ್ರವ, ದೇವಶ್ರವ ಎಂಬ ಗಂಡು ಮಕ್ಕಳೂ ಮೇಧಾದೇವಿ, ಶಚಿದೇವಿ, ಪ್ರಜ್ಞಾದೇವಿ, ಭಾರತಿ ಎಂಬ ಹೆಣ್ಣುಮಕ್ಕಳೂ ಜನಿಸಿದರು. ಈ ನಡುವೆ ದೈವರಾತರ ಗ್ರಂಥರಚನೆ, ದೇಶಸಂಚಾರ ಇತ್ಯಾದಿ ಚಟುವಟಿಕೆಗಳು ಆಶ್ರಮ ನಿರ್ವಹಣೆಯೊಂದಿಗೆ ನಡೆಯುತ್ತಲೇ ಇದ್ದವು.

ಸತ್‌ಸಂಪ್ರದಾಯಗಳನ್ನು ಗೌರವಿಸುತ್ತಿದ್ದ ದೈವರಾತರು ಗೊಡ್ಡು ಸಂಪ್ರದಾಯಗಳಿಗೆ ಎಂದೂ ಶರಣಾದವರಲ್ಲ. ಸ್ತ್ರೀ ಶೋಷಣೆಯ ಬಗೆಗೆ ಗಟ್ಟಿಯಾಗಿ ದನಿಯೆತ್ತಿದವರು ಅವರು. ಸಂಪ್ರದಾಯವಾದಿಗಳು ಹೆಂಗಸರಿಗೆ ವೇದಾಧ್ಯಯನದ ಅಧಿಕಾರವಿಲ್ಲವೆಂದು ವಿರೋಧಿಸಿದಾಗ ಅದನ್ನು ಬಲವಾಗಿ ಖಂಡಿಸುತ್ತ ಅದು ಅಜ್ಞಾನದ ಪರಮಾವಧಿಯಲ್ಲದೇ ಇನ್ನೇನೂ ಅಲ್ಲವೆಂದು ಸಾಧಾರ ಸಹಿತವಾಗಿ ಘೋಷಿಸಿದರು. ಋಗ್ವೇದ ಕಾಲದಲ್ಲಿ ಗೋಧಾ, ಘೋಷಾ ವಿಶ್ವವಾರಾ ಮುಂತಾದ ಹಲವು ವೇದಮಂತ್ರ ದೃಷ್ಟಾರರಾದ ಮಹಿಳೆಯರಿದ್ದರು. ಇವರೆಲ್ಲರೂ ತಪಸ್ಸಿನಿಂದ ವೇದವನ್ನು ಸಾಕ್ಷಾತ್ಕರಿಸಿಕೊಂಡವರು; ದಿವ್ಯ ದರ್ಶನ ಪಡೆದವರು. ಇವರನ್ನು ಬ್ರಹ್ಮವಾದಿನಿಯರೆಂದು ಕರೆಯುತ್ತಿದ್ದರು. ಹೀಗಿರುವಾಗ "ಮಹಿಳೆಯರು

ವೇದಮಂತ್ರಗಳನ್ನು ಉಚ್ಚರಿಸಬಾರದು" ಎನ್ನುವ ಮಾತು ಬಾಲಿಶವಾದುದು ಎಂದು ಮೇಲಿಂದ ಮೇಲೆ ಸಾರಿ ಹೇಳುತ್ತಿದ್ದರು. ಇಷ್ಟೇ ಅಲ್ಲದೇ ಮೇಧಾದೇವಿಯೇ ಮೊದಲಾಗಿ ತಮ್ಮ ಹೆಣ್ಣು ಮಕ್ಕಳಿಗೆ ವೇದಾಧ್ಯಯನದ ಶಿಕ್ಷಣದೊಂದಿಗೆ ಆರ್ಷೇಯುಗ ಇತಿಹಾಸದ ಪುನರಾವರ್ತನೆಯಾಗುವಂತೆ ಮಾಡಿದರು.

ಮಂತ್ರದೃಷ್ಟಾರ ಋಷಿಕೆಯರು

ಋಗ್ವೇದ ಮತ್ತು ಉಪನಿಷತ್ ಕಾಲದ ಅವಧಿಯಲ್ಲಿ ಪುರುಷರಿಗೆ ಸರಿಸಮಾನವಾದ ಅನೇಕ ಮಂತ್ರದೃಷ್ಟಾರ ಋಷಿಕೆಯರಿದ್ದರು. ಕಾತ್ಯಾಯನರ ಸರ್ವಾನುಕ್ರಮ ಸೂತ್ರದಲ್ಲಿ ಇದು ನಮೂದಿಸಲ್ಪಟ್ಟಿದ್ದು ಅದು ಈ ರೀತಿ ಇದೆ.

"ಅಹಮಷ್ಟೌ ವಾಗಾಂಭೃಣ್ಯಾತ್ಮಾ ನಂ ತುಷ್ಟಾವ" – ಋಗ್ವೇದ : 10, 125, 1–8
"ಉದಸೌಷ್ಟಟ್‌ಪೌಲೋಮೀಶಚ್ಯಾತ್ಮಾನಂ ತುಷ್ಟಾವ" – ಋಗ್ವೇದ : 10, 149, 1–6
"ಶ್ರದ್ಧಯಾ ಶ್ರದ್ಧಾ ಕಾಮಾಯಿನೀ ಶ್ರಾದ್ಧಮಾನುಷ್ಟುಭಮ್" – ಋಗ್ವೇದ : 10, 151, 1–5
"ಅಯಂ ಗೌಃ ಸಾರ್ಪರಾಜ್ಞೀ ಆತ್ಮದೇವತಮ್" – ಋಗ್ವೇದ : 10, 189, 1–3

ಈ ಎಲ್ಲ ಬ್ರಹ್ಮವಾದಿನಿಯರನ್ನು ಪರಿಭಾಷಾ ಸೂಕ್ತದಲ್ಲಿ,

"ಗೋಧಾ ಘೋಷಾ ವಿಶ್ವವಾರಾಽಪಾಲೋಪನಿಷನ್ ನಿಷತ್ ।
ಬ್ರಹ್ಮಜಾಯಾಜುಹೂರ್ನಾಮಾ ಅಗಸ್ತ್ಯಸ್ಯ ಸ್ವಸಾಽದಿತಿಃ ॥
ಇಂದ್ರಾಣೀಚೇಂದ್ರಮಾತಾ ಚ ಸರಮಾ ರೋಮಶೋರ್ವಶೀ ।
ಲೋಪಾಮುದ್ರಾ ಚ ನದ್ಯಶ್ಚ ಯಮೀನಾರೀ ಚ ಶಶ್ವತೀ ॥
ಶ್ರೀರ್ಲಾಕ್ಷಾಸಾರ್ಪರಾಜ್ಞೀವಾಕ್ ಶ್ರದ್ಧಾ ಮೇಧಾ ಚ ದಕ್ಷಿಣಾ ।
ರಾತ್ರೀ ಸೂರ್ಯಾ ಚ ಸಾವಿತ್ರೀ ಬ್ರಹ್ಮವಾದಿನ್ಯ ಈರಿತಾಃ ॥ *ಋಗ್ವೇದ ಪರಿಭಾಷಾ ಸೂತ್ರ*

ಸುಮಾರು ಮೂರುಸಾವಿರ ವರ್ಷಗಳಿಗೂ ಪೂರ್ವದಲ್ಲಿಯೇ ವಿಶ್ವದ ಯಾವ ಸಂಸ್ಕೃತಿಯಲ್ಲಿಯೂ ಕಾಣದಂತಹ ಪುರುಷರಿಗೆ ಸರಿಸಮಾನವಾದ ಗೌರವದ ಸ್ಥಾನ-ಮಾನ ಪಡೆದ ಸಂಸ್ಕೃತಿ ನಮ್ಮದು. ಆದರೆ ಉಪನಿಷತ್ ಕಾಲದ ಅಂತಿಮ ದಿನಗಳಲ್ಲಿ ಅಂದರೆ ಯಾಜ್ಞ್ಯವಲ್ಕ್ಯರ ಕಾಲದಿಂದಲೇ ಸ್ತ್ರೀಯರ ಅವಗಣನೆ ಆರಂಭವಾಗಿ ಆರ್ಷೆಯುಗದ ಉನ್ನತ ಜೀವನ ಮೌಲ್ಯಗಳು ಮರೆಯಾಗತೊಡಗಿದವು.

ಗಣಪತಿಮುನಿಗಳಿಗೆ ನಂದಿನಿ ಮುದ್ರಣ ಸಮರ್ಪಣೆ

ಶೇಠ ಮಘನಲಾಲರಿಗೆ ದೈವರಾತರ ಮೇಲಿನ ಭಕ್ತಿ ಬಹು ಅನನ್ಯವಾದುದಾಗಿತ್ತು. ಚಿಕ್ಕ ತಾಮ್ರಪಾತ್ರೆಗಳ ವ್ಯಾಪಾರಿಯಾಗಿದ್ದ ಇವರು ದೈವರಾತರ ಅನುಗ್ರಹದಿಂದ ಅಭಿವೃದ್ಧಿ ಹೊಂದಿ ದೊಡ್ಡ ವ್ಯಾಪಾರಿಗಳಾಗಿದ್ದರು. ಸಿದ್ಧಪುರದ ಸಮೀಪ ಅರಬಲೇಶ್ವರದಲ್ಲಿ ದೈವರಾತರು ತಪಸ್ಸು ಮಾಡುತ್ತಿರುವ ಸಮಯದಲ್ಲಿ ಕ್ರಿ.ಶ. 1914 ಕಾರ್ತಿಕ ಶುಕ್ಲ ಪೌರ್ಣಿಮಿಯಂದು ಪಂಚಗವ್ಯ ವ್ರತದ ಮುಕ್ತಾಯದ ದಿನ ಅಲ್ಲಿ ನೆರೆದ ಜನರ ಸಮ್ಮುಖದಲ್ಲಿ ಆರ್ಷಪರಂಪರೆಯ ಶಿಕ್ಷಣ ಪದ್ಧತಿಯ ಆಶ್ರಮವೊಂದನ್ನು ಸ್ಥಾಪಿಸುವ

ಗುರಿಯನ್ನು ಹೊಂದಿರುವದಾಗಿ ಹೇಳಿದಾಗ ಅದಕ್ಕೆ ಬೇಕಾದ ಎಲ್ಲ ರೀತಿಯ ಸಹಾಯವನ್ನು ತಾವು ನೀಡುವುದಾಗಿ ಮಘನಲಾಲರು ಘೋಷಿಸಿದ್ದರು. ಅಂತೆಯೇ ಕ್ರಿ.ಶ. 1920 ರಲ್ಲಿ ದೈವರಾತರು ಗೋಕರ್ಣದ ಕಡಲತೀರದಲ್ಲಿ ಆಶ್ರಮ ಸ್ಥಾಪಿಸುವ ವಿಚಾರ ತಿಳಿದಾಗ ಅದಕ್ಕೆ ಬೇಕಾದ ಜಮೀನು ಖರೀದಿಗಾಗಿ ಕೂಡಲೇ ಆರ್ಥಿಕ ಸಹಾಯ ನೀಡಿದರು. ಅನಂತರ ಕ್ರಿ.ಶ. 1926 ಗುರುವರ್ಯ ವಾಸಿಷ್ಠ ಗಣಪತಿಮುನಿಗಳ ಗ್ರಂಥಗಳ ಪ್ರಕಟಣೆಗಾಗಿ ಮುದ್ರಣಯಂತ್ರವನ್ನು ಖರೀದಿಸಬೇಕೆಂದಿರುವ ದೈವರಾತರ ವಿಚಾರವನ್ನು ತಿಳಿದು ಆಗಲೇ ಅತ್ಯುತ್ತಮವಾದ ಮುದ್ರಣಯಂತ್ರವನ್ನು ಮುಂಬಯಿಯಲ್ಲಿಯೇ ಖರೀದಿಸಿಕೊಟ್ಟರು. ಅದನ್ನು ದೈವರಾತರು 'ನಂದಿನಿಮುದ್ರಣ' ಎಂಬ ಹೆಸರಿನಿಂದ ಭಕ್ತಿಪೂರ್ವಕವಾಗಿ ಗುರುವರ್ಯ ವಾಸಿಷ್ಠ ಗಣಪತಿಮುನಿಗಳಿಗೆ ಸಮರ್ಪಣೆ ಮಾಡಿದರು. ಇದರಿಂದಾಗಿ ಗಣಪತಿ ಮುನಿಗಳ ಉಮಾಸಹಸ್ರವೇ ಮೊದಲಾದ ಕೆಲವು ಗ್ರಂಥಗಳು ನಂದಿನೀ ಮುದ್ರಣಾಲಯದಿಂದ ಪ್ರಕಾಶಿಸಲ್ಪಡುವುದರೊಂದಿಗೆ ದೈವರಾತರ ಗುರುಕಾಣಿಕೆ ಸಾರ್ಥವಾಯಿತು.

ದೈವರಾತರ ನೇಪಾಳವಾಸ

ಕಾಲದ ತಿಗರಿಯ ತಿರುವಿನ ಓಟದಲ್ಲಿ ಹಳೆಯದು ಮಾಸುತ್ತ ಹೊಸದು ತೆರೆಯುತ್ತ ಸಾಗುತ್ತಲಿರುವದೇ ಪ್ರಕೃತಿಧರ್ಮ. ಆಧುನಿಕ ಶಿಕ್ಷಣದತ್ತ ಜನರಚಿತ್ತ ಹರಿಯತೊಡಗಿತ್ತು. ಸುಖ ಶಾಲೆಯಲ್ಲಿ ಒಳಗೇ ಕುಳಿತು ಎಲ್ಲವನ್ನು ಕಲಿಯಬಹುದಾದ ಸುಲಭಮಾರ್ಗ ತೆರೆದಿರುವಾಗ ಯಾರು ತಾನೆ ಕಷ್ಟ ನಿಷ್ಠುರವಾದ ಋಷಿಕಲ್ಪಿತ ಶಿಕ್ಷಣವನ್ನು ಇಷ್ಟಪಡುವರು? ಅಂತೆಯೇ ಆಶ್ರಮಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಾ ಪೂರ್ಣವಾಗಿ ನಿಲುಗಡೆಯಾಗಿತ್ತು. ಇದರಿಂದ ಸಹಜವಾಗಿಯೇ ದೈವರಾತರ ಮನಸ್ಸು ದೇಶ ಸಂಚಾರದ ಕಡೆಗೆ ಹರಿಯಿತು. ಪುಣ್ಯ ಕ್ಷೇತ್ರಗಳಲ್ಲಿ ಸಂಚರಿಸುತ್ತ ಅವರು ಮುಂಬಯಿ ತಲುಪಿದರು. ಆಗ ಅವರಿಗೆ ಸಂತ ಸೇವಾಕಾಂಕ್ಷೀ ಸಜ್ಜನಭಕ್ತ ಮಘನಲಾಲರ ನೆನಪಾಯಿತು. ಸಿದ್ಧಪುರದ ಸಮೀಪ ಅರಬಲೇಶ್ವರದಲ್ಲಿ ಹಿಂದೆ ತಪಸ್ಸು ಆಚರಿಸುತ್ತಿರುವ ಸಮಯದಲ್ಲಿ ಅವರು ಎಲ್ಲ ರೀತಿಯ ಅನುಕೂಲ ಮಾಡಿಕೊಟ್ಟಿದ್ದರು. ಅನಂತರ ಮುಂದಿನ ದಿನಗಳಲ್ಲಿ ಆಶ್ರಮ ಸ್ಥಾಪಿಸಲು ಮತ್ತು ಅದಕ್ಕೆ ಬೇಕಾದ ಜಮೀನು ಖರೀದಿಸಲು ಹಾಗೂ ಗುರುವರ್ಯ ಗಣಪತಿ ಮುನಿಗಳ ಗ್ರಂಥಗಳನ್ನು ಪ್ರಕಟಿಸಲು ಮುದ್ರಣಯಂತ್ರ ಖರೀದಿಸುವುದಕ್ಕಾಗಿ ಹೀಗೆ ಬೇರೆ ಬೇರೆ ರೀತಿಯಲ್ಲಿ ಆರ್ಥಿಕ ನೆರವು ನೀಡಿದ್ದರು. ಅಂತೆಯೇ ಅವರ ಉತ್ಕಟಭಕ್ತಿ ಮತ್ತು ಆಧ್ಯಾತ್ಮಿಕ ಒಲವನ್ನು ನೆನೆಯುತ್ತ ಮಘನಲಾಲರ ಮನೆಯತ್ತ ನಡೆದರು.

ಮಘನಲಾಲರು ದೈವರಾತರ ಬರುವಿನಿಂದಾಗಿ ಬಹು ಸಂತೋಷದಿಂದ ಸಂಭ್ರಮಿಸಿದರು. ಭಕ್ತಿಯಿಂದ ಆದರಿಸಿ ಆತಿಥ್ಯ ನೀಡಿದರು. ಇದೇ ವೇಳೆಗೆ ಮಘನಲಾಲರ ಪರಿಚಿತರಾದ ನೇಪಾಳದ ರಾಜಪುರೋಹಿತರ ಪುತ್ರ ಭೋಗೇಂದ್ರರಾಜ ಪಂಡಿತರು ಅಲ್ಲಿಗೆ ಬಂದಾಗ ದೈವರಾತರನ್ನು ಕಂಡು ಭಕ್ತಿಪರವಶರಾಗಿ ನಮಸ್ಕರಿಸುತ್ತ ನೇಪಾಳಕ್ಕೆ ಬರುವಂತೆ ಆಗ್ರಹ ಪೂರ್ವಕವಾಗಿ ಆಮಂತ್ರಿಸಿದರು. ನೇಪಾಳದ ರಾಜಪುರೋಹಿತರ ಏಕಮಾತ್ರ ಪುತ್ರರಾದ ಇವರು ಮೂತ್ರಕೋಶದ ಕಾಯಿಲೆಯಿಂದಲೂ, ಸಂತಾನಹೀನರಾಗಿಯೂ ಬಳಲುತ್ತಿರುವ ಸಮಯದಲ್ಲಿ ಅಲೋಪತಿಯೇ ಮುಂತಾದ ಯಾವ ಚಿಕಿತ್ಸೆಗೂ

ವಾಸಿಯಾಗದೇ ಹತಾಶರಾಗಿರುವಾಗ ದೈವರಾತರ ಯೋಗ ಮತ್ತು ಆಯುರ್ವೇದ ಚಿಕಿತ್ಸೆಯಿಂದ ಗುಣಮುಖರಾಗಿ ಸಂತಾನಭಾಗ್ಯದೊಂದಿಗೆ ಪುನರುಜ್ಜೀವನ ಪಡೆದಿದ್ದರು. ಅಂದಿನಿಂದ ಅವರಿಗೆ ಹೇಗಾದರೂ ದೈವರಾತರನ್ನೊಮ್ಮೆ ನೇಪಾಳಕ್ಕೆ ಕರೆದೊಯ್ದು ತಮ್ಮ ಮನೆಯಲ್ಲಿ ಸತ್ಕರಿಸಬೇಕೆಂಬ ಹಂಬಲವಿತ್ತು. ಅದಕ್ಕೆ ಈಗ ಕಾಲಕೂಡಿ ಬಂದಿರುವುದಾಗಿ ಭಾವಿಸಿದ ಅವರು ತಮ್ಮ ಕೋರಿಕೆಯನ್ನು ನಿವೇದಿಸುತ್ತ ಅನುಗ್ರಹಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಸಮ್ಮತಿಸಿದ ದೈವರಾತರು ಆಶ್ವಿನಮಾಸ ಶುಕ್ಲಪಕ್ಷ ಕ್ರಿ.ಶ 1944 ಭೋಗೇಂದ್ರರಾಜ ಪಂಡಿತರೊಂದಿಗೆ ನೇಪಾಳ ತಲುಪಿದರು.

ಭೋಗೇಂದ್ರರಾಜ ಪಂಡಿತ ದಂಪತಿಗಳಿಗೆ ದೈವರಾತರ ಆಗಮನದಿಂದ ಭಗವಂತನೇ ಧರೆಗಿಳಿದು ಬಂದಂತೆ ಸಂತೋಷವಾಯಿತು. ಅವರು ಭಕ್ತಿಯಿಂದ ದೈವರಾತರನ್ನು ಉಪಚರಿಸಿದರು. ಹೀಗಿರುವಾಗ ದೈವರಾತರಿಗೆ ನೇಪಾಳದಲ್ಲಿ ತಪಸ್ಸು ಆಚರಿಸಬೇಕೆಂಬ ಅಪೇಕ್ಷೆಯುಂಟಾಯಿತು. ಅಂತೆಯೇ ಅವರು ಜನವಸತಿಯಿಂದ ದೂರವಾದ ಏಕಾಂತ ಸ್ಥಳದಲ್ಲಿ ಒಂದು ಕುಟೀರವನ್ನು ನಿರ್ಮಿಸಿಕೊಡುವಂತೆ ಭೋಗೇಂದ್ರರಾಜ ಪಂಡಿತರಲ್ಲಿ ತಮ್ಮ ಇಚ್ಛೆಯನು ವ್ಯಕ್ತಪಡಿಸಿದರು. ದೈವರಾತರ ಇಚ್ಛೆಯಂತೆ ಅವರು ಒಂದು ವಟವೃಕ್ಷದ ಸಮೀಪ ನೀರವ ಪರಿಸರದಲ್ಲಿ ಕುಟೀರವನ್ನು ನಿರ್ಮಿಸಿ ತಪಸ್ಸಿಗೆ ಅನುವುಮಾಡಿಕೊಟ್ಟರು. ಕಾಲವು ಅನುಕೂಲವಾದಾಗ ಅಪ್ರಯತ್ನವಾಗಿ ಎಲ್ಲವೂ ಪ್ರತಿಕೂಲವಿಲ್ಲದೇ ನಡೆದುಹೋಗುತ್ತವೆ. ಇದಕ್ಕೆ ಸಾಕ್ಷಿಯೋ ಎಂಬಂತೆ ದೈವರಾತರು ತಪಸ್ಸನ್ನಾಚರಿಸುವ ಸ್ಥಳದಿಂದ ಸ್ವಲ್ಪ ದೂರದಲ್ಲಿ ವಾಸಿಸುತ್ತಿದ್ದ ರಾಮಶರಣ್ ಹಾಗೂ ಅವನ ಹೆಂಡತಿ ನೇಪಾಳೀ ದಂಪತಿಗಳು ಭಕ್ತಿಯಿಂದ ದೈವರಾತರ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು. ಇವರು ದಿನಾಲು ದೈವರಾತರಿಗೆ ಹಾಲು, ಹಣ್ಣು, ಕಂದಮೂಲ ಆಹಾರ ಮುಂತಾದವುಗಳನ್ನು ಪೂರಯಿಸುವುದು ಮತ್ತು ಕುಟೀರವನ್ನು ಸ್ವಚ್ಛಗೊಳಿಸುವದೇ ಮುಂತಾದ ಕೆಲಸವನ್ನು ನಿರ್ವಹಿಸುತ್ತಿದ್ದರು.

ಭೋಗೇಂದ್ರರಾಜ ಪಂಡಿತರೊಂದಿಗೆ ದೈವರಾತರು ಪಶುಪತಿನಾಥ ಮಂದಿರವನ್ನು ಸಂದರ್ಶಿಸಿ ಪಶುಪತಿ ವಿಗ್ರಹ ಮತ್ತು ಅದರ ಪೂಜಾವಿಧಿ ವಿಧಾನಗಳನ್ನು ವೀಕ್ಷಿಸಿದರು. ಆಗ ಅವರಿಗೆ ಪಶುಪತಿನಾಥನ ಶಾಸ್ತ್ರೀಯ ಸ್ವರೂಪ ಮತ್ತು ಅದರ ವೈದಿಕ ತತ್ವಗಳ ಅಧ್ಯಯನ ಮಾಡಿ ಒಂದು ಗ್ರಂಥ ರಚಿಸಬೇಕೆಂಬ ಪ್ರೇರಣೆಯುಂಟಾಯಿತು. ಅದಕ್ಕಾಗಿ ನೇಪಾಳ ಸರಕಾರದ ಅನುಮತಿಯೊಂದಿಗೆ ವಿವರವಾದ ಅಧ್ಯಯನ ಕೈಗೊಂಡರು. ಈ ನಡುವೆ ಅವಕಾಶ ದೊರೆತಾಗಲೆಲ್ಲ ಅಲ್ಲಿಯ ವಿಶೇಷ ಸ್ಥಳಗಳನ್ನು ಸಂದರ್ಶಿಸುತ್ತ ಐತಿಹ್ಯಗಳ ಅಭ್ಯಾಸ ಮಾಡಿದರು.

ಪಶುಪತಿ ದೇವರ ಮೂರ್ತಿಯು ಐದು ಮುಖಗಳನ್ನು ಹೊಂದಿದ್ದು ಒಂದೊಂದು ಮುಖವನ್ನೂ ಪ್ರತ್ಯೇಕವಾದ ಹೆಸರಿನಿಂದ ಕರೆಯಲಾಗುತ್ತದೆ.

1. ಪೂರ್ವಮುಖ : ಇದನ್ನು 'ತತ್‌ಪುರುಷ' (ಮಹಾದೇವ) ಎಂದು ಕರೆಯಲಾಗುತ್ತದೆ.

2. ಪಶ್ಚಿಮಮುಖ : ಇದನ್ನು 'ಸದ್ಯೋಜಾತ' ಎಂದು ವರ್ಣಿಸಲಾಗಿದೆ. ಸದ್ಯೋಜಾತ ಎಂದರೆ ಬಾಲಕ ಸ್ವರೂಪ.

3. ದಕ್ಷಿಣಮುಖವನ್ನು 'ಅಘೋರ' ಎಂದು ಹೆಸರಿಸಲಾಗಿದೆ. ಇದು ಸೃಷ್ಟಿ ಮತ್ತು ಲಯವನ್ನು ನಿರ್ದೇಶಿಸುವ ಕಾಲಪುರುಷನ ಸಂಕೇತವಾಗಿದೆ.

4. ಉತ್ತರಮುಖ : ಇದನ್ನು ವಾಮದೇವ ಎನ್ನಲಾಗಿದ್ದು ಇದು ಪ್ರಕೃತಿ – ಪುರುಷ ತತ್ವದಿಂದ ಕೂಡಿದ ಅರ್ಧನಾರೀಶ್ವರ ಸ್ವರೂಪವಾಗಿದೆ.

5. ಊರ್ಧ್ವಮುಖ : ಇದು ನಾಲ್ಕು ಮುಖಗಳ ಶಿರೋಭಾಗದಲ್ಲಿರುವ ಲಿಂಗರೂಪದ ಐದನೇ ಮುಖವಾಗಿದೆ. ಇದನ್ನು 'ಈಶಾನ' ಎಂಬ ನಾಮದಿಂದ ನಿರ್ದೇಶಿಸಲಾಗಿದೆ.

ಐದನೆಯದಾದ ಊರ್ಧ್ವಮುಖದ ಶಿರದಮೇಲೆ ಶ್ವೇತಚಂದನದಿಂದ ಶ್ರೀಯಂತ್ರವನ್ನು ಬರೆದು ಪೂಜಿಸುವ ವಿಧಾನವಿದೆ. ಇಲ್ಲಿ ಶಿವಲಿಂಗವು ಪುರುಷನನ್ನೂ, ಶ್ರೀ ಯಂತ್ರವು ಸ್ತ್ರೀಯನ್ನೂ ಪ್ರತಿನಿಧಿಸುತ್ತಿದ್ದು ಪ್ರಕೃತಿ–ಪುರುಷ ಸಮಾನತೆಯನ್ನು ಸಾರುತ್ತದೆ. ಈ ಎಲ್ಲ ವಿಷಯಗಳ ಶಾಸ್ತ್ರೀಯ ಸ್ವರೂಪದ ವೈದಿಕ ತತ್ವಗಳನ್ನೊಳಗೊಂಡ 'ಪಶುಪತಿ ಹೃದಯಮ್' ಎಂಬ ಗ್ರಂಥವನ್ನು ದೈವರಾತರು ಹಿಂದಿ ಮತ್ತು ನೇಪಾಳೀ ಭಾಷೆಯಲ್ಲಿ ರಚಿಸಿದರು. ಇದನ್ನು ನೇಪಾಳೀ ಭಾಷಾ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ಬಾಲಕೃಷ್ಣ ಶಮ್‌ಶೇರರು ಸ್ವತಃ ತಾವೇ ಮುನ್ನುಡಿ ಬರೆದು ಮುದ್ರಿಸಿದರು. ನೇಪಾಳೀ ಪಂಚಾಂಗ (ಕ್ಯಾಲೆಂಡರ) ಪ್ರಕಾರ ಸಮ್‌ವತ್ 2002 ಭಾದ್ರ 12 ಕ್ಕೆ ಪುಸ್ತಕವು ಬಿಡುಗಡೆಗೆ ಸಿದ್ಧವಾಗಿದ್ದು ಸಮ್‌ವತ್ 2002 ಭಾದ್ರ 17 ರಂದು ನೇಪಾಳದ ಅಂದಿನ ಪ್ರಧಾನಿಗಳಾದ ಶ್ರೀ ಜುದ್ಧ ಶಮ್‌ಶೇರರು ತಮ್ಮ ರಾಜ್ಯಾರೋಹಣ ಮಹೋತ್ಸವದ ಶುಭದಿನದಂದು 'ಪಶುಪತಿ ಹೃದಯಮ್' ಗ್ರಂಥವನ್ನು ಸ್ವಹಸ್ತದಿಂದ ಲೋಕಾರ್ಪಣೆ ಮಾಡಿದರು.

ಪಶುಪತಿನಾಥ ದೇವಾಲಯದಿಂದ ಸ್ವಲ್ಪದೂರ ಪೂರ್ವದಿಕ್ಕಿನಲ್ಲಿ ವಾಙ್ಮತಿ ನದಿಯು ಹರಿಯುತ್ತಿದ್ದು ಅದರ ದಂಡೆಯ ಮೇಲೆ ಕಾಡಿನಲ್ಲಿ ನುಣುಪಾದ ಕಲ್ಲಿನ ರಂಧ್ರದಿಂದ ನೀರು ಸದಾ ಚಿಮ್ಮುತ್ತಿರುವ ಒಂದು ಪವಿತ್ರ ಸ್ಥಾನವಿದೆ. ಇದೇ ಭಗವತಿ ಶ್ರೀ ಗುಹ್ಯೇಶ್ವರಿಯ ದಿವ್ಯ ಸನ್ನಿಧಿಯಾಗಿದೆ. ಗುಹ್ಯೇಶ್ವರಿ ದೇವಿಗೆ ಲಿಂಗ ಅಥವಾ ಪ್ರತಿಮೆಯ ಮೂರ್ತರೂಪವಾಗಲಿ, ಮಂದಿರವಾಗಲಿ ಇಲ್ಲದಿರುವುದೇ ಇದರ ವೈಶಿಷ್ಟ್ಯವಾಗಿದೆ. ಇದು ನಿರ್ಗುಣೋಪಾಸನೆಯ ಪ್ರತೀಕವಾಗಿದ್ದು ಇಂತಹ ಸ್ಥಾನಗಳು ಅತ್ಯಂತ ವಿರಳವಾಗಿದೆ. ನಿರ್ಗುಣೋಪಾಸನೆಯ ಪವಿತ್ರ ಸ್ಥಾನಗಳನ್ನು ಈಗಾಗಲೇ ಕೆಲವು ಕಡೆ ನೋಡಿದ್ದ ದೈವರಾತರಿಗೆ ನೇಪಾಳದಲ್ಲಿಯೂ ಅಂತಹ ಸ್ಥಾನವನ್ನು ಕಂಡು ಅಚ್ಚರಿಯಾಯಿತು.

ದೈವರಾತರು ದಿನಾಲು ನಸುಕಿನಲ್ಲಿಯೇ ಎದ್ದು ತಮ್ಮ ಗುಡಿಸಿಲಿನಿಂದ ಸ್ವಲ್ಪ ದೂರದಲ್ಲಿರುವ ಕೊಳಕ್ಕೆ ಹೋಗಿ ಸ್ನಾನ ಮಾಡಿ ಬರುತ್ತಿದ್ದರು. ಅದೊಂದು ದಿನ ಛಳಿ ಬಹಳ ಜೋರಾಗಿತ್ತು. ದೈವರಾತರು ಎಂದಿನಂತೆ ಸ್ನಾನಕ್ಕಾಗಿ ಕೊಳದೊಳಕ್ಕೆ ಇಳಿದಾಗ ಹಿಮದಂತೆ ಮರಗಟ್ಟಿದಂತಾಗಿ ಕೈಕಾಲು ಆಡಿಸಲು ಅಸಾಧ್ಯವಾಯಿತು. ಆ ವೇಳೆಗೆ ದೂರದಲ್ಲಿ ಇದನ್ನು ನೋಡುತ್ತಿದ್ದ ಒಬ್ಬ ಗೂರ್ಖಾ ಯುವಕನು ಓಡಿಬಂದು ದೈವರಾತರನ್ನು ನೀರಿನಿಂದ ಮೇಲಕ್ಕೆ ಎತ್ತಿ ದಡದಲ್ಲಿ ಕುಳ್ಳಿರಿಸಿ ಕಟ್ಟಿಗೆ ಮತ್ತು ಪುರಳೆಗಳಿಂದ ಬೆಂಕಿಮಾಡಿ ದೇಹವು ಬಿಸಿಯಾಗುವಂತೆ ಉಪಚರಿಸಿದನು. ಇದರಿಂದ ದೈವರಾತರಿಗೆ ಕಾಲದ ನಡೆಯಲ್ಲಿ ಸದಾ ಎಚ್ಚರದಿಂದ ಇರಬೇಕೆಂಬ ಅರಿವು ಉಂಟಾಯಿತು.

ನೇಪಾಳದಿಂದ ಹೊರಡಲು ಇನ್ನು ಕೆಲವೇ ದಿನಗಳು ಮಾತ್ರ ಉಳಿದಿದ್ದವು. ಆಗ ಒಂದು ದಿನ ನೇಪಾಳದ ಪ್ರಧಾನಿ ಶ್ರೀ ಜುದ್ಧ ಶಂಶೇರ ಮಹರಾಜರು ದೈವರಾತರನ್ನು ತಮ್ಮ ಮನೆಗೆ ಆಹ್ವಾನಿಸಿ ಆದರದಿಂದ ಆತಿಥ್ಯ ನೀಡಿ ಯಥೋಚಿತವಾಗಿ ಸತ್ಕರಿಸಿದರು. ಹೀಗೆ ಬೆಳೆದ ಶ್ರೀ ಜುದ್ಧ ಶಂಶೇರರು ಮತ್ತು ದೈವರಾತರ ಸಂಬಂಧ ಅನ್ಯೋನ್ಯವಾಗಿ ಮುಂದುವರಿಯಿತು. "ಪಶುಪತಿ ಹೃದಯಮ್" ಗ್ರಂಥದ ಪ್ರಕಟಣೆಗೆ ಸಂಪೂರ್ಣ ಸಹಕಾರ ಮತ್ತು ಸಹಾಯ ಮಾಡಿದ ಇವರು ದೈವರಾತರ ಆಶ್ರಮದ ಅಭಿವೃದ್ಧಿಗೂ ಆರ್ಥಿಕ ಸಹಾಯ ನೀಡಿದರು.

ಪಶುಪತಿನಾಥನ ಊರಿನಲ್ಲಿ ಪಶುವೈದ್ಯರಾದ ದೈವರಾತರು

ರಾಜಪುರೋಹಿತ ಭೋಗೇಂದ್ರರಾಜ ಪಂಡಿತರು ದೈವರಾತರು ನೇಪಾಳದಿಂದ ಹೊರಡುವದಕ್ಕೆ ಒಂದು ವಾರಮೊದಲೇ ಅವರನ್ನು ಕರೆತಂದು ತಮ್ಮ ಮನೆಯಲ್ಲಿ ಉಳಿಸಿಕೊಂಡು ಉಪಚರಿಸಿದರು. ಹೀಗಿರುವಾಗ ಒಂದು ದಿನ ಅವರ ಗೋಶಾಲೆಯಲ್ಲಿ ಗಬ್ಬದ ಹಸುವೊಂದು ಪ್ರಸವಿಸಲಾಗದೆ ಜೀವನ್ಮರಣದ ನಡುವೆ ಹೋರಾಡುತ್ತಿರುವ ವಿಷಯ ದೈವರಾತರಿಗೆ ತಿಳಿಯಿತು. ತಕ್ಷಣ ಅವರು ಗೋಶಾಲೆಗೆ ನಡೆದು ಹಸುವನ್ನು ನೋಡಿದಾಗ ಕರುವು ಹಿಮ್ಮುಖವಾಗಿರುವ ಕಾರಣ ಪ್ರಸವಿಸಲು ಕಷ್ಟವಾಗಿತ್ತು. ಆಕಳು ತುಂಬಾ ದೊಡ್ಡದು. ಕರುವು ಸ್ವಾಭಾವಿಕ ಗಾತ್ರಕ್ಕಿಂತ ಹೆಚ್ಚಾಗಿ ಬೆಳೆದಿತ್ತು. ದೈವರಾತರು ಕೂಡಲೇ ಕರುವನ್ನು ಪುನಃ ಗರ್ಭಕೋಶದೊಳಕ್ಕೆ ತಳ್ಳಿ ಒಳಕ್ಕೆ ಕೈಹಾಕಿ ಕರುವಿನ ಮುಂಗಾಲುಗಳನ್ನು ಹಿಡಿದು ಅವುಗಳಿಗೆ ಹುರಿಯನ್ನು ಕಟ್ಟಿ ಆಳುಗಳ ಸಹಾಯದಿಂದ ಎಳೆದು ಹೊರಕ್ಕೆ ತೆಗೆದರು. ದೈವರಾತರ ತುರ್ತು ಕಾರ್ಯಾಚರಣೆಯಿಂದ ಆಕಳು ಮತ್ತು ಕರುವಿನ ಪ್ರಾಣ ಉಳಿಯಿತು. ಇದನ್ನು ಭೋಗೇಂದ್ರರಾಜ ಪಂಡಿತರು ಮತ್ತು ಕುಟುಂಬದವರೆಲ್ಲ ನೋಡಿ ಬೆರಗಾಗಿ ಮೂಕವಿಸ್ಮಿತರಾದರು. ದೈವರಾತರು ಕೇವಲ ಋಷಿ ಮಾತ್ರ ಆಗಿರಲಿಲ್ಲ. ಅವರು ವೈದ್ಯರೂ, ಪಶುವೈದ್ಯರೂ ಆಗಿದ್ದರು.

ತಮ್ಮ ಜೀವನದಲ್ಲಿ ದೈವರಾತರು ಯಾವುದನ್ನೂ ಕೀಳರಿಮೆಯಿಂದ ನೋಡಿದವರಲ್ಲ. ಯಾವ ಕೆಲಸವೇ ಇರಲಿ ಅವರು ಅದನ್ನು ಬಹು ಪವಿತ್ರಭಾವದಿಂದ ತತ್ಪರವಾಗಿ ಮಾಡುತ್ತಿದ್ದರು. ಮಕ್ಕಳು, ವೃದ್ಧರು, ರೋಗಿಗಳು, ಹೆಳವರು, ಅನಾಥರು ಯಾರೇ ಇರಲಿ ಅವರ ಬಗೆಗೆ ಬಹು ಕರುಣೆಯುಳ್ಳವರಾಗಿದ್ದು ತಮ್ಮಿಂದ ಸಾಧ್ಯವಾದ ಸಹಾಯವನ್ನು ಮಾಡುತ್ತಿದ್ದರು.

ದೈವರಾತರು ಗಂಡುಮಕ್ಕಳಂತೆಯೇ ತಮ್ಮ ಹೆಣ್ಣುಮಕ್ಕಳಿಗೂ ವೇದಾಧ್ಯಯನ ಯೋಗಾಭ್ಯಾಸ ಮತ್ತು ಕೃಷಿಯ ಶಿಕ್ಷಣವನ್ನು ನೀಡಿದರು. ಹೀಗೆ ವಿದ್ಯಾಭ್ಯಾಸ ಮಾಡುತ್ತಿರುವ ಸಮಯದಲ್ಲಿ ಹಿರಿಯ ಮಗಳು ಮೇಧಾದೇವಿಯ ಮದುವೆಯನ್ನು ನೆರವೇರಿಸಿದರು. ಮಗ ಸೋಮಶ್ರವನೂ ಪ್ರಾಯಪ್ರಬುದ್ಧನಾಗಿರುವುದರಿಂದ ಅವನಿಗೂ ಮದುವೆ ಮಾಡಲು ಯೋಚಿಸಿದರು. ಹೀಗಿರುವಾಗ ಅವರು ಆಶ್ರಮದಿಂದ ಗೋಕರ್ಣದ ಮಾರ್ಗವಾಗಿ ಅಶೋಕವನಕ್ಕೆ ಹೋಗುವಾಗ ಬರುವಾಗ ಗಣಪತಿ ದೇವಸ್ಥಾನದ ಸಮೀಪ ಒಬ್ಬ ಸುಂದರಳಾದ ಹುಡುಗಿಯು ಚೂಟಿಯಾಗಿ ಓಡಾಡಿಕೊಂಡಿರುವುದನ್ನು ಗಮನಿಸಿದ್ದರು. ತಮ್ಮ ಪರಿಚಯದವರಲ್ಲಿ ವಿಚಾರಿಸಿದಾಗ ಅವಳು ಅಪ್ಪುಭಟ್ಟ ಶಂಕರಲಿಂಗ ದಂಪತಿಗಳ ಮಗಳೆಂದು ತಿಳಿಯಿತು.

ಅಪ್ಪುಭಟ್ಟ ಶಂಕರಲಿಂಗ ದಂಪತಿಗಳ ಮಗಳಾಗಿ ಜನಿಸಿದ ಲಕ್ಷ್ಮಿಯು ಕೇರಿಯ ಜನರಿಗೆಲ್ಲ ಪ್ರೀತಿಯ ಕಣ್ಮಣಿಯಾಗಿದ್ದಳು. ಸಾತ್ವಿಕ ಸೌಂದರ್ಯ, ಆತ್ಮೀಯಭಾವ, ಮಧುರವಾದ ಕಂಠ, ಸದಾ ಉತ್ಸಾಹ ಚಿಮ್ಮುವ ಊಟೆಯಾಗಿ ಎಲ್ಲರಿಗೂ ನೆರವಾಗುವ ವ್ಯಕ್ತಿತ್ವ ಅವಳಿಗೆ ವರದಾನವಾಗಿ ಬಂದಿತ್ತು. ಇಂತಹ ಹುಡುಗಿ ದೈವರಾತರ ಮನಸೆಳೆದುದರಲ್ಲಿ ವಿಶೇಷವೇನಿರಲಿಲ್ಲ.

ದೈವರಾತರು ತಮ್ಮ ಇಂಗಿತವನ್ನು ಅಪ್ಪುಭಟ್ಟರಿಗೆ ತಿಳಿಸಿದಾಗ ಅವರು ತಮ್ಮ ಮಗಳನ್ನು ಸೋಮಶ್ರವನ ಜತೆ ಮದುವೆ ಮಾಡುವುದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಅದೇ ಕೆಲವು ದಿನಗಳಲ್ಲಿ ಪರಸ್ಪರ ಚರ್ಚಿಸಿ ಅನುಕೂಲವಾದ ಶುಭಮುಹೂರ್ತದಲ್ಲಿ ಲಕ್ಷ್ಮಿ ಮತ್ತು ಸೋಮಶ್ರವನ ವಿವಾಹವನ್ನು ಆರ್ಷಪದ್ಧತಿಯಂತೆ ಸರಳವಾಗಿ ನೆರವೇರಿಸಿದರು.

ಗಣಪತಿ ಮುನಿಗಳ 'ಪೂರ್ಣಾ' ಎಂಬ ಕಾದಂಬರಿಯ ನಾಯಕಿಯ ಹೆಸರು ಪೂರ್ಣಾದೇವಿ. ಪ್ರಕೃತಿಯ ಛಾಯಾರೂಪವಾಗಿ ಮುಗ್ಧಭಾವದ ಆರ್ಷಕನ್ನಿಕೆಯಾಗಿ ಮೂಡಿಬಂದ ಪಾತ್ರ ಅದಾಗಿತ್ತು. ಮನುಜ ಸಹಜ ದೌರ್ಬಲ್ಯದೊಡನೆ ಆಶೆ-ನಿರಾಶೆ ಹೆಣ್ತನದ ಹಂಬಲಗಳ ತುಡಿತದಲ್ಲಿ ಸಾತ್ವಿಕ ವ್ಯಕ್ತಿತ್ವವನ್ನು ಉಳಿಸಿಕೊಂಡು ಹೋಗುವ ಕಥಾವಸ್ತುವಿನ ಪೂರ್ಣಾದೇವಿಯ ವ್ಯಕ್ತಿತ್ವದ ಪಾತ್ರ ದೈವರಾತರಿಗೆ ಬಹಳ ಮೆಚ್ಚಿಗೆಯಾಗಿತ್ತು. ಅಂತೆಯೇ ಅವರು ಸೊಸೆಗೆ 'ಪೂರ್ಣಾ' ಎಂದು ನಾಮಕರಣ ಮಾಡಿದರು. "ಚಂದ್ರನಿಗೆ 'ಸೋಮ' ಎಂದೂ ಹೆಸರಿಸಿದೆ. ಪೂರ್ಣಳು ಜತೆಯಾದುದರಿಂದ ಈಗ ಸೋಮನು ಪೂರ್ಣಚಂದ್ರನಾದನು" ಎಂದು ದೈವರಾತರು ಸೊಸೆಯನ್ನು ಮನೆ ತುಂಬಿಸಿಕೊಳ್ಳುವ ಸಮಯದಲ್ಲಿ ಹೃತ್ಪೂರ್ವಕವಾಗಿ ನುಡಿದರು.

ಮದುವೆಯಾಗಿ ಗಂಡನ ಮನೆಗೆ ಬಂದ ಪೂರ್ಣಾದೇವಿಗೆ ಆಗ ಹದಿನೆಂಟರ ಹರೆಯ. ಹೊಸ ಪರಿಸರ, ಹೊಸ ಜೀವನ, ಆಚಾರ, ವಿಚಾರ ಎಲ್ಲವೂ ಹೊಸತು. ಇಂತಹ ಸಮಯದಲ್ಲಿ ಅವಳಿಗೆ ಪತಿಯ ಸೋದರಿಯರಲ್ಲಿ ಒಬ್ಬಳಾದ ಪುಟ್ಟನಾದಿನಿ ಪ್ರಜ್ಞಾದೇವಿ ಅತ್ತಿಗೆಯ ಹಿಂದೆ ಸದಾ ನೆರಳಿನಂತೆ ಓಡಾಡಿಕೊಂಡಿದ್ದು ಅವಳ ಕೆಲಸದಲ್ಲಿ ನೆರವಾಗುತ್ತ ಬಹಳ ಆತ್ಮೀಯಳಾದಳು. ಪೂರ್ಣಾದೇವಿಯು ದಿನಾಲು ನಸುಕಿನಲ್ಲಿ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ದೇವರಿಗೆ ದೀಪ ಬೆಳಗಿ ಅಂದಿನ ದಿನಚರಿಗೆ ಅನುವಾಗುತ್ತಿದ್ದಳು. ಮೊದಲು ಆಶ್ರಮದ ಮುಂದಿನಂಗಳವನ್ನು ಸ್ವಚ್ಛಗೊಳಿಸಿ ಸಾರಿಸಿ ರಂಗೋಲಿ ಬರೆದು, ದನ, ಕರುಗಳಿಗೆ ಮೇವು ಹಾಕಿ ನಂತರ ಸ್ನಾನ ಮಾಡಿ ಅಗ್ನಿ ಉಪಾಸನೆ ಮುಗಿಸಿ ಅಡಿಗೆ ಕೆಲಸಕ್ಕೆ ತೊಡಗುತ್ತಿದ್ದಳು. ಸಂಜೆಯ ಇಳಿ ಹೊತ್ತಿನಲ್ಲಿ ಪ್ರಜ್ಞಾದೇವಿಯ ಸಂಗಡ ಸಮುದ್ರತೀರದ ದಾರಿಯಲ್ಲಿ ತವರು ಮನೆಗೆ ಹೋಗಿ ಸೂರ್ಯಾಸ್ತಮಾನದೊಳಗೆ ಸಾಯಂಸಂಧ್ಯೆಯ ಅಗ್ನಿಉಪಾಸನೆಗೆ ಲೋಪವಾಗದಂತೆ ಆಶ್ರಮಕ್ಕೆ ಹಿಂತಿರುಗುತ್ತಿದ್ದಳು.

ಹೀಗೆ ಹೋಗಿಬರುವಾಗ ಆಶ್ರಮದ ಎರಡು ನಾಯಿಗಳು ಅವಳೊಂದಿಗೆ ಹೋಗುತ್ತಿದ್ದು ಅವಳು ತವರು ಮನೆಯಿಂದ ಹೊರಡುವ ತನಕ ಬಾಗಿಲಲ್ಲಿ ಮಲಗಿ ಕಾಯುತ್ತಿದ್ದು ಅವಳ ಸಂಗಡವೇ ಆಶ್ರಮಕ್ಕೆ ಬರುತ್ತಿದ್ದವು. ಹೀಗೆ ಪೂರ್ಣಾದೇವಿಯ ದಿನಚರಿ ಕಡಲತೀರದ ಆಶ್ರಮದಲ್ಲಿ ಋಷಿಕೆಯರಿಗೆ ಅನುರೂಪವಾದ ರೀತಿಯಲ್ಲಿ ಸಾಗಿತ್ತು.

ದೈವರಾತ ಋಷಿದಂಪತಿಗಳ ಮುದ್ದಿನ ಸೊಸೆಯಾಗಿ ಒಂದು ವರ್ಷ ಕಳೆಯುತ್ತಿರುವಂತೆ ಪೂರ್ಣಾದೇವಿಯು ಗರ್ಭವತಿಯಾಗಿ ಒಂದು ಗಂಡು ಮಗುವಿನ ತಾಯಿಯಾದಳು. ಆ ಮಗುವಿಗೆ ದೈವರಾತರು ಸಂತೋಷ ಸಡಗರಗಳಿಂದ ವೈದಿಕ ಪರಂಪರೆಗೆ ಅನುರೂಪವಾದ ಹೆಸರನ್ನು ಟಂಕಿಸಿ 'ವೇದಶ್ರವ' ಎಂದು ನಾಮಕರಣ ಮಾಡಿದರು. 'ವೇದ' ಎಂದರೆ ಜ್ಞಾನ 'ಶ್ರವ' ಎಂದರೆ ಆಲಿಸು ಅಥವಾ ಗ್ರಹಿಸು ಎಂದು ಅರ್ಥವಾಗುವದು. ಆದರೆ ತಾಯಿ ಮತ್ತು ಮಗುವಿನ ಸಾನ್ನಿಧ್ಯ ಸಂತೋಷ ಹೆಚ್ಚು ಕಾಲ ಉಳಿಯಲಿಲ್ಲ. ಅರಿಯದ ಕಾಯಿಲೆ ಅವಳನ್ನು ಕಾಡತೊಡಗಿತ್ತು. ಆದ್ದರಿಂದ ತಾಯಿ ಮತ್ತು ಮಗು ತವರು ಮನೆಯಲ್ಲಿಯೇ ಉಳಿದಿದ್ದು ದಿನದಿಂದ ದಿನಕ್ಕೆ ಆರೋಗ್ಯ ಕ್ಷೀಣಿಸತೊಡಗಿತ್ತು. ಆ ವೇಳೆಗೆ ತಂದೆ ಊರಿನಲ್ಲಿರಲಿಲ್ಲ. ತನ್ನ ಅಂತಿಮ ದಿನಗಳು ಸಮೀಪಿಸುತ್ತಿರುವುದರ ಅರಿವಾಗಲು ಅದೊಂದು ದಿನ ಪೂರ್ಣಾದೇವಿಯು ತಾಯಿಯ ಬಳಿ "ನಾಡದು ಸೂರ್ಯೋದಯವನ್ನು ನಾನು ನೋಡುವುದಿಲ್ಲ. ನಾನು ಸತ್ತ ನಂತರ ಮಗುವನ್ನು ಅತ್ತೆ–ಮಾವಂದಿರ ಕೈಗೆ ಒಪ್ಪಿಸಬೇಕು. ಯಾವ ಕಾರಣದಿಂದಲೂ, ಯಾವ ಪ್ರೀತಿ, ಯಾವ ವ್ಯಾಮೋಹದಿಂದಲೂ ನಿಮ್ಮ ಬಳಿ ಇಟ್ಟುಕೊಳ್ಳಬಾರದು." ಎಂದು ಕಟ್ಟುನಿಟ್ಟಾಗಿ ತಿಳಿಸಿದಳು. ಅಂದು 1954 ಆಷಾಢ ಕೃಷ್ಣ ದ್ವಾದಶಿ ಬೆಳಗಿನ ಜಾವ 3.30 ಕ್ಕೆ ಪೂರ್ಣಾದೇವಿಯ ಉಸಿರು ಕ್ಷೀಣವಾಗುತ್ತ ಜೀವ ತಣ್ಣಗಾಯಿತು. ಆಸೆಯ ಬೆಳಕಿನೊಂದಿಗೆ ಬಂದವಳು ಕಾಲನ ಕರೆಗೆ ಓಗೊಟ್ಟು ತನ್ನ ಪ್ರೀತಿಯ ಕರುಳಿನ ಕುಡಿಯೊಂದನ್ನು ಬಿಟ್ಟು ನೋವು–ನಲಿವುಗಳಿಲ್ಲದ ಅನಂತದ ತವರಿನ ಕಡೆಗೆ ನಡೆದಳು.

ತಮ್ಮ ಮುದ್ದಿನ ಸೊಸೆಯ ಆಕಸ್ಮಿಕ ಮರಣದ ನಂತರ ದೈವರಾತರು ಸುಮಾರು ಒಂದು ವರ್ಷಕಾಲ ನಿರ್ಲಿಪ್ತರಾಗಿ ಆಶ್ರಮದಲ್ಲಿಯೇ ಕಾಲಕಳೆಯುತ್ತಿದ್ದರು. ಆಗ ದೈವರಾತರ ತಮ್ಮ ಸೀತಾರಾಮನ ಮಗಳು ನಾಗವೇಣಿಯು ದೊಡ್ಡ ತಂದೆಯ ಬಳಿ ಬಂದು ಸೋಮಶ್ರವನಿಗೆ ಮತ್ತೆ ಮದುವೆ ಮಾಡಿದರೆ ದುಃಖವನ್ನು ಮರೆಯಬಹುದೆಂದು ಹೇಳಿ ತಾನೇ ಮುಂದಾಗಿ ಮರುಮದುವೆ ನೆರವೇರಿಸಿದಳು. ಮಗನ ಮದುವೆಯನ್ನು ಮುಗಿಸಿದ ದೈವರಾತರು ಮತ್ತೆ ದೇಶ ಸಂಚಾರಕ್ಕೆ ಹೊರಟರು. ಮಾರ್ಗಶಿರ ಮಾಸದ ಕೊನೆಯ ದಿನಗಳವು. ಶ್ರದ್ಧಾದೇವಿಯು ತಾಯಿಯಿಲ್ಲದ ಮಗನನ್ನು ತಾನೇ ಜತನಮಾಡುತ್ತಿದ್ದಳು. ಈ ವೇಳೆಗೆ ಅವಳಿಗೆ ಮೊಮ್ಮಗ ವೇದಶ್ರವನಿಗಿಂತ ಆರು ತಿಂಗಳು ಕಿರಿಯದಾದ ಒಂದು ಗಂಡುಮಗುವಿದ್ದು ಒಟ್ಟಿಗೆ ಎರಡು ಮಕ್ಕಳ ಲಾಲನೆ ಪಾಲನೆ ಮಾಡುವದು ಸುಲಭವಾಗೇನೂ ಇರಲಿಲ್ಲ. ಅದೇಕೋ ಶ್ರದ್ಧಾದೇವಿಗೆ ಕಡಲತೀರದ ಆಶ್ರಮದಲ್ಲಿ ಉಳಿಯುವುದಕ್ಕೆ ಮನಸ್ಸಾಗಲಿಲ್ಲ. ಅಂತೆಯೇ ಪುಷ್ಯಮಾಸ ಮುಗಿಯುತ್ತಿರುವಂತೆ ಮಾಘ ಶುಕ್ಲ ಪ್ರತಿಪದೆ 1955 ರಂದು ಕಡಲತೀರದ ಆಶ್ರಮದಲ್ಲಿ ಸೋಮಶ್ರವ ದಂಪತಿಗಳನ್ನು ಬಿಟ್ಟು ತನ್ನ ಇತರೆ ಮಕ್ಕಳೊಂದಿಗೆ ಅಶೋಕವನದ ಆಶ್ರಮಕ್ಕೆ ಬಂದು ವಾಸಿಸತೊಡಗಿದಳು.

ಅಶೋಕವನದಲ್ಲಿ ಶ್ರದ್ಧಾದೇವಿಯ ತಾಪಸ ಜೀವನ

ಅಶೋಕವನದ ಆಶ್ರಮದಲ್ಲಿ ಗೋಸೇವೆ, ಕೃಷಿ, ಗೃಹಕೃತ್ಯಗಳ ಸಾಂಗತ್ಯದಲ್ಲಿ ಕಷ್ಟ ನಿಷ್ಠುರಗಳ ದಾರಿಯಲ್ಲಿ ಶ್ರದ್ಧಾದೇವಿಯ ತಾಪಸ ಜೀವನ ಸಾಗಿತ್ತು. ಅವಳ ಉಡುಪು ತೊಡಪುಗಳು ಬಹು ಸರಳವಾಗಿತ್ತು. ದಪ್ಪ ಹಸಿರು ಬಳೆಗಳು ಋಷಿ ಕಾಲದ ಮಹಿಳೆಯರ ನೆನಪು ತರುತ್ತಿತ್ತು. ಯಾರಿಗೂ ಹೋಲಿಸಲಾಗದ

ವ್ಯಕ್ತಿತ್ವ ವಿಶೇಶತೆ ಶ್ರದ್ಧಾದೇವಿಯದಾಗಿತ್ತು. ಮದುವೆಯಾಗಿ ಪತಿಗೃಹಕ್ಕೆ ಕಾಲಿಟ್ಟ ಅವಳು ತನ್ನ ಮುಂದಿನ ದಿನಗಳಲ್ಲಿ ಯಾವ ಬಂಧು, ಬಳಗ, ಪರಿಚಿತರ ಮನೆಗೂ ಹೋಗಲಿಲ್ಲ. ಕಡಲತೀರದ ಆಶ್ರಮದಿಂದ ಅಶೋಕವನಕ್ಕೆ ಬಂದ ಅವಳು ತನ್ನ ಕೊನೆಯುಸಿರಿನ ತನಕ ಇಲ್ಲಿಯೇ ಕಳೆದಳು.

ಶ್ರದ್ಧಾದೇವಿಯು ಹಾಲನ್ನು ಯಾವಾಗಲೂ ಕಬ್ಬಿಣದ ಕಾವಲಿಯಲ್ಲಿ ಕಾಯಿಸುತ್ತಿದ್ದಳು. ಆದರೆ ಅದು ಕಬ್ಬಿಣದ ಪಾತ್ರೆಯೆಂದು ಯಾರಿಗೂ ತಿಳಿಯುತ್ತಿರಲಿಲ್ಲ. ಏಕೆಂದರೆ ಬಹುಶಃ ಬಹಳ ವರ್ಷಗಳಿಂದ ಹಾಲನ್ನು ಅದರಲ್ಲಿ ಕಾಯಿಸುತ್ತಿರುವುದರಿಂದಲೋ ಏನೋ ಪಾತ್ರೆಯ ಒಳಭಾಗವು ಬೆಳ್ಳಿ ಬಣ್ಣದ ಹೊಳಪು ಪಡೆದುಕೊಂಡಿತ್ತು. ಹೀಗೆ ಅವಳು ಕಬ್ಬಿಣದ ಕಾವಲಿಯಲ್ಲಿ ಹಾಲನ್ನು ಕಾಯಿಸಿ ಮಣ್ಣಿನ ಗಡಿಗೆಯಲ್ಲಿ ಹೆಪ್ಪುಹಾಕಿ ಮೊಸರು ಕಡೆಯುತ್ತಿದ್ದಳು. ಇದಕ್ಕಾಗಿ ಅವಳು ಎರಡು ಮಣ್ಣಿನ ಮಡಿಕೆಗಳನ್ನು ಉಪಯೋಗಿಸುವದು ವಾಡಿಕೆಯಾಗಿತ್ತು. ಈದಿನ ಮೊಸರು ಕಡೆದ ಗಡಿಗೆಯನ್ನು ನಾಳೆ ಉಪಯೋಗಿಸುತ್ತಿರಲಿಲ್ಲ. ದಿನವೂ ಉಪಯೋಗಿಸಿದ ಗಡಿಗೆಯನ್ನು ಚೆನ್ನಾಗಿ ತೊಳೆದು ಬಿಸಿಲಿನಲ್ಲಿಟ್ಟು ಒಣಗಿಸಿದ ನಂತರವೇ ಅದನ್ನು ಮರುದಿವಸ ಬಳಸುವದು ವಾಡಿಕೆಯಾಗಿತ್ತು. ಪಲ್ಲೆ, ಸಾಂಬಾರು, ಸಾಸಿವೆ, ತಂಬುಳಿ ಇತ್ಯಾದಿ ಪ್ರತಿಯೊಂದು ಅಡಿಗೆಗೂ ಪ್ರತ್ಯೇಕವಾದ ಅನುಕೂಲಕರ ವಿವಿಧ ಆಕಾರದ ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದಳು. ಮಳೆಗಾಲದ ಆರಂಭದಲ್ಲಿ ರಭಸವಾಗಿ ಬೀಸುವ ಗಾಳಿಗೆ ಪ್ರತಿವರ್ಷ ಅನೇಕ ಬಾಳೆಮರಗಳು ಧರೆಗುರುಳುವುದು ಸಾಮಾನ್ಯವಾಗಿತ್ತು. ಅಂತಹ ದಿನಗಳಲ್ಲಿ ಬಾಳೆಕುಂಡಿಗೆ, ಬಾಳೆದಿಂಡು ಹಾಗೂ ತಿರುಳು ಬಲಿಯದ ಎಳೆಯ ಬಾಳೆಕಾಯಿಗಳಿಂದಲೂ ಪಲ್ಲೆ, ಸಾಂಬಾರು ಮುಂತಾದವುಗಳನ್ನು ತಯಾರಿಸುತ್ತಿದ್ದಳು. ಅತ್ತಿಮರದ ಎಳೆಯ ಕಾಯಿಗಳನ್ನು ತಂದು ಬೇಯಿಸಿ ಸಣ್ಣದಾಗಿ ಹೆಚ್ಚಿ ಅಥವಾ ಕಲ್ಲಿನಿಂದ ಜಜ್ಜಿ ಮಾಡುವ ಪಲ್ಲೆ ಬಹಳ ರುಚಿಯಾಗಿರುತ್ತಿತ್ತು. ಬಲಿತ ಬಾಳೆಕಾಯಿಗಳನ್ನು ಬೇಯಿಸಿ ಸಿಪ್ಪೆ ಸುಲಿದು ತಿರುಳನ್ನು ನುಣ್ಣಗೆ ರುಬ್ಬಿ ಮಾಡುವ ತಂಬುಳಿ ಮತ್ತು ಗೊಜ್ಜು ವರ್ಷದ ಹೆಚ್ಚಿನ ದಿನಗಳಲ್ಲಿ ಪ್ರಧಾನ ಅಡಿಗೆಯಾಗಿತ್ತು. ಇದೇ ರೀತಿ ದಾಸವಾಳ ಹೂಗಳನ್ನು ಬೇಯಿಸಿ ಸಾಸಿವೆ, ಗೊಜ್ಜು, ತಂಬಳಿ ಹಾಗೂ ಸೊಪ್ಪಿನಿಂದ ದೋಸೆ ಇತ್ಯಾದಿ ವೈವಿಧ್ಯಮಯ ಅಡಿಗೆ ಮಾಡುತ್ತಿದ್ದಳು.

ಆಲೂರು ವೆಂಕಟರಾಯರು ಕನ್ನಡನಾಡಿನ ಅಭಿವೃದ್ಧಿಗಾಗಿ ಶ್ರಮಿಸಿದವರು. ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಇವರು ಒಬ್ಬ ಶ್ರೇಷ್ಠ ಮುಂದಾಳುವಾಗಿ ದುಡಿದರು. ಅಂತೆಯೇ ಆಲೂರು ವೆಂಕಟರಾಯರನ್ನು ಕರ್ನಾಟಕದ ಕುಲಪುರೋಹಿತ ಎಂದು ಕರೆಯುತ್ತಾರೆ. ಇವರು ದೈವರಾತರೊಂದಿಗೆ ಬಹು ಆತ್ಮೀಯವಾದ ಸಂಬಂಧವನ್ನು ಹೊಂದಿದ್ದರು. 1957 ರಲ್ಲಿ ಆಲೂರು ವೆಂಕಟರಾಯರು ಅಶೋಕವನದ ದೈವರಾತರ ಆಶ್ರಮವನ್ನು ಸಂದರ್ಶಿಸಿದರು. ಅಲ್ಲಿ ಸುಮಾರು ಒಂದು ವಾರ ತಂಗಿದ ಅವರು ದೈವರಾತರ ಕೃಷಿ ನಿರ್ವಹಣೆ, ಗೋಸಂಗೋಪನೆ ಇವುಗಳೊಂದಿಗೆ ಅವರ ಹೆಣ್ಣುಮಕ್ಕಳಿಂದ ಒಟ್ಟಿಗೆ ಮೂವರು ಒನಕೆಯಿಂದ ಭತ್ತಕುಟ್ಟಿ ಅಕ್ಕಿ ಮಾಡುವ ಕೌಶಲ್ಯವನ್ನು ಕೌತುಕದಿಂದ ವೀಕ್ಷಿಸಿದರು. ದೈವರಾತರ ಹೆಣ್ಣುಮಕ್ಕಳಿಂದ ವೇದವನ್ನು ಕೇಳುವುದಕ್ಕಾಗಿಯೇ ಅಶೋಕವನಕ್ಕೆ ಆಗಮಿಸಿದ್ದ ವೆಂಕಟರಾಯರು ತಾವಿರುವಷ್ಟು ದಿನವೂ ಅವರಿಂದ ಸ್ವರಬದ್ಧವಾದ ವೇದಘೋಷವನ್ನು ಮತ್ತೆ ಮತ್ತೆ ಕೇಳಿ ಆನಂದಿಸಿದರು. ಹೆಣ್ಣು ಮಕ್ಕಳೇ ಸ್ವತಃ ಕೃಷಿ ಮಾಡಿ ಬೆಳೆದ ಬಾಳೆಕಾಯಿಯ ಬಗೆ ಬಗೆಯ ತಿಂಡಿ ತಿನಿಸು ಪದಾರ್ಥಗಳನ್ನು


ಇಷ್ಟದಿಂದ ಸೇವಿಸಿದರು. ಅವುಗಳಲ್ಲಿ ಬಾಳೆಕಾಯಿ ಬೇಯಿಸಿ ನುಣ್ಣಗೆ ಅರೆದು ಗುಲಾಬಜಾಮೂನಿನಂತೆ ಮಾಡಿ ಕರಿದು ಸಕ್ಕರೆ ಪಾಕದಲ್ಲಿ ಹಾಕಿದ ಸಿಹಿ ತಿಂಡಿ ಬಾಳೆಕಾಯಿ ಸಂಜೀವಿನಿಯು ಅವರಿಗೆ ತುಂಬಾ ಇಷ್ಟವಾಯಿತು. ಹೀಗೆ ವನಸಿರಿ ಮಡಿಲಿನ ಅಶೋಕವನದ ಆಶ್ರಮದಲ್ಲಿ ಉಳಿದ ಆಲೂರು ವೆಂಕಟರಾಯರಿಗೆ ಸಹಸ್ರಮಾನಗಳ ಹಿಂದಿನ ಋಷಿಕಾಲದ ಪರಿಸರದಲ್ಲಿ ಇರುವ ಅನುಭವವಾಯಿತು.

ದೈವರಾತ ದಂಪತಿಗಳು ಅಶೋಕವನಕ್ಕೆ ಬಂದು ಸುಮಾರು ಮೂರು ವರ್ಷಗಳು ಕಳೆದಿದ್ದವು. ಹೀಗಿರುವಾಗ ಗೋಕರ್ಣದ ಕಡಲ ತೀರದಲ್ಲಿ ಆಕಸ್ಮಿಕವಾಗಿ ಪ್ರಕೃತಿಯು ಮುನಿದು ಒಮ್ಮೊಂದೊಮ್ಮೆಲೇ ಉತ್ಪಾತದಿಂದ ಭೋರ್ಗರೆವ ಕಡಲ ದೈತ್ಯ ಅಲೆಗಳು ತೀರಕ್ಕೆ ಬಂದು ಅಪ್ಪಳಿಸತೊಡಗಿದವು. ತಮ್ಮ ಕಣ್ಣೆದುರಿನಲ್ಲೇ ಸುಂದರ ಕನಸಿನ ಆಶ್ರಮದ ಸುತ್ತಲಿನ ತೆಂಗು, ಮಾವು, ಬೇವು, ಪುನ್ನಾಗ ಮುಂತಾದ ಸಸ್ಯಗಳು ಕೊಚ್ಚಿಹೋಗುತ್ತಿರುವುದನ್ನು ದೈವರಾತರು ಅಸಾಹಯಕರಾಗಿ ನೋಡುತ್ತ ಮೂಕವಾಗಿ ನಿಂತಿದ್ದರು. ಸುಂದರವಾದ ದೃಶ್ಯವೆಲ್ಲವೂ ಒಂದು ಕನಸಿನಂತೆ ಮರೆಯಾಗಿ ಹೋಗಿತ್ತು.

ಒಳಿತು, ಕೆಟ್ಟದು ಏನೇ ಇರಲಿ
ಯಾವುದೂ ಇಲ್ಲಿ ನಿಲ್ಲುವುದಿಲ್ಲ!
ಕಾಲನ ಚಕ್ರದ ತಿಗರಿಯ ತಿರುವಲಿ
ಏನೂ ಉಳಿಯದೆ ಕರಗುವುದೆಲ್ಲ!

ದೈವರಾತರ ಮನಸ್ಸಿಗೆ ಆಘಾತವಾಗಿತ್ತು. ಆದರೂ ಕಾಲಪ್ರವಾಹದಲ್ಲಿ ಈಜುವುದು ಅನಿವಾರ್ಯ. ಅವರ ಜೀವನವೇ ವೈಚಿತ್ರ್ಯಗಳ ಸರಮಾಲೆ. ಅವರು ಎಂದಿಗೂ ಒಂದು ಕಡೆ ನೆಲೆಯಾಗಿ ನಿಲ್ಲಲಿಲ್ಲ. ನಿರಂತರವಾಗಿ ಸಂಚರಿಸುತ್ತ ಆರ್ಷತತ್ವಗಳ ಬೋಧಿಸುತ್ತ ತಮ್ಮ ಜೀವನವನ್ನು ಕಳೆದರು.

ಅಶೋಕವನದಲ್ಲಿ ಆಶ್ರಮದ ಭೂಮಿಯೇನೋ ದೊಡ್ಡದಾಗಿಯೂ ವಿಶಾಲವಾಗಿಯೂ ಇತ್ತು. ಅಲ್ಲಿ ಸ್ವಲ್ಪ ಭತ್ತದಗದ್ದೆ ಹಾಗೂ ಚಿಕ್ಕ ತೆಂಗಿನ ತೋಟವಿದ್ದು ಅದರ ಆದಾಯ ಜೀವನ ನಿರ್ವಹಣೆಗೆ ಸಾಲುತ್ತಿರಲಿಲ್ಲ. ಹೇಗೋ ಕಷ್ಟದಿಂದ ಜೀವನ ಸಾಗುತ್ತಿತ್ತು. ಶ್ರದ್ಧಾದೇವಿಯು ತನ್ನ ಹೆಣ್ಣುಮಕ್ಕಳೊಂದಿಗೆ ಸ್ವತಃ ಗದ್ದೆಯಲ್ಲಿ ಭತ್ತದ ನಾಟಿ ಮಾಡಿ ಬೆಳೆ ತೆಗೆಯುತ್ತಿದ್ದಳು. ಸಂಗಡವೇ ಸಣ್ಣ ಪ್ರಮಾಣದ ಕಬ್ಬಿನ ಬೇಸಾಯವೂ ನಡೆಯುತ್ತಿತ್ತು. ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ದೈವರಾತರು ಆಶ್ರಮಕ್ಕೆ ಬರುತ್ತಿದ್ದರು. ಅವರು ಬಂದ ಸುದ್ದಿ ತಿಳಿಯುತ್ತಲೇ ಹಾಲಕ್ಕಿ ಮತ್ತು ಮುಕರಿ ಜನಾಂಗದ ಕೆಲವು ಕೆಲಸಗಾರರು ಬರುತ್ತಿದ್ದರು. ದಿನಾಲು ಏನೇನೋ ಕೆಲಸಗಳು ನಡೆಯುತ್ತಿದ್ದವು. ಹಳೆಯ ಕಟ್ಟೆಗಳನ್ನು ಕೀಳುವುದು, ಹೊಸ ಕಟ್ಟೆಗಳನ್ನು ಕಟ್ಟುವುದು. ಇಲ್ಲಿರುವ ಗಿಡಗಳನ್ನು ಕಿತ್ತು ಅಲ್ಲಿ ನೆಡುವುದು, ಅಲ್ಲಿರುವ ಗಿಡಗಳನ್ನು ಕಿತ್ತು ಇಲ್ಲಿ ನೆಡುವುದು ಹೀಗೆ ಕೆಲಸ ಸಾಗುತ್ತಿತ್ತು. ಕೆಲಸಗಾರರಿಗೆ ಏನಾದರೊಂದು ಕೆಲಸ ಕೊಡುತ್ತಿದ್ದರು. ಬಂದವರಿಗೆಲ್ಲ ತಿಂಡಿ ಮತ್ತು ಊಟವನ್ನು ಕೊಡಲಾಗುತ್ತಿತ್ತು. ಈ ವೇಳೆಯಲ್ಲಿ ಶ್ರದ್ಧಾದೇವಿಗೆ ದೈನಂದಿನ ಕೆಲಸದ ಜೊತೆಗೆ ಬಂದ ಆಳುಗಳಿಗೆಲ್ಲ ತಿಂಡಿ, ಊಟ ತಯಾರಿಸುವ ಅಡಿಗೆ ಕೆಲಸವನ್ನೂ ಮಾಡಬೇಕಾದಾಗ ಸಹಜವಾಗಿಯೇ ದಿನದ ದುಡಿಮೆಯ ಭಾರ ಜಾಸ್ತಿಯಾಗುತ್ತಿತ್ತು. ತಂದ ಹಣ ಮುಗಿಯುತ್ತಲೇ ದೈವರಾತರು ಮತ್ತೆ ದೇಶ ಸಂಚಾರಕ್ಕೆ ಹೊರಡುತ್ತಿದ್ದರು. ಇದರಿಂದಾಗಿ ಶ್ರದ್ಧಾದೇವಿಯು ಮಾತ್ರ ಆರು ಜನ ಮಕ್ಕಳೊಂದಿಗೆ ಬಡತನದ ನೆರಳಿನಲ್ಲಿ ಕಷ್ಟದ ಜೀವನ ಸಾಗಿಸುವದು ತಪ್ಪದ ದಿನಚರಿಯಾಗಿತ್ತು.



ಪ್ರಥಮ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರೊಂದಿಗೆ ದೈವರಾತರು

ಆಂಗ್ಲರ ಆಳಿಕೆಯ ಸ್ವಾತಂತ್ರ್ಯಪೂರ್ವ ದಿನಗಳವು. ದೈವರಾತರು ವೈದಿಕ ಪುನರುಜ್ಜೀವನದ ಪ್ರಚಾರಕ್ಕಾಗಿ ಋಷಿ ತತ್ವಗಳ ಪ್ರವಚನಕ್ಕಾಗಿ ಸಂಚರಿಸುತ್ತಿರುವಾಗ ಒಮ್ಮೆ ಬಿಹಾರದ ಸಭಾವೇದಿಕೆಯಲ್ಲಿ ಡಾ. ರಾಜೇಂದ್ರಪ್ರಸಾದರ ಪರಿಚಯವಾಯಿತು. ಬಿಹಾರದ ಸ್ವಾತಂತ್ರ್ಯ ನೇತಾರರಲ್ಲಿ ಒಬ್ಬರಾದ ರಾಜೇಂದ್ರ ಪ್ರಸಾದರು ದೈವರಾತರಿಂದ ಆಕರ್ಷಿತರಾದರು. ನಂತರದ ದಿನಗಳಲ್ಲಿ ಇಬ್ಬರಲ್ಲೂ ಆತ್ಮೀಯಭಾವ ಗಾಢವಾಗುತ್ತ ಅದು ನಿಕಟವಾಯಿತು. ಹೀಗಿರುವಾಗ ರಾಜೇಂದ್ರ ಪ್ರಸಾದರು ಮುಂಬಯಿಯಲ್ಲಿ ದೈವರಾತರಿಗೆ ಮಹಾತ್ಮ ಗಾಂಧಿಯವರ ಪರಿಚಯ ಮಾಡಿಸಿದರು. ಆ ವೇಳೆಗೆ ಜಮುನಾಲಾಲ ಬಜಾಜರೂ ಅವರ ಜತೆಯಲ್ಲಿ ಇದ್ದರು. ಮಹಾತ್ಮ ಗಾಂಧೀಜಿಯವರು ಭಗವಾನ್ ರಮಣ ಮಹರ್ಷಿಗಳ ಆತ್ಮೀಯ ಶಿಷ್ಯರಲ್ಲಿ ದೈವರಾತರೂ ಒಬ್ಬರೆಂದು ತಿಳಿದಾಗ ತಾವು ಹೋರಾಡುತ್ತಿರುವ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಶೀರ್ವದಿಸುವಂತೆ ಮಹರ್ಷಿಗಳನ್ನು ಪ್ರಾರ್ಥಿಸಬೇಕೆಂದು ದೈವರಾತರಲ್ಲಿ ಕೇಳಿಕೊಂಡರು. ಅದೇ ಸ್ವಲ್ಪ ದಿನಗಳಲ್ಲಿ ದೈವರಾತರು ರಾಜೇಂದ್ರ ಪ್ರಸಾದರ ಜತೆಗೂಡಿ ಅರುಣಾಚಲಕ್ಕೆ ತೆರಳಿ ಗಾಂಧೀಜಿವರ ಬಿನ್ನಹವನ್ನು ಅರುಹಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಮಣ ಮಹರ್ಷಿಗಳಿಂದ ಆಶೀರ್ವಾದ ಪಡೆದರು. ಸ್ವಾತಂತ್ರ್ಯ ಬಂದ ನಂತರ ರಾಜೇಂದ್ರ ಪ್ರಸಾದರು ದೇಶದ ಪ್ರಥಮ ರಾಷ್ಟ್ರಪತಿಯಾದರು. ದೈವರಾತರಿಗೆ ರಾಷ್ಟ್ರಪತಿ ಭವನದಲ್ಲಿ ಮುಕ್ತ ಪ್ರವೇಶವಿತ್ತು.

ದೈವರಾತರ ಆಶ್ರಮಕ್ಕೆ ರಾಜೇಂದ್ರಪ್ರಸಾದರ ಆಗಮನ

09–11–1959 ರಂದು ಡಾ. ರಾಜೇಂದ್ರಪ್ರಸಾದರು ದೈವರಾತರ ಆತ್ಮೀಯ ಕರೆಗೆ ಓಗೊಟ್ಟು ಅವರ ಆರ್ಷಪದ್ಧತಿಯ ಆಶ್ರಮವನ್ನು ನೋಡುವುದಕ್ಕಾಗಿ ಗೋಕರ್ಣಕ್ಕೆ ಆಗಮಿಸಿದರು. ಕಡಲ ಅಲೆಗಳಿಂದ ಆಶ್ರಮದ ಬಹುಭಾಗ ಕೊಚ್ಚಿ ಹೋಗಿದ್ದರೂ ದೈವರಾತರು ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದ ಪಾಠಶಾಲೆಯ ವಿಶಾಲ ವೇದಿಕೆ ಇನ್ನೂ ಉಳಿದುಕೊಂಡಿತ್ತು. ರಾಜೇಂದ್ರ ಪ್ರಸಾದರಿಗೆ ಅಲ್ಲಿಯೇ ಆತಿಥ್ಯ ನಡೆಯಿತು. ದೈವರಾತರು ತಮ್ಮ ಗುರುಗಳಾದ ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು ರಚಿಸಿದ "ಉಮಾಸಹಸ್ರ" ಎಂಬ ಗ್ರಂಥವನ್ನು ರಾಜೇಂದ್ರ ಪ್ರಸಾದರಿಗೆ ನೆನಪಿನ ಕಾಣಿಕೆಯಾಗಿ ಸಮರ್ಪಿಸಿದರು. ಈ ವೇಳೆಯಲ್ಲಿ ದೈವರಾತರ ಮಗಳು ಮೇಧಾದೇವಿಯಿಂದ ಸ್ವರಬದ್ಧವಾದ ವೇದವಾಚನ ಮತ್ತು ವೇದವ್ಯಾಖ್ಯಾನ ನಡೆಯಿತು. ಅದನ್ನು ಕೇಳಿ ರಾಜೇಂದ್ರ ಪ್ರಸಾದರು ಬಹಳ ಸಂತೋಷಪಟ್ಟರು. ಮಧ್ಯಾಹ್ನ ಸುಮಾರು ಒಂದು ಘಂಟೆಯ ವೇಳೆಗೆ ಶ್ರದ್ಧಾದೇವಿಯು ತಯಾರಿಸಿದ ಸರಳ ಅಡಿಗೆಯ ಊಟವನ್ನು ರಾಜೇಂದ್ರಪ್ರಸಾದರು ದೈವರಾತರ ಕುಟುಂಬದ ಜತೆಯಲ್ಲಿ ಒಟ್ಟಿಗೆ ಕುಳಿತು ಸಂತೋಷವಾಗಿ ಸವಿದರು. ರಾಷ್ಟ್ರಾಧ್ಯಕ್ಷರ ಉನ್ನತ ಸ್ಥಾನವನ್ನಲಂಕರಿಸಿದ್ದರೂ ಯಾವ ಆಡಂಬರ ಪ್ರತಿಷ್ಠೆಗಳ ಸೋಂಕಿಲ್ಲದೆ ದೈವರಾತರ ಆಶ್ರಮದಲ್ಲಿ ಆ ಕ್ಷಣಗಳನ್ನು ರಾಜೇಂದ್ರ ಪ್ರಸಾದರು ಮುಕ್ತವಾಗಿ ಕಳೆದರು. ಆ ವೇಳೆಯಲ್ಲಿ ಆಶ್ರಮದ ಕುರಿತು ಹಿಂದಿಯಲ್ಲಿ ಬರೆದ ಅಭಿಪ್ರಾಯದ ಕನ್ನಡ ಅನುವಾದ –

'ಬಹಳ ದಿನಗಳಿಂದ ಈ ಯೋಗಾಶ್ರಮಕ್ಕೆ ಬರಬೇಕೆಂಬ ಅಪೇಕ್ಷೆ ಇತ್ತು. ಅದು ಈ ದಿನ ಈಶ್ವರಾನುಗ್ರಹದಿಂದ ಪೂರ್ಣವಾಯಿತು. ಶ್ರೀ ಮಹಾಬಲೇಶ್ವರ ದೇವರ ದರ್ಶನದ ಜತೆಗೆ ಅನೇಕ ವೇದವಿದ್ವಾಂಸರ ಸಾನ್ನಿಧ್ಯವೂ ಸನ್ನಿಹಿತವಾಯಿತು. ಬ್ರಹ್ಮರ್ಷಿ ದೈವರಾತರ ಆಶ್ರಮ ತಲುಪಿದಾಗ ಬಹಳ

ಸಂತೋಷವಾಯಿತು. ಅವರ ವಿದ್ವತ್ತನ್ನು ಬಹಳ ದಿನಗಳಿಂದ ತಿಳಿದಿರುವ ನಾನು ಈ ದಿನ ಅವರ ಆಶ್ರಮ ನೋಡಲು ಶಕ್ತನಾದೆನು. ಇವರ ವಿದ್ವತ್ತಿನ ಜ್ಞಾನ ಮರೆಯಾಗದಂತೆ ಮುದ್ರಿತವಾಗಿ ರಕ್ಷಿಸಲ್ಪಟ್ಟರೆ ಆಸಕ್ತರಿಗೆ ಹಾಗೂ ವಿದ್ವಾಂಸರಿಗೆ ಸುಲಭವಾಗಿ ಲಭ್ಯವಾದೀತು. ಹೀಗೆ ನನ್ನ ಅಪೇಕ್ಷೆಯಿದೆ. ಅದು ಸುಲಭವಾದೀತು.'

ದಿನಾಂಕ 09-11-1959
ರಾಜೇಂದ್ರ ಪ್ರಸಾದ

ದೈವರಾತರ ಅಜ್ಜ ತಾಯಿಯ ತಂದೆ ಗಣೇಶ ಶಾಸ್ತ್ರಿಗಳು ಕಾಶಿಗೆ ಹೋಗಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿ ಬಂದಿದ್ದರು. ಅವರು ಆಸಕ್ತ ವಿದ್ಯಾರ್ಥಿಗಳಿಗಾಗಿ ಗೋಕರ್ಣದಲ್ಲಿ ತಮ್ಮ ಮನೆಯಲ್ಲಿಯೇ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ಮುಂದೆ ಆ ಪಾಠಶಾಲೆಗೆ ದೈವರಾತರು 'ಮೇಧಾ ದಕ್ಷಿಣಮೂರ್ತಿ ವಿದ್ಯಾಪೀಠ' ಎಂದು ನಾಮಕರಣ ಮಾಡಿ ಅದು ಅಭಿವೃದ್ಧಿಗೊಳ್ಳುವಂತೆ ಮಾಡಿದರು. ರಾಜೇಂದ್ರ ಪ್ರಸಾದರು ಗೋಕರ್ಣಕ್ಕೆ ಬಂದ ಈ ಸಂದರ್ಭದಲ್ಲಿ ದೈವರಾತರ ಕೋರಿಕೆಯಂತೆ ನೂತನ ಕಟ್ಟಡಕ್ಕೆ ಅಡಿಗಲ್ಲನ್ನು ಇಟ್ಟರು.

ರಾಜೇಂದ್ರ ಪ್ರಸಾದರು ಮಹಾರಾಷ್ಟ್ರ ರಾಜ್ಯದ ನಾಸಿಕವೇ ಮುಂತಾದ ಸುತ್ತಮುತ್ತಲಿನ ಪ್ರದೇಶಗಳ ಪ್ರವಾಸ ಕೈಗೊಳ್ಳುವಾಗ ದೈವರಾತರನ್ನೂ ತಮ್ಮ ಜತೆಗೆ ಕರೆದೊಯ್ದಿದ್ದರು. ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಸಂಚರಿಸುತ್ತ ಅವರು ತ್ರ್ಯಂಬಕೇಶ್ವರ ಕ್ಷೇತ್ರವನ್ನೂ ಮತ್ತು ಅಲ್ಲಿನ ಅಂತರ್ಗತ ಗುಹೆಯಲ್ಲಿನ ಶಿಲ್ಪಕಲಾ ವೈಭವಗಳ ವೈಶಿಷ್ಟ್ಯವನ್ನು ನೋಡಿ ಆನಂದಿಸಿದರು.

ಜಗನ್ನಾಥಪುರಿಯ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ದೈವರಾತರು ರಾಜೇಂದ್ರ ಪ್ರಸಾದರನ್ನು ಕುರಿತು ಗೀರ್ವಾಣಭಾಷೆಯಲ್ಲಿ ಮಾರ್ಮಿಕವಾಗಿ ಹೀಗೆ ಪ್ರಶಂಸಿಸಿದ್ದಾರೆ. ಅದರ ಸಂಕ್ಷಿಪ್ತ ರೂಪ

"......... ಸಂಪ್ರತಿ ಪ್ರಸ್ತುತೇಸ್ಮಿನ್ ಕಲಿಕಾಲೇ ಸಂಸ್ಕೃತಭಾರತೀ ತತ್ತ್ವಸ್ಯ ಪ್ರಕಾಶನೇನ ವಿಶ್ವಕಲ್ಯಾಣಾರ್ಥಂ ಪ್ರಸ್ತುತೋಯಂ "ಸಂಸ್ಕೃತ ವಿಶ್ವಪರಿಷತ್ ಸಮಾರಂಭಃ" ಸ್ವಕೀಯಂ ಇದಂ ಪರಮಂ ಧ್ಯೇಯಂ ಅಚಿರಾದೇವ ಸಾಧಯಿತುಂ ಪ್ರಭವತು ನಿಖಿಲಜಗದಧ್ಯ ಕ್ಷಸ್ಯ ಪರಮೈಶ್ವರ್ಯ ಪರಿಪೂರ್ಣಸ್ಯ ಶ್ರೀಭಗವತೋ ರಾಜೇಂದ್ರಸ್ಯ ಪ್ರಸಾದಾದಿತಿ ಸರ್ವಚ್ಛಂದಸಾಂ ವರ್ಷಕಂ ಛಂದೋಮುಖೇನ ಸಮಭ್ಯರ್ಥಯೇ " ಸ ಘಾ ರಾಜೇಂದ್ರ ಆದಭನ್ನಃ ಇತಿ. ತಥೈವ ಪುನಃ ಶ್ರೀ ಭಾರತಾಧ್ಯಕ್ಷ್ಯಸ್ಯ ಸಂಸ್ಕೃತ ವಿಶ್ವಪರಿಷದಧ್ಯಕ್ಷಸ್ಯ 'ಶ್ರೀ ರಾಜೇಂದ್ರ ಪ್ರಸಾದಸ್ಯ' ಸಮಾಶ್ರಯೇಣ ಸಂಯೋಜನೇನ ಚ ಸಂಸ್ಕೃತ ವಿದ್ಯಾಭ್ಯುದಯ ಧ್ಯೇಯಂ ಸಿಧ್ಯತು........"

ಭಾರತದ ಎರಡನೇ ರಾಷ್ಟ್ರಪತಿಯಾದ ಡಾ. ರಾಧಾಕೃಷ್ಣನ್‌ರವರು ವೈದಿಕ ತತ್ವಗಳು ಮತ್ತು ಆಧ್ಯಾತ್ಮದ ಬಗೆಗೆ ಬಹಳ ಪ್ರೀತಿಯುಳ್ಳವರಾಗಿದ್ದರು. ಸ್ವತಃ ಶ್ರೇಷ್ಠತತ್ವಜ್ಞಾನಿಯೂ ಸಂಸ್ಕೃತ ವಿದ್ವಾಂಸರೂ ಆಗಿದ್ದ ಅವರು ಪ್ರಸ್ಥಾನತ್ರಯಿ, ಭಗವದ್ಗೀತಾ, ಉಪನಿಷತ್ ಮತ್ತು ಬ್ರಹ್ಮಸೂತ್ರ ಗ್ರಂಥಗಳ ಮೇಲೆ ಆಂಗ್ಲಭಾಷೆಯಲ್ಲಿ ಪುಸ್ತಕಗಳನ್ನು ರಚಿಸಿದ್ದಾರೆ. ಇವರಿಗೆ ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳಲ್ಲಿ ಅತ್ಯಂತ ಭಕ್ತಿ, ಶ್ರದ್ಧೆ, ಗೌರವಗಳಿದ್ದು ಆತ್ಮೀಯ ಸಂಬಂಧವನ್ನು ಹೊಂದಿದ್ದರು. ಇವರು ವಿಶಾಖಪಟ್ಟಣಂ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿರುವಾಗ ವಾಸಿಷ್ಠ ಗಣಪತಿ ಮುನಿಗಳನ್ನು ಸಂಸ್ಕೃತ ಭಾಷೆಯಲ್ಲಿ

ಉಪನ್ಯಾಸ ಮಾಡುವುದಕ್ಕಾಗಿ ಒಮ್ಮೆ ಆಹ್ವಾನಿಸಿದ್ದರು. ಆವೇಳೆಗೆ ರಾಧಾಕೃಷ್ಣನ್‌ರವರು ಗಣಪತಿಮುನಿಗಳ ಅಗಾಧ ಪ್ರತಿಭೆಯನ್ನು ವರ್ಣಿಸುತ್ತ "ವೈದಿಕ ತತ್ವಗಳ ಬಗೆಗೆ ಅಪಾರ ಜ್ಞಾನವನ್ನು ಹೊಂದಿರುವ ಇವರಂತಹ ಮಹಾನ್ ವಿದ್ವಾಂಸರು ಇಂದು ನಮ್ಮಲ್ಲಿ ಬೇರೆ ಯಾರೊಬ್ಬರೂ ಇಲ್ಲ" ಎಂದು ಮುಕ್ತ ಕಂಠದಿಂದ ಶ್ಲಾಘಿಸಿದರು.

ಇದಕ್ಕೂ ಪೂರ್ವದಲ್ಲಿಯೇ ದೈವರಾತರು ವಾಸಿಷ್ಠ ಗಣಪತಿ ಮುನಿಗಳ ಅಂತೇವಾಸಿಗಳೆಂಬುದು ರಾಧಾಕೃಷ್ಣನ್‌ರವರಿಗೆ ತಿಳಿದಿತ್ತು. ರಾಜೇಂದ್ರಪ್ರಸಾದರು ರಾಷ್ಟ್ರಪತಿಗಳಾಗಿದ್ದ ಸಮಯವದು. ದೈವರಾತರು ರಾಷ್ಟ್ರಪತಿ ಭವನದಲ್ಲಿ ತಂಗಿರುವಾಗ ಅದೊಂದು ದಿನ ರಾಧಾಕೃಷ್ಣನ್‌ರವರು ದೈವರಾತರನ್ನು ತಮ್ಮ ನಿವಾಸಕ್ಕೆ ಆಮಂತ್ರಿಸಿದರು. ಆ ವೇಳೆಯಲ್ಲಿ ದೈವರಾತರು ತಾವು ರಚಿಸಿದ ವೈದಿಕ ತತ್ವಗಳನ್ನೊಳಗೊಂಡ ವಿಶ್ವಚಕ್ರ, ವಿಶ್ವರಥ ಮುಂತಾದ ಬ್ರಹತ್ ನಕ್ಷೆ ಮತ್ತು ಚಿತ್ರಪಟಗಳನ್ನು ಪ್ರದರ್ಶಿಸಿ ಬಿಂದು, ರೇಖಾ, ಕೋನ, ವರ್ಣ ಮತ್ತು ಮುದ್ರಾ ಈ ಸಂಕೇತಗಳು ವೈದಿಕ ಸಾಹಿತ್ಯದಲ್ಲಿ ಯಾವ ರೀತಿ ಹೇಗೆ ನಿರೂಪಿಸಲ್ಪಟ್ಟಿವೆ ಎಂಬುದನ್ನು ರಾಧಾಕೃಷ್ಣನ್‌ರವರಿಗೆ ತಮಿಳಿನಲ್ಲಿ ವಿವರಿಸಿದ್ದರು.

ಅನಂತರ 1952 ರಿಂದ 1962 ರವರೆಗೆ ರಾಧಾಕೃಷ್ಣನ್ ಉಪರಾಷ್ಟ್ರಪತಿಗಳಾದರು. ಈ ಅವಧಿಯಲ್ಲಿ ಅವರು 1962 ಹೋಳಿ ಹುಣ್ಣಿಮೆಯಂದು ದಿಲ್ಲಿಯಲ್ಲಿ ಏರ್ಪಡಿಸಿದ ಸಭೆಯಲ್ಲಿ ಮಧ್ಯಾಹ್ನ 12 ಘಂಟೆಯ ವೇಳೆಗೆ

ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ ತನ್ಮಯೋ ಭವೇತ್ ॥ (ಮು. 2-2-4)

ಪ್ರಣವಾಕ್ಷರವೇ ಧನಸ್ಸು, ಆತ್ಮವೇ ಅಂದರೆ ಮನಸ್ಸೇ ಬಾಣ, ಬ್ರಹ್ಮವನ್ನು ಸೇರುವುದೇ ಗುರಿ.

"ಪ್ರಣವನಾದದ ಉಪಾಸನೆಯಲ್ಲಿ ತನ್ಮಯನಾಗಿ ಹಾಡುತ್ತ ಲೀನವಾಗಬೇಕು; ನಾದರೂಪದ ರಸದ ಹೊನಲಿನಿಂದ ಸುಪ್ತ ಮನಸ್ಸಿನ ಪ್ರಶಾಂತಭಾವ ವಿಶ್ವಚೈತನ್ಯದಲ್ಲಿ ಒಂದಾಗಿ ಅದ್ವೈತವಾಗಬೇಕು." ಇದು ಉಪನಿಷತ್ ವಾಕ್ಯದ ತಾತ್ಪರ್ಯ.

ಹೀಗೆ ದೈವರಾತರು ಉಪನಿಷತ್ ವಾಕ್ಯದ ಮೇಲೆ ವಿಸ್ತಾರವಾದ ಪ್ರವಚನ ನೀಡಿದರು. ಅದನ್ನು ರಾಧಾಕೃಷ್ಣನ್‌ರವರು ಆಂಗ್ಲಭಾಷೆಯಲ್ಲಿ ಅಲ್ಲಿ ನೆರೆದ ವಿದ್ವಾಂಸರಿಗೆ ಮತ್ತು ಇತರ ಜನರಿಗೆ ವಿವರಿಸಿದರು. ತರುವಾಯ ಅದೇ ವರ್ಷ 1962 ರಲ್ಲಿಯೇ ರಾಧಾಕೃಷ್ಣನ್‌ರವರ ಪ್ರಯತ್ನದ ಫಲವಾಗಿ "ಅಖಿಲ ಭಾರತ ವೈದಿಕ ಸಮ್ಮೇಳನ" ನಡೆಯಿತು. ಇದು ದೈವರಾತರಿಂದಲೇ ಉದ್ಘಾಟಿಸಲ್ಪಟ್ಟು ಸಂಪೂರ್ಣವಾಗಿ ಅವರ ನಿರ್ದೇಶನದಲ್ಲಿ ನಡೆದದ್ದು ಸಮ್ಮೇಳನದ ವಿಶೇಷತೆಯಾಗಿತ್ತು.

ಪಂಡಿತ ಮದನಮೋಹನ ಮಾಲವೀಯರು ಮತ್ತು ದೈವರಾತರ ಸಮಾಗಮ

ದೈವರಾತರು ನೇಪಾಳದಿಂದ ಗೋಕರ್ಣಕ್ಕೆ ಮರಳುವಾಗ ವಾರಾಣಾಸಿಯಲ್ಲಿ ರಾಜರ್ಷಿ ಮಹರಾಜ ಜಡ್ಡಾ ಸಮೀರ ಎಂಬ ಸಂತರ ಮನೆಯಲ್ಲಿ ಸ್ವಲ್ಪ ಕಾಲ ಅತಿಥಿಯಾಗಿ ತಂಗಿದ್ದರು. ಈ ವೇಳೆಗೆ ಸಂತ ಸಮೀರರು ಪಂಡಿತ ಮದನ ಮೋಹನ ಮಾಲವೀಯರಿಗೆ ದೈವರಾತರ ಪರಿಚಯ ಮಾಡಿಸಿದರು. ತಾಯಿನಾಡು, ನಡೆ, ನುಡಿ, ವಿಚಾರಗಳ ಬಗೆಗೆ ಸದಭಿಮಾನಿಗಳಾಗಿದ್ದ ಮಾಲವೀಯಜಿಯವರು

ಭಾರತೀಯ ಸಂಸ್ಕೃತಿ, ಸಂಸ್ಕೃತ ಭಾಷೆ, ಯೋಗ ಮತ್ತು ವೇದೋಪನಿಷತ್ತುಗಳ ಕುರಿತು ದೈವರಾತರೊಂದಿಗೆ ಸಂವಹನ ನಡೆಸುತ್ತಿದ್ದಂತೆ ಮಾಲವೀಯರಿಗೆ ತಾವು ವೇದಕಾಲೀನ ಋಷಿಯೊಂದಿಗೆ ಇರುವಂತೆ ಭಾಸವಾಯಿತು. ದೈವರಾತರಿಂದ ಆಕರ್ಷಿತರಾದ ಮಾಲವೀಜೀಯವರು ಸುಮಾರು ಒಂದು ವಾರ ಕಾಲ ದೈವರಾತರೊಂದಿಗೆ ತವಕದಿಂದ ಜಿಜ್ಞಾಸೆ ನಡೆಸಿ ತಮ್ಮ ಮನದ ಹಲವು ಸಂದೇಹಗಳಿಗೆ ಸಮಾಧಾನಕರವಾದ ಉತ್ತರ ಪಡೆದು ಬಹಳ ಸಂತೋಷಗೊಂಡರು. ಹೀಗೆ ಬೆಳೆದ ಆಕಸ್ಮಿಕ ಪರಿಚಯವು ನಂತರದ ದಿನಗಳಲ್ಲಿ ಬನಾರಸ ಹಿಂದು ವಿಶ್ವವಿದ್ಯಾಲಯದೊಡನೆ ನಿಕಟ ಸಂಬಂಧ ಹೊಂದುವುದಕ್ಕೆ ಕಾರಣವಾಯಿತು. 1935 ನೇ ಇಸವಿಯಲ್ಲಿ ಮಾಲವೀಜೀಯವರ ಪ್ರೇಮಾಗ್ರಹದ ಮೇರೆಗೆ ದೈವರಾತರು ಬನಾರಸ ಹಿಂದು ವಿಶ್ವವಿದ್ಯಾಲಯದಲ್ಲಿ ಎರಡು ತಿಂಗಳ ಕಾಲ ಉಳಿದು 'ನಾದರೂಪ' ಎಂಬ ಗ್ರಂಥ ರಚಿಸಿದರು. ಋಷಿಪರಂಪರೆಯಲ್ಲಿ ಸಾಮಗಾನವಾಗಿ ಪ್ರಣವಾರಾಧನೆಯಾಗಿ ಬೆಳೆದು ಬಂದುದೇ ನಾದೋಪಾಸನೆ . ಇದರ ವಿವರಣೆಯೇ 'ನಾದರೂಪ' ಗ್ರಥದ ವಿಷಯವಾಗಿದೆ. ಮುಂದಿನ ದಿನಗಳಲ್ಲಿ 'ವೇದಾರ್ಥಕಲ್ಪಲತಾ' ಹಾಗೂ 'ಮೂಲಯಜುರ್ವೇದ ಸಂಹಿತಾ' ಎಂಬ ಇನ್ನೆರಡು ಮಹತ್ವದ ಗ್ರಂಥಗಳು ಪ್ರಕಟಗೊಂಡವು.

ದೈವರಾತರ ವೈದಿಕ ವಿದ್ವತ್ತಿನ ಅಗಾಧ ಜ್ಞಾನದ ಪರಿಚಯ ದೇಶದ ತುಂಬಾ ಹರಡತೊಡಗಿತ್ತು. ವೇದಕ್ಕೆ ಸಂಬಂಧಿಸಿದಂತೆ ಯಾವ ಕಾರ್ಯಕ್ರಮವೇ ಇರಲಿ, ಸಮ್ಮೇಲನವೇ ಇರಲಿ ದೈವರಾತರಿಗೆ ಆಮಂತ್ರಣವಿರುತ್ತಿತ್ತು. 1954 ನೇ ಇಸವಿ ಜಗನ್ನಾಥ ಪುರಿಯಲ್ಲಿ ವಿಶ್ವಸಂಸ್ಕೃತ ಸಮ್ಮೇಲನದ ಸಮಾವೇಶ ನಡೆದಾಗ ದೈವರಾತರು ನೀಡಿದ 'ವೇದ ಸಂದೇಶ' ಅಲ್ಲಿ ನೆರೆದ ವಿದ್ವಾಂಸರಲ್ಲಿ ದಿವ್ಯ ಸಂವೇದನೆಯ ಹೊಸ ಸಂಚಲನ ಮೂಡಿಸಿ ವೇದದ ಕುರಿತು ವಿಶಾಲ ಚಿಂತನೆಗೆ ಮನ ತೆರೆಯುವಂತೆ ಮಾಡಿತು. 1963 ನವಂಬರ ಬನಾರಸ ಹಿಂದು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮಕ್ಕೆ ವಿಶೇಷ ಆಮಂತ್ರಣದ ಮೇರೆಗೆ ದೈವರಾತರು ಆಗಮಿಸಿ ವೇದದಲ್ಲಿ ಅಂತರ್ಗತವಾಗಿರುವ ಹಲವು ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಿದರು. ಈ ವೇಳೆಗೆ ಅದೇ ವಿಶ್ವವಿದ್ಯಾಲಯದ ಭಾರತೀಯ ತತ್ವಶಾಸ್ತ್ರದ ಅಧ್ಯಾಪಕರೂ, ವೇದದ ಕುರಿತಾದ ಸಂಶೋಧನಾತ್ಮಕ ಅಧ್ಯಯನದ ನಿರ್ದೇಶಕರೂ ಆಗಿದ್ದ ಡಾ. ವಾಸುದೇವ ಶರಣ ಅಗರವಾಲರು 'ಋಷಿಕಾಲದ ದಿವ್ಯ ತೇಜಸ್ಸಿನ ಫೇದ ವಿದ್ವಾಂಸರೊಬ್ಬರು ಇಂದು ನಮ್ಮ ನಡುವೆ ಇರುವುದು ನಿಜಕ್ಕೂ ನಮ್ಮೆಲ್ಲರ ಸೌಭಾಗ್ಯವೇ ಆಗಿದೆ' ಎಂದು ಉದ್ಗರಿಸಿದರು. 1964 ಜನವರಿ ತಿರುಪತಿಯಲ್ಲಿ ವೇದ ಸಮ್ಮೇಲನ ನಡೆಯಿತು. ಅದರಲ್ಲಿ ಭಾಗವಹಿಸಿದ ದೈವರಾತರು ವೇದವಾಙ್ಮಯದ ಅಂತರಂಗದ ಸಮಗ್ರನೋಟವನ್ನು ತೆರೆದಿಟ್ಟರು.ಅನಂತರ ಅದೇ ವರ್ಷ ನವಂಬರ ತಿಂಗಳಿನಲ್ಲಿ ದಿಲ್ಲಿಯಲ್ಲಿಯು ವೇದ ಸಮ್ಮೇಲನ ನಡೆಯಿತು. ಈ ಸಮ್ಮೆಲನದ ಅಧ್ಯಕ್ಷ ಪದವಿಯನ್ನು ದೈವರಾತರಿಗೆ ನೀಡಿ ಗೌರವಿಸಲಾಯಿತು. ಅಂದಿನ ಕೇಂದ್ರ ಸರಕಾರದ ಅರ್ಥ ಮಂತ್ರಿಗಳಾಗಿದ್ದ ಟಿ.ಜಿ.ಕೃಷ್ಣಮಾಚಾರಿಯವರು ಇದನ್ನು ಸಂಯೋಜಿಸಿದ್ದು ಸಮ್ಮೆಲನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಲಾಲಬಹದ್ದೂರ ಶಾಸ್ತ್ರಿಯವರು ವಹಿಸಿದ್ದರು.

3) ವಿದ್ಯಾವಾಚಸ್ಪತಿ ಪದವಿ ಪ್ರಧಾನ : 1964 ನೇ ಇಸವಿ ದಿಲ್ಲಿಯಲ್ಲಿ ನಡೆದ ವೇದ ಪರಿಷತ್ತಿನ ವಿದ್ವಜ್ಜನ ಗೋಷ್ಠಿಯಲ್ಲಿ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ದೈವರಾತರಿಗೆ 'ವಿದ್ಯಾವಾಚಸ್ಪತಿ' ಎಂಬ ಬಿರುದನಿತ್ತು ಮಾನಪತ್ರ ಅರ್ಪಿಸಿ ಗೌರವಿಸಿದರು.



ಲಾಲ ಬಹದ್ದೂರ ಶಾಸ್ತ್ರಿಯವರಿಂದ ಸನ್ಮಾನಿಸಲ್ಪಡುತ್ತಿರುವ ದೈವರಾತರು

ಶ್ರೀ ಮದ್ರಾಪುರ ಸಂಸ್ಕೃತ ಮಹಾಕಲಾಶಾಲೆಯಲ್ಲಿ ದೈವರಾತರ ಉಪನ್ಯಾಸ

23–10–1966ರಿಂದ 8–11–1966 ರವರೆಗೆ ಶರನ್ನವರಾತ್ರಿಯ ಅವಧಿಯಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವವೇದ ಇವುಗಳಲ್ಲಿ ಉಕ್ತವಾಗಿರುವ ವಿಶಿಷ್ಟ ವಿಷಯಗಳ ವಿಚಾರವಾಗಿ ನೀಡಿದ ಉಪನ್ಯಾಸಗಳು ಬಹಳ ಮಹತ್ವಪೂರ್ಣವಾಗಿದ್ದವು. ಅಂದಿನ ಕಾರ್ಯಕ್ರಮದ ವಿಷಯಗಳು ಹೀಗಿದ್ದವು.

VEDIC LECTURES

by

Pandit DEVARATA SARMA of Gokarna

under the auspices of the Madras Samskrit Education Society

at the Madras Sanskrit College

23—10—66 to 8—11—66

Morning 8 to 9-30 A. M. Vedic Classes

24-10-66 वेदार्थज्ञानस्य आवश्यकता	Importance of knowing the meaning of the Vedas
25-10-66 वेदाङ्गानि	Vedangas
26-10-66 यास्कनिरुक्तेन शब्दार्थव्युत्पत्तिः	Interpretation according to Yaska's Nirukta
27-10-66 सायणादीनां भाष्ये तेषां दृष्टिः	The Approach of Sayana and other Bhashyakaras
28-10-66 त्रयोऽर्थाः सर्ववेदानाम्	Threefold interpretation of the Vedas
29-10-66 वैदिकी अग्निदेवता	Agni Devata of the Vedas
30-10-66 इन्द्रो वैदिकः	Indra ,, ,,
31-10-66 वैदिकी सोमदेवता	Soma ,, ,,
1-11-66 सूर्यदेवता	Surya ,, ,,
2-11-66 द्विदेवत्यम् (आश्विनादिकम्)	Hymes of Dual Deities
3-11-66 अन्याः देवताः	Other Deities
4-11-66 वैदिकानांदेवतानांआध्यात्मिकी दृष्टिः	Esoteric Significance of Vedic Deities
5-11-66 वेदे वेदान्तवादाः	Philosophical Ideas in the Samhitas
6-11-66 वैदिकानि यज्ञकर्माणि	Vedic Sacrifices
7-11-66 वेदे भक्तियोगः उपासनादिकं च	Bhakti, Worship etc. in the Vedas

ALL ARE WELCOME

The Sanskrit Education Society, Madras

VEDIC LECTURES

(Third Series)

by Pandit DEVARATA SARMA

Founder-Head, Devarata Rishikula Yogasrama, Gokarna, North Kanara

at the premises of the

MADRAS SANSKRIT COLLEGE, MYLAPORE.

The series will comprise 15 lectures and will be inaugurated by
Dr V. RAGHAVAN, Professor of Sanskrit, University of Madras
on the **Vijayadasami Day,** 23rd October, 1966 at 4–15 p.m.
In the mornings there will be Vedic Classes from 8 to 9–30 a.m.
and in the evenings public lectures from 6 p.m.

All Are welcome.

T. V. VISHWANATHA AIYAR
Secretary, Samskrit Education Society
14, East Mada Street, Mylapore, Madras-4.

23–10–66	वेदवेदिका	Foundation of Vedas
24–10–66	वेदाविर्भावः, वेददर्शनम्	The Revelation of Vedas and Vision of Vedas by the Rishis
25–10–66	वेदस्य मन्त्रब्राह्मणात्मकत्वम्; मन्त्राणां ब्राह्मणारण्यकोपनिषदां च संबन्धः	The Inter-relation of Mantra Brahmana and Upanishad
26–10–66	छन्दांसि, स्वराश्च	The Metres and Accents
27–10–66	देवताः	The Deities
28–10–66	ऋग्वेदः	Rigveda
29–10–66	यजुर्वेदः (कृष्ण-शुक्लशाखे)	Yajurveda, Sukla & Krishna
30–10–66	सामवेदः	Sama Veda
31–10 66	अथर्ववेदः	Atharva Veda
1–11–66	वेदे तत्त्वत्रययोगः	Threefold Interpretation
2–11–66	वेदे जगद्-ईश-जीवस्वरूपम्	World, God & Souls in Veda
3–11–66	वेदे सृष्टिवर्णम्	Creation as described in the Vedas
4–11–66	वेदाः, यज्ञाः, कर्मयोगश्च	Vedas and Sacrifices and Karma Yoga
5–11–66	वेदे भक्तियोगः ज्ञानयोगश्च	Bhakti and Jnana Yogas in the Vedas
6–11–66	वेदे विज्ञानादिविमर्शः	Other Branches of Knowledge in the Vedas
7–11–66		Subjects will be announced
8–11–66	ऋत-सत्यतत्त्वम्	

ದಿನಾಂಕ 24–12–1966 ಮುಂಬಯಿಯಲ್ಲಿ ಭಾರತೀಯ ವಿದ್ಯಾಭವನದವರು 'ವೇದ– ವಾಚಸ್ಪತಿ' ಎಂಬ ಬಿರುದಿನೊಂದಿಗೆ ಮಾನಪತ್ರವಿತ್ತು ಸನ್ಮಾನಿಸಿದರು.

ದೈವರಾತರ ಚಿತ್ರಕಲಾ ಕೌಶಲ್ಯ

ಬಿಂದು, ರೇಖಾ, ಕೋನ, ವರ್ಣ ಮತ್ತು ಮುದ್ರಾ ಎಂಬ ಐದು ಸಂಕೇತಗಳಿಂದ ಯುಕ್ತವಾಗಿರುವ ವೈದಿಕ ತತ್ವಗಳಲ್ಲಿ ಹೇಳಲಾಗಿರುವ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳ ಕುರಿತಾದ ವಿಷಯವನ್ನು ವಿವರಿಸುವ ವಿಶ್ವಚಕ್ರ, ವಿಶ್ವರಥ, ಅರ್ಧನಾರೀಶ್ವರ ಮುಂತಾದ ಕೆಲವು ಬೃಹದಾಕಾರದ ವರ್ಣಚಿತ್ರಗಳನ್ನು ರಚಿಸಿರುವುದು ಇವರ ಕಲಾಕೌಶಲ್ಯದ ಹೆಗ್ಗಳಿಕೆಯಾಗಿದೆ. ದೈವರಾತರು ಒಬ್ಬ ಋಷಿಯಾಗಿರುವಂತೆಯೇ ಯೋಗಿ, ಕವಿ, ಕಲಾವಿದ, ಗ್ರಂಥರಚನಕಾರ, ಕೃಷಿಕ, ವೈದ್ಯ ಮತ್ತು ಪಾಕವಿದ್ಯಾಪ್ರವೀಣರೂ ಆಗಿರುವುದು ಇವರ ವೈವಿಧ್ಯಮಯ ವ್ಯಕ್ತಿತ್ವದ ವಿಶೇಷತೆಯಾಗಿದೆ.

ಬಹುಭಾಷಾ ಪಾಂಡಿತ್ಯ

ದೈವರಾತರು ಸಂಸ್ಕೃತವೇ ಅಲ್ಲದೇ ಹಿಂದಿ, ಮರಾಠಿ, ತಮಿಳು, ತೆಲಗು, ಗುಜರಾತೀ, ನೇಪಾಳಿ, ಬಂಗಾಳಿ, ಕೊಂಕಣಿ ಮತ್ತು ಪಾರ್ಸಿ ಭಾಷೆಗಳನ್ನು ಕೂಡ ಮಾತನಾಡಬಲ್ಲವರಾಗಿದ್ದರು. ಪಾರ್ಸಿಗಳ ಪವಿತ್ರವಾದ 'ಅವೇಸ್ತಾ' ಗ್ರಂಥದಲ್ಲಿಯ ಮತ್ತು ವೇದವಾಙ್ಮಯದಲ್ಲಿಯ ಶಬ್ದಗಳ ಸಾಮ್ಯತೆಯ ಬಗ್ಗೆ ಮಾತನಾಡುತ್ತ 'ಅವೇಸ್ತಾ:'ದಲ್ಲಿರುವ ಮಂತ್ರಗಳನ್ನೂ ಹೇಗೆ ಸ್ವರಬದ್ಧವಾಗಿ ವೇದಮಂತ್ರಗಳಂತೆಯೇ ಪಠಿಸಬಹುದು ಎಂಬುದನ್ನು ಶೃತಿಬದ್ಧವಾಗಿ ಉಚ್ಚರಿಸಿ ತೋರಿಸುತ್ತಿದ್ದರು. ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿರುವಂತೆಯೇ ತಮ್ಮ ಮಾತೃಭಾಷೆ ಕನ್ನಡದಲ್ಲಿಯೂ ದೇವರನ್ನು ಕುರಿತಾಗಿ ಭಕ್ತಿಗೀತೆಗಳನ್ನು ರಚಿಸಿದ್ದಾರೆ. 'ಪಶುಪತಿ ಹೃದಯಂ' ಎಂಬ ಗ್ರಂಥವನ್ನು ನೇಪಾಳೀ ಮತ್ತು ಹಿಂದಿಯಲ್ಲಿ ರಚಿಸಿದ್ದು ಅದು ನೇಪಾಳದಲ್ಲಿ ಪ್ರಕಾಶಿಸಲ್ಪಟ್ಟಿದೆ. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಗುರು ರಾಮದಾಸ ಸ್ವಾಮಿಯವರ ಜತೆಯಲ್ಲಿರುವಾಗ ಹಿಂದಿ ಮತ್ತು ಮರಾಠಿ ಭಾಷೆಯಲ್ಲಿ ಆಶುಕವಿತ್ವದಿಂದ ಭಜನೆ ರಚಿಸಿ, ಅದನ್ನು ಹಾಡುತ್ತಾ ನರ್ತಿಸುತ್ತಾ ಮೈಮರೆಯುತ್ತಿದ್ದರು.

ಆಕಸ್ಮಿಕ ಅಪಘಾತ

ತಮ್ಮ ಇಳಿವಯಸ್ಸಿನಲ್ಲಿಯೂ ದೈವರಾತರು ಕ್ರಿಯಾಶೀಲ ಮನೋಭಾವದೊಂದಿಗೆ ಹರಯದ ಲವಲವಿಕೆಯನ್ನು ಹೊಂದಿದ್ದರು. ದಾಂಡೇಲಿಯ ಕಾಗದ ಕಾರ್ಖಾನೆಯವರು 195 ಜುಲೈ ತಿಂಗಳು ಭಾಂಗೂರ ನಗರದಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅದಕ್ಕೆ ದೈವರಾತರನ್ನು ಆಮಂತ್ರಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ತೆರಳಲು ದೈವರಾತರು ಯೋಚಿಸಿದಾಗ ಶ್ರದ್ಧಾದೇವಿಯು ಅದಕ್ಕೆ ಸಮ್ಮತಿಸಲಿಲ್ಲ. ಏಕೆಂದರೆ ಅವರಿಗೆ ಈಗ ಮೊದಲಿನಂತೆ ಎಲ್ಲಿಂದರಲ್ಲಿಗೆ ಸರಾಗವಾಗಿ ಓಡಾಡಬಲ್ಲ ದೈಹಿಕ ಬಲವಿರಲಿಲ್ಲ. ಆದ್ದರಿಂದ ಶ್ರದ್ಧಾದೇವಿಯ ಒಪ್ಪಿಗೆಯಂತೆ ಅವರು ಕಿರಿಯ ಮಗ ದೇವಶ್ರವನೊಂದಿಗೆ ಕಾಗದ ಕಾರ್ಖಾನೆಯವರು ಕಳಿಸಿದ್ದ ವಾಹನದಲ್ಲಿ ದಾಂಡೇಲಿಗೆ ಹೊರಟರು. ಭಾಂಗೂರ ನಗರದಲ್ಲಿ ಎರಡು ದಿನ ಉಳಿದು ಕಾರ್ಯಕ್ರಮ ಮುಗಿಸಿ ಅಂದು ಧಾರವಾಡದಲ್ಲಿ ನ್ಯಾಯಾಧೀಶರಾಗಿದ್ದ ಜಿ. ಎನ್. ಸಭಾಹಿತರ ಆಹ್ವಾನದ ಮೇರೆಗೆ ಅವರ ಮನೆಗೆ ತೆರಳಿದರು. ಅಲ್ಲಿ ನಾಲ್ಕು ದಿನ ಉಳಿದು ಅವರ ಆತಿಥ್ಯ ಸ್ವೀಕರಿಸಿ ಹುಬ್ಬಳ್ಳಿಗೆ ಬರುತ್ತಿರುವಾಗ ಸಾಯಂಕಾಲ ಸುಮಾರು ನಾಲ್ಕು ಗಂಟೆಯ ವೇಳೆಗೆ

ಊಣಕಲ್ ಬಳಿ ವಾಹನ ಅಪಘಾತಕ್ಕೀಡಾಯಿತು. ಆಗ ಹುಬ್ಬಳ್ಳಿಯಲ್ಲಿ ನ್ಯಾಯಾಧೀಶರಾಗಿದ್ದ ಭಾಗವತರು ಮತ್ತು ಕೆಲವು ಪ್ರಮುಖರು ವಿಷಯ ತಿಳಿದು ಸ್ಥಳಕ್ಕೆ ಧಾವಿಸಿ ದೈವರಾತರನ್ನು ಹಾಗೂ ಅವರ ಜತೆ ಇದ್ದ ಮಗ ದೇವಶ್ರವ ಇವರನ್ನು ಕೆ.ಎಮ್.ಸಿ. ಆಸ್ಪತ್ರೆಗೆ ಸೇರಿಸಿದರು. ದೈವರಾತರಿಗೆ ಎದೆಯ ಮತ್ತು ಬಲಗೈ ಮೂಳೆ ಮುರಿಯಲ್ಪಟ್ಟಿದ್ದು. ತಕ್ಷಣ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ವೇಳೆಗೆ, ದೈವರಾತರಿಗೆ ಆಪ್ತರಾಗಿದ್ದ ರಂಗನಾಥ ದಿವಾಕರರು ದಿನಾಲು ಆಸ್ಪತ್ರೆಗೆ ಬಂದು ದೈವರಾತರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದರು. ಹೀಗಿರುವಾಗ ಅವರ ಇನ್ನೊಬ್ಬ ಆತ್ಮೀಯರಾದ ಡಾ. ಆರ್. ಬಿ. ಪಾಟೀಲರು ದೈವರಾತರ ಗಂಭೀರ ಪರಿಸ್ಥಿತಿಯ ಅರಿವಾಗಿ ವಿಶೇಷ ನಿಗಾ ವಹಿಸಿ ಚಿಕಿತ್ಸೆ ಮಾಡಬೇಕಾದ ಅವಶ್ಯಕತೆ ಇರುವುದನ್ನು ಮನಗಂಡು ಕೂಡಲೇ ಕೆ.ಎಮ್.ಸಿ. ಆಸ್ಪತ್ರೆಯಿಂದ ಸ್ವಂತ ಜವಬ್ದಾರಿಯ ಮೇರೆಗೆ ತಮ್ಮ ಆಸ್ಪತ್ರೆಗೆ ಕರೆದೊಯ್ದು ಪುನಃ ಶಸ್ತ್ರಚಿಕಿತ್ಸೆ ನಡೆಸಿ ಕಾಳಜಿಯಿಂದ ಉಪಚರಿಸಿದರು. ಹುಬ್ಬಳ್ಳಿಯಲ್ಲಿ ಸುಮಾರು ಒಂದು ತಿಂಗಳ ಕಾಲ ಚಿಕಿತ್ಸೆಯನ್ನು ಮುಗಿಸಿ ದೈವರಾತರನ್ನು ಗೋಕರ್ಣದ ಅಶೋಕವನಕ್ಕೆ ಕರೆತರಲಾಯಿತು. ಅಶೋಕವನದ ಪ್ರಶಾಂತ ವಾತಾವರಣದಲ್ಲಿ ನೈಸರ್ಗಿಕ ಶುಶ್ರೂಷೆ ಮತ್ತು ಅನುಪಾನಗಳಿಂದ ಅವರ ಆರೋಗ್ಯ ಬೇಗನೆ ಸಹಜ ಸ್ಥಿತಿಗೆ ಮರಳಿತು.

ಅಪಘಾತದಿಂದ ಚೇತರಿಸಿಕೊಂಡ ದೈವರಾತರು 1975 ಜುಲೈ ತಿಂಗಳಿನಲ್ಲಿ ಮಗ ದೇವಶ್ರವನೊಂದಿಗೆ ಉತ್ತರ ಭಾರತದ ಕಡೆಗೆ ಹೊರಟರು. ಗೋವಾದಿಂದ ವಿಮಾನಯಾನದ ಮೂಲಕ ದಿಲ್ಲಿ ತಲುಪಿ ಅಲ್ಲಿಂದ ಋಷಿಕೇಶ, ಗೋಪೇಶ್ವರ, ಬದರಿ ಹಾಗೂ ಕೇದಾರನಾಥ ಕ್ಷೇತ್ರಗಳನ್ನು ಸಂದರ್ಶಿಸಿ ಸುಮಾರು ಒಂದು ತಿಂಗಳ ಕಾಲ ಪ್ರವಾಸ ಮಾಡಿ ಗೋಕರ್ಣಕ್ಕೆ ಹಿಂದಿರುಗಿದರು.

ನಿರ್ವಾಣ

ಶ್ರಾವಣ ಶುಕ್ಲ ಅಷ್ಟಮಿ (13 ಅಗಸ್ಟ 1975) ದೈವರಾತರಿಗೆ ಬೆಳಗಿನ ಹೊತ್ತು ಎದೆ ನೋವು ಪ್ರಾರಂಭವಾಗಿತ್ತು. ಅವರ ದೇಹ ಸ್ಥಿತಿ ಎಂದಿನಂತಿರಲಿಲ್ಲ. ಅಂತೆಯೇ ಅಂದು ಅವರು ಕೇವಲ ದ್ರವಾಹಾರ ಮಾತ್ರ ಸೇವಿಸಿದರು. ಮನೆಯವರೆಲ್ಲ ಅವರ ಸುತ್ತ ನೆರೆದಿದ್ದರು. ಆಗ ರಾತ್ರಿ ಎರಡು ಗಂಟೆಯ ಸಮಯ ಮಗ ದೇವಶ್ರವನ ಕೈ ಆಸರೆಯಲ್ಲಿ 4 ಹೆಜ್ಜೆ ನಡೆದು ಹಾಸಿಗೆಗೆ ಬಂದು ಕುಳಿತುಕೊಳ್ಳುತ್ತಿರುವಂತೆ ದೈವರಾತರ ಜೀವ ಸ್ತಬ್ಧವಾಗಿ, ಅವರ ಆತ್ಮ ಅನಂತದಲ್ಲಿ ಲೀನವಾಯಿತು.

******




ತಮ್ಮ ಶ್ರೀಮತಿ ಶ್ರದ್ಧಾದೇವಿ ಮತ್ತು ಮಕ್ಕಳೊಡನೆ ದೈವರಾತರು



ಅಗ್ನಿ ಔಪಾಸನೆಯಲ್ಲಿ ದೈವರಾತ ದಂಪತಿಗಳು



ಶ್ರದ್ಧಾದೇವಿ




ಪ್ರವಚನ ನಿರತರಾದ ದೈವರಾತರು




ಭಜನೆಯೊಂದಿಗೆ ನೃತ್ಯದಲ್ಲಿ ಮಗ್ನರಾದ ದೈವರಾತರು



ಧಾರವಾಡದಲ್ಲಿ ಅಭಿಮಾನಿಗಳಿಂದ ಸನ್ಮಾನಿಸಲ್ಪಡುತ್ತಿರುವ ದೈವರಾತರು



ಭಾರತೀಯ ವಿದ್ಯಾಭವನದಲ್ಲಿ 'ವೇದವಾಚಸ್ಪತಿ' ಪದವಿ ಪ್ರದಾನ



॥ अथ तृतीया कला ॥

॥ आत्मसाक्षात्काराभ्यर्थना ॥

प्रज्ञात्मसाक्षात्कृतिमात्मनोऽर्थये
प्रज्ञानतो योगसुधां स्वतृप्तये
प्रवृत्तये सत्त्वसतो निवृत्तये
प्रत्यञ्चि निष्ठार्थमनन्तशान्तये ॥१॥

" गोषा इन्दो नृषा अस्यश्वसा वाजसा उत "
आत्मा यज्ञस्य पूर्व्यः ॥
(मेध्यातिथिः) (ऋ.मं. ९.२.१०) (सोमः)

विज्ञायतां संविदुपास्ति कर्म- यज्ञस्य धर्मस्य सतोऽखिलस्य ॥
ज्ञाता तथा कामयिता च कर्ता भोक्ताऽयमात्मेन्दुरिहास्ति पूर्व्यः ॥२॥


ದೈವರಾತರ ಹಸ್ತಾಕ್ಷರ




ಲಾಲಬಹದ್ದೂರ ಶಾಸ್ತ್ರಿಯವರಿಂದ ಸನ್ಮಾನಗೊಳ್ಳುತ್ತಿರುವ ದೈವರಾತರು



ಗ್ರಂಥರಚನೆಯಲ್ಲಿ ನಿರತರಾದ ದೈವರಾತರು



ಧ್ಯಾನಮಗ್ನ ದೈವರಾತರು



ರಾಷ್ಟ್ರಪತಿಭವನದಲ್ಲಿ ಬಾಬು ರಾಜೇಂದ್ರ ಪ್ರಸಾದರೊಂದಿಗೆ ದೈವರಾತರು



ಪಂಡಿತ ಜವಾಹರಲಾಲ ನೆಹರೂರವರಿಂದ ಸನ್ಮಾನಿಸಲ್ಪಡುತ್ತಿರುವ ದೈವರಾತರು

ಋಷಿ ಪಾರಮ್ಯ

ಆರ್ಷಯುಗವು ಕೊನೆಯಾಗಿ ಸುಮಾರು ಮೂರು ಸಾವಿರ ವರ್ಷಗಳ ನಂತರ ಮತ್ತೊಮ್ಮೆ ಋಷಿಯೊಬ್ಬ ಜನ್ಮಿಸಿ ವೇದಮಂತ್ರ ದೃಷ್ಟಾರನಾದುದು ಇಂದಿನ ದಿನಗಳಲ್ಲಿಯೂ ವೇದ ಮಂತ್ರದರ್ಶನ ಸಾಧ್ಯ ಎಂಬುದಕ್ಕೆ ಸಾಕ್ಷಿಯಾಗಿದೆ. ನೋವು- ನಲಿವು, ಆಸೆ-ನಿರಾಸೆ, ಕೈಗೂಡದ ವಿಫಲ ಕಾಮನೆಗಳು ಇವೇ ಮೊದಲಾದ ಜೀವ ವ್ಯಾಪಾರಗಳಿಗೆ ಹಾಗೂ ಪ್ರಕೃತಿ ನಿಯಮಗಳಿಗೆ ಸಹಜವಾದ ರೀತಿಯಲ್ಲಿ ಚಿಂತನೆಯ ಸುಜ್ಞಾನದ ಬೆಳಕಿನಲ್ಲಿ ಅನ್ಯರಿಗೆ ನೋವಾಗದಂತೆ ಅಹಿಂಸೆಯಿಂದ ಬಾಳುವದೇ ಋಷಿಜೀವನ. ಪ್ರಕೃತಿದತ್ತವಾದ ಆಸೆ-ಆಕಾಂಕ್ಷೆಗಳ ಹತ್ತಿಕ್ಕಿ ಒಳಗೊಳಗೇ ಅದಕ್ಕಾಗಿ ಹಂಬಲಿಸುತ್ತ ಆತ್ಮವಂಚನೆಯಿಂದ ಬಾಳುವುದು ಋಷಿಜೀವನವಲ್ಲ. ಪವಿತ್ರ ಭಾವದ ದಾಂಪತ್ಯದಲ್ಲಿ ಕರ್ಮಯೋಗಿಯಾಗಿಯೇ ಜ್ಞಾನದ ಬೆಳಕನ್ನು ಪಡೆಯುವದೇ ಆರ್ಷಜೀವನದ ಗುರಿ. ಇಂತಹ ಒಂದು ಮಾದರಿಯ ಬದುಕಿನ ಚಿತ್ರಣವೇ ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆಯಾಗಿದೆ.

ಬಾಲಕ ದೈವರಾತನ ಇಷ್ಟದೈವವೇ ವಾಸಿಷ್ಠಗಣಪತಿಮುನಿಗಳ ರೂಪದಲ್ಲಿ ಒಲಿದುಬಂದು ಆತನನ್ನು ತನ್ನ ಅಂತೇವಾಸಿಯಾಗಿ ಸ್ವೀಕರಿಸಿತು. ಆಧ್ಯಾತ್ಮಿಕ ಹಸಿವಿನಿಂದ ಗೊತ್ತು ಗುರಿಯಿಲ್ಲದೆ ತನಗೆ ತಾನೆ ಗುರುವನರಸುತ್ತ ಅಲೆಯುತ್ತಿದ್ದ ಕಾತರದ ಜೀವಕ್ಕೆ ಋಷಿಚೇತನದ ಸಂಸ್ಕಾರ ದೊರೆಯಿತು. ಗಣೇಶ ದೈವರಾತನಾದ; ಗುರು ಗಣಪತಿ ಮುನಿಗಳ ದಿವ್ಯಕಾರುಣ್ಯದಲ್ಲಿ ತಪಸ್ಸಿನ ಸುಪ್ತಸಮಾಧಿಯ ಅನುಸಂಧಾನದಲ್ಲಿ ಮಂತ್ರಾದ್ರಷ್ಟಾರನಾದ.

